ಸೋಮವಾರ, ಏಪ್ರಿಲ್ 24, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 113 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ@75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಸಿಬಿಎಸ್‌ಇ ಪಠ್ಯ ಪರಿಷ್ಕರಣೆಗೆ ಆಕ್ಷೇಪ

‘ಪುಲ್ವಾಮಾ ದಾಳಿ: ಜನರ ಮುಂದೆ ಸತ್ಯ ಮುಚ್ಚಿಟ್ಟಿಲ್ಲ’ 11

ಸಿದ್ಧಗಂಗಾ: ಪಟ್ಟಾಧಿಕಾರ ಮಹೋತ್ಸವ 10

ಕರ್ನಾಟಕದಲ್ಲಿ 26,994 ನೀರಿನ ಮೂಲ

ದೇಶದಲ್ಲಿ 24.14 ಲಕ್ಷ ಜಲಮೂಲ 11

ಶಿಕ್ಷಣ
‘ಇ-ಕಾಲದ’ ಕೌಶಲ ಕೋರ್ಸ್‌ಗಳ ಲೇಖನ ಸರಣಿ...

ರಾಜ್ಯದಾದ್ಯಂತ ನೂರಾರು ಪ್ರಚಾರ ಸಭೆಗಳಿಗೆ ಪಕ್ಷಗಳ ಸಿದ್ಧತೆ

ಆಮ್ ಆದ್ಮಿ ಪಕ್ಷದ ಪರವಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಪ್ರಚಾರ ಸಾಧ್ಯತೆ

215 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಸಿಪಿಐ ಬೆಂಬಲ

- ದೊಡ್ಡ ಸಭೆಗಳ ಜತೆಯಲ್ಲೇ ಮತಗಟ್ಟೆ ಹಂತದ ಪ್ರಚಾರ ಚುರುಕು
- ಸಿನಿಮಾ ನಟ, ನಟಿಯರನ್ನೂ ಮತಯಾಚನೆಗೆ ಕರೆತರಲು ಅಭ್ಯರ್ಥಿಗಳು ಸಜ್ಜು
- ಪಕ್ಷಗಳನ್ನು ಬೆಂಬಲಿಸಿರುವ ಸಂಘಟನೆಗಳಿಂದಲೂ ತೆರೆಮರೆಯಲ್ಲಿ ಮತಯಾಚನೆ

ರಂಗಕ್ಕೆ ನಾಯಕರು: ಪ್ರಚಾರ ಬಿರುಸು

ನಾಮಪತ್ರಗಳ ಪರಿಶೀಲನೆ ಪ್ರಕ್ರಿಯೆ ಮುಗಿದ ಬೆನ್ನಲ್ಲೇ ರಾಜ್ಯದಲ್ಲಿ ಚುನಾವಣಾ ಪ್ರಚಾರ ಕಾವೇರುತ್ತಿದೆ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷಗಳು ರ‍್ಯಾಲಿ, ರೋಡ್ ಶೋ, ಬಹಿರಂಗ ಸಭೆಗಳ ಮೂಲಕ ಮತ ಸೆಳೆಯುವ ಕಸರತ್ತು ಆರಂಭಿಸಿದ್ದು, ಮೇ 8ರವರೆಗೂ ಅಬ್ಬರದ ಪ್ರಚಾರಕ್ಕೆ ಸಿದ್ಧತೆ ನಡೆಸಿವೆ.

ಮೋದಿ, ಶಾ ನೆಚ್ಚಿದ ಬಿಜೆಪಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ ರ‍್ಯಾಲಿ, ರೋಡ್ ಶೋ ಮತ್ತು ಬಹಿರಂಗ ಸಭೆಗಳ ಮೂಲಕವೇ ಚುನಾವಣೆಯಲ್ಲಿ ಮೇಲುಗೈ ಸಾಧಿಸಬೇಕೆಂಬ ಕಾರ್ಯತಂತ್ರವನ್ನು ಬಿಜೆಪಿ ರೂಪಿಸಿಕೊಂಡಿದೆ. ಅದಕ್ಕೆ ಪೂರಕವಾಗಿ ರಾಜ್ಯದ ಉದ್ದಗಲಕ್ಕೆ ಮೋದಿ ಅವರ 28 ರೋಡ್ ಶೋ, ರ‍್ಯಾಲಿ ಮತ್ತು ಬಹಿರಂಗ ಸಭೆಗಳನ್ನು ನಿಗದಿಪಡಿಸಲಾಗಿದೆ. ಏಪ್ರಿಲ್ 30ರಂದು ಕೋಲಾರ ಜಿಲ್ಲೆಯಲ್ಲಿ ಪ್ರಧಾನಿ ಪ್ರಚಾರ ನಡೆಸುವರು.

10ನೇ ಪುಟ ನೋಡಿ

ಅಖಾಡಕ್ಕೆ ಧುಮುಕಿದ ರಾಹುಲ್

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಸವ ಜಯಂತಿ ಕಾರ್ಯಕ್ರಮದ ಮೂಲಕವೇ ರಾಜ್ಯದಲ್ಲಿ ಭಾನುವಾರ ಚುನಾವಣಾ ಪ್ರಚಾರ ಆರಂಭಿಸಿದ್ದಾರೆ. ಮೊದಲ ದಿನ ವಿಜಯಪುರ ಜಿಲ್ಲೆಯಲ್ಲಿ ಪಕ್ಷದ ಪರ ಮತ ಸೆಳೆಯುವ ಪ್ರಯತ್ನ ಮಾಡಿರುವ ಅವರು, ಸೋಮವಾರ ಗದಗದಲ್ಲಿ ಯುವಜನರ ಜತೆ ಸಂವಾದ ಮತ್ತು ಹಾನಗಲ್‌ನಲ್ಲಿ ಬಹಿರಂಗ ಸಭೆಯಲ್ಲಿ ಭಾಗವಹಿಸುವರು. ಉಡುಪಿ ಜಿಲ್ಲೆಯ ಕಾಪು ಉಚ್ಚಿಲದಲ್ಲಿ ರಾಹುಲ್ ಮೀನುಗಾರರ ಜತೆ ಇದೇ ಗುರುವಾರ ಸಂವಾದ ನಡೆಸುವರು. ಅದೇ ದಿನ ಮಂಗಳೂರು ಮತ್ತು ಉಡುಪಿ ನಗರಗಳಲ್ಲಿ ರೋಡ್ ಶೋ ನಡೆಸಿ ಮತ ಯಾಚಿಸುವರು. ಹತ್ತು ದಿನ ಕರ್ನಾಟಕದಲ್ಲೇ ವಾಸ್ತವ್ಯ ಹೂಡಿ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವ ಯೋಚನೆಯೂ ಅವರಲ್ಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

10ನೇ ಪುಟ ನೋಡಿ

ಕುಮಾರಸ್ವಾಮಿಯೇ ಜೆಡಿಎಸ್ ಬಲ

ಜೆಡಿಎಸ್‌ನ ಮುಖ್ಯಮಂತ್ರಿ ಅಭ್ಯರ್ಥಿ ಎಂದೇ ಬಿಂಬಿಸಿ ಕೊಂಡಿರುವ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ರಾಜ್ಯದ ಉದ್ದಗಲಕ್ಕೆ ಪ್ರವಾಸ ಮಾಡಲು ಸಿದ್ಧತೆ ನಡೆಸಿದ್ದಾರೆ. ಅನಾರೋಗ್ಯದ ಕಾರಣದಿಂದ ಆಸ್ಪತ್ರೆಯಲ್ಲಿರುವ ಅವರು, ಗುಣಮುಖರಾಗಿ ಹೊರಬಂದ ಮರುದಿನವೇ ಪ್ರವಾಸ ಆರಂಭಿಸಲಿದ್ದಾರೆ.

10ನೇ ಪುಟ ನೋಡಿ

ಗುರುದ್ವಾರದ ಹೊರಗೆ ಸೆರೆ • ಅಸ್ಸಾಂ ಜೈಲಿಗೆ ರವಾನೆ

ಅಮೃತ್ ಪಾಲ್ ಬಂಧನ

ಚಂಡೀಗಢ (ಪಿಟಿಐ): ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್‌ನನ್ನು ಮೋಗಾ ಜಿಲ್ಲೆಯ ರೋಡೆ ಗ್ರಾಮದಲ್ಲಿ ಪಂಜಾಬ್ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಸಾಂಪ್ರದಾಯಿಕ ವೇಷ ಧರಿಸಿ, ಖಡ್ಗದೊಂದಿಗೆ, ಬೆಳಿಗ್ಗೆ 6.45ಕ್ಕೆ ಗ್ರಾಮದ ಗುರುದ್ವಾರದಿಂದ ಹೊರ ಬಂದ 29 ವರ್ಷದ ಅಮೃತ್‌ಪಾಲ್ ಸಿಂಗ್‌ನನ್ನು ಪೊಲೀಸರು ವಶಕ್ಕೆ ಪಡೆದರು. ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ (ಎನ್‌ಎಸ್‌ಎ) ಬಂಧಿಸಲಾದ ಅವರನ್ನು ನಂತರ ವಿಶೇಷ ವಿಮಾನದ ಮೂಲಕ ಅಸ್ಸಾಂನ ದಿಬ್ರೂಗಢಕ್ಕೆ ಕರೆದೊಯ್ದು, ಅಲ್ಲಿನ ಸೆಂಟ್ರಲ್ ಜೈಲಿನಲ್ಲಿ ಇರಿಸಲಾಯಿತು.

ಖಾಲಿಸ್ತಾನ ಉಗ್ರ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆ ರೀತಿಯಲ್ಲಿಯೇ ಅಮೃತ್‌ಪಾಲ್ ಸಿಂಗ್ ಮೂಲಭೂತವಾದ ಪ್ರಚಾರದಲ್ಲಿ ತೊಡಗಿದ್ದರು. ಅವರ ವಿರುದ್ಧ 30 ದಿನಗಳಿಗೂ ಹೆಚ್ಚು ಕಾಲ ನಡೆದ ಕಾರ್ಯಾಚರಣೆ ಬಂಧನದೊಂದಿಗೆ ಮಹತ್ವದ ಘಟ್ಟ ತಲುಪಿದೆ.

ರೋಡೆ ಗ್ರಾಮ ಭಿಂದ್ರನ್‌ವಾಲೆ ಸ್ವಂತ ಊರು. ‘ವಾರಿಸ್ ಪಂಜಾಬ್ ದೇ’ ಎಂಬ ಸಂಘಟನೆಯ ಮುಖ್ಯಸ್ಥನಾಗಿ ಅಮೃತ್‌ಪಾಲ್ ಸಿಂಗ್ ಇದೇ ಗ್ರಾಮದಲ್ಲಿ ಕಳೆದ ವರ್ಷ ಅಧಿಕಾರ ವಹಿಸಿಕೊಂಡಿದ್ದರು. ಬಂಧಿತನಾಗಿದ್ದ ತಮ್ಮ ಸಹಚರನೊಬ್ಬನನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಿ ಮಾರ್ಚ್‌ನಲ್ಲಿ ಅಮೃತ್‌ಪಾಲ್ ಸಿಂಗ್ ಹಾಗೂ ಅವರ ಬೆಂಬಲಿಗರು ಅಮೃತಸರ ಸಮೀಪದ ಅಜ್ನಾಲ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದರು. ಖಡ್ಗ ಮತ್ತಿತರ ಆಯುಧಗಳೊಂದಿಗೆ ಗಲಾಟೆ ಮಾಡಿದ್ದರು. ಇದಾದ ನಂತರ, ತಲೆಮರೆಸಿಕೊಂಡಿದ್ದ ಅಮೃತ್‌ಪಾಲ್ ಸಿಂಗ್ ಬಂಧನಕ್ಕಾಗಿ ಪೊಲೀಸರು ಮಾರ್ಚ್ 18ರಂದು ಕಾರ್ಯಾಚರಣೆ ಆರಂಭಿಸಿದ್ದರು.

ಪಂಜಾಬ್‌ನಲ್ಲಿ ಭಾನುವಾರ ಬಂಧಿಸಲಾದ ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್‌ನನ್ನು ಅಸ್ಸಾಂನ ದಿಬ್ರೂಗಢ ಸೆಂಟ್ರಲ್ ಜೈಲಿಗೆ ಕರೆತರಲಾಯಿತು —ಪಿಟಿಐ ಚಿತ್ರ

ಅಮೃತ್‌ಪಾಲ್ ಸಿಂಗ್‌ಗೆ ಪಾಕಿಸ್ತಾನ ಗುಪ್ತಚರ ಸಂಸ್ಥೆ ಐಎಸ್‌ಐನೊಂದಿಗೆ ನಂಟಿದೆ ಎಂದು ಪೊಲೀಸರು ಆರೋಪಿಸಿದ್ದಾರೆ. ಪ್ರತ್ಯೇಕ ಖಾಲಿಸ್ತಾನ ಸ್ಥಾಪನೆ ಹೋರಾಟಕ್ಕೆ ಮರುಜೀವ ನೀಡಲು ಸಿಖ್ ಯುವಕರನ್ನು ಉಗ್ರಗಾಮಿಗಳನ್ನಾಗಿ ಮಾಡಲು ಯತ್ನಿಸುತ್ತಿದ್ದರು ಎಂದೂ ಪೊಲೀಸರು ಹೇಳಿದ್ದಾರೆ.

11ನೇ ಪುಟ ನೋಡಿ

₹ 8,643 ಕೋಟಿ ತೊಡಗಿಸಿದ ಎಫ್‌ಪಿಐ

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು ಈ ತಿಂಗಳಲ್ಲಿ ಇದುವರೆಗೆ ₹ 8,643 ಕೋಟಿ ಹೂಡಿಕೆ ಮಾಡಿದ್ದಾರೆ. ವಿದೇಶಿ ಹೂಡಿಕೆದಾರರು ಈಕ್ವಿಟಿಗಳಲ್ಲಿ ಒಟ್ಟು ₹ 7,936 ಕೋಟಿ ತೊಡಗಿಸಿದ್ದಾರೆ. 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಮೀನಿಗೆ ‘ಅಕ್ರಮ’ ರಸ್ತೆ ನಿರ್ಮಾಣ

ಜಿಲ್ಲಾಧಿಕಾರಿ ಹೆಸರಲ್ಲಿ ನಕಲಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾಧಿಕಾರಿ ಹೆಸರಿನಲ್ಲಿ ನಕಲಿ ಆದೇಶ ಹಾಗೂ ದೃಢೀಕೃತ ಪತ್ರಗಳನ್ನು ಸೃಷ್ಟಿಸಿ ಜಮೀನಿನಲ್ಲಿ ಕಾನೂನುಬಾಹಿರವಾಗಿ ರಸ್ತೆ ನಿರ್ಮಾಣ ಮಾಡಲಾಗಿದ್ದು, ಹಳೆ ದಾಖಲೆಗಳ ಪರಿಶೀಲನೆ ವೇಳೆ ಈ ಅಕ್ರಮ ಪತ್ತೆಯಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿ ಅಮಾನಿ ಬೆಳ್ಳಂದೂರು ಖಾನೆ ಗ್ರಾಮದ ಜಮೀನಿನಲ್ಲಿ ಅಕ್ರಮವಾಗಿ ರಸ್ತೆ ನಿರ್ಮಾಣ ಮಾಡಿ ಸರ್ಕಾರವನ್ನು ವಂಚಿಸಿರುವುದು ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಅವರ ಆಂತರಿಕ ತನಿಖೆಯಿಂದ ಗೊತ್ತಾಗಿದೆ.

ಅಕ್ರಮ ರಸ್ತೆ ಸಂಬಂಧ ದಯಾನಂದ್ ಅವರು ಹಲಸೂರು ಗೇಟ್ ಠಾಣೆಗೆ ದಾಖಲೆ ಸಮೇತ ದೂರು ನೀಡಿದ್ದಾರೆ. ವಂಚನೆ (ಐಪಿಸಿ 420), ಫೋರ್ಜರಿ (ಐಪಿಸಿ 468), ನಕಲಿ ದಾಖಲೆಯನ್ನು ಅಸಲಿಯೆಂದು ಬಳಸಿದ (ಐಪಿಸಿ 471) ಹಾಗೂ ಸುಳ್ಳು ದಾಖಲೆ ಸೃಷ್ಟಿಸಿದ (ಐಪಿಸಿ 464) ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

‘ಜಿಲ್ಲಾಧಿಕಾರಿ ದಯಾನಂದ್ ನೀಡಿರುವ ದೂರಿನ ಸಂಗತಿಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಸ್ಥಳ ಪರಿಶೀಲನೆ ಹಾಗೂ ಸೂಕ್ತ ಪುರಾವೆಗಳನ್ನು ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ಸಾರ್ವಜನಿಕ ಸಂಪರ್ಕ ರಸ್ತೆಯೆಂದು ಆದೇಶ ಸೃಷ್ಟಿ: ‘ಅಮಾನಿ ಬೆಳ್ಳಂದೂರು ಗ್ರಾಮದ ಸರ್ವೆ ನಂಬರ್ 17/1ಎ1, 17/1ಎ2, 17/ಎ5, 17/ಎ6 ಹಾಗೂ 24/2ರಲ್ಲಿ ಜಮೀನುಗಳಿವೆ. ಇವುಗಳಿಗೆ ಸಾರ್ವಜನಿಕ ಸಂಪರ್ಕ ಉದ್ದೇಶಕ್ಕಾಗಿ ಸರ್ವೆ ನಂಬರ್ 1ರ ಜಮೀನಿನಲ್ಲಿ ರಸ್ತೆ ಇರುವುದಾಗಿ ಜಿಲ್ಲಾಧಿಕಾರಿ ಹೆಸರಿನಲ್ಲಿ 2021 ಫೆಬ್ರುವರಿ 11ರಂದು ನಕಲಿ ಆದೇಶ ಸೃಷ್ಟಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

10ನೇ ಪುಟ ನೋಡಿ

ಮೊದಲ ಬಾರಿಗೆ ₹100 ಕೋಟಿ ದಾಟಿದ ಆದಾಯ

ಶಿವಮೊಗ್ಗ: 2022–23ನೇ ಸಾಲಿನಲ್ಲಿ ರಾಜ್ಯದ 9 ಮೃಗಾಲಯಗಳಿಗೆ 65.77 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ. ಆದಾಯದ ಪ್ರಮಾಣ ₹ 100 ಕೋಟಿ ದಾಟಿದೆ. 10

ಮತ್ತೊಂದು ಚೀತಾ ಸಾವು

ಭೋಪಾಲ್, ಶ್ಯೋಪುರ (ಪಿಟಿಐ): ದಕ್ಷಿಣ ಆಫ್ರಿಕಾದಿಂದ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಇತ್ತೀಚೆಗೆ ಕರೆತರಲಾಗಿದ್ದ ಚೀತಾವೊಂದು ಭಾನುವಾರ ಮೃತಪಟ್ಟಿದೆ. 11

‘ವೇದ, ಸಂಸ್ಕೃತ ಜ್ಞಾನ ಪೋಷಿಸಿ’

ಸಬರಕಂಠ, (ಪಿಟಿಐ): ‘ಭಾರತವು ವಿಶ್ವ ಗುರು ಆಗಬೇಕಾದರೆ ವೇದ ಹಾಗೂ ಸಂಸ್ಕೃತ ಜ್ಞಾನವನ್ನು ಉಳಿಸಿ ಬೆಳೆಸಬೇಕು’ ಎಂದು ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದ್ದಾರೆ. 11

ಪ್ರಜಾ ಮತ
ಜನತಂತ್ರದ ಹಬ್ಬ

‘ಲಿಂಗಾಯತ’ರ ಸುತ್ತ ಮಾತಿನ ಸಮರ 4

ಸೋಮಣ್ಣಗೆ ಸಿದ್ದರಾಮಯ್ಯ ಅಭಿಮಾನಿಗಳ ಮುತ್ತಿಗೆ 4

‘ಬಂಡಾಯ’ ಬೆಂಬಲಿಗರ ಹುನ್ನಾರವಂತೆ... 5

ಲಿಂಗಾಯತರ ಕಡೆಗಣನೆ: ರಾಹುಲ್– ಶೆಟ್ಟರ್ ಚರ್ಚೆ 4

‘ಕಾಂಗ್ರೆಸ್ ತಲೆ ಮೇಲೆ ಚಪ್ಪಡಿ ಎಳೆದ ಸಿದ್ದರಾಮಯ್ಯ’ 4

ರಾಹುಲ್ ಹೆಲಿಕಾಪ್ಟರ್ ತಪಾಸಣೆ 4

ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್‌ಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ಸಾಂನ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷೆಯಾಗಿದ್ದ ಅಂಗ್‌ಕಿತಾ ದತ್ತಾ ಮೇಲೆ ನಡೆದಿದೆ ಎನ್ನಲಾದ ಕಿರುಕುಳ ಹಾಗೂ ಲಿಂಗ ತಾರತಮ್ಯ ಪ್ರಕರಣದ ಆರೋಪಿಯಾಗಿರುವ ಕಾಂಗ್ರೆಸ್ ಮುಖಂಡ ಬಿ.ವಿ. ಶ್ರೀನಿವಾಸ್ ಪತ್ತೆಗಾಗಿ ಪೊಲೀಸರು ಶೋಧ ಆರಂಭಿಸಿದ್ದಾರೆ.

ಭಾರತೀಯ ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿರುವ ಭದ್ರಾವತಿಯ ಬಿ.ವಿ. ಶ್ರೀನಿವಾಸ್ ವಿರುದ್ಧ ಈಗಾಗಲೇ ಪ್ರಕರಣ ದಾಖಲಿಸಿಕೊಂಡಿರುವ ಅಸ್ಸಾಂ ಪೊಲೀಸರು, ವಿಚಾರಣೆಗಾಗಿ 3 ಬಾರಿ ನೋಟಿಸ್ ನೀಡಿದ್ದರು. ಅವರ ಬೆಂಗಳೂರಿನ ಮನೆ ಬಾಗಿಲಿಗೂ ನೋಟಿಸ್ ಪ್ರತಿ ಅಂಟಿಸಿದ್ದರು. ಆದರೆ, ಶ್ರೀನಿವಾಸ್ ಇದುವರೆಗೂ ವಿಚಾರಣೆಗೆ ಹಾಜರಾಗಿಲ್ಲ.

ಅಸ್ಸಾಂ ಪೊಲೀಸರ ತಂಡ, ಶನಿವಾರ ಬೆಂಗಳೂರಿಗೆ ಬಂದಿದೆ. ಬಸವೇಶ್ವರನಗರದಲ್ಲಿರುವ ಶ್ರೀನಿವಾಸ್ ಮನೆಗೆ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿದೆ. ಕರ್ನಾಟಕದ ಹಲವೆಡೆ ಶ್ರೀನಿವಾಸ್ ಅವರಿಗಾಗಿ ಹುಡುಕಾಟ ನಡೆಸುತ್ತಿದೆ. ‘ಮಹಿಳೆ ಮೇಲಿನ ಕಿರುಕುಳ ಪ್ರಕರಣ ಗಂಭೀರವಾದದ್ದು. ಬಸವೇಶ್ವರನಗರದಲ್ಲಿರುವ ಮನೆಯಲ್ಲಿ ಶ್ರೀನಿವಾಸ್ ಇರಲಿಲ್ಲ. ಚುನಾವಣೆ ಪ್ರಚಾರಕ್ಕೆ ಹೋಗಿರುವುದಾಗಿ ಕುಟುಂಬಸ್ಥರು ಹೇಳಿದ್ದಾರೆ’ ಎಂದು ಬೆಂಗಳೂರು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಚಿನ್ನ ಮಾರಾಟ: ಮಿಶ್ರ ಪ್ರತಿಕ್ರಿಯೆ

ಬೆಂಗಳೂರು: ಅಕ್ಷಯ ತೃತೀಯದಲ್ಲಿ ಚಿನ್ನಾಭರಣ ಮಾರಾಟವು ಈ ಬಾರಿ ಕಳೆದ ವರ್ಷಕ್ಕೆ ಹೋಲಿಸಿದರೆ ತುಸು ಕಡಿಮೆ ಆಗಿದೆ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘ ಹೇಳಿದೆ. ಆದರೆ, ಬೆಲೆ ಹೆಚ್ಚಿದ್ದರೂ ಚಿನ್ನ ಖರೀದಿ ಉತ್ಸಾಹಕ್ಕೆ ಪೆಟ್ಟು ಬಿದ್ದಿಲ್ಲ ಎಂದು ಸಣ್ಣ ವರ್ತಕರು ಹೇಳಿದ್ದಾರೆ. 12

ಮರಳಿ ಕಾಣಿಸಿ ಅಚ್ಚರಿ ಮೂಡಿಸಿದ ‘ಬ್ಲೂ ಟಿಕ್’

ನವದೆಹಲಿ (ಪಿಟಿಐ): ರಾಜಕೀಯ ನಾಯಕರು, ಸಿನಿಮಾ ಮತ್ತು ಕ್ರೀಡಾ ತಾರೆಯರ ಅಧಿಕೃತ ಟ್ವಿಟರ್ ಖಾತೆಗಳಿಂದ ಚಂದಾದಾರಿಕೆ ಶುಲ್ಕ ಪಾವತಿಸಿಲ್ಲ ಎಂಬ ಕಾರಣಕ್ಕೆ ರಾತ್ರೋರಾತ್ರಿ ಕಾಣೆಯಾಗಿದ್ದ ‘ಬ್ಲೂ ಟಿಕ್’ ಅವರ ಖಾತೆಗಳಲ್ಲಿ ಮತ್ತೆ ಕಾಣಿಸಿ ಅಚ್ಚರಿ ಮೂಡಿಸಿದೆ.

ಎಲಾನ್ ಮಸ್ಕ್ ಒಡೆತನದ ಟ್ವಿಟರ್ ಕಂಪನಿಯು ಶುಲ್ಕ ಪಾವತಿ ಮಾಡಿಲ್ಲದವರ ಪಟ್ಟಿ ಸಿದ್ಧಪಡಿಸಿ ಅವರ ಖಾತೆಯಿಂದ ‘ಬ್ಲೂ ಟಿಕ್’ ತೆಗೆದು ಹಾಕುವ ಪ್ರಕ್ರಿಯೆ ಆರಂಭಿಸಿತ್ತು. ಆದರೆ ಈಗ, ಹತ್ತು ಲಕ್ಷ ಫಾಲೊವರ್ಸ್ ಹೊಂದಿರುವ ಖ್ಯಾತನಾಮರ ಖಾತೆಗಳಲ್ಲಿ ಮತ್ತೆ ‘ಬ್ಲೂ ಟಿಕ್’ ಕಾಣಿಸಿದೆ. ಅವರು ಚಂದಾದಾರಿಕೆ ಶುಲ್ಕ ಪಾವತಿಸಿದ್ದಾರೆಯೇ, ಇಲ್ಲವೇ ಎಂಬುದನ್ನು ಟ್ವಿಟರ್ ದೃಢಪಡಿಸಿಲ್ಲ.

ಮೈಕಲ್ ಜಾಕ್ಸನ್ ಸೇರಿದಂತೆ ಮೃತಪಟ್ಟಿರುವ ಪ್ರಸಿದ್ಧ ವ್ಯಕ್ತಿಗಳ ಖಾತೆಗಳಿಗೂ ಅದು ಮರಳಿದೆ.

10ನೇ ಪುಟ ನೋಡಿ

₹ 20 ಲಕ್ಷ ಮೌಲ್ಯದ ಕುಕ್ಕರ್ ವಶ

ದಾವಣಗೆರೆ: ತಾಲ್ಲೂಕಿನ ಚಿಕ್ಕಬೂದಿಹಾಳ್ ಗ್ರಾಮದ ಬಳಿ ಇರುವ ಅಕ್ಕಿ ಗಿರಣಿಯ ಗೋದಾಮೊಂದರಲ್ಲಿ ಇರಿಸಿದ್ದ ₹ 20 ಲಕ್ಷ ಮೌಲ್ಯದ 2,067 ಕುಕ್ಕರ್‌ಗಳನ್ನು ಚುನಾವಣಾಧಿಕಾರಿಗಳು ಹಾಗೂ ವಾಣಿಜ್ಯ ತೆರಿಗೆ ಇಲಾಖೆ ಸಿಬ್ಬಂದಿ ಭಾನುವಾರ ಸಂಜೆ ವಶಪಡಿಸಿಕೊಂಡಿದ್ದಾರೆ. ಖಚಿತ ಮಾಹಿತಿ ಆಧರಿಸಿ ಗೋದಾಮಿನಲ್ಲಿ ಪರಿಶೀಲನೆ ನಡೆಸಿದಾಗ ಒಟ್ಟು 124 ಪೆಟ್ಟಿಗೆಗಳಲ್ಲಿದ್ದ ಕುಕ್ಕರ್‌ಗಳು ಪತ್ತೆಯಾಗಿವೆ.

ದ್ವಿತೀಯ ಪಿಯುಸಿ ಹೆಚ್ಚು ಅಂಕ ಪಡೆದವರು

ಪ್ರಜ್ಞಾ ದೀಕ್ಷಿತ್ — ಅಂಕ: 577 (ವಿಜ್ಞಾನ) ಎಸ್.ಬಿ.ಎಸ್. ಪಿಯು ಮತ್ತು ಡಿಗ್ರಿ ಕಾಲೇಜು, ಕೆಂಗೇರಿ

ಕೇಶವ ಎನ್ — ಅಂಕ: 562 (ವಾಣಿಜ್ಯ) ಕ್ರೈಸ್ಟ್ ಕಾಲೇಜು, ಹುಳಿಮಾವು

ಕೀರ್ತನಾ ಆರ್ — ಅಂಕ: 582 (ವಾಣಿಜ್ಯ) ಮಂಗಳೂರು ಪಿಯು ಕಾಲೇಜು, ಉಲ್ಲಾಳು

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಳವಳ

‘ಸುಶಿಕ್ಷಿತರಿಂದಲೇ ಭ್ರಷ್ಟಾಚಾರ ಹೆಚ್ಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸ್ತುತ ದಿನಗಳಲ್ಲಿ ವಿದ್ಯಾವಂತರಲ್ಲೇ ಭ್ರಷ್ಟಾಚಾರ ಮಿತಿ ಮೀರುತ್ತಿದ್ದು, ಶರಣರು ಇಂತಹ ಭ್ರಷ್ಟಾಚಾರದ ವಿರುದ್ಧ ಇದ್ದರು’ ಎಂದು ಸಾಣೇಹಳ್ಳಿ ತರಳಬಾಳು ಶಾಖಾ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಬಸವ ಸಮಿತಿಯು ಬಸವ ಜಯಂತಿ ಅಂಗವಾಗಿ ಭಾನುವಾರ ಆಯೋಜಿಸಿದ್ದ ‘ಬಸವ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದರೆ ಮತ್ತೊಮ್ಮೆ ಬಸವಣ್ಣನ ವಚನಗಳತ್ತ ಮುಖ ಮಾಡಬೇಕು. ಸಮಾಜದಲ್ಲಿ ಕಾಯಕ ಪ್ರಜ್ಞೆ ಮೂಡಿದಲ್ಲಿ ಮಾತ್ರ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯ ಎಂದು ಪ್ರತಿಪಾದಿಸಿದರು.

ಸಮಾಜೋದ್ಧಾರಕ ಸಂಘಟಕರಾಗಿದ್ದ ಬಸವಣ್ಣ, ನುಡಿದಂತೆ ನಡೆದರು. ಬಸವಣ್ಣನ ವಿಚಾರಗಳ ಬಗ್ಗೆ ಇಂದು ಉದ್ದುದ್ದ ಭಾಷಣ ಮಾಡುವವರಿದ್ದಾರೆ. ಆದರೆ, ಅವರ ಆದರ್ಶ, ತತ್ವಗಳನ್ನು ಪಾಲನೆ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬೇಲಿ ಮಹಾಸಂಸ್ಥಾನ ಮಠದ ಅಧ್ಯಕ್ಷ ಶಿವರುದ್ರಸ್ವಾಮೀಜಿ ಮಾತನಾಡಿ, ‘ಬಸವಣ್ಣನ ವಚನಗಳನ್ನು 36 ಭಾಷೆಗಳಿಗೆ ಭಾಷಾಂತರ ಮಾಡಿ ಇಡೀ ಪ್ರಪಂಚಕ್ಕೆ ತಲುಪಿಸುವ ಕೆಲಸವನ್ನು ಬಸವ ಸಮಿತಿ ಮಾಡಿದೆ’ ಎಂದರು.

ಉದ್ಯಮಿ ಜಯಂತ ಹುಂಬರವಾಡಿ ಅವರಿಗೆ ‘ಕಾಯಕರತ್ನ’ ಪ್ರಶಸ್ತಿ, 2023ರ ರಾಷ್ಟ್ರೀಯ ಬಸವ ಪುರಸ್ಕಾರವನ್ನು ವೀರಣ್ಣ ರಾಜೂರ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ದಾಮೋದರ ಮೌಜೋ, ಸಾಹಿತಿ ಮೊಹಮ್ಮದ್ ಝುಮಾನ್ ಅಜುರ್ದಾ ಅವರಿಗೆ ‘ಬಸವ ವಿಭೂಷಣ’ ಪ್ರಶಸ್ತಿ, ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ಅವರಿಗೆ ‘ಬಸವ ಭೂಷಣ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೂಡಲ ಸಂಗಮದಲ್ಲಿ ನಿರ್ಮಾಣವಾಗುತ್ತಿರುವ ಅಂತರರಾಷ್ಟ್ರೀಯ ಮ್ಯೂಸಿಯಂ ಸ್ಥಾಪನೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ತಯಾರಿಸಿರುವ ವಿಸ್ತೃತ ಯೋಜನಾ ವರದಿಯನ್ನು ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಆಯುಕ್ತ ಶಿವಯೋಗಿ ಸಿ. ಕಳಸದ ಸ್ವೀಕರಿಸಿದರು.



ಬಸವ ಸಮಿತಿ ನೀಡುವ ‘ಕಾಯಕರತ್ನ ಪ್ರಶಸ್ತಿ’ಯನ್ನು ಉದ್ಯಮಿ ಜಯಂತ ಹುಂಬರವಾಡಿ ಅವರಿಗೆ ಪ್ರದಾನ ಮಾಡಲಾಯಿತು. ಭಾರತೀಯ ಸೇನೆಯ ಉಪ ಮುಖ್ಯಸ್ಥ ರಮೇಶ್ ಹಲಗಲಿ, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಮಯೂರ ಜಯಂತ್ ಹಂಬರವಾಡಿ ಇದ್ದರು —ಪ್ರಜಾವಾಣಿ ಚಿತ್ರ

ವಂಚನೆಯ ಆ್ಯಪ್‌ಗಳ ವಿರುದ್ಧ ಕ್ರಮ: ನಿರ್ಮಲಾ

ನವದೆಹಲಿ (ಪಿಟಿಐ): ವಂಚನೆಯ ಉದ್ದೇಶದ ಹಣಕಾಸಿನ ಆ್ಯಪ್‌ಗಳಿಗೆ ಲಗಾಮು ಹಾಕಲು ಕೇಂದ್ರ ಹಣಕಾಸು ಸಚಿವಾಲಯವು, ಆರ್‌ಬಿಐ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಜೊತೆ ಕೆಲಸ ಮಾಡುತ್ತಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ವಂಚನೆಯ ಉದ್ದೇಶದ ಆ್ಯಪ್‌ಗಳ ವಿಚಾರವಾಗಿ ಹೂಡಿಕೆದಾರರು ಎಚ್ಚರಿಕೆಯಿಂದ ಇರಬೇಕು, ಭಾರಿ ಲಾಭ ತಂದುಕೊಡುವ ಹೇಳಿಕೆಗಳನ್ನು ಕೇಳಿ ಮಾರುಹೋಗಬಾರದು ಎಂದು ಎಚ್ಚರಿಸಿದ್ದಾರೆ. ‘ನಾವು ಇಂತಹ ಆ್ಯಪ್‌ಗಳ ವಿರುದ್ಧ ಹಿಂದೆಂದೂ ಕಾಣದ ಮಟ್ಟದಲ್ಲಿ, ಲಗಾಮು ಹಾಕುವ ಕೆಲಸ ಮಾಡುತ್ತಿದ್ದೇವೆ’ ಎಂದು ಅವರು ತುಮಕೂರಿನಲ್ಲಿ ಹೇಳಿದ್ದಾರೆ.

‘ಎಚ್ಚರಿಕೆ ಇರಬೇಕು. ಹಣದ ವಿಚಾರದಲ್ಲಿ ಎರಡು ಬಾರಿ ಪರಿಶೀಲನೆ ನಡೆಸಿಕೊಳ್ಳಬೇಕು, ಕುರಿಮಂದೆಯಂತೆ ಸಾಗಬಾರದು’ ಎಂದು ಕಿವಿಮಾತು ಹೇಳಿದ್ದಾರೆ. ಹಣಕಾಸಿನ ವಿಚಾರದಲ್ಲಿ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರುವ ವ್ಯಕ್ತಿಗಳನ್ನು ನಿಯಂತ್ರಣಕ್ಕೆ ಒಳಪಡಿಸುವ ಪ್ರಸ್ತಾವ ತಮ್ಮ ಮುಂದೆ ಇಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಯಶಸ್ವಿ 29ನೇ ವರ್ಷದಲ್ಲಿ

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ ‘ಅನುಭವಿ ಸೇವಾ ಪೂರೈಕೆದಾರ’ ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ

ಅಡಿಗಾಸ್ ಯಾತ್ರಾ ®

email: care@adigasyatra.com website: www.adigasyatra.com

ಬಸವನಗುಡಿ: 080-26616678 ಮಲ್ಲೇಶ್ವರಂ: 080-23346678 ಹುಬ್ಬಳ್ಳಿ: 0836-2256678

9449478944 7022259008 7022259003

ಚಾರಧಾಮ ಯಾತ್ರಾ

5 ದಿನಗಳು ಹೆಲಿಕಾಪ್ಟರ್‌ನಲ್ಲಿ

ಬದರಿ-ಕೇದಾರ ಯಾತ್ರಾ 3 ದಿನಗಳು | ಬದರಿ-ಕೇದಾರ ಯಾತ್ರಾ 1 ದಿನ

ಗ್ರೂಪ್ ಪ್ರವಾಸ: ಚಾರಧಾಮ ಯಾತ್ರಾ :

ರೈಲಿನಲ್ಲಿ 18 ದಿನಗಳು / ವಿಮಾನದಲ್ಲಿ 14 ದಿನಗಳು

ಶುದ್ಧ ಸಸ್ಯಹಾರಿ ಉಟೋಪಹಾರ, ಡೀಲಕ್ಸ್ ಬಸ್, ರೂಮ್‌ನಲ್ಲಿ ವಸತಿ

ರೈಲು/ವಿಮಾನ ಪ್ರಯಾಣ, ಟೂರ್ ಮ್ಯಾನೇಜರ್‌ನೊಂದಿಗೆ ಗ್ರೂಪ್ ಪ್ರವಾಸಗಳು

ಹರಿದ್ವಾರ, ಹನುಮಾನ ಚೆಟ್ಟಿ, ಯಮುನೋತ್ರಿ, ಉತ್ತರಕಾಶಿ, ಗಂಗಾನಾನಿ, ಗಂಗೋತ್ರಿ, ರುದ್ರಪ್ರಯಾಗ, ಗುಪ್ತಕಾಶಿ, ಕೇದಾರನಾಥ, ಪೀಪಲ್‌ಕೋಟ, ಮಾನಾ, ಕೇಶವ ಪ್ರಯಾಗ, ಕರ್ಣ ಪ್ರಯಾಗ, ಬದರಿನಾಥ, ವಿಷ್ಣುಪ್ರಯಾಗ, ಜೋಷಿಮಠ, ನಂದಪ್ರಯಾಗ, ಋಷಿಕೇಷ, ದೆಹಲಿ

ಹೊರಡುವ ದಿನಾಂಕ: ಮೇ 17, 21, 28 ಜೂನ್ 4, 11, 18, 25, ಜುಲೈ 2, 16, ಅಗಸ್ಟ 6, 20, 27, ಸೆಪ್ಟೆಂಬರ್ 3, 10, 17, 24

ಕಸ್ಟಮೈಸ್ಡ್ ಟೂರ್ಸ್

ಚಾರಧಾಮ ಯಾತ್ರಾ 12 ದಿನಗಳು | ಬದರೀ-ಕೇದಾರ ಯಾತ್ರಾ 8 ದಿನಗಳು | ಬದರೀ ಯಾತ್ರಾ 6 ದಿನಗಳು

ಫಿಕ್ಸೆಡ್ ಡಿಪಾರ್ಚರ್ಸ್

ವಿಮಾನ ಟಿಕೆಟ್, ಡಿಲಕ್ಸ್ ಹೊಟೇಲನಲ್ಲಿ ಊಟ-ವಸತಿ

ಚಾರಧಾಮ ಯಾತ್ರಾ 12 ದಿನಗಳು | ಬದರಿ-ಕೇದಾರ ಯಾತ್ರಾ 6 ದಿನಗಳು

ಹೊರಡುವ ದಿನಾಂಕ: ಮೇ 17, 24, 31. ಜೂನ್ 7, 14, 21, 22. ಜುಲೈ 5, 12, 19, 26. ಅಗಸ್ಟ 16, 23, 30, ಸೆಪ್ಟೆಂಬರ್ 6, 13, 20, 27, ಅಕ್ಟೋಬರ್ 5, 19

ಅಮರನಾಥ ಯಾತ್ರಾ

ಹೆಲಿಕಾಪ್ಟರ್‌ನಲ್ಲಿ

ಜುಲೈ 1 ರಿಂದ

ರೂ. 68,700/-ರಿಂದ

ಬೆಂಗಳೂರಿನಿಂದ ಶ್ರೀನಗರಕ್ಕೆ ವಿಮಾನದ ಟಿಕೆಟ್, ಹೆಲಿಕಾಪ್ಟರ್ ಟಿಕೆಟ್

3 ಸ್ಟಾರ್ ಹೋಟೇಲ್‌ನಲ್ಲಿ ಊಟ ವಸತಿಯನ್ನೊಳಗೊಂಡಿದೆ.

ಅಮರನಾಥ ಯಾತ್ರಾ 5 ದಿನಗಳು

ಅಮರನಾಥ ಯಾತ್ರಾ ವೈಷ್ಣೋದೇವಿಯೊಂದಿಗೆ 7 ದಿನಗಳು

ಅಮರನಾಥ-ವೈಷ್ಣೋದೇವಿ-ಅಮೃತಸರ್- 9 ದಿನಗಳು

Terms & Conditions apply*

Limited Seats available

CONNECT ಕ್ಲಾಸಿಫೈಡ್ಸ್

ST. BENEDICT'S ACADEMY RESIDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2023 - 24
Fee, Food, Hostel facilities for One (1) Year- One Lakh only in Installments
Free Academy for NCC, Karate, Kung Fu-Wu, Counseling, Yoga.
St. Benedict's Group of Institutions, Anchpalaya, Kengeri, Mysore Road, Bangalore.
Contact: 9886812398
Mail: jeromeosb@gmail.com / www.sbab.in

2nd PU Failed?
Pass the subjects immediately and stress free!
A golden opportunity to receive 12th standard qualification immediately and further study degree in any university in India or abroad.
BE, MBBS, BSc, BBA, BCA and other degrees
Facilitated by SASE - www.sasae.edu.in
8800883871

R.E.S. POLYTECHNIC
Estd: 1986 - Recognised by Govt. of Karnataka & AICTE
Visit us for ADMISSIONS & CAREER GUIDANCE
JOIN DIPLOMA IN: ♦ Computer Science ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-23401

IMPACT POLYTECHNIC (Government Aided)
Kodigehalli, Sahakaranagar South, Bengaluru-560092
DIPLOMA ADMISSIONS OPEN FOR 2023-24
Admissions started for Karnataka students for 1st Semester under Government Quota
COURSES: Architecture, Automobile, Mechanical, Civil, Electrical & Electronics, Electronics & Communications, Computer Science
Eligibility: Minimum 35% marks in SSLC or equivalent exam
Candidates who have passed ITI and PUC in Science are eligible for Direct admission to 3rd Semester on “FIRST COME FIRST SERVED“ Basis.
FORMS AVAILABLE AT COLLEGE OFFICE
Website: impactptbangalore.ac.in;
Email: impactpolytechnic@gmail.com
For admissions & details contact: 080-23334101, 94487 48297, 94487 96091
IMP-23406

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business Offers

Finance

NRI'S INVESTMENT/FINANCE available on low-interest for properties,land& building,sites flats,converted lands also personal,educational call pengana-7204995189

JOB OPPORTUNITIES

Teachers/ Professors

QUALIFIED EXPERIENCED teachers required for the post of English, Social Science- B.A, B.Ed, Physics- B.Sc, B.Ed, Preprimary- NTT, MTT, Music Teacher (Vocal) for a reputed school in Rajajinagar with 1- 3 years experience. Contact: 9538888151/ 8861959123.

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Wanted

WANTED FEMALE Office Assistant Below 40Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

TOURS & TRAVEL

Holiday Package Tours

AMAZING THAILAND with Plumeria Holidays. 4 Day trip with flight ticket, 4* stay, All meals & Sightseeing. Departure from Bangalore 18th May & 22nd June. Call: 9449753888/ 7356968411

DH ಪ್ರಜಾವಾಣಿ
Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ವಿಜಯ ಚಾರಿಟೆಬಲ್ ಟ್ರಸ್ಟ್ ® Since 1993
888 000 3132, 74 11 76 1212
ಡಾ. ರಾಜ್‌ಕುಮಾರ್ ರವರ ಜನ್ಮದಿನದ ಪ್ರಯುಕ್ತ
“ಆರೋಗ್ಯ ಸಪ್ತಾಹ” “Aarogya Saptaha”
ದಿನಾಂಕ 24-04-2023 ರಿಂದ 29-04-2023
ಸಮಯ: ಬೆಳಿಗ್ಗೆ 11.00 ರಿಂದ ಸಂಜೆ 5.00
ವಿಜಯ ಡೆಂಟಲ್ ಇಂಟರ್‌ನ್ಯಾಶನಲ್ ®
#40, 1, 3ನೇ ಮುಖ್ಯರಸ್ತೆ, ಇಟ್ಟಮಡು, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು-560 085.
ದಂತ ಶಿಬಿರ * ಉಚಿತ ತಪಾಸಣೆ * ಸ್ಕೇಲಿಂಗ್ * ಓ.ಪಿ.ಜಿ. & ಸಿ.ಬಿ.ಸಿ.ಟಿ. * ಫಿಲ್ಲಿಂಗ್ * ಎಕ್ಸ್‌ಟ್ರ್ಯಾಕ್ಷನ್
ಡಾ. ನಕ್ಕುಲ್ Strategic Implantologist 88800 09733
ಡಾ. ವಿಜಯ್ MBBS — Strategic Basal Implants R C T, Zirconia Crowns Teeth in 72 hours
ಡಾ. ಲತಾಶ್ರೀ Dental Surgeon & Oral Implantologist 92424 36961
ನೇತ್ರ ಶಿಬಿರ * ಉಚಿತ ಕಣ್ಣಿನ ಪರೀಕ್ಷೆ ಮತ್ತು ಸಲಹೆಗಳು
ಸೋಮವಾರ, ಮಂಗಳವಾರ 24, 24ನೇ ಏಪ್ರಿಲ್ 2023 — OPTICAL SQUARE CONTACT LENS EYE CLINIC
ಗುರುವಾರ, ಶುಕ್ರವಾರ 27, 28ನೇ ಏಪ್ರಿಲ್ 2023 — Drishti Nethralaya SUPERSPECIALITY EYE HOSPITAL
ಇತರೆ ವೈದ್ಯಕೀಯ ತಪಾಸಣಾ ಶಿಬಿರ ದಿನಾಂಕ 24 ರಿಂದ 29ರವರೆಗೆ * ಬಿ.ಪಿ. * ಶುಗರ್ * ಇ.ಸಿ.ಜಿ ಇತರ ವೈದ್ಯಕೀಯ ತಪಾಸಣೆಗಳು
ಬುಧವಾರ 26ನೇ ಏಪ್ರಿಲ್ 2023 SPARSH HOSPITAL R.R. Nagar, Bangalore
ವಾರಪೂರ್ತಿ ನಡೆಯುವ ಈ ಉಚಿತ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಿ

ಕುಂದು-ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಪಾದಚಾರಿ ಮಾರ್ಗ ನಿರ್ಮಿಸಿ

ಸರ್ಜಾಪುರ ಮುಖ್ಯ ರಸ್ತೆಯ ಇಬ್ಬಲೂರು ಜಂಕ್ಷನ್ ಬಳಿ ಪಾದಚಾರಿ ಮಾರ್ಗವನ್ನು ನಿರ್ಮಿಸಿಲ್ಲ. ಇದರಿಂದ ರಸ್ತೆಯಲ್ಲಿಯೇ ಪಾದಚಾರಿಗಳು ಹೆಜ್ಜೆ ಹಾಕಬೇಕಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಈ ರಸ್ತೆಯಲ್ಲಿ ಸಂಚರಿಸುವುದರಿಂದ ಪಾದಚಾರಿಗಳು ರಸ್ತೆ ಅಪಘಾತಕ್ಕೆ ಒಳಗಾಗುವ ಅಪಾಯ ಇದೆ. ಮಣಿಪಾಲ್ ಸೇರಿ ಕೆಲ ಆಸ್ಪತ್ರೆಗಳೂ ಇಲ್ಲಿವೆ. ರಸ್ತೆಯ ಪಕ್ಕದಲ್ಲಿನ ಜಾಗದಲ್ಲಿ ಗಿಡ ಗಂಟಿಗಳು ಬೆಳೆದಿವೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸಿ, ಆದಷ್ಟು ಬೇಗ ಪಾದಚಾರಿ ಮಾರ್ಗವನ್ನು ನಿರ್ಮಿಸಬೇಕು.

ರವಿ, ಸ್ಥಳೀಯ ನಿವಾಸಿ

ಇಬ್ಬಲೂರು ಜಂಕ್ಷನ್ ಬಳಿ ಪಾದಚಾರಿ ಮಾರ್ಗ ಇಲ್ಲದಿರುವುದು

ಕೆರೆಯ ಪಾಚಿ ವಿಲೇವಾರಿ ಮಾಡಿ

ಬಿಟಿಎಂ ಬಡಾವಣೆ ವಾರ್ಡ್ ವ್ಯಾಪ್ತಿಯಲ್ಲಿರುವ ಮಡಿವಾಳ ಕೆರೆಯನ್ನು ಜೀವ ವೈವಿಧ್ಯದ ಉದ್ಯಾನ ಎಂದು ಘೋಷಿಸಲಾಗಿದೆ. ಇದು ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಬೋಟಿಂಗ್ ವ್ಯವಸ್ಥೆ ಕೂಡ ಇರುವುದರಿಂದ ನೂರಾರು ಸಂಖ್ಯೆಯಲ್ಲಿ ವಾಯುವಿಹಾರಿಗಳು ಪ್ರತಿನಿತ್ಯ ಬರುತ್ತಾರೆ. ಕೆರೆಯಲ್ಲಿ ಬೆಳೆದಿದ್ದ ಪಾಚಿಯನ್ನು ತೆಗೆದು, ಕೆರೆಯ ದಂಡೆಯ ಮೇಲೆಯೇ ರಾಶಿ ಹಾಕಲಾಗಿದೆ. ಇದು ಕೊಳೆತು ನಾರುತ್ತಿದ್ದು, ವಾಯುವಿಹಾರಿಗಳು ಮೂಗು ಮುಚ್ಚಿಕೊಂಡು ಸಾಗಬೇಕಾಗಿದೆ. ಇದರಿಂದ ಸೊಳ್ಳೆಯ ಕಾಟವೂ ಹೆಚ್ಚಳವಾಗಿದೆ. ಆದ್ದರಿಂದ ಆದಷ್ಟು ಬೇಗ ಪಾಚಿ ರಾಶಿಯನ್ನು ವಿಲೇವಾರಿ ಮಾಡಲು ಕ್ರಮವಹಿಸಬೇಕು.

ಎಚ್. ದೊಡ್ಡಮಾರಯ್ಯ, ಬಿಟಿಎಂ ಲೇಔಟ್

ಮಡಿವಾಳ ಕೆರೆಯ ದಂಡೆ ಮೇಲೆ ಪಾಚಿಯ ರಾಶಿ ಹಾಕಿರುವುದು

ಕಾಂಕ್ರೀಟ್‌ನಿಂದ ಮರಗಳಿಗೆ ಹಾನಿ

ರಾಷ್ಟ್ರೀಯ ವಿದ್ಯಾಲಯ ರಸ್ತೆಯ ಪಕ್ಕದಲ್ಲಿದ್ದ ಮರಗಳ ಸುತ್ತಲೂ ಕಾಂಕ್ರೀಟ್ ಹಾಕಲಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಂಡ ಈ ಕಾಮಗಾರಿ ಮರಗಳ ಬೆಳವಣಿಗೆಗೆ ತೊಡಕಾಗಿದೆ. ಭೂಗತ ಕೇಬಲ್‌ಗಳ ಅಳವಡಿಕೆ ಸೇರಿ ವಿವಿಧ ಕಾಮಗಾರಿಗಳ ಸಂಬಂಧ ಅಗೆಯುವಾಗ ಮರಗಳ ಬೇರುಗಳಿಗೆ ಹಾನಿ ಮಾಡಲಾಗಿದೆ. ಕೆ.ಆರ್. ರಸ್ತೆ, ಬಸವನಗುಡಿಯಲ್ಲೂ ಇದೇ ರೀತಿ ಕಾಂಕ್ರೀಟ್ ಹಾಕಲಾಗುತ್ತಿದೆ. ಇದರಿಂದಾಗಿ ಗಾಳಿ-ಮಳೆಗೆ ಮರಗಳು ಧರೆಗೆ ಉರಳುವ ಸಾಧ್ಯತೆ ಇರುತ್ತದೆ. ಮರದ ಸುತ್ತಲೂ ಕಾಂಕ್ರೀಟ್ ಕಟ್ಟೆ ನಿರ್ಮಾಣದಿಂದ ಮರಗಳಿಗೆ ಅಗತ್ಯ ಪ್ರಮಾಣದಲ್ಲಿ ನೀರು ಸಿಗುವುದಿಲ್ಲ. ಆದ್ದರಿಂದ ಮರಗಳ ಸಂರಕ್ಷಣೆಗೆ ಅಧಿಕಾರಿಗಳು ಕ್ರಮವಹಿಸಬೇಕು.

ರಾಘವೇಂದ್ರ ಬಿ., ಸ್ಥಳೀಯ ನಿವಾಸಿ

ಮರದ ಬುಡಕ್ಕೆ ಹಾನಿ ಮಾಡಿರುವುದು

ಕೆರೆಗೆ ಸೇರುತ್ತಿದೆ ಕೊಳಚೆ ನೀರು

ಕೋಣನಕುಂಟೆ ವಾರ್ಡ್ ವ್ಯಾಪ್ತಿಯಲ್ಲಿರುವ 23 ಎಕರೆ ವಿಸ್ತೀರ್ಣದ ಚುಂಚಘಟ್ಟ ಕೆರೆಯನ್ನು ಕೋಟ್ಯಂತರ ರೂಪಾಯಿ ವೆಚ್ಚಮಾಡಿ ಅಭಿವೃದ್ಧಿಗೊಳಿಸಲಾಗಿತ್ತು. ಈಗ ಸುತ್ತಮುತ್ತಲಿನ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಕೊಳಚೆ ನೀರು ಈ ಕೆರೆಯನ್ನು ಸೇರುತ್ತಿದೆ. ಇದರಿಂದ ಪಾಲಿಕೆಯ ಶ್ರಮ ನೀರಿನಲ್ಲಿ ಹೋಮ ಮಾಡಿದಂತಾಗುತ್ತಿದೆ. ಆದ್ದರಿಂದ ಕೊಳಚೆ ನೀರು ಕೆರೆ ಸೇರುವುದನ್ನು ತಡೆಯಬೇಕು. ಕೆರೆಯ ಏರಿಯ ಮೇಲೆ ದೇವಸ್ಥಾನ ಕಟ್ಟುವ ಪ್ರಯತ್ನ ನಡೆಯುತ್ತಿದೆ. ಈ ಕೆಲಸವನ್ನು ನಿಲ್ಲಿಸಬೇಕು.

ವಿಶ್ವನಾಥ್ ರಾವ್, ಕೋಣನಕುಂಟೆ


ಚುಂಚಘಟ್ಟ ಕೆರೆಗೆ ಕೊಳಚೆ ನೀರು ಸೇರುತ್ತಿರುವುದು

ಥಿಂಕರ್ಸ್ ಫೋರಂ ಸಂವಾದದಲ್ಲಿ ನಿರ್ಮಲಾ ಸೀತಾರಾಮನ್ ಹೇಳಿಕೆ

ಕರ್ನಾಟಕದ ಅಸ್ಮಿತೆಗೆ ಮಾನ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರದ ನರೇಂದ್ರ ಮೋದಿ ಸರ್ಕಾರ ಕಳೆದ 8-9 ವರ್ಷಗಳಲ್ಲಿ ಕರ್ನಾಟಕ ಮತ್ತು ಕನ್ನಡದ ಅಸ್ಮಿತೆಗೆ ಸದಾ ಮಾನ್ಯತೆ ಕೊಟ್ಟಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿದ್ದಾರೆ.

ಜೆ.ಪಿ.ನಗರದ ಆರ್.ವಿ.ಡೆಂಟಲ್ ಕಾಲೇಜಿನಲ್ಲಿ ಥಿಂಕರ್ಸ್ ಫೋರಂ ಆಯೋಜಿಸಿದ್ದ ಸಂವಾದದಲ್ಲಿ ಅವರು ಈ ವಿಷಯ ತಿಳಿಸಿದರು.

ಇತ್ತೀಚೆಗೆ ‘ನಂದಿನಿ’ ವರ್ಸಸ್ ‘ಅಮೂಲ್’ ವಿವಾದವನ್ನು ಹುಟ್ಟು ಹಾಕಿದ್ದು ಚುನಾವಣಾ ರಾಜಕಾರಣಕ್ಕೆ. ಅಮೂಲ್ ಹಾಲು ಕರ್ನಾಟಕದಲ್ಲಿ ಕಾಲಿಡಲು ಅವಕಾಶ ನೀಡಿದ್ದೇ ಕಾಂಗ್ರೆಸ್ ಅವಧಿಯಲ್ಲಿ. ಈಗ ಅದೇ ವ್ಯಕ್ತಿ ಬಿಜೆಪಿ ಸರ್ಕಾರದ ವಿರುದ್ಧ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

ಎಲ್ಲ ರಾಜ್ಯಗಳಲ್ಲೂ ಸಹಕಾರಿ ಹಾಲು ಒಕ್ಕೂಟಗಳು ಇವೆ. ಒಂದು ರಾಜ್ಯದ ಹಾಲು ಮತ್ತೊಂದು ರಾಜ್ಯಕ್ಕೆ ಹೋಗುತ್ತದೆ. ಕರ್ನಾಟಕದ ನಂದಿನಿ ಹಾಲು, ಮೊಸರು, ಪೇಡ ದೆಹಲಿಯಲ್ಲೂ ಸಿಗುತ್ತದೆ. ಅಲ್ಲಿ ನಂದಿನಿ ಸಿಗದಾಗ ಅಮೂಲ್ ಹಾಲು ಖರೀದಿಸುತ್ತೇವೆ. ನಂದಿನಿ ಹಾಲು ಬರದೇ ಇದ್ದರೆ, ಬೇರೆ ಹಾಲು ಖರೀದಿಸಲೇಬೇಕಾಗುತ್ತದೆ. ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಮೊದಲ ಬಾರಿಗೆ ಪ್ರೋತ್ಸಾಹ ಧನ ನೀಡಿದ್ದು, ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ. ಆ ಬಳಿಕ ಬಂದ ಕಾಂಗ್ರೆಸ್ ಮತ್ತು ಜೆಡಿಎಸ್ ಸರ್ಕಾರಗಳೂ ಪ್ರೋತ್ಸಾಹ ಧನ ನೀಡುವುದನ್ನು ಮುಂದುವರಿಸಿದವು. ಕೇಂದ್ರ ಸರ್ಕಾರವೂ ಒಂದು ಹಸು ಸಾಕಿದ ಹಾಲು ಉತ್ಪಾದಕನಿಗೂ ಕಿಸಾನ್ ಕ್ರೆಡಿಟ್ ಕಾರ್ಡ್ ನೀಡುವ ಮೂಲಕ ಡೇರಿ ಉದ್ಯಮಕ್ಕೆ ಪ್ರೋತ್ಸಾಹ ನೀಡಿದೆ. ಈ ಎಲ್ಲ ಕಾರಣಗಳಿಗೆ ವಿಶ್ವದಲ್ಲೇ ಭಾರತ ಎರಡನೇ ಅತಿ ದೊಡ್ಡ ಹಾಲು ಉತ್ಪಾದಕ ರಾಷ್ಟ್ರವಾಗಿದೆ ಎಂದು ಹೇಳಿದರು.

ಬೆಂಗಳೂರನ್ನು ಜಾಗತಿಕ ಮಟ್ಟದ ನಗರವಾಗಿ ರೂಪಿಸುವಲ್ಲಿ ಇಲ್ಲಿನ ಯುವಜನತೆಯ ಪಾತ್ರ ದೊಡ್ಡದು. ಸರ್ಕಾರ ಈ ಪ್ರಯತ್ನಕ್ಕೆ ಪೂರಕವಾಗಿ ನೀತಿಗಳನ್ನು ರೂಪಿಸಿತು ಎಂದರು.

ಸಂವಾದ ನಡೆಸಿದ ನಿರ್ಮಲಾ ಸೀತಾರಾಮನ್

ಸಂವಾದದ ಪ್ರಮುಖ ಅಂಶಗಳು:

- ಪ್ರಧಾನಿ ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿ ಕಾರ್ಯ ನಿರ್ವಹಿಸಿದ್ದರಿಂದ ರಾಜ್ಯಗಳ ಸಂಕಷ್ಟಗಳನ್ನು ಚೆನ್ನಾಗಿ ಅರಿತಿದ್ದಾರೆ. ಹೀಗಾಗಿ ಅನುದಾನ ನೀಡಿಕೆಯಲ್ಲಿ ಯಾವುದೇ ರಾಜ್ಯಗಳಿಗೂ ಅನ್ಯಾಯವಾಗಿಲ್ಲ.
- ಭಾರತೀಯ ಕರೆನ್ಸಿ ಈಗ ಜಾಗತಿಕ ಮಾನ್ಯತೆ ಪಡೆದಿದೆ. ಹಲವು ದೇಶಗಳಲ್ಲಿ ವಾಣಿಜ್ಯ ವಹಿವಾಟಿಗೆ ಅವಕಾಶ ಸಿಕ್ಕಿದೆ. ಸಾಲದ ಸುಳಿಗೆ ಸಿಲುಕಿ ಹಲವು ರಾಷ್ಟ್ರಗಳು ಸಂಕಷ್ಟದಲ್ಲಿವೆ. ಹೀಗಾಗಿ ಭಾರತದ ಜತೆ ವಾಣಿಜ್ಯ ವ್ಯವಹಾರಕ್ಕೆ ಹಲವು ದೇಶಗಳು ಭಾರತೀಯ ಕರೆನ್ಸಿಯನ್ನು ಒಪ್ಪಿಕೊಂಡಿವೆ. ಇದಕ್ಕೆ ಭಾರತದ ಮೇಲಿನ ವಿಶ್ವಾಸ, ಸರ್ಕಾರದ ನೀತಿಗಳು, ಪ್ರಜಾಪ್ರಭುತ್ವದ ಮೇಲಿನ ವಿಶ್ವಾಸವೇ ಕಾರಣ.
- ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ಆಮಿಷ ಒಡ್ಡುವ ಆ್ಯಪ್‌ಗಳ ಬಗ್ಗೆ ಎಚ್ಚರಿಕೆ ಇರಬೇಕು. ಮೋಸ ಮಾಡುವವರು ವಿವಿಧ ರೂಪಗಳಲ್ಲಿ ಬರುತ್ತಾರೆ. ಆಮಿಷಗಳಿಗೆ ಬಲಿಯಾಗಬಾರದು.
- ಕೃಷಿಕರ ಮೇಲೆ ತೆರಿಗೆ ಹಾಕುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಸಂಬಳದಾರರು ತೆರಿಗೆ ವ್ಯಾಪ್ತಿಯಲ್ಲಿದ್ದಾರೆ. ಈ ವರ್ಗದ ನೋವು ನಮಗೆ ಗೊತ್ತಿದೆ. ಈ ವರ್ಗಕ್ಕೆ ತೆರಿಗೆ ಪ್ರಮಾಣವನ್ನು ಹೆಚ್ಚಿಸಿಲ್ಲ. ಆದರೆ, ತೆರಿಗೆ ವ್ಯಾಪ್ತಿಗೆ ಬರದ ಮತ್ತು ಸಾಕಷ್ಟು ಹಣ ಹೊಂದಿರುವ ವರ್ಗವನ್ನೂ ತೆರಿಗೆ ವ್ಯಾಪ್ತಿಗೆ ತರುವ ಪ್ರಯತ್ನ ನಡೆದಿದೆ.

ಕ್ಯೂಟ್ ಟ್ಯಾಕ್ಸಿ ಸಂಚಾರ ಇಂದಿನಿಂದ ಆರಂಭ

ಬೆಂಗಳೂರು: ಆಟೊರಿಕ್ಷಾದಂತೆ ಪ್ರಯಾಣಿಕ ಸೇವೆ ಒದಗಿಸಲು ನಾಲ್ಕು ಚಕ್ರದ ‘ಕ್ಯೂಟ್’ (ಕ್ವಾಡ್ರಿಸೈಕಲ್)’ ವಾಹನಗಳು ನಗರದಲ್ಲಿ ಸೋಮವಾರದಿಂದ ಅಧಿಕೃತವಾಗಿ ರಸ್ತೆಗೆ ಇಳಿಯಲಿದ್ದು, ಸಾರಿಗೆ ಇಲಾಖೆ ದರ ನಿಗದಿ ಮಾಡಿದೆ.

ಹೊಸ ಮಾದರಿಯ ಈ ಪುಟ್ಟ ನಾಲ್ಕು ಚಕ್ರದ ವಾಹನಗಳು ಮೀಟರ್ ಅಳವಡಿಕೆಯೊಂದಿಗೆ ರಸ್ತೆಗೆ ಇಳಿಯಲಿವೆ. ಬಜಾಜ್ ಕಂಪನಿ ಮುಖ್ಯಸ್ಥರು ವಾಹನಗಳಿಗೆ ಸೋಮವಾರ ಚಾಲನೆ ನೀಡಲಿದ್ದಾರೆ.

ಈ ವಾಹನಗಳ ಕಾರ್ಯಾಚರಣೆಗೆ ತಿಂಗಳ ಹಿಂದೆಯೇ ಸಾರಿಗೆ ಇಲಾಖೆ ಅನುಮತಿ ನೀಡಿ, ದರ ನಿಗದಿಪಡಿಸಿದೆ. 4 ಕಿ.ಮೀ ವರೆಗೆ ₹60 ಕನಿಷ್ಠ ದರ. ನಂತರ ಪ್ರತಿ ಕಿಲೋ ಮೀಟರ್‌ಗೆ ₹16 ಇರಲಿದೆ ಎಂದು ಸಾರಿಗೆ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಕಾರು ಮಾದರಿಯ ಬಜಾಜ್ ಕ್ಯೂಟ್ ಕ್ವಾಡ್ರಿಸೈಕಲ್ ವಾಹನವು 2019ರಲ್ಲಿ ಮಾರುಕಟ್ಟೆಗೆ ಬಂದಿತ್ತು. ಸಾರಿಗೆ ಇಲಾಖೆ ದರ ನಿಗದಿ ಪಡಿಸಿರಲಿಲ್ಲ. ಆದರೂ ಉಬರ್ ಸಂಸ್ಥೆಯೊಂದಿಗೆ ಅವಲಂಬಿತವಾಗಿ ಟ್ಯಾಕ್ಸಿ ಸೇವೆ ಒದಗಿಸಲಾಗುತ್ತಿತ್ತು. ಸಾರಿಗೆ ಇಲಾಖೆಗೆ ಮನವಿ ಸಲ್ಲಿಸಿ ದರ ನಿಗದಿ ಮಾಡಲು ಕೋರಿದ್ದೆವು. ಸರ್ಕಾರ ದರ ನಿಗದಿ ಮಾಡಿದೆ ಎಂದು ಓಲಾ ಮತ್ತು ಉಬರ್ ಚಾಲಕರ ಸಂಘದ ಅಧ್ಯಕ್ಷ ತನ್ವೀರ್ ಪಾಷ ತಿಳಿಸಿದ್ದಾರೆ.

ಆಟೊರಿಕ್ಷಾ ಮಾದರಿಯಲ್ಲಿ ರಸ್ತೆಯಲ್ಲಿ ಈ ವಾಹನಗಳಲ್ಲಿ ಪ್ರಯಾಣಿಸಬಹುದು. ವಾಹನ ಖರೀದಿಸುವ ಚಾಲಕರು ಓಲಾ, ಉಬರ್ ರೀತಿಯ ಆ್ಯಪ್ ಜತೆಗೂಡಿಯೂ ಸೇವೆ ಒದಗಿಸಲು ಅವಕಾಶ ಇದೆ ಎಂದು ಅವರು ಹೇಳಿದರು.

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

www.zalimlotion.in
ಜಾಲಿಮ್ ಲೋಷನ್®
ಹಳೆಯ ಹೆಸರು - ಭಾರಿ ಉಪಯುಕ್ತ..... 1929 ರಿಂದ
ಗಜಕರ್ಣ, ಇಸಬು ಮತ್ತು ಗರಿಕಜ್ಜಿ ತುರಿಕೆಯಿಂದ ತಕ್ಷಣ ಆರಾಮ
ಆನ್‌ಲೈನ್ ಮೂಲಕ: amazon meesho Flipkart TATA 1mg
ANIL PUB.

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ

ಮತ್ತು ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ
ಎನ್.ಆರ್.ಚೌಕ, ಬೆಂಗಳೂರು-560 002.

ಸಾರ್ವತ್ರಿಕ ವಿಧಾನಸಭಾ ಚುನಾವಣೆ-2023

ವಿಷಯ: ಚುನಾವಣಾ ನಿಯೋಜಿತ ಅಧಿಕಾರಿ / ಸಿಬ್ಬಂದಿಗಳು ದಿನಾಂಕ 20.04.2023ರಂದು ತರಬೇತಿಗೆ ಗೈರುಹಾಜರಾದವರಿಗೆ ಕಾರಣ ಕೇಳಿ ನೋಟೀಸ್ ಜಾರಿಯಾಗಿದ್ದು ಸಮಜಾಯಿಷಿ ಸಲ್ಲಿಸುವ ಬಗ್ಗೆ

ಮತ್ತು

ಹೆಚ್ಚುವರಿ ಸಿಬ್ಬಂದಿಗಳು ಹೊಸ ತರಬೇತಿಗೆ ಗೈರುಹಾಜರಾದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ.

ಚುನಾವಣೆಗೆ ಮತಗಟ್ಟೆ ಅಧಿಕಾರಿಗಳ ನಿಯೋಜನೆ

ಮೊದಲನೇ ಹಂತದ ಚುನಾವಣೆ ತರಬೇತಿ (ಗೈರುಹಾಜರಾದವರಿಗೆ ಮತ್ತು ಹೆಚ್ಚುವರಿ ಸಿಬ್ಬಂದಿಗೆ)	ದಿನಾಂಕ: 25.04.2023 ಬೆಳಗ್ಗೆ 9.30 ಗಂಟೆಗೆ.
ಎರಡನೇ ಹಂತದ ಚುನಾವಣೆ ತರಬೇತಿ	ದಿನಾಂಕ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು.
ಮಸ್ಟರಿಂಗ್ ದಿನಾಂಕ	09.05.2023 ಬೆಳಗ್ಗೆ 9.30 ಗಂಟೆಗೆ.
ಮತದಾನ ದಿನಾಂಕ	10.05.2023

ಎಚ್ಚರಿಕೆ

ದಿನಾಂಕ: 20.04.2023ರಂದು ನಡೆದ ತರಬೇತಿಗೆ ಗೈರು ಹಾಜರಾದವರಿಗೆ ಪ್ರಜಾಪ್ರತಿನಿಧಿ ಕಾಯ್ದೆ 1951ರಂತೆ ಕಾರಣ ಕೇಳಿ ನೋಟೀಸ್ ಜಾರಿಮಾಡಿದ್ದು ತಮ್ಮ ನಿಯೋಜಿತ ತರಬೇತಿ ಕೇಂದ್ರಗಳಿಗೆ ಖುದ್ದು ಹಾಜರಾಗಿ ಸ್ಪಷ್ಟೀಕರಣ ನೀಡುವುದು.

ಚುನಾವಣಾ ಕೆಲಸಕ್ಕೆ ನಿಯೋಜಿಸಲಾದ ಸಿಬ್ಬಂದಿಗಳು ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಕೇಂದ್ರಗಳಲ್ಲಿ ತರಬೇತಿ, ಮಸ್ಟರಿಂಗ್ ಮತ್ತು ಮತದಾನ ಕಾರ್ಯಕ್ಕೆ ಕಡ್ಡಾಯವಾಗಿ ಹಾಜರಾಗುವುದು.

ಮುಂದುವರೆದು ಸಿಬ್ಬಂದಿಯು ಯಾರಾದರೂ ಗೈರುಹಾಜರಾದಲ್ಲಿ, ಅಂತಹವರ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ 1951ರ ಕಲಂ 134ರಂತೆ ಕೂಡಲೇ ಎಫ್.ಐ.ಆರ್ (FIR) ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸೇವಾ ನಿಯಾಮಾವಳಿಗಳಂತೆ ಮತ್ತು ಅಪರಾಧ ಕಾಯ್ದೆಯಂತೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಚುನಾವಣೆಗೆ ಸಿಬ್ಬಂದಿಯನ್ನು ನಿಯೋಜಿಸಲು ಪ್ರತಿ ಕಛೇರಿಯಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಿ ಆದೇಶಿಸಲಾಗಿದೆ. ಸದರಿ ನೋಡಲ್ ಅಧಿಕಾರಿಯು ತಮ್ಮ ಕಛೇರಿಯ ಸಿಬ್ಬಂದಿಗೆ ಚುನಾವಣೆ ಕರ್ತವ್ಯದ ಆದೇಶಗಳನ್ನು ಹಾಗೂ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ, ಚುನಾವಣಾ ತರಬೇತಿಗೆ ಹಾಗೂ ಗೈರುಹಾಜರಾದವರಿಗೆ ಚುನಾವಣಾ ಕರ್ತವ್ಯಕ್ಕೆ ಹಾಜರುಪಡಿಸುವ ಜವಾಬ್ದಾರಿ ವಹಿಸುವುದು. ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷ್ಯತನ ತೋರಿದ್ದಲ್ಲಿ, ನೋಡಲ್ ಅಧಿಕಾರಿ ವಿರುದ್ಧ ಪ್ರತಿನಿಧಿ ಕಾಯ್ದೆ 1951ರ ಕಲಂ 134ರಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಮತಗಟ್ಟೆ ಸಿಬ್ಬಂದಿಯು ಪ್ರಿಸೈಡಿಂಗ್ ಆಫೀಸರ್ ಕೈಪಿಡಿಯನ್ನು https://eci.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು.

ಕಾಸಾಗ್ರಾಂಡ್ ಭೂಮಿಯನ್ನು ಸಂಪೂರ್ಣ ಖರೀದಿ ಮತ್ತು ಜಂಟಿ ಉದ್ಯಮಕ್ಕಾಗಿ ಆಹ್ವಾನಿಸುತ್ತದೆ.
» ಬೆಂಗಳೂರು ನಗರ ಮತ್ತು ಸುತ್ತಮುತ್ತ 2–50 ಎಕರೆ ಭೂಮಿ

CASAGRAND ಶ್ರೇಷ್ಠತೆಗಳು
- ಉದ್ಯಮದಲ್ಲಿ 18 ವರ್ಷಗಳ ಉನ್ನತಿ
- 140+ ಯೋಜನೆಗಳು | 27,000+ ಸಂತೃಪ್ತ ಗ್ರಾಹಕರು
- 36 million ಚದರ ಅಡಿ ವಾಸಿಸುವ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ
- ಚೆನ್ನೈ, ಬೆಂಗಳೂರು ಮತ್ತು ಕೊಯಂಬತ್ತೂರಿನಲ್ಲಿ ಉಪಸ್ಥಿತಿ

CASAGRAND ಏಕೆ?
- ಪಾರದರ್ಶಕ ವಹಿವಾಟುಗಳು
- ಉದ್ಯಮದಲ್ಲಿ ಉತ್ತಮ ಪಾವತಿ
- ಭೂಮಿಯಾ ಮಾಲೀಕರಿಗೆ ಹೆಚ್ಚಿನ ಪಾವತಿ
- ತ್ವರಿತಾ ವಹಿವಾಟುಗಳು

+91 72599 55555
blrland@casagrand.co.in
CASAGRAND building aspirations

ಶಿಕ್ಷಣ ಮೇಳ: ಮೆಚ್ಚುಗೆಯ ಮಹಾಪೂರ

ಸಿಇಟಿ ಪರೀಕ್ಷೆ ಬಳಿಕ ಸೀಟು ಹಂಚಿಕೆ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬ ನಿಖರ ಮಾಹಿತಿ ದೊರೆಯಿತು. ಅದೇ ರೀತಿ, ವಿವಿಧ ಕೋರ್ಸ್‌ಗಳು ಹಾಗೂ ಅಧ್ಯಯನಕ್ಕೆ ತಗಲುವ ವೆಚ್ಚದ ಬಗ್ಗೆ ತಿಳಿದುಕೊಳ್ಳಲು ಈ ಮೇಳ ಸಹಕಾರಿ ಆಯಿತು. ಕಾಲೇಜಿನಿಂದ ಕಾಲೇಜಿಗೆ ಅಲೆಯುವುದು ಕೂಡ ತಪ್ಪಿತು.

ಮಧು, ಕೋಣನಕುಂಟೆ

ಭಿನ್ನ ಕೋರ್ಸ್‌ಗಳಿಗೆ ಯಾವ ರೀತಿಯ ಶುಲ್ಕಗಳಿವೆ ಎಂಬುದನ್ನು ತಿಳಿಯಲು ಹಾಗೂ ಹೊಸ ಕೋರ್ಸ್‌ಗಳ ಬಗ್ಗೆ ಮಾಹಿತಿ ಪಡೆಯಲು ಈ ಮೇಳ ಸಹಾಯಕವಾಯಿತು. ಸಾಕಷ್ಟು ಕಾಲೇಜುಗಳು ಇಲ್ಲಿರುವುದರಿಂದ ಉಪಯುಕ್ತ ಮಾಹಿತಿಗಳು ದೊರೆತವು.

ವಿರೇಶ್, ನಂದಿನಿ ಲೇಔಟ್

ಬಿಸಿಎ ಮಾಡಬೇಕು ಎಂಬ ಇಚ್ಛೆ ಇದೆ. ವಿವಿಧ ಶೈಕ್ಷಣಿಕ ಸಂಸ್ಥೆಗಳ ಮಳಿಗೆಗಳಿಗೆ ಭೇಟಿ ನೀಡಿ, ಯಾವ ಕಾಲೇಜಿನಲ್ಲಿ ಯಾವ ಕೋರ್ಸ್ ಲಭ್ಯ ಎಂಬುದನ್ನು ತಿಳಿದುಕೊಂಡೆ. ಕಾಲೇಜುಗಳಲ್ಲಿನ ಸೌಲಭ್ಯ, ಪ್ರವೇಶ ಶುಲ್ಕ ಸೇರಿ ವಿವಿಧ ಮಾಹಿತಿಗಳು ದೊರೆಯಿತು. ಕೋರ್ಸ್ ಹಾಗೂ ಕಾಲೇಜು ಆಯ್ಕೆಯ ಬಗೆಗಿನ ಗೊಂದಲವೂ ತಕ್ಕ ಮಟ್ಟಿಗೆ ದೂರವಾಗಿದೆ.

ಸಾಧನ್, ಬನಶಂಕರಿ

ಬಿ.ಕಾಂ ಮಾಡಬೇಕು ಅಂದುಕೊಂಡಿದ್ದೇನೆ. ವಿವಿಧ ಕಾಲೇಜುಗಳಲ್ಲಿ ಪ್ರವೇಶ ಶುಲ್ಕ ಎಷ್ಟಿದೆ ಎಂದು ವಿಚಾರಿಸಿದೆ. ಕೆಲ ಕಾಲೇಜಿನಲ್ಲಿ ಪ್ರವೇಶ ಶುಲ್ಕ ಅಧಿಕವಿದ್ದು, ಕುಟುಂಬಕ್ಕೆ ಆರ್ಥಿಕ ಹೊರೆಯಾಗಲು ಇಷ್ಟವಿಲ್ಲ. ಒಂದೇ ಸೂರಿನಡಿ ಹಲವು ಕಾಲೇಜುಗಳ ಮಳಿಗೆ ಇರುವುದರಿಂದ ಗೊಂದಲಗಳು ದೂರವಾದವು. ಉತ್ತಮವಾಗಿ ಆಯೋಜಿಸಲಾಗಿದೆ.

ಆರ್ಯನ್ ಸೂರ್ಯ, ಕತ್ರಿಗುಪ್ಪೆ

ಸಿಇಟಿ, ಕಾಮೆಡ್ ಕೆ ಪ್ರಕ್ರಿಯೆ ಬಗ್ಗೆ ಉಪಯುಕ್ತವಾದ ಮಾಹಿತಿಗಳು ದೊರೆತವು. ಅದೇ ರೀತಿ, ಹೊಸ ಕೋರ್ಸ್‌ಗಳ ವಿವರ ಸಿಕ್ಕವು. ಒಂದೇ ಸೂರಿನಡಿ ಹಲವು ಕಾಲೇಜುಗಳ ಮಳಿಗೆ ಇರುವುದರಿಂದ ಗೊಂದಲಗಳು ದೂರವಾದವು. ಉತ್ತಮವಾಗಿ ಆಯೋಜಿಸಲಾಗಿದೆ.

ಚೇತನಶ್ರೀ, ಕೆ.ಆರ್. ಪುರ

ಮಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕದೊಂದಿಗೆ ತೇರ್ಗಡೆಯಾಗಿದ್ದಾಳೆ. ವಿವಿಧ ಕೋರ್ಸ್‌ಗಳು ಹಾಗೂ ಅಧ್ಯಯನಕ್ಕೆ ತಗಲುವ ವೆಚ್ಚದ ಬಗ್ಗೆ ತಿಳಿದುಕೊಳ್ಳಲು ಈ ಮೇಳ ಸಹಾಯವಾಯಿತು. ಕಾಲೇಜಿನಿಂದ ಕಾಲೇಜಿಗೆ ಅಲೆಯುವುದು ಕೂಡ ಈ ಮೇಳದಿಂದ ತಪ್ಪಿತು.

ಗುರುಸಿದ್ಧಪ್ಪ, ಬನ್ನೇರುಘಟ್ಟ

ಯಾವ ಕೋರ್ಸ್‌ಗೆ ಎಷ್ಟು ಬೇಡಿಕೆ ಇದೆ, ಏನೆಲ್ಲ ಉದ್ಯೋಗಾವಕಾಶಗಳಿವೆ ಎಂಬುದನ್ನು ತಿಳಿಯಲು ಸಾಧ್ಯವಾಯಿತು. ನನಗೆ ಇಷ್ಟವಾದ ಕೋರ್ಸ್‌ಗಳನ್ನು ಪಟ್ಟಿ ಮಾಡಿಕೊಂಡಿದ್ದೇನೆ. ವಿಶೇಷ ಕೋರ್ಸ್‌ಗಳ ಬಗ್ಗೆ ಸಾಕಷ್ಟು ತಿಳಿದುಕೊಂಡೆ.

ಶರಣ್ ಪ್ರಸಾದ್, ಶ್ರೀರಾಂಪುರ

ಅಣಕು ಪರೀಕ್ಷೆಗೆ ಉತ್ತಮ ಸ್ಪಂದನೆ

ನೋಂದಾಯಿತರಿಗೆ ದಿನವಿಡೀ ಅಚ್ಚರಿ ಉಡುಗೊರೆ ಪಡೆಯುವ ಅವಕಾಶ ನೀಡಲಾಗಿತ್ತು. ಸಿಇಟಿ ಅಣಕು ಪರೀಕ್ಷೆಯನ್ನೂ ನಡೆಸಲಾಯಿತು. ಶನಿವಾರ 'ನೀಟ್ ಅಣಕು' ಪರೀಕ್ಷೆಯನ್ನು ನಡೆಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರಿಂದ ಅಣಕು ಪರೀಕ್ಷೆಗಳ ಫಲಿತಾಂಶವನ್ನು ಸೋಮವಾರ ಘೋಷಿಸಲಾಗುತ್ತದೆ. ಅಣಕು 'ನೀಟ್' ಮತ್ತು 'ಸಿಇಟಿ'ನಲ್ಲಿ ಮೊದಲ ಸ್ಥಾನ ಪಡೆದವರಿಗೆ ತಲಾ ₹25 ಸಾವಿರ, ಎರಡನೇ ಸ್ಥಾನ ಪಡೆದವರಿಗೆ ತಲಾ ₹15 ಸಾವಿರ, ಮೂರನೇ ಸ್ಥಾನ ಪಡೆದವರಿಗೆ ತಲಾ ₹10 ಸಾವಿರ ಬಹುಮಾನ ಹಾಗೂ ಅಧಿಕ ಅಂಕಗಳಿಸಿದ 25 ವಿದ್ಯಾರ್ಥಿಗಳಿಗೆ ತಲಾ ₹2 ಸಾವಿರ ಬಹುಮಾನವನ್ನು ನೀಡಲಾಗುತ್ತದೆ.

ಎಡ್ಯುವರ್ಸ್‌ನಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಪಾಲ್ಗೊಂಡಿದ್ದರು

ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಎಡ್ಯುವರ್ಸ್ ಗೋಷ್ಠಿಯಲ್ಲಿ (ಎಡದಿಂದ) ವಿನಯ್ ಕುಮಾರ್, ಅಕ್ಷರ ದಾಮ್ಲೆ, ಸುಷ್ಮಾ, ಶಿಲ್ಪ ರುದ್ರಪ್ಪ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

DH ಪ್ರಜಾವಾಣಿ ಎಡ್ಯುವರ್ಸ್™ ವಿದ್ಯಾರ್ಥಿಗಳ ದಾರಿದೀಪ

ಸಂದೇಹ ಪರಿಹರಿಸಿಕೊಂಡ ಎಂಜಿನಿಯರಿಂಗ್, ಎಂ.ಬಿ.ಬಿ.ಎಸ್ ಆಕಾಂಕ್ಷಿಗಳು

ಸಿಇಟಿ ಯಶಸ್ಸು: ಉತ್ತಮ ಕಾಲೇಜಿನಲ್ಲಿ ಸೀಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಯುಸಿ ನಂತರದ ಅವಕಾಶಗಳು, ಸಿ.ಇ.ಟಿ ಕೌನ್ಸೆಲಿಂಗ್‌ಗೆ ಸಿದ್ಧತೆ ಹೇಗೆ? ಬೇಕಾಗುವ ದಾಖಲೆಗಳು ಯಾವು? ಎಂಜಿನಿಯರಿಂಗ್ ಕಾಲೇಜು ಆಯ್ಕೆ ಹೇಗೆ? ಯಾವ ಕಾಲೇಜು ಸೂಕ್ತ? ಆನ್‌ಲೈನ್‌ನಲ್ಲಿ ಕಾಮೆಡ್‌-ಕೆ ಪರೀಕ್ಷೆ ಎದುರಿಸುವುದು ಹೇಗೆ? ರಂಗಭೂಮಿ ಕ್ಷೇತ್ರದಲ್ಲಿರುವ ಅವಕಾಶಗಳು... – ಹೀಗೆ ಹತ್ತಾರು ಪ್ರಶ್ನೆಗಳಿಗೆ ಒಂದೇ ಸೂರಿನಡಿ ಉತ್ತರ ಲಭಿಸಿತು.

ನಗರದ ಅರಮನೆ ಮೈದಾನದಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ 'ಎಡ್ಯುವರ್ಸ್' ವಿದ್ಯಾರ್ಥಿಗಳ ದಾರಿದೀಪ ಕಾರ್ಯಕ್ರಮದ 2ನೇ ದಿನವಾದ ಭಾನುವಾರ ವಿದ್ಯಾರ್ಥಿಗಳು, ಅವರ ಪೋಷಕರ ಹತ್ತಾರು ಸಂದೇಹಗಳನ್ನು ಶಿಕ್ಷಣ ತಜ್ಞರು ಪರಿಹರಿಸಿದರು.

ಮಲ್ಲೇಶ್ವರದ ಸರ್ಕಾರಿ ಪಿಯು ಕಾಲೇಜು ಪ್ರಾಂಶುಪಾಲ ಎ.ಎಸ್.ರವಿ, 'ಪಿಯು ಪರೀಕ್ಷೆಯಲ್ಲಿ ಅಂಕಗಳು ಕಡಿಮೆ ಬಂದಿದ್ದರೂ ಚಿಂತಿಸುವ ಅಗತ್ಯವಿಲ್ಲ. ಸಿಇಟಿ ಪರೀಕ್ಷೆ ಸಿದ್ಧತೆಗೆ ಇನ್ನೂ ಸಮಯವಿದೆ. ಸಿಇಟಿಯಲ್ಲಿ ಉತ್ತಮ ಅಂಕ ಪಡೆದರೆ ಎಲ್ಲ ಮೂಲಸೌಕರ್ಯ, ಗ್ರಂಥಾಲಯ, ಸಿಬ್ಬಂದಿ ಹೊಂದಿರುವ ರಾಜ್ಯದ ಉತ್ತಮ ಕಾಲೇಜಿನಲ್ಲಿಯೇ ಎಂಜಿನಿಯರಿಂಗ್ ಸೀಟು ಪಡೆಯಬಹುದು' ಎಂದರು.

'ಸಿಇಟಿ ರ‍್ಯಾಂಕಿಂಗ್ ಪ್ರಕಟವಾದ ಮೇಲೆ ಎಂಜಿನಿಯರಿಂಗ್, ವೆಟರ್ನರಿ ಸೈನ್ಸ್, ಅಗ್ರಿಸೈನ್ಸ್ ಮಾಡಬಹುದು. ದಾಖಲಾತಿಗಳನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ವೇಳೆ ಎಚ್ಚರಿಕೆ ವಹಿಸಬೇಕು. ಕಲ್ಯಾಣ ಕರ್ನಾಟಕ, ಗ್ರಾಮೀಣ ಹಾಗೂ ಕನ್ನಡ ಮಾಧ್ಯಮ ಪ್ರಮಾಣ ಪತ್ರ, ಪಿಯು ಅಂಕ ಪಟ್ಟಿ, ಏಳು ವರ್ಷದ ಅಧ್ಯಯನ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರಗಳನ್ನು ಸಿದ್ಧವಾಗಿ ಇಟ್ಟುಕೊಳ್ಳಬೇಕು. ಅಂತಿಮ ಕ್ಷಣದಲ್ಲಿ ಸರ್ವರ್ ಸಮಸ್ಯೆ ಕಾಡಲಿದೆ. ಆದ್ದರಿಂದ, ದಾಖಲಾತಿಗಳನ್ನು ಆದಷ್ಟು ಬೇಗ ಅಪ್‌ಲೋಡ್ ಮಾಡಬೇಕು' ಎಂದು ಸಲಹೆ ನೀಡಿದರು.

'ಸೀಟು ಆಯ್ಕೆ ವೇಳೆಯೂ ಎಚ್ಚರಿಕೆ ವಹಿಸಬೇಕು. ಎಲ್ಲ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕವೇ ಪಡೆಯಬೇಕಾಗುತ್ತದೆ. ಇದು ಅತ್ಯಂತ ಪಾರದರ್ಶಕ ವ್ಯವಸ್ಥೆಯಾಗಿದೆ' ಎಂದರು.

'ನೀಟ್ ಪರೀಕ್ಷೆಯು ಅಖಿಲ ಭಾರತದ ಮಟ್ಟದಲ್ಲಿ ನಡೆಯಲಿದೆ. ಕೆಇಎ ಮೂಲಕವೇ ಸೀಟು ಹಂಚಿಕೆಯಾಗಲಿದೆ. ಒಳ್ಳೆಯ ರ‍್ಯಾಂಕ್ ಬಂದರೆ ಹೊರ ರಾಜ್ಯದಲ್ಲೇ ಸೀಟು ಸಿಗಲಿದೆ. ಎಂಬಿಬಿಎಸ್ ಸೀಟು ಸಿಕ್ಕರೆ ಎಂಜಿನಿಯರಿಂಗ್ ಸೀಟು ಬಿಟ್ಟು ತೆರಳಬಹುದು. ನಿಮ್ಮ ಹಿಂದಿನ ರ‍್ಯಾಂಕ್‌ನಲ್ಲಿರುವ ವಿದ್ಯಾರ್ಥಿಗೆ ಆ ಸೀಟು ದೊರೆಯಲಿದೆ' ಎಂದರು.

ಕಾಮೆಡ್‌-ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಎಸ್.ಕುಮಾರ್ ಮಾತನಾಡಿ, 'ಕಾಮೆಡ್‌– ಕೆ ಪರೀಕ್ಷೆಯು ಪಾರದರ್ಶಕವಾಗಿ ನಡೆಯಲಿದೆ. ಮೆರಿಟ್ ಆಧರಿಸಿ ಸೀಟುಗಳು ದೊರೆಯಲಿವೆ. ಮಧ್ಯವರ್ತಿಗಳ ಮಾತು ನಂಬಿ ಮೋಸ ಹೋಗಬಾರದು' ಎಂದು ಎಚ್ಚರಿಸಿದರು.

'ರಾಜ್ಯದ 23 ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ 3,525, 27 ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ 4,595, 11 ಡೀಮ್ಡ್ ವಿ.ವಿಗಳಲ್ಲಿ 2,050 ಹಾಗೂ 7 ಖಾಸಗಿ ವಿ.ವಿಗಳಲ್ಲಿ 1,100 ಸೀಟುಗಳು ಲಭ್ಯವಿದೆ. ದೇಶದಲ್ಲಿ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳು ಸೇರಿದಂತೆ 1 ಲಕ್ಷಕ್ಕೂ ಹೆಚ್ಚು ಎಂಬಿಬಿಎಸ್ ಸೀಟುಗಳಿವೆ. ದೇಶದಲ್ಲಿ 3 ಸಾವಿರ ಎಂಜಿನಿಯರಿಂಗ್ ಕಾಲೇಜಿನಲ್ಲಿ 13.56 ಲಕ್ಷ ಎಂಜಿನಿಯರಿಂಗ್ ಸೀಟ್‌ಗಳಿವೆ. ಆದರೂ, ಪ್ರತಿ ವರ್ಷ ಪ್ರವೇಶಕ್ಕೆ ವಿದ್ಯಾರ್ಥಿಗಳು ಪರದಾಡುವ ಸ್ಥಿತಿಯಿದೆ' ಎಂದು ಹೇಳಿದರು.

'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ' ಆಯೋಜಿಸಿರುವ 13ನೇ ಎಡ್ಯುವರ್ಸ್ ಕಾರ್ಯಕ್ರಮದಲ್ಲಿ ಡಾ.ಎಸ್. ಕುಮಾರ್ ಮಾತನಾಡಿದರು. ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎ.ಎಸ್. ರವಿ ಇದ್ದಾರೆ

ಕಡಿಮೆ ವೆಚ್ಚದಲ್ಲೂ ವೈದ್ಯಕೀಯ ಶಿಕ್ಷಣ

ರಾಜನ್ ಶೆಟ್ಟಿ

'ವೈದ್ಯರಾಗುವುದು ಸೇವೆ ಮಾಡುವುದಕ್ಕೇ ಹೊರತು, ಹಣ ಗಳಿಸುವುದಕ್ಕೆ ಅಲ್ಲ. ವೈದ್ಯ ವೃತ್ತಿಯು ಮನಸ್ಸಿಗೆ ತೃಪ್ತಿ ನೀಡುವ ಉತ್ತಮ ಕೆಲಸಗಳಲ್ಲಿ ಒಂದಾಗಿದೆ. ವೈದ್ಯನಾದವನು ರೋಗಿಗಳ ಬಗ್ಗೆ ಸಹಾನುಭೂತಿ ಹೊಂದಿರಬೇಕು. ಯಾರೇ ಬಂದರೂ ಅತ್ಯುತ್ತಮವಾದ ಚಿಕಿತ್ಸೆ ಕೊಡುವತ್ತ ಗಮನ ಹರಿಸಬೇಕು' ಎಂದು ಮಣಿಪಾಲ್ ಆಸ್ಪತ್ರೆಯ ಡಾ.ರಂಜನ್ ಶೆಟ್ಟಿ ಅಭಿಪ್ರಾಯಪಟ್ಟರು.

'ವೈದ್ಯಕೀಯ ಕ್ಷೇತ್ರದಲ್ಲಿ ಅವಕಾಶಗಳು' ಕುರಿತು ಮಾತನಾಡಿ, 'ಎಂಎಂಬಿಎಸ್ ಮಾಡಿದ ಬಳಿಕ ಅವಕಾಶಗಳ ಬಾಗಿಲು ತೆರೆದುಕೊಳ್ಳಲಿವೆ. ಉತ್ತಮ ಅಂಕ ಗಳಿಸಿದರೆ ಕಡಿಮೆ ವೆಚ್ಚದಲ್ಲಿ ಎಂಬಿಬಿಎಸ್ ಪೂರ್ಣಗೊಳಿಸುವುದಕ್ಕೆ ಅವಕಾಶಗಳಿವೆ. ವೃತ್ತಿ ಆರಂಭಿಸಿದ ಮೇಲೂ ಬೇಸರ ಪಟ್ಟುಕೊಳ್ಳದೇ ಸೇವಾ ಮನೋಭಾವದ ಜತೆಗೆ ಕೆಲಸ ಮಾಡಬೇಕು' ಎಂದು ಕರೆ ನೀಡಿದರು.

ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ಕುತೂಹಲದಿಂದ ವೀಕ್ಷಿಸಿದರು

ಐ.ಎ.ಎಸ್ ಸಿದ್ಧತೆ, ರಂಗಭೂಮಿ– ವೈದ್ಯಕೀಯ ಕ್ಷೇತ್ರ ಅವಕಾಶ ಕುರಿತು ಗೋಷ್ಠಿ

ಇರಲಿ ಕೌಶಲ; ಅವಕಾಶ ಹೇರಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೋ ಒಂದು ವಿಷಯವನ್ನು ಕಂಠಪಾಠ ಮಾಡಿಕೊಂಡು ಐಎಎಸ್ ಪರೀಕ್ಷೆ ಪಾಸು ಮಾಡಲು ಸಾಧ್ಯವಿಲ್ಲ. ಎಲ್ಲ ಕ್ಷೇತ್ರದಲ್ಲೂ ಪರಿಪೂರ್ಣವಾಗಿದ್ದರೆ ಮಾತ್ರ ಯಶಸ್ಸು ಗಳಿಸಲು ಸಾಧ್ಯವಿದೆ' ಎಂದು 'ಇನ್‌ಸೈಟ್' ಅಕಾಡೆಮಿ ಸ್ಥಾಪಕ ವಿನಯ್ ಕುಮಾರ್ ಹೇಳಿದರು.

'ಐಎಎಸ್ ಪರೀಕ್ಷೆಗೆ ಸಿದ್ಧತೆ' ಕುರಿತು ಮಾತನಾಡಿದ ಅವರು, 'ಚಿಕ್ಕಂದಿನಲ್ಲೇ ಸುದ್ದಿ ಪತ್ರಿಕೆ ಓದಬೇಕು. ಸಾಮಾನ್ಯ ಜ್ಞಾನದ ಬಗ್ಗೆ ಆಸಕ್ತಿ ಮೂಡಿಸಿಕೊಳ್ಳಬೇಕು' ಎಂದರು.

'ಬಿ.ಎ ಪದವಿಗೆ ಸೇರಿದರೆ ಐಎಎಸ್ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬಹುದೆಂಬ ತಪ್ಪು ಅಭಿಪ್ರಾಯ ಕೆಲವರಲ್ಲಿದೆ. ಇನ್ನು ಕೆಲವರು ದೂರ ಶಿಕ್ಷಣದಲ್ಲಿ ಪದವಿಗೆ ಸೇರಿ ಐಎಎಸ್ ತರಬೇತಿಗೆ ಬರುತ್ತಾರೆ. ಅದೂ ಸಹ ತಪ್ಪು. ಬದಲಿಗೆ ನಿತ್ಯ ಕಾಲೇಜಿಗೆ ತೆರಳಿಯೇ ಪದವಿ ಶಿಕ್ಷಣ ಪಡೆಯಬೇಕು. ಒಳ್ಳೆಯ ಕಾಲೇಜು ಆಯ್ಕೆ ಮಾಡಿಕೊಳ್ಳುವುದು ಮುಖ್ಯ. ಕ್ಯಾಂಪಸ್‌ನಲ್ಲಿಯೇ ಮನಸ್ಸು ವಿಕಾಸಗೊಳ್ಳಬೇಕು' ಎಂದು ಸಲಹೆ ನೀಡಿದರು.

'ಭವಿಷ್ಯದಲ್ಲಿ ಜ್ಞಾನವೊಂದೇ ಮುಖ್ಯ ಆಗುವುದಿಲ್ಲ. ಅನಿಶ್ಚಿತ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುತ್ತೇವೆ ಎಂಬುದೂ ಪ್ರಧಾನ ಪಾತ್ರ ವಹಿಸಲಿದೆ. ಉದ್ಯೋಗ ಆಕಾಂಕ್ಷಿಗಳು ಕೌಶಲದ ಹಿಂದೆ ಓಡಬೇಕಾಗಿದೆ' ಎಂದರು.

'ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣದ ಬಗ್ಗೆ ಜನರಿಗೆ ಹೆಚ್ಚಿನ ಅರಿವಿದೆ. ಅದೇ ಐಎಎಸ್ ಬಗ್ಗೆ ಜನರಿಗೆ ತಿಳಿವಳಿಕೆ ಕಡಿಮೆ. ಸ್ಪರ್ಧಾತ್ಮಕ ಪರೀಕ್ಷೆಗಳ ಅರಿವೂ ಇರಲಿ' ಎಂದರು.

'ರಂಗಭೂಮಿ ಕಲೆಗಳು...' ಕುರಿತು ರಂಗಭೂಮಿ ನಟಿ ಎಸ್.ವಿ.ಸುಷ್ಮಾ ಮಾತನಾಡಿ, 'ರಂಗಭೂಮಿ ಪ್ರಕೃತಿಗೆ ಹತ್ತಿರ ಆಗಿರುವಂತೆ ಮಾಡಲಿದೆ. ಮನುಷ್ಯರನ್ನು ಮನಷ್ಯರಂತೆಯೇ ನೋಡುವಂತೆ ಮಾಡಲಿದೆ. ರಂಗಭೂಮಿಗೆ ಬಂದರೆ ಒತ್ತಡ ನಿಭಾಯಿಸುವುದನ್ನು ಸಹಜವಾಗಿಯೇ ಕಲಿಯಬಹುದು' ಎಂದರು.

'ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದ ಮೇಲೆ ಎಲ್ಲ ವಿ.ವಿಗಳು ರಂಗಭೂಮಿ ವಿಭಾಗವನ್ನು ಆರಂಭಿಸಿವೆ. ಎಂಜಿನಿಯರಿಂಗ್ ಜತೆಗೆ ರಂಗಭೂಮಿ ಶಿಕ್ಷಣವನ್ನು ಕಲಿಯಬಹುದಾಗಿದೆ. ನಾವು ಬರೀ ಸಾಂಪ್ರದಾಯಿಕ ಕೆಲಸಗಳ ಬಗ್ಗೆಯೇ ಯೋಚಿಸುತ್ತೇವೆ. ಅದರಾಚೆಗೂ ಸಾಕಷ್ಟು ವೃತ್ತಿಗಳಿವೆ. ಇವೆಂಟ್ ಮ್ಯಾನೇಜ್‌ಮೆಂಟ್, ಕಂಟೆಂಟ್ ರೈಟಿಂಗ್, ಫೋಟೊಗ್ರಫಿ... ಹೀಗೆ ನಾನಾ ಕೆಲಸಗಳಿವೆ. ಅಲ್ಲಿಯೂ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಬಹುದು' ಎಂದು ಸುಷ್ಮಾ ಹೇಳಿದರು.

ಮನೋರೋಗ ತಜ್ಞ ಅಕ್ಷರ ದಾಮ್ಲೆ ಮಾತನಾಡಿ, 'ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಇನ್ನೂ ಹೆಚ್ಚಿನ ಒತ್ತು ನೀಡುತ್ತಿಲ್ಲ. ಮಾನಸಿಕ ಆರೋಗ್ಯವನ್ನು ನಿವಾರಣೆ ಮಾಡುವ ಅಗತ್ಯ ಇಂದು ಹೆಚ್ಚಿದೆ' ಎಂದರು.

'ಮನೋರೋಗ ತಜ್ಞರ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಮಾನಸಿಕ ಆರೋಗ್ಯದ ಬಗ್ಗೆ ಆಸಕ್ತಿಯುಳ್ಳವರು ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬಹುದು' ಎಂದು ಹೇಳಿದರು. ಶಿಲ್ಪಾ ಸಂವಾದ ನಡೆಸಿಕೊಟ್ಟರು.

ಶಿಕ್ಷಣ ಮೇಳದಲ್ಲಿ ಸಿಇಟಿ ಅಣಕು ಪರೀಕ್ಷೆ ಬರೆದ ವಿದ್ಯಾರ್ಥಿಗಳು

ಶಿಕ್ಷಣ ಮೇಳದಲ್ಲಿ ವಿದ್ಯಾರ್ಥಿಗಳು ಕಾಲೇಜು ಹಾಗೂ ಕೋರ್ಸ್‌ಗಳ ಬಗ್ಗೆ ವಿವರಗಳನ್ನು ಪಡೆದುಕೊಂಡರು

'ಪ್ರಜಾವಾಣಿ'–'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ 'ಎಡ್ಯುವರ್ಸ್' 13ನೇ ಆವೃತ್ತಿ ಸಂಪನ್ನ

ವಿದ್ಯಾರ್ಥಿಗಳಿಗೆ ದಾರಿದೀಪವಾದ ಶೈಕ್ಷಣಿಕ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜುಗಳಲ್ಲಿನ ಸೌಲಭ್ಯ, ನೂತನ ಕೋರ್ಸ್‌ಗಳು, ಪ್ರವೇಶ ಶುಲ್ಕ, ಉದ್ಯೋಗಾವಕಾಶ, ಶೈಕ್ಷಣಿಕ ಸಾಲ... ಹೀಗೆ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿನ ಸಾಲು ಸಾಲು ಅನುಮಾನಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ಶೈಕ್ಷಣಿಕ ಮೇಳ ಮಾಡಿತು.

ಇಲ್ಲಿನ ತ್ರಿಪುರವಾಸಿನಿ, ಅರಮನೆ ಮೈದಾನದಲ್ಲಿ **'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಿದ್ದ 'ಎಡ್ಯುವರ್ಸ್: ವಿದ್ಯಾರ್ಥಿಗಳ ದಾರಿದೀಪ'** ಶಿಕ್ಷಣ ಮೇಳವು ಭಾನುವಾರ ಸಂಪನ್ನವಾಯಿತು. ಎರಡನೇ ದಿನವೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ, ತಮ್ಮ ಗೊಂದಲಗಳನ್ನು ಬಗೆಹರಿಸಿಕೊಂಡರು.

ಮೇಳದಲ್ಲಿದ್ದ 50ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳ ಮಳಿಗೆಗಳು ವಿದ್ಯಾರ್ಥಿಗಳು ಮತ್ತು ಪಾಲಕರಿಗೆ ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ರೋಬೋಟಿಕ್ಸ್, ಪ್ರವಾಸೋದ್ಯಮ, ಎಂಬಿಎ, ಎಂಸಿಎ, ಫ್ಯಾಷನ್ ಡಿಸೈನ್ ಸೇರಿದಂತೆ ವಿವಿಧ ಕೋರ್ಸ್‌ಗಳು ಹಾಗೂ ಕಾಲೇಜುಗಳ ವೈಶಿಷ್ಟ್ಯತೆಗಳ ಬಗ್ಗೆ ಮಾಹಿತಿ ಒದಗಿಸಿದವು.

ವಿಚಾರಗೋಷ್ಠಿಗೆ ಮೆಚ್ಚುಗೆ: ಸಿಇಟಿ ಮತ್ತು ಕಾಮೆಡ್‌-ಕೆ ಕುರಿತ ವಿಚಾರಗೋಷ್ಠಿಗಳು ಮೆಚ್ಚುಗೆಗೆ ಪಾತ್ರವಾಯಿತು. 'ಸಿಇಟಿ ಸೀಟು ಆಯ್ಕೆ ಮಾಡಿಕೊಳ್ಳುವಾಗ ಜಾಗೃತರಾಗಿರಬೇಕೆಂದು ಎಲ್ಲರೂ ಹೇಳುತ್ತಾರೆ. ಆದರೆ, ಈ ಬಗ್ಗೆ ಸ್ಪಷ್ಟತೆ ನಮಗೆ ಇರಲಿಲ್ಲ. ಇದೀಗ ಸಿಇಟಿ ಸೀಟು ಹಂಚಿಕೆ ಬಗ್ಗೆ ವಿವರವಾದ ಮಾಹಿತಿ ದೊರೆತಿರುವುದರಿಂದ ಕೋರ್ಸ್ ಹಾಗೂ ಕಾಲೇಜು ಆಯ್ಕೆ ಬಗ್ಗೆ ಸ್ಪಷ್ಟ ಚಿತ್ರಣ ದೊರೆತಿದೆ. ಅದೇ ರೀತಿ, ಪ್ರತಿ ಕಾಲೇಜಿಗೂ ತೆರಳಿ ಅಲ್ಲಿನ ಪ್ರವೇಶ ಶುಲ್ಕ, ಸೌಲಭ್ಯದ ಬಗ್ಗೆ ವಿಚಾರಿಸುವುದು ಕಷ್ಟ. ಆದರೆ, ಶೈಕ್ಷಣಿಕ ಮೇಳದಲ್ಲಿ ಒಂದೇ ಸೂರಿನಡಿ ರಾಜ್ಯದ ಪ್ರಮುಖ ಕಾಲೇಜುಗಳ ಮಾಹಿತಿ ಪಡೆದುಕೊಂಡೆವು' ಎಂದು ಪೋಷಕರು ಹಾಗೂ ವಿದ್ಯಾರ್ಥಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಶೈಕ್ಷಣಿಕ ಕೋರ್ಸ್ ಹಾಗೂ ಕಾಲೇಜುಗಳಲ್ಲಿ ಸೌಲಭ್ಯಗಳ ಮಾಹಿತಿ ಒಳಗೊಂಡ ಕರಪತ್ರಗಳನ್ನು ಹಂಚಿದರು. ಕೆಲವು ಸಂಸ್ಥೆಗಳು ಮಾಹಿತಿ ಪರದೆಯನ್ನೂ ಅಳವಡಿಸಿದ್ದವು. ಮಧ್ಯಾಹ್ನದ ಬಳಿಕ ಮಳಿಗೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಜಮಾಯಿಸಿ, ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳ ಜತೆಗೆ ಸಮಾಲೋಚನೆ ನಡೆಸಿದರು.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ: ಶ್ರೀರಾಮ ನವಮಿ ಸಂಗೀತೋತ್ಸವ: ಇಶಾನ್ ಅಯ್ಯರ್ ಮತ್ತು ತಂಡ, ಸಂಗೀತ ಕಛೇರಿ: ಕಲಾವತಿ ಅವಧೂತ್, ಮತ್ತೂರು ಶ್ರೀನಿಧಿ, ಸಿ. ಚೆಲುವರಾಜ್, ಭಾಗ್ಯಲಕ್ಷ್ಮಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಧನಂಜಯ್ ಹೆಗ್ಡೆ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ಗುರುಮೂರ್ತಿ ವೈದ್ಯ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು: ಸಿಂಧು ಸುಚೇತನ್, ಎಚ್. ಎಂ.ಸ್ಮಿತಾ, ಮೃದಂಗ: ಬಿ.ಎಸ್. ಪ್ರಶಾಂತ್, ಘಟ: ಬಿ.ಎಸ್. ರಘುನಂದನ್, ಮೋರ್ಸಿಂಗ್: ಎಸ್.ವಿ. ಬಾಲಕೃಷ್ಣ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 6.30

ವಿಶ್ವ ಪುಸ್ತಕ ದಿನಾಚರಣೆ: ಮುಖ್ಯ ಅತಿಥಿಗಳು: ಸಿ. ಸೋಮಶೇಖರ್, ಗಿರೀಶ್ ರಾವ್ ಹತ್ವಾರ್ (ಜೋಗಿ), ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಸನ್ಮಾನಿತರು: ನಂದಾ ಹರಿಪ್ರಸಾದ್, ಜ್ಞಾನಯೋಗಿ, ರಾಮಚಂದ್ರಯ್ಯ, ಶೋಭಾ, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಬಿ.ಆರ್.ಅಂಬೇಡ್ಕರ್ ಅವರ 132 ನೇ ಜನ್ಮ ದಿನಾಚರಣೆ: ಮುಖ್ಯ ಅತಿಥಿ: ಎಚ್. ಮೋಹನ್ ಕುಮಾರ್, ಆಯೋಜನೆ ಹಾಗೂ ಸ್ಥಳ: ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್, ಎಚ್‌ಎಸ್‌ಆರ್ ಬಡಾವಣೆ, ಬೆಳಿಗ್ಗೆ 11

ಎಂಜಿನಿಯರಿಂಗ್ ಬಗ್ಗೆ ಉಪನ್ಯಾಸ: ಸುರೇಶ ಹಡಗಲಿ, ಆಯೋಜನೆ ಹಾಗೂ ಸ್ಥಳ: ಬಿಎನ್‌ಎಂ ತಾಂತ್ರಿಕ ವಿದ್ಯಾಲಯ, ಬನಶಂಕರಿ 2ನೇ ಹಂತ, ಮಧ್ಯಾಹ್ನ 2

ಎಫ್‌ಕೆಸಿಸಿಐ ಕೌಶಲ ಆಧಾರಿತ ಪ್ರಮಾಣ ಪತ್ರ ಕೋರ್ಸ್‌ಗೆ ಚಾಲನೆ: ಮುಖ್ಯ ಅತಿಥಿ: ಎಸ್.ಆರ್. ಉಮಾಶಂಕರ್, ಉಪಸ್ಥಿತಿ: ಬಿ.ವಿ. ಗೋಪಾಲ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಮಧ್ಯಾಹ್ನ 2.30

ಪ್ರವಚನ ವಾಹಿನಿ: 'ಸಮಾಜಕ್ಕೆ ರಾಮಾನುಜರ ಕೊಡುಗೆ', ಉಪನ್ಯಾಸ: ಗೋಪಾಲ ಅಯ್ಯಂಗಾರ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ವಿಚಾರಣೆಗೆ ಗೈರು: 'ಪಿಸ್ತೂಲ್' ಬಂಧನ

ಬೆಂಗಳೂರು: ಅಪರಾಧ ಪ್ರಕರಣಗಳ ವಿಚಾರಣೆಗೆ ಗೈರಾಗಿ ತಲೆಮರೆಸಿಕೊಂಡಿದ್ದ ಆರೋಪಿ ಆಸೀಫ್ ಖಾನ್ ಅಲಿಯಾಸ್ ಪಿಸ್ತೂಲ್ (40) ಎಂಬುವವರನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರ್.ಟಿ. ನಗರದ ಆಸೀಫ್ ಖಾನ್, ಅಪರಾಧ ಹಿನ್ನೆಲೆಯುಳ್ಳವ. 12 ಪ್ರಕರಣಗಳಲ್ಲಿ ಈತ ಆರೋಪಿ. ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ' ಎಂದು ಪೊಲೀಸರು ಹೇಳಿದರು.



ಆಸೀಫ್ ಖಾನ್

'ಬಸವನಗುಡಿ, ಜಯನಗರ, ಸದಾಶಿವನಗರ, ಸಿದ್ದಾಪುರ, ವಿಲ್ಸನ್ ಗಾರ್ಡನ್ ಹಾಗೂ ಎಸ್.ಜೆ.ಪಾರ್ಕ್ ಠಾಣೆಯಲ್ಲಿ ಆಸೀಫ್ ಖಾನ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಇವುಗಳ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿತ್ತು. ಆರೋಪಿ ಯಾವುದೇ ವಿಚಾರಣೆಗೆ ಹಾಜರಾಗದೇ ಒಂದು ವರ್ಷದಿಂದ ತಲೆಮರೆಸಿಕೊಂಡಿದ್ದ.'

'ಆರೋಪಿ ಬಂಧನಕ್ಕೆ 8 ಜಾಮೀನುರಹಿತ ವಾರೆಂಟ್‌ಗಳು ಜಾರಿಯಾಗಿದ್ದವು. ಇತ್ತೀಚೆಗೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಸೆರೆ ಹಿಡಿದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಭಾನುವಾರ ಮಣಿಪಾಲ್ ಆಸ್ಪತ್ರೆಗೆ ಭೇಟಿ ನೀಡಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಆರೋಗ್ಯ ವಿಚಾರಿಸಿದರು

ಅಪಘಾತ: ಸೈಕಲ್ ಸವಾರ ಸಾವು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಕೊಡಿಗೇಹಳ್ಳಿ ಬಳಿಯ ಮೇಲ್ಸೇತುವೆಯಲ್ಲಿ ಅಪಘಾತ ಸಂಭವಿಸಿದ್ದು, ಸೈಕಲ್ ಸವಾರ ನಾಗರಾಜ್ (47) ಮೃತಪಟ್ಟಿದ್ದಾರೆ.

'ಸ್ಥಳೀಯ ನಿವಾಸಿ ನಾಗರಾಜ್ ಪರಿಚಯಸ್ಥರೊಬ್ಬರ ಗೃಹ ಪ್ರವೇಶಕ್ಕೆ ಸೈಕಲ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಹೆಬ್ಬಾಳ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಮೇಲ್ಸೇತುವೆ ಮೂಲಕ ಯಲಹಂಕದತ್ತ ಹೊರಟಿದ್ದ ನಾಗರಾಜ್ ಅವರ ಸೈಕಲ್‌ಗೆ ಕಾರೊಂದು ಗುದ್ದಿತ್ತು. ರಸ್ತೆಯಲ್ಲಿ ಉರುಳಿಬಿದ್ದು ತೀವ್ರ ಗಾಯಗೊಂಡಿದ್ದ ನಾಗರಾಜ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ.

ಆಸ್ಪತ್ರೆಯಲ್ಲಿ ವೈದ್ಯ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಸಾರ್ವಜನಿಕ ಆಸ್ಪತ್ರೆಯ ವೈದ್ಯ ಡಾ. ರೇಣುಕಾನಂದ್ (43) ಅವರು ನೇಣು ಹಾಕಿಕೊಂಡು ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಮಕ್ಕಳ ವೈದ್ಯರಾಗಿದ್ದ ರೇಣುಕಾನಂದ್, ಭಾನುವಾರ ಬೆಳಿಗ್ಗೆ ಎಂದಿನಂತೆ ಕೆಲಸಕ್ಕೆ ಬಂದಿದ್ದರು. ಮಧ್ಯಾಹ್ನ 1 ಗಂಟೆಯಿಂದ 3 ಗಂಟೆ ಅವಧಿಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಆಸ್ಪತ್ರೆ ಸಿಬ್ಬಂದಿ ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಲಕ್‌ನಗರ ಠಾಣೆ ಪೊಲೀಸರು ಹೇಳಿದರು.

'ಭಾನುವಾರ ಆಗಿದ್ದರಿಂದ ಆಸ್ಪತ್ರೆಯಲ್ಲಿ ಸಿಬ್ಬಂದಿ ಸಂಖ್ಯೆ ಕಡಿಮೆ ಇತ್ತು. ವಾರ್ಡ್‌ನಲ್ಲಿರುವ ಫ್ಯಾನ್‌ಗೆ ರೇಣುಕಾನಂದ್ ನೇಣು ಹಾಕಿಕೊಂಡಿದ್ದಾರೆ. ಸ್ಥಳದಲ್ಲಿ ಮರಣಪತ್ರ ಲಭ್ಯವಾಗಿದ್ದು, 'ನನ್ನ ಸಾವಿಗೆ ನಾನೇ ಕಾರಣ' ಎಂದು ಬರೆಯಲಾಗಿದೆ. ಹಸ್ತಾಕ್ಷರ ಪರೀಕ್ಷೆಗೆಂದು ಪತ್ರವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು' ಎಂದರು.

'ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವುದಾಗಿ ರೇಣುಕಾನಂದ್ ಹಲವರ ಬಳಿ ಹೇಳಿಕೊಳ್ಳುತ್ತಿದ್ದರು. ಈ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ. ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ಪೊಲೀಸರು ತಿಳಿಸಿದರು.


ಬಸವೇಶ್ವರರ ಪ್ರತಿಮೆಗೆ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಪುಷ್ಪ ನಮನ ಸಲ್ಲಿಸಿದರು. ಕಾಂಗ್ರೆಸ್ ಮುಖಂಡ ಪದ್ಮರಾಜ್ ಇದ್ದರು

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕರೆ

ಕನ್ನಡೇತರರ ಮನವೊಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ಮತದಾನದ ವೇಳೆ ಪ್ರತಿಯೊಂದು ಮತಗಟ್ಟೆಯಲ್ಲೂ ಅತಿ ಹೆಚ್ಚು ಪ್ರಮಾಣದಲ್ಲಿ ಮತದಾನ ಆಗುವಂತೆ ನೋಡಿಕೊಳ್ಳಬೇಕು. ವಿಶೇಷವಾಗಿ ಕನ್ನಡಿಗರಲ್ಲದವರು ಮತದಾನಕ್ಕೆ ಬರುವಂತೆ ಮನವೊಲಿಸಬೇಕು ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಪಕ್ಷದ ವಿಸ್ತಾರಕರ ಸಭೆಯಲ್ಲಿ ಸೂಚಿಸಿದ್ದಾರೆ.

ಅಲ್ಲದೇ, ಹೊಸ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ ಕಡೆಗಳಲ್ಲಿ ಶೇ 10ರಷ್ಟು ಹೆಚ್ಚುವರಿ ಮತಗಳು ಪಕ್ಷದ ಅಭ್ಯರ್ಥಿಗಳಿಗೆ ಬರುವಂತೆ ಶ್ರಮ ಹಾಕಬೇಕು. ಇನ್ನು ಕೇವಲ ಮೂರು ವಾರಗಳು ಉಳಿದಿವೆ. ಕಾಲ ಮೀರುವ ಮುನ್ನ ಈ ಎಲ್ಲ ಅಂಶಗಳ ಬಗ್ಗೆಯೂ ಗಮನಹರಿಸಬೇಕು ಎಂದು ನಾಯಕರು, ವಿಸ್ತಾರಕರು ಮತ್ತು ಸ್ಥಳೀಯ ನಾಯಕರಿಗೆ ಅವರು ಹೇಳಿದ್ದಾರೆಂದು ಮೂಲಗಳು ತಿಳಿಸಿವೆ.

ಸೂಚನೆಗಳು
- ಮತದಾನದ ಪ್ರಮಾಣ ಶೇ 10ರಷ್ಟು ಹೆಚ್ಚಿಸಲು ಪರಿಶ್ರಮವಹಿಸಿ
- ಚಾಮರಾಜನಗರ, ಮೈಸೂರು ಲಿಂಗಾಯತರ ಮತ ಪಡೆಯಲು ಶ್ರಮಿಸಿ
- ಹೊಸಬರಿಗೆ ಅವಕಾಶ ನೀಡಿದ ಕಡೆ ಹೆಚ್ಚು ಕೆಲಸ ಮಾಡಿ

ಮತದಾನದ ಪ್ರಮಾಣ ಶೇ 10 ರಷ್ಟು ಹೆಚ್ಚಿಸಲು ಕಠಿಣ ಪರಿಶ್ರಮ ಹಾಕಲೇಬೇಕು. ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿರುವ ಕನ್ನಡೇತರರನ್ನು ತಲುಪಲು ಅವರ ಮನೆಗಳಿಗೆ ಹೋಗಬೇಕು. ಲೋಕಸಭಾ ಚುನಾವಣೆಯಲ್ಲಿ ಮತದಾನಕ್ಕೆ ಬರುವ ಅವರು ವಿಧಾನಸಭೆ ಚುನಾವಣೆಯಲ್ಲಿ ಮತ ಹಾಕಲು ಆಸಕ್ತಿ ತೋರಿಸುವುದಿಲ್ಲ. ಆದ್ದರಿಂದ ಅವರನ್ನು ಸಂಪರ್ಕಿಸುವ ಕೆಲಸವನ್ನೂ ಮಾಡುವಂತೆ ಸೂಚಿಸಿದ್ದಾರೆ.

ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಲಿಂಗಾಯತ ಸಮುದಾಯ ಗಣನೀಯ ಪ್ರಮಾಣದಲ್ಲಿದ್ದು ಈ ಮತಗಳನ್ನು ಹೆಚ್ಚು ಪಡೆಯುವ ಬಗ್ಗೆ ಗಮನಹರಿಸಬೇಕು. 2018 ರ ಚುನಾವಣೆಯಲ್ಲಿ ಸೋತ ವಿಧಾನಸಭಾ ಕ್ಷೇತ್ರಗಳಲ್ಲಿ ಈ ಬಾರಿ ಶೇ 20 ರಿಂದ ಶೇ 25 ರಷ್ಟು ಹೆಚ್ಚು ಮತದಾನ ಆಗುವಂತೆ ನೋಡಿಕೊಳ್ಳಬೇಕು. ಇದರಿಂದ ಪಕ್ಷದ ಅಭ್ಯರ್ಥಿ ಗೆಲ್ಲಲು ಸಾಧ್ಯ ಎಂದು ಅವರು ಸಲಹೆ ನೀಡಿದ್ದಾರೆ.

ಯಾವ ಕ್ಷೇತ್ರಗಳಲ್ಲಿ ಹೊಸ ಮುಖಗಳನ್ನು ಕಣಕ್ಕಿಳಿಸಲಾಗಿದೆಯೋ ಅಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಲಾಗಿದೆ. ಶಿಕಾರಿಪುರದಲ್ಲಿ ಬಿ.ವೈ. ವಿಜಯೇಂದ್ರ, ಮಹದೇವಪುರದಲ್ಲಿ ಅರವಿಂದ ಲಿಂಬಾವಳಿ ಅವರ ಪತ್ನಿ ಸ್ಪರ್ಧಿಸಿದ್ದು, ಇವೆರಡೂ ಬಿಜೆಪಿ ಭದ್ರಕೋಟೆಯಾಗಿರುವುದರಿಂದ ಈ ಕ್ಷೇತ್ರದಲ್ಲಿ ಹೆಚ್ಚಿನ ಗಮನ ಹರಿಸುವ ಅಗತ್ಯವಿಲ್ಲ. ಆದರೆ, ಬಿಜೆಪಿ ಭದ್ರಕೋಟೆ ಅಲ್ಲದ ಕಡೆಗಳಲ್ಲಿ ಹೆಚ್ಚಿನ ಪ್ರಯತ್ನ ಅಗತ್ಯವಿದೆ. ಇಂತಹ ಕಡೆಗಳಲ್ಲಿ ಗೆಲ್ಲಲೇಬೇಕಾಗಿದೆ. ಹೀಗಾಗಿ ಪ್ರತಿಯೊಂದು ಮತಗಟ್ಟೆಯಲ್ಲೂ ವೃತ್ತಿಪರರು, ಮಹಿಳೆಯರು, ಸ್ವಸಹಾಯ ಗುಂಪುಗಳ ಸದಸ್ಯರನ್ನು ಸಂಪರ್ಕಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಬಸವ ಜಯಂತಿ: ಅಭ್ಯರ್ಥಿಗಳ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವ ಜಯಂತಿಯನ್ನು ನಗರದ ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಯಿತು. ವಿಧಾನಸಭೆ ಚುನಾವಣಾ ಪ್ರಚಾರದಲ್ಲಿರುವ ಅಭ್ಯರ್ಥಿಗಳು ಬಸವ ಜಯಂತಿಯಲ್ಲಿ ಭಾಗವಹಿಸಿ ಮತ ಸೆಳೆಯುವ ಪ್ರಯತ್ನ ಮಾಡಿದರು.

ಬಸವ ಜಯಂತಿ ಅಂಗವಾಗಿ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು. ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಮೆರವಣಿಗೆಗೆ ಅವಕಾಶ ನೀಡಿರಲಿಲ್ಲ. ರಸ್ತೆ ಬದಿಯಲ್ಲಿ, ಉದ್ಯಾನಗಳಲ್ಲಿರುವ ಬಸವೇಶ್ವರರ ಪುತ್ಥಳಿಗಳಿಗೆ ಪೂಜೆ ಸಲ್ಲಿಸಿ ಪುಷ್ಪ ನಮನ ಸಲ್ಲಿಸಲಾಯಿತು.

ಅಭ್ಯರ್ಥಿಗಳು ತಮ್ಮ ಕ್ಷೇತ್ರಗಳಲ್ಲಿ ಆಯೋಜನೆಗೊಂಡಿದ್ದ ಬಸವ ಜಯಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಮೈಸೂರ್ ಸ್ಯಾಂಡಲ್ ಸೋಪ್ ಕಾರ್ಖಾನೆ ಬಳಿ ಬಸವೇಶ್ವರರ ಪುತ್ಥಳಿಗೆ ಸಚಿವ ಕೆ.ಗೋಪಾಲಯ್ಯ ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, 'ಸಮಾಜದ ಮೌಢ್ಯತೆ ಕಿತ್ತೊಗೆಯಲು ವಚನಗಳ ಮೂಲಕ ಸಾಮಾಜಿಕ ಕ್ರಾಂತಿಯನ್ನು ಬಸವಣ್ಣ ಮಾಡಿದ್ದರು. ಅವರ ತತ್ವಗಳನ್ನು ಎಲ್ಲರು ಅಳವಡಿಸಿಕೊಳ್ಳೋಣ' ಎಂದರು.

ಬಸವೇಶ್ವನಗರದ ನೇತಾಜಿ ಸುಭಾಶ್ ಚಂದ್ರಬೋಸ್ ಕ್ರೀಡಾಂಗಣದಲ್ಲಿ ಬಸವೇಶ್ವರರ ಪ್ರತಿಮೆಗೆ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಪುಷ್ಪ ನಮನ ಸಲ್ಲಿಸಿದರು.

ರಘು ಆಚಾರ್ ಪ್ರಚಾರಕ್ಕೆ ತಡೆ

ಚಿತ್ರದುರ್ಗ: ನಗರದ ಚೇಳಗುಡ್ಡ ಬಡಾವಣೆಯಲ್ಲಿ ಪ್ರಚಾರಕ್ಕೆ ತೆರಳಿದ ಜೆಡಿಎಸ್ ಅಭ್ಯರ್ಥಿ ಜಿ.ರಘು ಆಚಾರ್ ಅವರ ಕಾರು ಅಡ್ಡಗಟ್ಟಿದ ಕಾಂಗ್ರೆಸ್ ಕಾರ್ಯಕರ್ತರು, ಮತಯಾಚನೆ ಮಾಡದಂತೆ ತಡೆದಿದ್ದಾರೆ. ಈ ವೇಳೆ ಕಾಂಗ್ರೆಸ್ ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ವಾಗ್ವಾದ ನಡೆದಿದೆ.

ದೂರು ದಾಖಲಿಸಿದ ರಘು ಆಚಾರ್: ಕಾರು ಅಡ್ಡಗಟ್ಟಿ ಹಲ್ಲೆ ಮಾಡಲು ಯತ್ನಸಿದ ಆರೋಪದ ಮೇರೆಗೆ ಚೇಳುಗುಡ್ಡದ ಇರ್ಫಾನ್ ಮತ್ತು ಇತರರ ವಿರುದ್ಧ ರಘು ಆಚಾರ್ ಕೋಟೆ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವಿಧಾನಸೌಧದ ಮುಂಭಾಗದಲ್ಲಿ ಭಾನುವಾರ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮಿಸಿದರು — ಪ್ರಜಾವಾಣಿ ಚಿತ್ರ

'ರಾಜ್ಯದಿಂದ ಕಾಂಗ್ರೆಸ್ ಕಿತ್ತು ಹಾಕಿ'

ಯಲಹಂಕ, ನೆಲಮಂಗಲದಲ್ಲಿ ಸಿ.ಎಂ ಬಸವರಾಜ ಬೊಮ್ಮಾಯಿ ರೋಡ್ ಶೋ

ಪ್ರಜಾವಾಣಿ ವಾರ್ತೆ

ಯಲಹಂಕ: ಭ್ರಷ್ಟಾಚಾರ, ದುರಾಡಳಿತ, ಪಕ್ಷಪಾತ ಹಾಗೂ ಒಡೆದು ಆಳುವ ನೀತಿಗೆ ಹೆಸರಾಗಿರುವ ಕಾಂಗ್ರೆಸ್ ಅನ್ನು ರಾಜ್ಯದಿಂದ ಶಾಶ್ವತವಾಗಿ ಕಿತ್ತುಹಾಕಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಯಲಹಂಕ ಮತ್ತು ರಾಜಾನುಕುಂಟೆಯಲ್ಲಿ ಭಾನುವಾರ ಬಿಜೆಪಿ ಅಭ್ಯರ್ಥಿ ಎಸ್.ಆರ್. ವಿಶ್ವನಾಥ್ ಪರ ಚುನಾವಣಾ ಪ್ರಚಾರ ನಡೆಸಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪೊಲೀಸ್ ನೇಮಕಾತಿ, ಪ್ರಶ್ನೆಪತ್ರಿಕೆ ಸೋರಿಕೆ, ರೀಡೂ ಹಗರಣಗಳು ನಡೆದಿವೆ. ಇಂತಹ ಕಾಂಗ್ರೆಸ್ ಅನ್ನು ಕಿತ್ತೊಗೆದರೆ ಭ್ರಷ್ಟಾಚಾರ ಕಿತ್ತೊಗೆದಂತೆ ಎಂದರು.

ಡಬಲ್ ಎಂಜಿನ್ ಸರ್ಕಾರದ ಕೆಲಸಗಳನ್ನು ಮನೆಮನೆಗೆ ತಲುಪಿಸಬೇಕು. ಯಲಹಂಕದಲ್ಲಿ ಎಲ್ಲ ಸಮುದಾಯಗಳ ಜನರು ರಾಜ್ಯ ಅಥವಾ ಕೇಂದ್ರದ ಒಂದಿಲ್ಲೊಂದು ಯೋಜನೆಯ ಸೌಲಭ್ಯ ಪಡೆದಿದ್ದಾರೆ. ವಿಶ್ವನಾಥ್ ಅವರನ್ನು ಒಂದು ಲಕ್ಷ ಮತಗಳ ಅಂತರದಿಂದ ಗೆಲ್ಲಿಸಲು ಕಾರ್ಯಕರ್ತರು ಶ್ರಮಿಸುವುದರ ಜೊತೆಗೆ ಮತದಾರರು ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.

ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, ಕಳೆದ ಮೂರು ಅವಧಿಯಲ್ಲಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಆಮೂಲಾಗ್ರ ಬದಲಾವಣೆ ತರಲಾಗಿದೆ. ಇದನ್ನು ಮುಂದೆಯೂ ಮುಂದುವರಿಸಿ ಮಾದರಿ ಕ್ಷೇತ್ರವನ್ನಾಗಿ ಪರಿವರ್ತಿಸುವ ಗುರಿ ಹೊಂದಲಾಗಿದ್ದು, ಇದಕ್ಕೆ ನಿಮ್ಮೆಲ್ಲರ ಸಹಕಾರ ಅತ್ಯಗತ್ಯ ಎಂದರು.

ಸಂತೆವೃತ್ತ, ಪೊಲೀಸ್ ಠಾಣೆ ಹಾಗೂ ಎನ್.ಇ.ಎಸ್ ವೃತ್ತದ ಮೂಲಕ ರಾಜಾನುಕುಂಟೆಯವರೆಗೆ ರೋಡ್ ಶೋ ನಡೆಯಿತು.

ಸಚಿವ ಕೆ.ಸುಧಾಕರ್, ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಮುಖಂಡರಾದ ವಾಣಿಶ್ರೀ ವಿಶ್ವನಾಥ್, ಎಂ.ಸತೀಶ್, ಹನುಮಯ್ಯ, ಎಸ್. ಎನ್.ರಾಜಣ್ಣ, ದಿಬ್ಬೂರು ಜಯಣ್ಣ, ಚೊಕ್ಕನಹಳ್ಳಿ ವೆಂಕಟೇಶ್, ಸತೀಶ್ ಕಡತನಮಲೆ, ಇಟಗಲ್ ಪುರ ಮೋಹನ್ ಕುಮಾರ್ ಇದ್ದರು.

'ಬ್ರಿಟಿಷರು ಬಿಟ್ಟು ಹೋಗಿರುವ ಬೀಜ ಕಾಂಗ್ರೆಸ್'

ನೆಲಮಂಗಲ: 'ದೇಶದಲ್ಲಿ ಬ್ರಿಟಿಷರು ಬಿಟ್ಟು ಹೋಗಿರುವ ಬೀಜ ಕಾಂಗ್ರೆಸ್. ಧರ್ಮ ಹಾಗೂ ಜಾತಿ ಮುಂದಿಟ್ಟುಕೊಂಡು ಕೀಳು ಮಟ್ಟಕ್ಕೆ ಇಳಿದಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಬಸ್ ನಿಲ್ದಾಣದವರೆಗೆ ರೋಡ್ ಶೋ ನಡೆಸಿ ಮತಯಾಚಿಸಿದ ಅವರು, 'ನೆಲಮಂಗಲದಲ್ಲಿ ಬದಲಾವಣೆ ಗಾಳಿ ಬೀಸುತ್ತಿದ್ದು, ಯುವ ನಾಯಕ ಸಪ್ತಗಿರಿ ಅವರಿಗೆ ಟಿಕೆಟ್ ನೀಡಿದ್ದೇವೆ. ಕಾಂಗ್ರೆಸ್ ಅಭ್ಯರ್ಥಿ ಹಣದ ಹೊಳೆಯನ್ನೇ ಹರಿಸುತ್ತಿದ್ದಾರೆ, ಹಣಬಲ, ತೋಳ್ಬಲದ ಮುಂದೆ ಬಿಜೆಪಿಯ ಜನಬಲ ಗೆಲ್ಲಲಿದೆ' ಎಂದರು.

ಸಚಿವ ಡಾ.ಕೆ. ಸುಧಾಕರ್ ಮಾತನಾಡಿ, 'ನೆಲಮಂಗಲ ವೇಗವಾಗಿ ಬೆಳೆಯುತ್ತಿದ್ದು, ಯೋಜನಾ ಬದ್ಧ ಬೆಳವಣಿಗೆಗೆ ಹಲವು ಯೋಜನೆಗಳನ್ನು ಹಾಕಿಕೊಂಡಿದ್ದೇವೆ' ಎಂದರು.

ಅಭ್ಯರ್ಥಿ ಸಪ್ತಗಿರಿ ಶಂಕರ್‌ನಾಯಕ್, ವಿಧಾನ ಪರಿಷತ್ ಸದಸ್ಯ ನಾರಾಯಣಸ್ವಾಮಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ಸದಸ್ಯ ವೆಂಕಟೇಶ್ ದೊಡ್ಡೇರಿ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಸ್. ಮಲ್ಲಯ್ಯ, ಎಸ್‌ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಎಂ.ಎನ್.ರಾಮು ಇದ್ದರು.

'ಬಿಜೆಪಿ ಸರ್ಕಾರವನ್ನು ಕಿತ್ತೆಸೆಯಿರಿ'

ಕೆ.ಆರ್.ಪುರ: ರಾಜ್ಯದಲ್ಲಿರುವ ಶೇ 40ರಷ್ಟು ಕಮಿಷನ್ ಸರ್ಕಾರವನ್ನು ಕಿತ್ತೆಸೆದು ಜನಪರವಾಗಿರುವ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಬೇಕು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ದತ್ ಹೇಳಿದರು.

ಕೆ.ಆರ್.ಪುರದ ಬಸವನಪುರ ವಾರ್ಡ್‌ನಲ್ಲಿ ನಡೆದ ಪ್ರಚಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರ ಭ್ರಷ್ಟಾಚಾರದಿಂದ ಮನೆ ಮಾತಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನರಿಗೆ ನೆಮ್ಮದಿ ದೊರಕಲಿದೆ. ಕಾಂಗ್ರೆಸ್ ಜನರ ಧೋರಣೆ ಎತ್ತಿಹಿಡಿಯುವ ಪಕ್ಷ ಎಂದರು.

ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಮೋಹನ್, ಕ್ಷೇತ್ರದಲ್ಲಿ ಕಾಂಗ್ರೆಸ್ ಪರವಾದ ವಾತಾವರಣ ಇದೆ. ಈ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ ಎಂದರು.

ಮತದಾನ ಜಾಗೃತಿಗೆ ಕಾಲ್ನಡಿಗೆ, ಸೈಕ್ಲೋಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮತದಾನದ ಜಾಗೃತಿ ಮೂಡಿಸಲು ನಗರದಲ್ಲಿ ಕಾಲ್ನಡಿಗೆ, ಬೀದಿನಾಟಕ, ಸೈಕ್ಲೋಥಾನ್ ನಡೆಸಲಾಯಿತು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಹಡ್ಸನ್ ವೃತ್ತದ ಕಬ್ಬನ್ ಪಾರ್ಕ್ ಮುಖ್ಯದ್ವಾರದ ಬಳಿ ಕಾಲ್ನಡಿಗೆ ಜಾಥಾ ಹಾಗೂ ಬೀದಿ ನಾಟಕ ಜಾಗೃತಿ ಕಾರ್ಯಕ್ರಮ ಭಾನುವಾರ ನಡೆಯಿತು.

ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮಾತನಾಡಿ, ಮತದಾನ ಪ್ರಮಾಣ ಕಡಿಮೆಯಾಗುತ್ತಿದ್ದು, ಅದನ್ನು ಹೆಚ್ಚಿಸುವ ನಿಟ್ಟಿನಲ್ಲಿ ಎಲ್ಲರೂ ಬಂದು ಮತದಾನ ಮಾಡಲು ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮತದಾನ ದಿನವಾದ ಮೇ 10ರಂದು ಎಲ್ಲರೂ ಬಂದು ತಪ್ಪದೇ ಮತ ಚಲಾಯಿಸಬೇಕು ಎಂದು ಕೋರಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಮಾತನಾಡಿ, ನಗರದಲ್ಲಿ ಮತದಾನ ಪ್ರಮಾಣ ಹೆಚ್ಚಾಗಬೇಕು. ಈ ನಿಟ್ಟಿನಲ್ಲಿ ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಬೀದಿ ನಾಟಕ: ಹಾಸ್ಯ ನಟರಾದ ರಮಾನಂದ ಅವರ 'ಗೆಜ್ಜೆ ಹೆಜ್ಜೆ' ರಂಗತಂಡದಿಂದ ಬೀದಿ ನಾಟಕದ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಕಾಲ್ನಡಿಗೆ ಜಾಥಾ: ಹಡ್ಸನ್ ವೃತ್ತದ ಕಬ್ಬನ್ ಪಾರ್ಕ್ ಮುಖ್ಯ ದ್ವಾರದಿಂದ ಕಸ್ತೂರಬಾ ರಸ್ತೆ, ವಿಠ್ಠಲ್ ಮಲ್ಯ ರಸ್ತೆಯ ಮೂಲಕ ಸಾಗಿ ರಾಜಾರಾಮ್ ಮೋಹನ್ ರಾಯ್ ರಸ್ತೆ ಮಾರ್ಗದಲ್ಲಿರುವ ಬಿಬಿಎಂಪಿ ನೌಕರರ ಸಹಕಾರ ಸಂಘದ ಕಚೇರಿ ಬಳಿ ಮುಕ್ತಾಯಗೊಂಡಿತು.

ವಿಶೇಷ ಆಯುಕ್ತರಾದ ಡಾ. ತ್ರಿಲೋಕ್ ಚಂದ್ರ, ಡಾ. ಹರೀಶ್ ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಡಾ. ದಯಾನಂದ, ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ರಾಜೇಂದ್ರ ಚೋಳನ್, ವಲಯ ಜಂಟಿ ಆಯುಕ್ತ ಪಲ್ಲವಿ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಅಮೃತ್ ರಾಜ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಸೈಕ್ಲೋಥಾನ್: ಕೇಂದ್ರ ಚುನಾವಣಾ ಆಯೋಗ, ಬಿಬಿಎಂಪಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ವಿಧಾನಸೌಧದ ಮುಂಭಾಗದಿಂದ ಸೈಕ್ಲೋಥಾನ್‌ಗೆ ಚಾಲನೆ ನೀಡಲಾಯಿತು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಶಾಲಿನಿ ರಜನೀಶ್ ಮಾತನಾಡಿ, 'ನಗರದಲ್ಲಿ ಯುವಜನರಿಂದ ಶೇ 100ರಷ್ಟು ಮತದಾನ ಆಗಬೇಕು ಎಂಬ ಉದ್ದೇಶದಿಂದ ಸೈಕ್ಲೋಥಾನ್ ನಡೆಸಲಾಗುತ್ತಿದೆ. ಎಲ್ಲರೂ ಮತದಾನ ಮಾಡಬೇಕೆಂದು ಕೋರಿದರು. ಸೈಕ್ಲೋಥಾನ್‌ನಲ್ಲಿ ಭಾಗವಹಿಸಿದ್ದವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ವಿಧಾನಸೌಧದ ಮುಂಭಾಗದಿಂದ ಕೆ.ಆರ್ ವೃತ್ತದ ನೃಪತುಂಗ ರಸ್ತೆಯ ಮೂಲಕ ಸಾಗಿ, ಬಿಬಿಎಂಪಿ ಕೇಂದ್ರ ಕಚೇರಿ ಮುಂಭಾಗದಿಂದ ಟೌನ್ ಹಾಲ್ ಮುಂದೆ ಸೈಕ್ಲೋಥಾನ್ ಮುಕ್ತಾಯಗೊಂಡಿತು.

ಕಬ್ಬನ್ ಪಾರ್ಕ್ ಮುಖ್ಯದ್ವಾರದ ಬಳಿ ಮತದಾನ ಜಾಗೃತಿ ಮೂಡಿಸಲು ಹಮ್ಮಿಕೊಂಡಿದ್ದ ಕಾಲ್ನಡಿಗೆ ಜಾಥಾ ಹಾಗೂ ಬೀದಿ ನಾಟಕಕ್ಕೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಚಾಲನೆ ನೀಡಿದರು. ಬೆಂಗಳೂರು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ಬಿಬಿಎಂಪಿ ವಿಶೇಷ ಆಯುಕ್ತರಾದ ತ್ರಿಲೋಕ್ ಚಂದ್ರ, ಹರೀಶ್ ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ, ಸಂಘದ ಅಧ್ಯಕ್ಷ ಅಮೃತ್ ರಾಜ್ ಉಪಸ್ಥಿತರಿದ್ದರು

ಹೂವಿನ ಪಲ್ಲಕ್ಕಿ

ಹಲಸೂರಿನ ಸೋಮೇಶ್ವರ ದೇವಸ್ಥಾನದ ವತಿಯಿಂದ ಭಾನುವಾರ ಆಯೋಜಿಸಿದ್ದ ಹೂವಿನ ಪಲ್ಲಕ್ಕಿ ಉತ್ಸವ ಅದ್ದೂರಿಯಿಂದ ನಡೆಯಿತು. ಇಂದಿರಾ ನಗರ ಮತ್ತು ಹಲಸೂರು ಸುತ್ತಮುತ್ತಲ ದೇವಸ್ಥಾನಗಳಿಂದ ಬಂದಿದ್ದ ಪಲ್ಲಕ್ಕಿಗಳು ಮೆರವಣಿಗೆಯಲ್ಲಿ ಸಾಗಿದವು –ಪ್ರಜಾವಾಣಿ ಚಿತ್ರ

ಲೀಲಾದೇವಿ ಅವರಿಗೆ 'ಪವಾಡಶ್ರೀ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಮಹಿಳೆಗೆ ಪ್ರಶಸ್ತಿ ಕೊಟ್ಟಿರುವುದರಿಂದ ಬಸವಣ್ಣ ಅವರ ಸಮಾನತೆಗೆ ಸಾಕ್ಷಿ ಒದಗಿಸಿದಂತೆ ಆಗಿದೆ. ಎಲ್ಲ ಮಹಿಳೆಯರ ಪರವಾಗಿ 'ಪವಾಡಶ್ರೀ' ಪ್ರಶಸ್ತಿಯನ್ನು ಸ್ವೀಕರಿಸುತ್ತಿದ್ದೇನೆ ಎಂದು ಅಕ್ಕಮಹಾದೇವಿ ಸಮಿತಿ ಅಧ್ಯಕ್ಷೆ ಡಾ.ಲೀಲಾದೇವಿ ಆರ್.ಪ್ರಸಾದ್ ತಿಳಿಸಿದರು.

ಪವಾಡ ಬಸವಣ್ಣದೇವರ ಮಠದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿಯಲ್ಲಿ ಅವರು ಮಾತನಾಡಿದರು.

'ಪ್ರಶಸ್ತಿಯಿಂದ ಬಂದಂತಹ ಹಣವನ್ನು ಅಕ್ಕಮಹಾದೇವಿ ಜನ್ಮಭೂಮಿ ಉಡುತಡಿ ಅಭಿವೃದ್ಧಿಗೆ ಕೊಡುತ್ತೇನೆ. ಉಡುತಡಿಯಲ್ಲಿ ಅಕ್ಕಮಹಾದೇವಿ ವಿಶ್ವವಿದ್ಯಾಲಯ, ಅಧ್ಯಯನ ಕೇಂದ್ರ, ಪ್ರವಾಸಿ ಮಂದಿರ, ಧ್ಯಾನಕೇಂದ್ರ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರ ಉಡುತಡಿಯನ್ನು ಅಂತರರಾಷ್ಟ್ರೀಯ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುತ್ತಿದ್ದು ₹20 ಕೋಟಿ ಮೀಸಲಿಟ್ಟಿದೆ' ಎಂದರು.

ಕಸಾಪ ಮಾಜಿ ಅಧ್ಯಕ್ಷ ಮನು ಬಳಿಗಾರ ಹಾಗೂ ಬೆಟ್ಟಹಳ್ಳಿ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಕನ್ನಡ ಚಳವಳಿ ಮುಖಂಡ ಫಾಲನೇತ್ರ, ಮರಾಠಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶ್ ಆರ್.ಪಾಗೋಜಿ, ವೈದ್ಯ ಸಂಘದ ಅಧ್ಯಕ್ಷ ಡಾ.ಎಂ. ಜಯಪ್ರಸಾದ್, ವೀರಶೈವ ಲಿಂಗಾಯತ ನಿವೃತ್ತ ನೌಕರರ ಸಂಘದ ರಾಜ್ಯ ಅಧ್ಯಕ್ಷ ಆರ್.ನಾಗರಾಜು, ಚಿತ್ರ ನಟ ದೀಕ್ಷಿತ್ ಇದ್ದರು.

ಅಕ್ಕಮಹಾದೇವಿ ಸಮಿತಿ ಅಧ್ಯಕ್ಷೆ ಲೀಲಾದೇವಿ ಆರ್. ಪ್ರಸಾದ್ ಅವರಿಗೆ ಬಸವಣ್ಣದೇವರ ಮಠದ ಸಿದ್ದಲಿಂಗ ಶ್ರೀಗಳು 'ಪವಾಡಶ್ರೀ' ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಯಾಣಿಕನಿಂದ ₹1.95 ಲಕ್ಷ ಜಪ್ತಿ

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಕ್ಯಾದಿಗುಪ್ಪಾ ರಾಷ್ಟ್ರೀಯ ಹೆದ್ದಾರಿಯ ಚೆಕ್‌ಪೋಸ್ಟ್ ಚುನಾವಣಾ ಸಿಬ್ಬಂದಿಯು ಬಸ್‌ನಲ್ಲಿ ಪ್ರಯಾಣಿಕನಿಂದ ದಾಖಲೆಗಳಿಲ್ಲದ ₹ 1.95 ಲಕ್ಷ ನಗದು ಹಣ ವಶಪಡಿಸಿಕೊಂಡಿದ್ದಾರೆ.

ಹೈದರಾಬಾದ್‌ನ ಖಾಸಗಿ ಕಂಪೆನಿ ಉದ್ಯೋಗಿ ಶ್ರೀನಿವಾಸರಾವ ಅಪ್ಪಾರಾವ ಎಂಬ ಪ್ರಯಾಣಿಕ ಇಳಕಲ್ ಮಾರ್ಗವಾಗಿ ಬಳ್ಳಾರಿಗೆ ತೆರಳುತ್ತಿದ್ದರು. ಈ ವೇಳೆ ಬಸ್ ತಪಾಸಣೆ ನಡೆಸಿದಾಗ ವ್ಯಕ್ತಿ ತನ್ನ ಬಳಿ ಹಣ ಇರುವುದನ್ನು ತೋರಿಸಿದ್ದರು. ಗ್ರಾನೈಟ್ ಖರೀದಿಗೆ ಇಳಕಲ್‌ಗೆ ಬಂದಿರುವುದಾಗಿ ತಿಳಿಸಿದರು.

ವೀರಪ್ಪನ್ ಪುತ್ರಿಯಿಂದ ಬಡ ಮಕ್ಕಳಿಗೆ ಪುಸ್ತಕ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ನಟಿಯೂ ಆಗಿರುವ ವೀರಪ್ಪನ್ ಪುತ್ರಿ ವಿಜಯಲಕ್ಷ್ಮಿ ಅವರು 300ಕ್ಕೂ ಹೆಚ್ಚು ಶಾಲಾ ಮಕ್ಕಳಿಗೆ ಪುಸ್ತಕ ವಿತರಿಸಿದರು.

ಬಡ ಮಕ್ಕಳಿಗೆ ಸಹಾಯ ಮಾಡಲು ಭಾರತಿನಗರ ನಿವಾಸಿಗಳ ವೇದಿಕೆ ವತಿಯಿಂದ ಕಾಕ್ಸ್ ಟೌನ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರು. ಅದಕ್ಕೂ ಮುನ್ನ ಪತಿ ಶಬರೀಶ್ ಅವರೊಂದಿಗೆ ತೆರಳಿ ವರನಟ ಡಾ.ರಾಜ್‌ಕುಮಾರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

'ವಿಜಯಲಕ್ಷ್ಮಿ ಅವರು ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಕಾರ್ಯಕ್ರಮಕ್ಕಾಗಿ ಬಂದಿದ್ದರು. ಇಲ್ಲಿ ಯಾವುದೇ ರಾಜಕೀಯ ಉದ್ದೇಶ ಇಲ್ಲ' ಎಂದು ಸಂಘದ ಅಧ್ಯಕ್ಷ ಎನ್.ರವಿ ಅವರು ಸ್ಪಷ್ಟಪಡಿಸಿದರು.

ಶಾಲಾ ಮಕ್ಕಳಿಗೆ ವಿಜಯಲಕ್ಷ್ಮಿ ಅವರು ಪುಸ್ತಕ ವಿತರಣೆ ಮಾಡಿದರು. ಭಾರತಿನಗರ ನಿವಾಸಿಗಳ ಸಂಘದ ಅಧ್ಯಕ್ಷ ಎನ್.ಎಸ್.ರವಿ ಇದ್ದರು — ಪ್ರಜಾವಾಣಿ ಚಿತ್ರ

ಲಾಲ್‌ಬಾಗ್ ಕಸದ ರಾಶಿಗೆ ಬೆಂಕಿ: ಕಿಡಿಗೇಡಿಗಳ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಉದ್ಯಾನದಲ್ಲಿದ್ದ ಒಣ ಕಸದ ರಾಶಿಗೆ ಭಾನುವಾರ ಸಂಜೆ ಬೆಂಕಿ ಹೊತ್ತಿಕೊಂಡಿದ್ದರಿಂದ ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

'ಶಾಂತಿನಗರ ಜೋಡಿ ರಸ್ತೆಗೆ ಹೊಂದಿಕೊಂಡಿರುವ ಲಾಲ್‌ಬಾಗ್ ಪೂರ್ವ ದ್ವಾರದಿಂದ ಉದ್ಯಾನದೊಳಗೆ ಹೋಗುವ ರಸ್ತೆಯ ಬದಿ ಒಣಕಸದ ರಾಶಿ ಹಾಕಲಾಗಿತ್ತು. ಆ ರಾಶಿಗೆ ಸಂಜೆ 7 ಗಂಟೆ ಸುಮಾರಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ' ಎಂದು ಅಗ್ನಿಶಾಮಕ ಸಿಬ್ಬಂದಿ ಹೇಳಿದರು.

'ಕಸದ ರಾಶಿಗೆ ಹೊತ್ತಿಕೊಂಡಿದ್ದ ಬೆಂಕಿ ಧಗ ಧಗ ಉರಿಯುತ್ತಿತ್ತು. ಅಕ್ಕ–ಪಕ್ಕದ ಜಾಗಕ್ಕೂ ಬೆಂಕಿ ವ್ಯಾಪಿಸುವ ಆತಂಕವಿತ್ತು. ಬೆಂಕಿಯ ಕೆನ್ನಾಲಗೆ ಹೆಚ್ಚಾಗುತ್ತಿರುವುದನ್ನು ಗಮನಿಸಿದ್ದ ಸ್ಥಳೀಯರು ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಜಯನಗರ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಒಂದು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ' ಎಂದರು.

'ಒಣ ಎಲೆ ಹಾಗೂ ಇತರೆ ತ್ಯಾಜ್ಯ ರಾಶಿಯಲ್ಲಿತ್ತು. ಬೆಂಕಿಯಿಂದ ಅವೆಲ್ಲ ಸುಟ್ಟಿವೆ. ಗಿಡ ಹಾಗೂ ಉದ್ಯಾನದ ಇತರೆ ಭಾಗಕ್ಕೆ ಯಾವುದೇ ಹಾನಿ ಆಗಿಲ್ಲ. ಘಟನೆ ಬಗ್ಗೆ ಪೊಲೀಸರಿಗೂ ಮಾಹಿತಿ ನೀಡಲಾಗಿದೆ' ಎಂದು ಸಿಬ್ಬಂದಿ ತಿಳಿಸಿದರು.

ಕಾವ್ಯ ಹೊಣೆಗಾರಿಕೆ: ಎಂ.ಎಸ್. ಆಶಾದೇವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೇಖಕಿ ನೂತನ ದೋಶೆಟ್ಟಿ ಅವರ 'ಮಾತೆಂದರೆ ಏನು ಗೂಗಲ್' ಮತ್ತು 'ಸ್ವರ್ಗದೊಂದಿಗೆ ಅನುಸಂಧಾನ' ಕೃತಿಗಳನ್ನು ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ವಿಮರ್ಶಕಿ ಎಂ.ಎಸ್. ಆಶಾದೇವಿ ಮಾತನಾಡಿ, 'ಕಾವ್ಯ ಎನ್ನುವುದು ಹೊಣೆಗಾರಿಕೆ. ಸಾಮಾಜಿಕ ಹೊಣೆಗಾರಿಕೆ ಇರುವುದರಿಂದ ಎಲ್ಲರೂ ಕೇಳಲಿ ಎಂದೇ ಬರೆಯಬೇಕು. ಅಪ್ರಿಯವಾದ ಸತ್ಯಗಳನ್ನು ಹೇಳಬಹುದಾದ ಅಸಾಧಾರಣ ಶಕ್ತಿ ಇರುವುದು ಕಾವ್ಯಕ್ಕೆ ಮಾತ್ರ. ಜಗತ್ತು ಶಾಂತಿ, ನೆಮ್ಮದಿ, ಸಹಬಾಳ್ವೆ ಹುಡುಕುತ್ತಿದೆ. ಇಂತಹ ಸಂದರ್ಭದಲ್ಲಿ ನೂತನ ಶೆಟ್ಟಿ ಅವರ ನಾಲ್ಕನೇ ಕವನ ಸಂಕಲನ ಉತ್ತರ ನೀಡಲಿದೆ' ಎಂದು ಅವರು ಹೇಳಿದರು.

ಕತೆಗಾರ ಮಹಾಬಲ ಮೂರ್ತಿ ಕೊಡ್ಲೆಕೆರೆ ಅವರು, 'ಸ್ವರ್ಗದೊಂದಿಗೆ ಅನುಸಂಧಾನ ಕೃತಿಯಲ್ಲಿ ಜೀವ ಜಗತ್ತಿನ ಕಥೆಗಳನ್ನು ಹೇಳುತ್ತಾ ಹೋಗಿದ್ದಾರೆ. ಜೀವ ಜೀವದೊಂದಿಗೆ ಪ್ರಕೃತಿ ಪರಿಸರ ಸಂಬಂಧಗಳನ್ನು ಕಟ್ಟಿಕೊಟ್ಟಿದ್ದಾರೆ' ಎಂದರು.

ಅಂಕಣಕಾರ ಎಸ್. ಷಡಕ್ಷರಿ, 'ಬರವಣಿಗೆ ಎಂಬುದು ನಮಗೆ ನಾವೇ ತಂದುಕೊಳ್ಳುವ ಸ್ಫೂರ್ತಿ. ಬರವಣಿಗೆ ಕಷ್ಟವೂ ಹೌದು. ಇಷ್ಟವೂ ಹೌದು' ಎಂದರು.

ಲೇಖಕಿ ನೂತನ ದೋಶೆಟ್ಟಿ, ಶ್ರೀನಿವಾಸ್, ಬಿ.ಪಿ.ವೀರಭದ್ರಪ್ಪ ಇದ್ದರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೇಖಕಿ ನೂತನ ದೋಶೆಟ್ಟಿ ಅವರ 'ಮಾತೆಂದರೆ ಏನು ಗೂಗಲ್' ಮತ್ತು 'ಸ್ವರ್ಗದೊಂದಿಗೆ ಅನುಸಂಧಾನ' ಕೃತಿಗಳನ್ನು ವಿಮರ್ಶಕಿ ಎಂ.ಎಸ್. ಆಶಾದೇವಿ ಬಿಡುಗಡೆ ಮಾಡಿದರು.

‘ಲಿಂಗಾಯತರ ಕಡೆಗಣನೆ: 25–30 ಕ್ಷೇತ್ರಗಳ ಮೇಲೆ ಪರಿಣಾಮ’

• ಮಂಜುನಾಥ ಹೆಗಡೆ ಬೊಮ್ನಳ್ಳಿ

ಪ್ರಜಾವಾಣಿ ಸಂದರ್ಶನ

ಜಗದೀಶ ಶೆಟ್ಟರ್

ಮೂರು ದಶಕಗಳಿಂದ ಜನಸಂಘ, ಆರ್‌ಎಸ್‌ಎಸ್ ಹಿನ್ನೆಲೆಯೊಂದಿಗೆ ಬಿಜೆಪಿಯನ್ನು ಕಟ್ಟಿ ಬೆಳೆಸಿದವರು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್. ಕಾಂಗ್ರೆಸ್‌ಗೆ ಸೇರ್ಪಡೆಯಾದ ನಂತರ ತಮ್ಮ ಆಯ್ಕೆ, ಆದ್ಯತೆ ಮತ್ತು ನಿಲುವನ್ನು ’ಪ್ರಜಾವಾಣಿ‘ಯ ಜತೆ ಮುಕ್ತವಾಗಿ ಹಂಚಿಕೊಂಡಿದ್ದಾರೆ. ಟಿಕೆಟ್‌ಗಾಗಿ ಈ ಬದಲಾವಣೆ ಅಲ್ಲ, ಆತ್ಮಗೌರವಕ್ಕಾಗಿ ಈ ನಡೆ ಎಂಬುದು ಅವರ ಸ್ಪಷ್ಟ ನುಡಿ.

• **ಬಿಜೆಪಿಯಲ್ಲಿ ಲಿಂಗಾಯತರನ್ನು ಕಡೆಗಣಿಸಲಾಗುತ್ತಿದೆ ಎಂಬ ಆರೋಪವಿತ್ತು, ಬಿಜೆಪಿ ತ್ಯಜಿಸಿರುವ ನಿಮ್ಮ ಈ ನಿರ್ಧಾರ ರಾಜ್ಯದ ಚುನಾವಣೆಯ ಮೇಲೆ ಯಾವ ಪರಿಣಾಮ ಬೀರಬಹುದು?**

ಇಂಥದ್ದೊಂದು ಭಾವ, ಅಂತರ್ಗತವಾಗಿ ಹರಿಯುತ್ತಲೇ ಇತ್ತು. ಇದು ನಾನು ಸೃಷ್ಟಿಸಿದ ವಾದವಲ್ಲ. ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಸಮುದಾಯಕ್ಕೆ ಅಸುರಕ್ಷಿತ ಭಾವ ಕಾಡುತ್ತಿತ್ತು. ಬಿಜೆಪಿಯನ್ನು ಬೆಂಬಲಿಸಿದ್ದಕ್ಕೆ ನ್ಯಾಯಸಮ್ಮತವಾದ ಪ್ರತಿಫಲ ದೊರೆಯಲಿಲ್ಲ ಎಂಬ ಭಾವ ಬೇರೂರಿದೆ. ಇನ್ನಿತರ ಪ್ರದೇಶಗಳ ಲಿಂಗಾಯತ ನಾಯಕರೂ ನನ್ನೊಂದಿಗೆ ಈ ಕುರಿತು ಚರ್ಚಿಸಿದ್ದಾರೆ. ಕಾಂಗ್ರೆಸ್ ಸೇರಲು ಒಲವು ತೋರಿದ್ದಾರೆ. 25–30 ಕ್ಷೇತ್ರಗಳಲ್ಲಿಯಂತೂ ಇದು ಸ್ಪಷ್ಟವಾದ ಪರಿಣಾಮ ಬೀರಲಿದೆ.

• **ಮುಂದಿನ ಮುಖ್ಯಮಂತ್ರಿ ಲಿಂಗಾಯತ ಸಮುದಾಯಕ್ಕೆ ಸೇರಿದವರು ಎಂಬ ಮಾತು ಬಿಜೆಪಿ ವಲಯದಲ್ಲಿ ಹರಿದಾಡುತ್ತಿದೆ...**

ಇದು ಲಿಂಗಾಯತರನ್ನು ಒಲಿಸುವ ತಂತ್ರಗಾರಿಕೆ ಅಷ್ಟೆ. ಈಗ ಈ ಬಗ್ಗೆ ಮಾತನಾಡುತ್ತಿದ್ದಾರೆ. ಸ್ಪಷ್ಟವಾದ ನಿರ್ಧಾರ ಕೈಗೊಂಡಿದ್ದಲ್ಲಿ ಅಮಿತ್ ಶಾ ಈ ಮೊದಲೇ ಲಿಂಗಾಯತ ಮುಖ್ಯಮಂತ್ರಿಯನ್ನು ಏಕೆ ಘೋಷಿಸಲಿಲ್ಲ?

• **ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ನೀವು ಸಿಎಂ ಹುದ್ದೆಯ ಆಕಾಂಕ್ಷಿಯೇ?**

ನನಗೆ ಮುಖ್ಯಮಂತ್ರಿ ಸ್ಥಾನ ಅಷ್ಟೇ ಅಲ್ಲ, ಯಾವ ಸ್ಥಾನವೂ ಬೇಕಿಲ್ಲ. ಗೌರವದ ವಿದಾಯ ಬೇಕಿದೆ. ಆತ್ಮಗೌರವ ಬೇಕಿದೆ. ನನ್ನ ಆತ್ಮಗೌರವಕ್ಕಾಗಿ ಈ ಆಯ್ಕೆ ಮಾಡಿಕೊಂಡಿರುವೆ. ನನ್ನ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ.

• **ಕಾಂಗ್ರೆಸ್‌ಗೆ ಹೋಗಿದ್ದು ಯಾಕೆ? ಇದು ಅನಿವಾರ್ಯವಾಗಿತ್ತೇ?**

ರಾಷ್ಟ್ರೀಯ ಪಕ್ಷಕ್ಕೆ ಸೇರಿದವನು ನಾನು. ಪಕ್ಷೇತರನಾಗಿ ನಿಂತು ಕೊಂಡರೆ ನನ್ನನ್ನು ರಾಜಕೀಯವಾಗಿ ಮುಗಿಸುವ ಎಲ್ಲ ಸಾಧ್ಯತೆಗಳೂ ಇದ್ದವು. ರಾಷ್ಟ್ರೀಯ ಪಕ್ಷವನ್ನೇ ಆಯ್ಕೆ ಮಾಡಿಕೊಳ್ಳುವುದು ನನ್ನ ಆತ್ಮಸ್ಥೈರ್ಯ ಹಾಗೂ ಆತ್ಮಗೌರವಕ್ಕೆ ಅಗತ್ಯವಾಗಿತ್ತು. ಇದು ಕೇವಲ ಟಿಕೆಟ್ ಸಿಗದೇ ಇರುವುದರಿಂದ ಬಂಡಾಯವೆದ್ದು ಅಸಮಾಧಾನದಿಂದ ಆಚೆ ಬಂದಿದ್ದಲ್ಲ.

• **ಕಾಂಗ್ರೆಸ್ ಸೇರ್ಪಡೆ ಷರತ್ತುಗಳಿಗೆ ಒಳಪಟ್ಟಿದೆಯೇ?**

ಇಲ್ಲ. ನಾನು ಬೇಷರತ್ತಾಗಿ ಕಾಂಗ್ರೆಸ್‌ಗೆ ಸೇರಿರುವೆ. ಆಯ್ಕೆಯಾದ ಮೇಲೆ ಶಾಸಕನಾಗಿಯೇ ಮುಂದುವರಿಯುವೆ. ಸಿದ್ದರಾಮಯ್ಯನವರು, ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೂ ನಾನು ಕಾಂಗ್ರೆಸ್ ಸೇರುವ ಕುರಿತು ಯಾವುದೇ ನಿರೀಕ್ಷೆಗಳಿರಲಿಲ್ಲ ಎಂದು ನನಗೆ ಅವರೇ ಹೇಳಿದರು. ನಾಯಕರು, ಕಾರ್ಯಕರ್ತರು ಎಲ್ಲರೂ ನನ್ನನ್ನು ಗೌರವದಿಂದ ಕಾಣುತ್ತಿದ್ದಾರೆ. ವಿಶ್ವಾಸದಿಂದ ನಡೆಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್‌ಗೆ ಬಲ ಬಂದಿತು ಎಂದೂ ಹೇಳುತ್ತಿದ್ದಾರೆ.

• **ಬಿಜೆಪಿಯ ಭ್ರಷ್ಟಾಚಾರ ಮತ್ತು ಕೋಮುವಾದದ ಕುರಿತು ಕಾಂಗ್ರೆಸ್ಸಿಗೆ ಸೇರಿದ ನಂತರ ನಿಮ್ಮ ನಿಲುವೇನು?**

ಭ್ರಷ್ಟಾಚಾರದ ವಿರುದ್ಧ ನಾನು ಯಾವಾಗಲೂ ಧ್ವನಿ ಎತ್ತುತ್ತಿರುವೆ. ಕಳೆದ ಅಧಿವೇಶನದಲ್ಲಿಯೂ ಭ್ರಷ್ಟಾಚಾರದ ಬಗ್ಗೆ ಪ್ರಶ್ನಿಸಿದ್ದೆ. ಕೋಮುವಾದದಂಥ ಸೂಕ್ಷ್ಮ ವಿಷಯಗಳಿಂದ ನಾನು ಯಾವತ್ತಿಗೂ ದೂರ ಇದ್ದೆ. ಬಸವಣ್ಣನ ಅನುಯಾಯಿಯಾಗಿರುವ ನಾನು, ಕೋಮುವಾದದ ಕುರಿತು ಯಾವ ನಿಲುವು ತಾಳಲು ಸಾಧ್ಯ? ಕೋಮುವಾದದಿಂದ ಒಂದು ಅಂತರವನ್ನು ಯಾವಾಗಲೂ ಕಾಪಾಡಿಕೊಂಡು ಬಂದಿರುವೆ.

• **ಆರ್‌ಎಸ್‌ಎಸ್ ಜೊತೆಗೆ ಗುರುತಿಸಿಕೊಂಡವರು ನೀವು. ಈಗಲೂ ಸಂಘದೊಡನೆ ಗುರುತಿಸಿಕೊಳ್ಳುವಿರಾ?**

ನಾನು ಸಾಮಾಜಿಕ ಕಾಳಜಿ ಮತ್ತು ಬದ್ಧತೆ ಇರುವ ವ್ಯಕ್ತಿ. ಸಮಾನತೆ ಮತ್ತು ಸೌಹಾರ್ದವನ್ನು ನಂಬುವ ಯಾವುದೇ ಸಂಘಟನೆಯಾದರೂ ಯಾವ ಸಮಸ್ಯೆಯೂ ಆಗಲಿಕ್ಕಿಲ್ಲ. ಕಾಂಗ್ರೆಸ್ ಸಹ ಮಾನವೀಯತೆ ಮತ್ತು ಜನ ಕಲ್ಯಾಣದ ಬುನಾದಿಯನ್ನೇ ಹೊಂದಿದೆ.

ಬಿಜೆಪಿಗೆ ಮರಳುವುದು ಮುಗಿದು ಹೋದ ಅಧ್ಯಾಯ. ಸಂಘದೊಡನೆ ಗುರುತಿಸಿಕೊಳ್ಳಲಿಕ್ಕಿಲ್ಲ. ಆದರೆ ಸಂಘ ಪರಿವಾರದ ಹಿರಿಯರೊಡನೆ ವೈಯಕ್ತಿಕ ಬಾಂಧವ್ಯ ಇದ್ದೇ ಇರುತ್ತದೆ. ಅದು ಮುಂದುವರಿಯುತ್ತದೆ. ಆರ್.ಎಸ್.ಎಸ್.ನ ಯಾವುದೇ ಚಟುವಟಿಕೆಗಳಲ್ಲಿ ನಾನು ಭಾಗವಹಿಸುವುದಿಲ್ಲ. ವ್ಯಕ್ತಿಗತ ಬಾಂಧವ್ಯದ ಕುರಿತು ಯಾವುದೇ ಗೊಂದಲಗಳೆದ್ದರೆ, ವ್ಯತಿರಿಕ್ತ ಅಭಿಪ್ರಾಯವೆನಿಸಿದರೆ ಕಾಂಗ್ರೆಸ್ ಮುಖಂಡರೊಂದಿಗೆ ಚರ್ಚಿಸಿ ನನ್ನ ನಿಲುವನ್ನು ಸ್ಪಷ್ಟಪಡಿಸುವೆ.

‘ನನ್ನನ್ನು ಟೀಕಿಸಲಿ ಎಂದು ಬಿಜೆಪಿಯ ಹಿರಿಯರು ಸೂಚಿಸಿದ್ದಾರೆ’

• **ಬಿಎಸ್ ವೈ ಸಹ ನಿಮ್ಮ ನಡೆಯನ್ನು ಟೀಕಿಸುತ್ತಿದ್ದಾರಲ್ಲ...**

ಯಡಿಯೂರಪ್ಪ ಅವರು ನನ್ನನ್ನು ಟೀಕಿಸಲಿ ಎಂದು ಪಕ್ಷದ ಹಿರಿಯರು ಸೂಚಿಸಿದ್ದಾರೆ. ಕಳೆದ ಆರು ತಿಂಗಳಿನಿಂದಲೇ ನಮ್ಮನ್ನು ನೇಪಥ್ಯಕ್ಕೆ ಸರಿಸುವ, ಅಲಕ್ಷಿಸುವ ಎಲ್ಲ ಯತ್ನಗಳೂ ಜಾರಿಯಲ್ಲಿದ್ದವು. ತೇಜಸ್ವಿನಿ ಅನಂತಕುಮಾರ್ ಅವರಂತೆಯೇ ಕೊನೆಯ ಗಳಿಗೆಯಲ್ಲಿ ಟಿಕೆಟ್ ತಪ್ಪಿಸುವ ಸಾಧ್ಯತೆಗಳಿದ್ದವು ಎಂದುಕೊಂಡಿದ್ದೆ. ಆದರೆ ನಮ್ಮಂಥ ಹಿರಿಯರು ಯಾರೂ ಉಳಿಯದಂತೆ ನೋಡಿಕೊಳ್ಳಲಾಯಿತು.

• **ಮೋದಿ ಮತ್ತು ಶಾ ವಿರುದ್ಧ ನೀವು ಏನೂ ಮಾತನಾಡುತ್ತಿಲ್ಲ, ಭವಿಷ್ಯದಲ್ಲಿ ಬಿಜೆಪಿಗೆ ಮರಳುವ ಯೋಚನೆ ಇದೆಯೇ?**

ಅವರಿಬ್ಬರನ್ನೂ ಅವರ ವ್ಯಕ್ತಿತ್ವದ ಕಾರಣದಿಂದ ಗೌರವಿಸುತ್ತೇನೆ. ರಾಜ್ಯದಲ್ಲಿ ಏನಾಗಿದೆ, ಏನಾಗುತ್ತಿದೆ ಎಂಬ ಸ್ಪಷ್ಟ ಕಲ್ಪನೆಯಾದರೂ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರಿಗೆ ಇದೆಯೋ ಇಲ್ಲವೋ ಕಾಣೆ. ರಾಜ್ಯ ಬಿಜೆಪಿ ವ್ಯಕ್ತಿಯೊಬ್ಬರ (ಬಿ.ಎಲ್. ಸಂತೋಷ) ಬಿಗಿ ಹಿಡಿತದಲ್ಲಿದೆ. ಅವರ ಬೆಂಬಲಿಗರನ್ನು ಬೆಳೆಸಲು, ಸಹಾಯಕರನ್ನು ಉದ್ಧಾರಗೊಳಿಸಲು ಮಾತ್ರ ಎಂಬಂತೆ ನಡೆದುಕೊಳ್ಳುತ್ತಿದೆ.

• **ಕಾಂಗ್ರೆಸ್‌ಗೂ ಬಿಜೆಪಿಗೂ ಇರುವ ವ್ಯತ್ಯಾಸವೇನು?**

ಕಾಂಗ್ರೆಸ್ ಪಕ್ಷದ ಹಿರಿಯರೂ ಒಪ್ಪಿಕೊಳ್ಳುವಂತೆ ಇಲ್ಲಿ ಚೂರು ಶಿಸ್ತಿನ ಕೊರತೆ ಇದೆ ಅಂತನಿಸುತ್ತಿದೆ. ಒಟ್ಟಿಗೆ ಕೆಲಸ ಮಾಡುತ್ತ ಆ ಕೊರತೆ ತುಂಬಬಹುದು.

‘ಲಿಂಗಾಯತ’ರ ಸುತ್ತ ಮಾತಿನ ಸಮರ

‘ಲಿಂಗಾಯತ’ರ ವಿಚಾರವನ್ನು ಬಿಜೆಪಿ ಮತ್ತು ಕಾಂಗ್ರೆಸ್ ಈ ಚುನಾವಣೆಯಲ್ಲಿ ಪ್ರಬಲ ಅಸ್ತ್ರವಾಗಿ ಬಳಸುತ್ತಿವೆ. ಲಿಂಗಾಯತರ ಓಲೈಕೆ ಮತ್ತು ಲಿಂಗಾಯತ ನಾಯಕತ್ವದ ದಮನ ಚುನಾವಣಾ ರಾಜಕಾರಣದ ಚರ್ಚೆಯ ಕೇಂದ್ರವಾಗಿದೆ. ‘ಈಗಿರುವ ಲಿಂಗಾಯತ ಮುಖ್ಯಮಂತ್ರಿಯೇ ಭ್ರಷ್ಟರು’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾಧ್ಯಮವೊಂದಕ್ಕೆ ನೀಡಿರುವ ಹೇಳಿಕೆ ಈಗ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಮಾತಿನ ಸಮರಕ್ಕೆ ಕಾರಣವಾಗಿದೆ. ಸಿದ್ದರಾಮಯ್ಯ ಹೇಳಿಕೆಯ ಸುತ್ತ ಎರಡೂ ಪಕ್ಷಗಳ ನಾಯಕರು ಭಾನುವಾರ ನಡೆಸಿರುವ ವಾಕ್ಸಮರದ ವಿವರ ಇಲ್ಲಿದೆ...

ವರುಣ ಕ್ಷೇತ್ರದ ಭುಗತಹಳ್ಳಿಯಲ್ಲಿ ಭಾನುವಾರ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಡಾ.ಬಿ.ಆರ್‌ಅಂಬೇಡ್ಕರ್ ಫೋಟೊಗೆ ಮಾಲಾರ್ಪಣೆ ಮಾಡಿ ಮಾತನಾಡಿದರು

‘ಲಿಂಗಾಯತರ ವಿರುದ್ಧ ಆರೆಸ್ಸೆಸ್‌ನ ‘ವಿಘ್ನಸಂತೋಷಿ’ಗಳ ಸಂಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯಲ್ಲಿರುವ ಲಿಂಗಾಯತ ನಾಯಕರನ್ನು ಮುಗಿಸಲು ಆರೆಸ್ಸೆಸ್‌ನ ‘ವಿಘ್ನ ಸಂತೋಷಿ’ಗಳು ಸಂಚು ನಡೆಸುತ್ತಿದ್ದಾರೆ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

‘ರಾಜಕೀಯವಾಗಿ ತಮ್ಮನ್ನು ಮುಗಿಸಲು ನಡೆಯುತ್ತಿರುವ ಈ ಸಂಚು ಅರಿಯದ ಬಿಜೆಪಿಯ ಲಿಂಗಾಯತ ನಾಯಕರು, ಕಾಂಗ್ರೆಸ್ ಪಕ್ಷ ಲಿಂಗಾಯತ ವಿರೋಧಿ ಎಂಬ ಸುಳ್ಳು ಆರೋಪ ಮಾಡುತ್ತಿದೆ’ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಆರ್‌ಎಸ್‌ಎಸ್ ವಿರುದ್ಧ ಕಿಡಿಕಾರಿದ್ದಾರೆ.

‘ಬಿಜೆಪಿಯಲ್ಲಿರುವ ಲಿಂಗಾಯತ ಸಮುದಾಯದ ನಾಯಕರನ್ನು ನೋಡಿದಾಗ ‘ಹಾವಿನ ಹೆಡೆಯ ಮೇಲಿನ ಕಪ್ಪೆ ಹಾರುವ ನೊಣಕ್ಕೆ ಆಶಿಸಿದಂತೆ... ಎಂಬ ಬಸವಣ್ಣನವರ ವಚನ ನೆನಪಾಗುತ್ತಿದೆ. ನೆಲೆಯೇ ಇಲ್ಲದಿದ್ದ ಬಿಜೆಪಿಯನ್ನು ಅಧಿಕಾರದಲ್ಲಿ ಕುಳ್ಳಿರಿಸಿದ ಲಿಂಗಾಯತ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಜೈಲಿಗೆ ಕಳುಹಿಸಿದ್ದು ಆರೆಸ್ಸೆಸ್‌ನ ‘ವಿಘ್ನ ಸಂತೋಷಿ’ಗಳೇ ಹೊರತು, ಕಾಂಗ್ರೆಸ್ ಪಕ್ಷ ಅಲ್ಲ. ಜಗದೀಶ ಶೆಟ್ಟರ ರಾಜಕೀಯ ಜೀವನ ಮುಗಿಸುವ ಹುನ್ನಾರದ ರೂವಾರಿಗಳು ಕೂಡಾ ಇವರೇ. ಕಾಂಗ್ರೆಸ್ ಅಲ್ಲ’ ಎಂದೂ ಕುಟುಕಿದ್ದಾರೆ.

‘ವರುಣದಲ್ಲಿ ಒಲ್ಲೆನೆಂದರೂ ವಿ. ಸೋಮಣ್ಣ ಎಂಬ ಲಿಂಗಾಯತ ನಾಯಕನನ್ನು ಅಭ್ಯರ್ಥಿ ಮಾಡಿದ್ದು ಕೂಡಾ ಇದೇ ‘ವಿಘ್ನ ಸಂತೋಷಿ’ಗಳು. ಲಕ್ಷ್ಮಣ ಸವದಿ, ಸೊಗಡು ಶಿವಣ್ಣ, ಸಂಜಯ್ ಪಾಟೀಲ್ ಮೊದಲಾದ ಲಿಂಗಾಯತ ನಾಯಕರಿಗೆ ಟಿಕೆಟ್ ನಿರಾಕರಿಸಿ ಅವರನ್ನು ರಾಜಕೀಯವಾಗಿ ಮುಗಿಸಲು ಪ್ರಯತ್ನಿಸಿದ್ದು ಕೂಡಾ ಇವರೇ’ ಎಂದಿದ್ದಾರೆ.

‘ಜಗದೀಶ ಶೆಟ್ಟರ್ ಅವರನ್ನು ಸೋಲಿಸುವ ಹೊಣೆಯನ್ನು ಯಡಿಯೂರಪ್ಪ ಅವರ ಮೇಲೆ ಹೊರಿಸಲಾಗಿದೆ. ಅವರಲ್ಲಿ ಯಾರೂ ಸೋತರೂ ಒಬ್ಬ ಲಿಂಗಾಯತ ನಾಯಕ ಸೋತಂತೆ ಅಲ್ಲವೇ’ ಎಂದೂ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

‘ನನ್ನ ಹೇಳಿಕೆ ತಿರುಚಲಾಗಿದೆ’

ಬಾಗಲಕೋಟೆ: ‘ಲಿಂಗಾಯತ ಮುಖ್ಯಮಂತ್ರಿ ಬಗ್ಗೆ ನನ್ನ ಹೇಳಿಕೆ ತಿರುಚಲಾಗಿದೆ’ ಎಂದು ಸಿದ್ದರಾಮಯ್ಯ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಲಿಂಗಾಯತ ಸಮಾಜದವರು ಬಹಳ ಒಳ್ಳೆಯ ಮುಖ್ಯಮಂತ್ರಿಗಳಾಗಿದ್ದಾರೆ. ಆದರೆ, ಬಸವರಾಜ ಬೊಮ್ಮಾಯಿ ಭ್ರಷ್ಟಾಚಾರ ಮಾಡುತ್ತಿದ್ದಾರೆ ಎಂದಿದ್ದೆ. ಹೇಳಿಕೆ ತಿರುಚಿ, ನನ್ನನ್ನು ಲಿಂಗಾಯತ ವಿರೋಧಿ ಎಂದು ಬಿಂಬಿಸಲಾಗುತ್ತಿದೆ. ಲಿಂಗಾಯತ ಧರ್ಮದ ಬಗ್ಗೆ ಗೌರವವಿದೆ’ ಎಂದರು.

‘ಬಿಜೆಪಿ ಲಿಂಗಾಯತರನ್ನು ಕಡೆಗಣಿಸಿದ್ದಕ್ಕೆ ಮುಳುಗಿ ಹೋಗುತ್ತದೆ ಎನ್ನುವುದಿಲ್ಲ. ಆದರೆ ಕಡೆಗಣನೆ ಮಾಡಿದ್ದು ಮಾತ್ರ ಸತ್ಯ’ ಎಂದು ಹೇಳಿದರು.

ಜನ ಪಾಠ ಕಲಿಸುತ್ತಾರೆ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಇಡೀ ಲಿಂಗಾಯತ ಸಮುದಾಯವೇ ಭ್ರಷ್ಟ ಎಂಬರ್ಥದಲ್ಲಿ ಮಾತನಾಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಜನರು ತಕ್ಕ ಪಾಠ ಕಲಿಸುತ್ತಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಸವ ಜಯಂತಿ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಬಸವೇಶ್ವರ ಪ್ರತಿಮೆ ಹಾಗೂ ಚಾಲುಕ್ಯ ವೃತ್ತದಲ್ಲಿರುವ ಬಸವೇಶ್ವರ ಪ್ರತಿಮೆಗಳಿಗೆ ಭಾನುವಾರ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

‘ಸಿದ್ದರಾಮಯ್ಯ ಅವರಿಂದ ಇಂತಹ ಹೇಳಿಕೆ ನಿರೀಕ್ಷಿಸಿರಲಿಲ್ಲ. ಅವರೊಬ್ಬ ಹಿರಿಯ ನಾಯಕ. ಲಿಂಗಾಯತ ಸಮುದಾಯದ ಆತ್ಮ ಕಲಕುವಂತಹ ಹೇಳಿಕೆ ನೀಡಿದ್ದಾರೆ. ಲಿಂಗಾಯತ ಸಮುದಾಯವೇ ಭ್ರಷ್ಟ ಎನ್ನುವುದು ತಪ್ಪು’ ಎಂದರು.‘ಆಯಾ ಸಮುದಾಯದ ನಾಯಕರು ಅವರ ಯೋಗ್ಯತೆ, ಕ್ಷಮತೆಯಲ್ಲಿ ಕೆಲಸ ಮಾಡುತ್ತಾರೆ. ಸಿದ್ದರಾಮಯ್ಯ ಅವರ ಘನತೆಗೆ ತಕ್ಕ ಹೇಳಿಕೆ ಇದಲ್ಲ. ಹಿಂದೆ ರಾಹುಲ್ ಗಾಂಧಿಯವರು ಮೋದಿ ಎಂಬ ಹೆಸರಿನ ಕುರಿತು ನೀಡಿದ್ದ ಹೇಳಿಕೆಯ ಮಾದರಿಯಲ್ಲೇ ಈಗ ಸಿದ್ದರಾಮಯ್ಯ ಮಾತನಾಡಿದ್ದಾರೆ’ ಎಂದು ಹೇಳಿದರು.

ಸಿದ್ದರಾಮಯ್ಯ ಲಿಂಗಾಯತ ಸಮುದಾಯದ ವಿರುದ್ಧ ಮಾತನಾಡುವುದನ್ನು ಈಗಲೂ ಮುಂದುವರಿಸಿದ್ದಾರೆ. ಆ ಸಮುದಾಯಕ್ಕೆ ಕಾಂಗ್ರೆಸ್ ಪಕ್ಷ ಮಾಡಿದಷ್ಟು ದ್ರೋಹ ಯಾರೂ ಮಾಡಿಲ್ಲ. ಲಿಂಗಾಯತ ಸಮಾಜವನ್ನು ಒಡೆಯಲು ಹೋಗಿದ್ದರಿಂದಲೇ ಸಿದ್ದರಾಮಯ್ಯ ಸರ್ಕಾರ ಅಧಿಕಾರ ಕಳೆದುಕೊಂಡಿತು

ಕೆ.ಎಸ್.ಈಶ್ವರಪ್ಪ, ಬಿಜೆಪಿ ಶಾಸಕ

‘ಬೊಮ್ಮಾಯಿ ಭ್ರಮೆಯಿಂದ ಹೊರಬರಬೇಕು’

ಬೆಂಗಳೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಾವೊಬ್ಬರೆ ಇಡೀ ಲಿಂಗಾಯತ ಸಮಾಜದ ಪ್ರತೀಕ ಎಂಬ ಭ್ರಮೆಯಿಂದ ಹೊರ ಬರಬೇಕು’ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಬೊಮ್ಮಾಯಿ ಅವರು ತಮ್ಮ ಶೇ 40 ಕಮಿಷನ್ ಭ್ರಷ್ಟಾಚಾರದಿಂದ ರಾಜ್ಯಕ್ಕೆ ಕಳಂಕ ತಂದಿದ್ದಾರೆ’ ಎಂದು ಆರೋಪಿಸಿದರು.

‘ಬೊಮ್ಮಾಯಿ ಅವರು ಅವರದೇ ಪಕ್ಷದ ಶಾಸಕ ನೆಹರೂ ಓಲೇಕಾರ್ ಅವರ ಪ್ರಕಾರ ಶೇ 40 ಕಮಿಷನ್ ಏಜೆಂಟ್ ಆಗಿದ್ದಾರೆ. ಈ ಆರೋಪ ನಾವು ಮಾಡಿಲ್ಲ. ನೆಹರೂ ಓಲೇಕರ್ ಹೇಳಿರುವುದನ್ನು ಸಿದ್ದರಾಮಯ್ಯ ಪುನರುಚ್ಚರಿಸಿದರೆ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ಸಿದ್ದರಾಮಯ್ಯ ಅವರು ಲಿಂಗಾಯತ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ’ ಎಂಬ ಬಿಜೆಪಿ ನಾಯಕರ ಆರೋಪದ ವಿಚಾರವಾಗಿ ಕೇಳಿದ ಪ್ರಶ್ನೆಗೆ, ‘ಸಿದ್ದರಾಮಯ್ಯ ಅವರು ಬಹಳ ಸ್ಪಷ್ಟವಾಗಿ ತಮ್ಮ ಹೇಳಿಕೆ ನೀಡಿದ್ದು, ಲಿಂಗಾಯತ ಸಮುದಾಯದಿಂದ ಬಂದು ರಾಜ್ಯದ ಮುಖ್ಯಮಂತ್ರಿಯಾಗಿ ಅನೇಕ ಉತ್ತಮ ಕೊಡುಗೆಗಳನ್ನು ನೀಡಿರುವವರ ಬಗ್ಗೆ ನನಗೆ ಬಹಳ ಗೌರವವಿದೆ ಎಂದಿದ್ದಾರೆ’ ಎಂದು ಸಮರ್ಥಿಸಿದರು.

‘ಅನೇಕ ಲಿಂಗಾಯತ ನಾಯಕರನ್ನು ಬಿಜೆಪಿ ಅಪಮಾನ ಮಾಡಿದೆ. ಬಿಜೆಪಿ ಮತ್ತು ಬೊಮ್ಮಾಯಿ ಅವರು ಎಸ್‌ಸಿ, ಎಸ್‌ಟಿ, ಒಬಿಸಿಗೆ ಮಾತ್ರ ಮೋಸ ಮಾಡಿಲ್ಲ. ಮೀಸಲಾತಿ ಹೆಸರಲ್ಲಿ ಲಿಂಗಾಯತರು ಮತ್ತು ಒಕ್ಕಲಿಗ ಸಮುದಾಯಕ್ಕೆ ಮೋಸ ಮಾಡಿದ್ದಾರೆ’ ಎಂದರು.

ಸೋಮಣ್ಣಗೆ ಸಿದ್ದರಾಮಯ್ಯ ಅಭಿಮಾನಿಗಳ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಿಜೆಪಿಯವರು ನಮ್ಮೂರಿಗೆ ಪ್ರಚಾರಕ್ಕೆ ಬರುವಂತಿಲ್ಲ’ ಎಂದು ಭುಗತಹಳ್ಳಿ ಗ್ರಾಮದಲ್ಲಿ ಕೆಲ ಯುವಕರು ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ವಿರುದ್ಧ ಭಾನುವಾರ ಆಕ್ರೋಶ ವ್ಯಕ್ತಪಡಿಸಿ, ಧಿಕ್ಕಾರ ಕೂಗಿದರು. ಮತಯಾಚನೆಗೆ ಅಡ್ಡಿಪಡಿಸಿದರು. ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರ ಜೈಕಾರ ಹಾಕಿದರು.

ಅಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಫೋಟೊಗೆ ಮಾಲಾರ್ಪಣೆ ಮಾಡಿ ಸೋಮಣ್ಣ ಅವರು ಮಾತನಾಡುತ್ತಿದ್ದ ವೇಳೆ, ಕೆಲ ಯುವಕರು ಅಡ್ಡಿಪಡಿಸಿದರು.

‘ಭಾಷಣ ಮುಗಿಯುವವರೆಗೂ ಕಾಯಿರಿ’ ಎಂದು ಕೋರಿದ ಸೋಮಣ್ಣ, ‘ಯಾರು ಕಣದಲ್ಲಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ, ಮತದಾರರು ಅಭಿವೃದ್ಧಿಗಾಗಿ ಬಿಜೆಪಿಯನ್ನು ಬೆಂಬಲಿಸಬೇಕು’ ಎಂದು ಕೋರಿ ಮಾತು ಮುಗಿಸಿದರು.

ಆಗ, ಕೆಲವರು ಯುವಕರು ಸಿದ್ದರಾಮಯ್ಯ ಪರವಾಗಿ ಘೋಷಣೆ ಕೂಗಿ ಮುತ್ತಿಗೆ ಹಾಕಲು ಯತ್ನಿಸಿದರು. ‘ನಿಮ್ಮೊಂದಿಗೆ ಚರ್ಚೆ ಮಾಡುವುದಿದೆ. ಸಂವಿಧಾನವನ್ನು ಬದಲಾಯಿಸುತ್ತೇವೆ ಎಂದು ಬಿಜೆಪಿಯವರಾದ ನೀವೆಲ್ಲರೂ ಹೇಳುತ್ತೀರಿ. ಈಗ ಮತ ಕೇಳಲು ಬಂದಿದ್ದೀರಿ, ಹೀಗಾದರೆ ಹೇಗೆ?’ ಎಂದು ಕೇಳಿದರು.

ಸೋಮಣ್ಣ ಇದಕ್ಕೆ ಪ್ರತಿಕ್ರಿಯಿಸದೇ ಕಾರಿನತ್ತ ತೆರಳಿದರು. ಆಗ, ಯುವಕರು ಕಾರಿಗೆ ಮುತ್ತಿಗೆ ಹಾಕಿದರು. ಈ ನಡುವೆ, ಬಿಜೆಪಿ ಕಾರ್ಯಕರ್ತರು ಕೂಡ ಸೋಮಣ್ಣ ಮತ್ತು ಬಿಜೆಪಿ ಪರ ಘೋಷಣೆ ಕೂಗಿದರು. ಇದರಿಂದ ಸ್ಥಳದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಮಧ್ಯಪ್ರವೇಶಿಸಿ ಸೋಮಣ್ಣ ಕಾರು ತೆರಳಲು ಅನುವು ಮಾಡಿಕೊಟ್ಟರು.

ಕೆಲವರು ಕಾರಿನ ಮುಂದೆಯೂ ಬಂದು ‘ಜೈ ಸಿದ್ದರಾಮಯ್ಯ’ ಎಂದು ಘೋಷಣೆ ಕೂಗಿದರು. ‘ಬಿಜೆಪಿ ಸೋಮಣ್ಣ ನಮ್ಮೂರಿಗೆ ಬರಂಗಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಘಟನೆಯಿಂದ ಸೋಮಣ್ಣ ಮುಜುಗರಕ್ಕೆ ಒಳಗಾಗಬೇಕಾಯಿತು. ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಮುಖಂಡ ಶರತ್ ಪುಟ್ಟಬುದ್ಧಿ ಮೊದಲಾದವರು ಜೊತೆಗಿದ್ದರು.

ಈ ಬಗ್ಗೆ ವಾಜಮಂಗಲ ಗ್ರಾಮದಲ್ಲಿ ಪ್ರತಿಕ್ರಿಯಿಸಿದ ಸೋಮಣ್ಣ, ‘ಮೂರ್ನಾಲ್ಕು ಹುಡುಗರು ಗಲಾಟೆ ಮಾಡಿದರು. ರಾಜಕೀಯದಲ್ಲಿ ಇದನ್ನೆಲ್ಲಾ ಸಾಕಷ್ಟು ನೋಡಿದ್ದೇನೆ. ವಿದ್ಯಾರ್ಥಿಯಾಗಿದ್ದಾಗ ಸಾಕಷ್ಟು ಹೋರಾಟ ಮಾಡಿದ್ದೇನೆ. ಈಗ ವಯಸ್ಸಾಗಿದೆಯಷ್ಟೆ’ ಎಂದರು.

ಸಿದ್ದರಾಮಯ್ಯ ವಿರುದ್ಧ ಪ್ರತಿಭಟನೆ: ಪರಮಶಿವಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಿಂಗಾಯತ ಮುಖ್ಯಮಂತ್ರಿಗಳ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಇಡೀ ಲಿಂಗಾಯತ ಸಮುದಾಯಕ್ಕೆ ಅವಮಾನ ಮಾಡಿದಂತಾಗಿದೆ’ ಎಂದು ಸರ್ಪಭೂಷಣ ಶಿವಯೋಗಿಗಳ ಮಠದ ಟ್ರಸ್ಟ್ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯ ಹೇಳಿದ್ದಾರೆ.

‘ಸಿದ್ದರಾಮಯ್ಯ ಮೊದಲಿನಿಂದಲೂ ಲಿಂಗಾಯತ ಬಗ್ಗೆ ಗೌರವಯುತವಾಗಿ ನಡೆದುಕೊಂಡು ಬಂದಿಲ್ಲ. ಬಸವರಾಜ ಬೊಮ್ಮಾಯಿ ಅವರನ್ನು ಲಿಂಗಾಯತ ಎಂಬ ನೆಲೆಯಲ್ಲಿ ಭ್ರಷ್ಟರು ಎಂದು ಆರೋಪಿಸಿರುವುದು ಸಮುದಾಯಕ್ಕೆ ಮಾಡಿದ ಅಪಮಾನ. ಈ ಬಗ್ಗೆ ಲಿಂಗಾಯತ ಸಮುದಾಯವು ನಾಡಿನಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳುತ್ತದೆ. ಮಾನನಷ್ಟ ಮೊಕದ್ದಮೆ ಸಹ ದಾಖಲಿಸಲಾಗುತ್ತದೆ’ ಎಂದಿದ್ದಾರೆ.

ಬೆಂಗಳೂರಿನ ಎಲ್ಲ ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳ ಪರವಾಗಿ ಟ್ರಸ್ಟ್ ಮೂಲಕ ಹೇಳಿಕೆ ನೀಡಿರುವ ಪರಮಶಿವಯ್ಯ, ‘ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಲಿಂಗಾಯತ ಸಮುದಾಯವನ್ನು ಒಡೆಯಲು ಪ್ರಯತ್ನಿಸಿದ್ದರು. ಅವರು ನಿರಂತರವಾಗಿ ಲಿಂಗಾಯತ ಸಮುದಾಯವನ್ನು ಅಪಮಾನ ಮಾಡುತ್ತಾ ಬರುತ್ತಿದ್ದಾರೆ. ಲಿಂಗಾಯತ ಧರ್ಮ ಸಕಲ ಜೀವಾತ್ಮರಿಗೂ ಒಳಿತನ್ನೇ ಬಯಸುವ ವಿಶ್ವಧರ್ಮ. ಲಿಂಗಾಯತ ಧರ್ಮಕ್ಕೆ ಸೇರಿದ ಮುಖ್ಯಮಂತ್ರಿಗಳೆಲ್ಲ ವಿಶೇಷವಾಗಿ ಕೆಳಸ್ತರದ ದಲಿತ ಸಮುದಾಯ ಬಗ್ಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ’ ಎಂದು ಹೇಳಿದ್ದಾರೆ.

‘ಕಾಂಗ್ರೆಸ್ ತಲೆ ಮೇಲೆ ಚಪ್ಪಡಿ ಎಳೆದ ಸಿದ್ದರಾಮಯ್ಯ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಲಿಂಗಾಯತ ಮುಖ್ಯಮಂತ್ರಿಗಳೆಲ್ಲ ಭ್ರಷ್ಟರು ಎಂದಿರುವ ಸಿದ್ದರಾಮಯ್ಯ ಕಾಂಗ್ರೆಸ್ ತಲೆಯ ಮೇಲೆ ಚಪ್ಪಡಿ ಎಳೆದಿದ್ದಾರೆ’ ಎಂದು ಎಂದು ಸಚಿವ ಆರ್. ಅಶೋಕ ಲೇವಡಿ ಮಾಡಿದರು.

ಕನಕಪುರದಲ್ಲಿ ಭಾನುವಾರ ಮತಯಾಚನೆ ಸಂದರ್ಭ ಪತ್ರಕರ್ತರ ಜತೆ ಅವರು ಮಾತನಾಡಿದರು. ‘ಸಿದ್ದರಾಮಯ್ಯ ಅವರ ಈ ಹೇಳಿಕೆ ಲಿಂಗಾಯತರ ಎದೆಗೆ ಚೂರಿ ಇರಿದಂತಾಗಿದೆ. ಇದರಿಂದಾಗಿ ಅವರು ಕೇವಲ ವರುಣ ಕ್ಷೇತ್ರದಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಪರಿಣಾಮ ಎದುರಿಸುತ್ತಾರೆ. ನಾನು ಹೀಗೆ ಹೇಳಿಲ್ಲ, ಹೇಳಿಕೆ ತಿರುಚಿದ್ದಾರೆ ಎಂದೆಲ್ಲ ಸಬೂಬು ನೀಡುವ ಬದಲು ಜನರ ಕ್ಷಮೆ ಯಾಚಿಸಲಿ’ ಎಂದು ಒತ್ತಾಯಿಸಿದರು.

‘ಹಿಂದೆ ಕಾಂಗ್ರೆಸ್ ನಾಯಕರು ವೀರೇಂದ್ರ ಪಾಟೀಲರಿಗೆ ಅವಮಾನ ಮಾಡಿದರು. ಬಳಿಕ ಲಿಂಗಾಯತ ಧರ್ಮ ಒಡೆಯುವ ಕೆಲಸ ಮಾಡಿದರು. ಈಗ ಈ ಸಮುದಾಯದ ಅವಮಾನ ಮಾಡಿದ್ದಾರೆ. ಇನ್ನೂ ನೂರು ವರ್ಷ ಲಿಂಗಾಯತ ಸಮುದಾಯದ ಕಡೆಗೆ ಕಾಂಗ್ರೆಸ್ ತಿರುಗಿಯೂ ನೋಡುವುದಿಲ್ಲ. ಸಿದ್ದರಾಮಯ್ಯ ಬೇಕಂತಲೇ ಈ ಕೆಲಸ ಮಾಡಿದ್ದಾರೆ. ನಿರ್ಮ, ಸರ್ಫ್ ಹಾಕಿ ಕಾಂಗ್ರೆಸ್ ಅನ್ನು ತೊಳೆದಿದ್ದಾರೆ’ ಎಂದು ಟೀಕಿಸಿದರು.

‘ಮೋದಿ ಬಗ್ಗೆ ಮಾತನಾಡಿ ರಾಹುಲ್ ಗಾಂಧಿ ಸಂಸತ್ ಸದಸ್ಯತ್ವ ಕಳೆದುಕೊಂಡರು. ಈಗಲೂ ಅದೇ ರೀತಿ ಆಗುತ್ತದೆ. ಸಿದ್ದರಾಮಯ್ಯ ಈ ಬಾರಿ ಮನೆಗೆ ಹೋಗುತ್ತಾರೆ’ ಎಂದರು.

ಕರ್ನಾಟಕದಲ್ಲಿನ ಭ್ರಷ್ಟಾಚಾರಕ್ಕೆ ಲಿಂಗಾಯತ ಮುಖ್ಯಮಂತ್ರಿಗಳೇ ಕಾರಣ ಎನ್ನುವ ರೀತಿಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿರುವುದು ವೀರಶೈವ ಜನಾಂಗಕ್ಕೆ ಮಾಡಿದ ಅವಮಾನ. ಕೂಡಲೇ ಅವರು ಕ್ಷಮೆ ಯಾಚಿಸಬೇಕು

ಅಣ್ಣಾಮಲೈ, ಬಿಜೆಪಿ ರಾಜ್ಯ ಚುನಾವಣಾ ಸಹ ಉಸ್ತುವಾರಿ

ಲಿಂಗಾಯತರ ಕಡೆಗಣನೆ: ರಾಹುಲ್– ಶೆಟ್ಟರ್ ಚರ್ಚೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಉತ್ತರ ಕರ್ನಾಟಕ ಭಾಗದ ಲಿಂಗಾಯತ ನಾಯಕ ಹಾಗೂ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದ ಅಭ್ಯರ್ಥಿಯೂ ಆಗಿರುವ ಜಗದೀಶ ಶೆಟ್ಟರ್ ಅವರೊಂದಿಗೆ, ನಗರದ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುಮಾರು 35 ನಿಮಿಷ ಮಾತುಕತೆ ನಡೆಸಿದರು.

ಬಿಜೆಪಿಯಲ್ಲಿ ಲಿಂಗಾಯತರನ್ನು ಕಡೆಗಣಿಸಲಾಗುತ್ತಿದೆ ಎಂಬ ಅಸಮಾಧಾನದ ಹಿನ್ನೆಲೆಯಲ್ಲಿ, ಇಬ್ಬರು ನಾಯಕರ ಜೊತೆ ನಡೆದಿರುವ ಮಾತುಕತೆಯು ಮಹತ್ವ ಪಡೆದುಕೊಂಡಿದೆ. ಈ ವೇಳೆ ಹುಬ್ಬಳ್ಳಿ-ಧಾರವಾಡ ಪೂರ್ವ ಕ್ಷೇತ್ರದ ಅಭ್ಯರ್ಥಿ ಪ್ರಸಾದ ಅಬ್ಬಯ್ಯ ಕೂಡ ಇದ್ದರು.

ಈ ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶೆಟ್ಟರ್, ‘ರಾಹುಲ್ ಅವರು ಬಿಜೆಪಿಯೊಳಗಿನ ಬೆಳವಣಿಗೆ ಮತ್ತು ಲಿಂಗಾಯತರ ಕಡೆಗಣನೆ ಸೇರಿದಂತೆ ರಾಜ್ಯ ರಾಜಕಾರಣದ ಬಗ್ಗೆ ನನ್ನೊಂದಿಗೆ ಚರ್ಚೆ ನಡೆಸಿದರು. ಹಾನಗಲ್‌ನಲ್ಲಿ ನಡೆಯಲಿರುವ ತಮ್ಮ ಸಾರ್ವಜನಿಕ ಸಭೆಗೆ ಬರುವಂತೆ ನನಗೂ ಆಹ್ವಾನ ನೀಡಿದ್ದಾರೆ’ ಎಂದರು.

‘ಹುಬ್ಬಳ್ಳಿಯಲ್ಲೂ ರಾಹುಲ್ ಪ್ರಚಾರ ಮಾಡುವ ಸಾಧ್ಯತೆ ಇದ್ದು, ರಾಜ್ಯದ ನಾಯಕರು ಅದನ್ನು ಖಚಿತಪಡಿಸಲಿದ್ದಾರೆ. ಕಾಂಗ್ರೆಸ್ ಈ ಸಲ ಐವತ್ತಕ್ಕೂ ಹೆಚ್ಚು ಸೀಟುಗಳನ್ನು ಲಿಂಗಾಯತ ಸಮುದಾಯಕ್ಕೆ ನೀಡಿದೆ. ಎಲ್ಲಾ ಕಡೆ ಕಾಂಗ್ರೆಸ್ ಪರ ವಾತಾವರಣವಿದೆ’ ಎಂದರು.

ರಾಹುಲ್ ಹೆಲಿಕಾಪ್ಟರ್ ತಪಾಸಣೆ

ಬಾಗಲಕೋಟೆ: ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಭಾನುವಾರ ಕೂಡಲಸಂಗಮಕ್ಕೆ ಬಂದಿದ್ದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಪ್ರಯಾಣಿಸಿದ ಹೆಲಿಕಾಪ್ಟರ್ ಅನ್ನು ಚುನಾವಣಾಧಿಕಾರಿಗಳು ತಪಾಸಣೆ ಮಾಡಿದರು. ವೇದಿಕೆಗೆ ಕಾರಿನಲ್ಲಿ ಬಂದಾಗಲೂ ಕಾರು ತಪಾಸಣೆ ಮಾಡಲಾಯಿತು.

ಕಾಂಗ್ರೆಸ್‌ಗೆ ಸಿಪಿಐ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ 215 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಲು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ) ನಿರ್ಧರಿಸಿದೆ.

ಒಟ್ಟು 224 ಕ್ಷೇತ್ರಗಳ ಪೈಕಿ ಏಳು ಕ್ಷೇತ್ರಗಳಲ್ಲಿ ಸಿಪಿಐ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಮೇಲುಕೋಟೆ ಕ್ಷೇತ್ರದಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಗೆ ಮತ್ತು ಬಾಗೇಪಲ್ಲಿ ಕ್ಷೇತ್ರದಲ್ಲಿ ಸಿಪಿಐ (ಎಂ) ಅಭ್ಯರ್ಥಿಗೆ ಪಕ್ಷ ಬೆಂಬಲ ನೀಡಲಿದೆ.

ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಿಪಿಐ ರಾಜ್ಯ ಕಾರ್ಯದರ್ಶಿ ಸುಂದರೇಶ್, ಎಐಟಿಯುಸಿ ರಾಜ್ಯ ಘಟಕದ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್, ಸಿಪಿಐ ರಾಜ್ಯ ಸಹ ಕಾರ್ಯದರ್ಶಿ ಬಿ. ಅಮ್ಜದ್, ಕಾರ್ಯಕಾರಿ ಸದಸ್ಯರಾದ ಎ. ಜ್ಯೋತಿ ಅವರು ಜಂಟಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಈ ವಿಷಯ ತಿಳಿಸಿದರು.

‘ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಜೊತೆಗೆ ಅತಂತ್ರ ವಿಧಾನಸಭೆ ಸಾಧ್ಯತೆಯನ್ನು ತಡೆಯಬೇಕಿದೆ. ಈ ಉದ್ದೇಶದಿಂದ ರಾಜ್ಯದಲ್ಲಿ ಬಿಜೆಪಿಯನ್ನು ಎದುರಿಸುತ್ತಿರುವ ಜಾತ್ಯತೀತ, ಪ್ರಜಾಸತ್ತಾತ್ಮಕ ಪಕ್ಷವನ್ನು ಬೆಂಬಲಿಸುವ ಅಗತ್ಯ ಇರುವುದರಿಂದ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ’ ಎಂದು ಸಿಪಿಐ ಮುಖಂಡರು ಸಮರ್ಥನೆ ನೀಡಿದರು.

ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, ‘ಕಾಂಗ್ರೆಸ್ ಮತ್ತು ಸಿಪಿಐ ಸೈದ್ಧಾಂತಿಕವಾಗಿ ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರೂ ನಮ್ಮ ಗುರಿ ಒಂದೇ ಆಗಿದೆ’ ಎಂದರು.

ಕ್ಷಮೆ ಕೇಳಲಿ: ಪ್ರಲ್ಹಾದ ಜೋಶಿ

ಹುಬ್ಬಳ್ಳಿ: ‘ಈಗಿನ ಲಿಂಗಾಯುತ ಮುಖ್ಯಮಂತ್ರಿ ಭ್ರಷ್ಟಾಚಾರಿಯಾಗಿದ್ದು, ರಾಜ್ಯವನ್ನು ಹಾಳು ಮಾಡಿದ್ದಾರೆ ಎಂಬ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಅವರ ಹೇಳಿಕೆ ಖಂಡನೀಯ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

‘ಸಿದ್ದರಾಮಯ್ಯ ಅವರ ಹೇಳಿಕೆಯು ಕರ್ನಾಟಕಕ್ಕೆ ಮಾಡಿದ ಅವಮಾನವಾಗಿದ್ದು, ಕೂಡಲೇ ಕ್ಷಮೆ ಯಾಚಿಸಬೇಕು. ಕಾಂಗ್ರೆಸ್‌ನವರಿಗೆ ತಾಕತ್ತಿದ್ದರೆ ಲಿಂಗಾಯುತ ಸಮುದಾಯದವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಲಿ’ ಎಂದು ಭಾನುವಾರ ಸವಾಲು ಹಾಕಿದರು.



ಲಿಂಗಾಯತ ಮುಖ್ಯಮಂತ್ರಿಗಳು ಭ್ರಷ್ಟರು ಎಂಬ ತಮ್ಮ ಹೇಳಿಕೆ ಬಗ್ಗೆ ಸಿದ್ದರಾಮಯ್ಯ ಅವರೇ ಸ್ಪಷ್ಟನೆ ನೀಡಿದ್ದಾರೆ. ಆದ್ದರಿಂದ, ಈ ವಿಷಯ ಮುಂದುವರಿಸುವುದು ಸೂಕ್ತವಲ್ಲ

ಬಸವಜಯ ಮೃತ್ಯುಂಜಯ ಸ್ವಾಮೀಜಿ, ಕೂಡಲ ಸಂಗಮ ಪಂಚಮಸಾಲಿ ಪೀಠ

‘ಜಾತಿ ನಿಮಿತ್ತ ಮಾತ್ರ, ವೈಭವೀಕರಿಸಬಾರದು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಲಿಂಗಾಯತ ಮುಖ್ಯಮಂತ್ರಿ ವಿಚಾರದ ಬಗ್ಗೆ ನಾನು ಚರ್ಚಿಸುವುದಿಲ್ಲ. ಆ ಬಗ್ಗೆ ನಮ್ಮ ವರಿಷ್ಠರು ಮಾತನಾಡುತ್ತಾರೆ. ಒಂದು ಧರ್ಮವನ್ನು ಮತ್ತೊಂದು ಧರ್ಮಕ್ಕೆ ಹೋಲಿಸುವುದು ನಮ್ಮ ಕೆಲಸವಲ್ಲ’ ಎಂದು ವರುಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಹೇಳಿದರು.

‘ಈಗಿರುವ ಲಿಂಗಾಯತ ಮುಖ್ಯಮಂತ್ರಿಯೇ ರಾಜ್ಯ ಹಾಳು ಮಾಡಿರುವುದು’ ಎಂಬ ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆಗೆ ಇಲ್ಲಿ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ರಾಜಕಾರಣಿಗಳು ಇತಿಮಿತಿಯಲ್ಲಿ ಮಾತನಾಡಬೇಕು’ ಎಂದರು.

‘ಸಿದ್ದರಾಮಯ್ಯ ಎಲ್ಲ ವರ್ಗದ ಜನರೊಂದಿಗೆ ಒಡನಾಟ ಇಟ್ಟುಕೊಂಡು ಕೆಲಸ ಮಾಡಬೇಕು. ಜಾತಿ ನಿಮಿತ್ತ ಮಾತ್ರ, ಅದನ್ನು ವೈಭವೀಕರಿಸಬಾರದು. ಇದನ್ನು ಅವರು ಮನವರಿಕೆ ಮಾಡಿಕೊಳ್ಳಬೇಕು’ ಎಂದು ಹೇಳಿದರು.

‘ಲಿಂಗಾಯತ ಮುಖ್ಯಮಂತ್ರಿಗಳು ನೀಡಿರುವ ಕೊಡುಗೆ ಇಡೀ ದೇಶಕ್ಕೆ ಗೊತ್ತಿದೆ. ಒಂದೊಂದು ಬಾರಿ ಭಾವನಾತ್ಮಕವಾಗಿ ಮಾತನಾಡಿ, ಎರಡೇ ನಿಮಿಷಕ್ಕೆ ಉಲ್ಟಾ ಹೊಡೆಯುವ ಸಿದ್ದರಾಮಯ್ಯ ಅವರಂಥವರನ್ನು ಬಹಳ ನೋಡಿದ್ದೇನೆ’ ಎಂದು ಪ್ರತಿಕ್ರಿಯಿಸಿದರು.

ಭಗವಂತ ಖೂಬಾ ಆಕ್ಷೇಪ

ಕಲಬುರಗಿ: ‘ಲಿಂಗಾಯತ ಮುಖ್ಯಮಂತ್ರಿ ಭ್ರಷ್ಟರು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ ನೀಡಿರುವುದನ್ನು ವೀರಶೈವ ಲಿಂಗಾಯತ ಸಮುದಾಯವು ಬಲವಾಗಿ ಖಂಡಿಸುತ್ತದೆ. ಈ ಹೇಳಿಕೆಯು ಸತ್ಯಕ್ಕೆ ದೂರವಾಗಿದೆ‘ ಎಂದು ಕೇಂದ್ರ ಸಚಿವ ಭಗವಂತ ಖೂಬಾ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಿಂಗಾಯತ ಧರ್ಮ ಮಾಡುವುದಾಗಿ ಹೇಳಿ ಲಿಂಗಾಯತ ಸಮುದಾಯವನ್ನೇ ಎದುರು ಹಾಕಿಕೊಂಡಿದ್ದರು. ನಂತರ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಹೀನಾಯವಾಗಿ ಸೋಲನ್ನು ಅನುಭವಿಸಬೇಕಾಯಿತು. ಇದೀಗ ಮತ್ತೆ ಅವರು ಲಿಂಗಾಯತ ಸಮುದಾಯದ ಮುಖ್ಯಮಂತ್ರಿಯ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸಮುದಾಯದ ಜನರು ಮತ್ತೊಮ್ಮೆ ಕಾಂಗ್ರೆಸ್‌ನ ಎಲ್ಲಾ ಅಭ್ಯರ್ಥಿಗಳಿಗೆ ಸೋಲಿನ ರುಚಿಯನ್ನು ತೋರಿಸಲಿದ್ದಾರೆ‘ ಎಂದರು.

ಬಿಜೆಪಿ ಅಪಪ್ರಚಾರ: ಮಹದೇವಪ್ಪ

ಮೈಸೂರು: ‘ಸಿದ್ದರಾಮಯ್ಯ ಹೇಳಿದ ಮಾತನ್ನು ಬಿಜೆಪಿಯವರು ಅಪಾರ್ಥ ಮಾಡಿಕೊಂಡು ಅಪಪ್ರಚಾರಕ್ಕಿಳಿದಿದ್ದಾರೆ’ ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ.ಮಹದೇವಪ್ಪ ಆರೋಪಿಸಿದರು.

ತಿ.ನರಸೀಪುರದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಬಿಜೆಪಿಯವರು ಯಾವಾಗ ಸತ್ಯ ಹೇಳುತ್ತಾರೆ? ಸೂಕ್ಷ್ಮ ಹಾಗೂ ಭಾವನಾತ್ಮಕ ವಿಚಾರಗಳ ಬಗ್ಗೆಯೇ ಮಾತನಾಡುತ್ತಾರೆ. ಈ ಸರ್ಕಾರ ಭ್ರಷ್ಟಾಚಾರದಿಂದ ಕೂಡಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ, ಸುಳ್ಳು ಸುದ್ದಿ ಹಬ್ಬಿಸಿ ಜನರ ಮನಸ್ಸು ಕೆಡಿಸುವುದೇ ಬಿಜೆಪಿಯವರ ಉದ್ದೇಶ’ ಎಂದು ಹೇಳಿದರು.

‘ಸುಳ್ಳು ಹೇಳುವುದು ಮತ್ತು ಅಪಪ್ರಚಾರ ಮಾಡುವುದೇ ಬಿಜೆಪಿಯವರ ಉದ್ದೇಶ. ನೂರು ಬಾರಿ ಸುಳ್ಳು ಹೇಳಿ ಅದನ್ನು ಸತ್ಯ ಎಂದು ನಂಬಿಸುತ್ತಾರೆ. ಅಭಿವೃದ್ಧಿ, ರೈತರು, ಬಡವರ ಪರವಾಗಿ ಬಿಜೆಪಿ ಇಲ್ಲ. ಸುಳ್ಳು ಹೇಳುವುದೇ ಬಿಜೆಪಿಯ ಭರವಸೆ’ ಎಂದು ವಾಗ್ದಾಳಿ ನಡೆಸಿದರು.

ಬೆಂಗಳೂರು: ಹ್ಯಾಟ್ರಿಕ್ ವೀರರ ಕ್ಷೇತ್ರಗಳಲ್ಲೂ ಮೂಲಸೌಕರ್ಯದ್ದೇ ಮಾತು

ಅಭಿವೃದ್ಧಿಯ ಮಂತ್ರ ವೈಯಕ್ತಿಕ ವರ್ಚಸ್ಸೇ 'ಸೂತ್ರ'

• ಆರ್. ಮಂಜುನಾಥ್

ಬೆಂಗಳೂರು: ಯಾವುದೇ ಪಕ್ಷ ರಾಜ್ಯದ ಅಧಿಕಾರ ಚುಕ್ಕಾಣಿ ಹಿಡಿಯಬೇಕಾದರೆ, ರಾಜಧಾನಿಯ 28 ಕ್ಷೇತ್ರಗಳಲ್ಲಿ ಯಾರು ಎಷ್ಟು ಸಾಧನೆ ಮಾಡುತ್ತಾರೆ ಎಂಬುದೇ ನಿರ್ಣಾಯಕ. ಧರ್ಮ, ಜಾತಿಯಂತಹ ಸಂಗತಿಗಳು ಇಲ್ಲಿನ ಮತದಾರರ ಮೇಲೆ ಪ್ರಭಾವ ಬೀರುವುದು ಕಡಿಮೆ. ಇಲ್ಲಿನ ಮತ ರಾಜಕಾರಣಕ್ಕೆ ಅಭಿವೃದ್ಧಿಯ ಮಂತ್ರವೇ ಮೂಲವಾಗಿದ್ದರೂ, ಪಕ್ಷ ಹಾಗೂ ಅಭ್ಯರ್ಥಿಯ ವೈಯಕ್ತಿಕ ವರ್ಚಸ್ಸೇ ಗೆಲುವಿನ ದಡ ಮುಟ್ಟಿಸುತ್ತದೆ. ಹೀಗಾಗಿಯೇ ಕಳೆದ ಮೂರು ಚುನಾವಣೆಗಳಲ್ಲಿ 'ಹ್ಯಾಟ್ರಿಕ್' ಗೆಲುವು ಗಳಿಸಿರುವ ಶಾಸಕರೇ ಇಲ್ಲಿ ಹೆಚ್ಚಿದ್ದಾರೆ.

ಕಳೆದ ಮೂರು ಚುನಾವಣೆಗಳಿಂದಲೂ ಕಾಂಗ್ರೆಸ್ ಹಾಗೂ ಬಿಜೆಪಿ ಜಿದ್ದಾಜಿದ್ದಿ ಹೋರಾಟ ನಡೆಸುತ್ತಿವೆ. 2008ರಲ್ಲಿ ಬಿಜೆಪಿ 17 ಸ್ಥಾನ ಗೆದ್ದಿತ್ತು. ನಂತರದ ಎರಡು ಚುನಾವಣೆಗಳಲ್ಲಿ ಎರಡು – ಮೂರು ಸ್ಥಾನಗಳ ಅಂತರದಲ್ಲಿಯೇ ಎರಡೂ ರಾಷ್ಟ್ರೀಯ ಪಕ್ಷಗಳು ತಮ್ಮ ಗೆಲುವಿನ ಸಂಖ್ಯೆಯನ್ನು ಕಾಯ್ದಿರಿಸಿಕೊಳ್ಳುತ್ತಿವೆ. ಜೆಡಿಎಸ್ ಒಂದು ಅಥವಾ ಎರಡು ಸ್ಥಾನದ ಆಚೆಗೆ ಸಾಧನೆಯನ್ನೇ ಮಾಡಿಲ್ಲ. 'ಮಣ್ಣಿನ ಮಕ್ಕಳ ಪಕ್ಷ' ನಗರವಾಸಿಗಳಿಗೆ ಯಾಕೋ ಹಿತಕರವಾಗಿಲ್ಲ.

2008ರಲ್ಲಿ ಕ್ಷೇತ್ರ ಮರುವಿಂಗಡಣೆಯಾದ ನಂತರ ನೂರಾರು ಗ್ರಾಮಗಳು ನಗರ ವ್ಯಾಪ್ತಿಗೆ ಸೇರಿಕೊಂಡವು. ಮೂಲಸೌಕರ್ಯವನ್ನು ಮೂಲದಿಂದಲೇ ಆರಂಭಿಸಬೇಕಾದ ಅನಿವಾರ್ಯ ಇತ್ತು. ಅಂದಿನಿಂದಲೂ ಮೂಲಸೌಕರ್ಯ, ಅಭಿವೃದ್ಧಿ ಕಾಮಗಾರಿಗಳೇ ಚುನಾವಣಾ ರಾಜಕಾರಣವಾಗಿ ಆದ್ಯತೆ ಪಡೆದವು. ರಸ್ತೆ, ಚರಂಡಿ, ನೀರು, ಒಳಚರಂಡಿ, ಸುಗಮ ಸಂಚಾರ, ಸಾರ್ವಜನಿಕ ಸಾರಿಗೆ... ಎಲ್ಲವೂ ನಗರದ ಪ್ರಮುಖ ಆದ್ಯತೆಗಳಾದವು. ದಶಕಗಳಿಂದ ಇಂದಿಗೂ ಇವೇ ಜನರನ್ನು ಕಾಡುವ ಸಮಸ್ಯೆಯಾಗಿ ಮುಂದುವರಿದಿವೆ. ಯೋಜನಾಬದ್ಧವಾಗಿ ನಗರ ಬೆಳೆಯದೇ ಹೋಗಿದ್ದರಿಂದ ಹಾಗೂ ಆಳುವ ಸರ್ಕಾರಗಳು ಜನರ ಬೇಡಿಕೆಗಳನ್ನು ಈಡೇರಿಸಲು ಕಾಲಮಿತಿಯಲ್ಲಿ ಯೋಜನೆ ರೂಪಿಸದೇ, ಅನುದಾನವನ್ನೂ ನೀಡದೇ ಇರುವುದರಿಂದ ತೊಂದರೆಗಳು ಬಗೆಹರಿಯುತ್ತಲೇ ಇಲ್ಲ. ಪ್ರತಿ ವಿಧಾನಸಭೆ ಚುನಾವಣೆಯಲ್ಲೂ ಇವುಗಳೇ ಪ್ರಮುಖ ವಿಷಯಗಳಾಗುತ್ತಿವೆ. ಅವುಗಳನ್ನು ಮುಂದು ಮಾಡಿ, ಗೆದ್ದರೆ ಪರಿಹರಿಸುವ ಭರವಸೆ ನೀಡಿ ಗೆಲುವಿನ ದಡ ಹತ್ತುತ್ತಿದ್ದಾರೆ ರಾಜಕಾರಣಿಗಳು.

ಬೆಂಗಳೂರಿನ ಇಂದಿನ ಪ್ರತಿಷ್ಠಿತ ಜಯನಗರ, ಜೆ.ಪಿ. ನಗರ ಬಿಡಿಎ ಬಡಾವಣೆಗಳಲ್ಲಿ ಜನರು ನಿವೇಶನಗಳನ್ನು ಖರೀದಿಸದೇ ಖಾಲಿ ಉಳಿದಿದ್ದವು. 2000ನೇ ಇಸವಿಯ ಆಸುಪಾಸಿನಲ್ಲಿ ಅವುಗಳನ್ನು ಮಾರಾಟ ಮಾಡಲು ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಹಲವು ಯೋಜನೆ ಮಾಡಿದ್ದರು. ನಂತರ ಬೆಳೆದ ರಿಯಲ್ ಎಸ್ಟೇಟ್ ಉದ್ಯಮ ಬೆಂಗಳೂರಿನಾದ್ಯಂತ ವ್ಯಾಪಿಸಿದೆ. ಆದರೆ, ಮೂಲಸೌಕರ್ಯಗಳು ಸಿಕ್ಕಿಲ್ಲ. ಇದಕ್ಕೆ ಕಾರಣ ಯೋಜನಾಬದ್ಧವಾಗಿ ಅನುಷ್ಠಾನವಾಗದ ಬಡಾವಣೆಗಳು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಂತೆ ಸರ್ಕಾರಿ ಇಲಾಖೆಗಳು ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲೇ ಇಂದು ಸಾಕಷ್ಟು ಸಮಸ್ಯೆಗಳು ತಲೆದೋರಿವೆ. ಕೆರೆ, ರಾಜಕಾಲುವೆ ಒತ್ತುವರಿಯಂತಹ ಸಮಸ್ಯೆಗಳೂ ಯಥೇಚ್ಛವಾಗಿವೆ. ಚುನಾವಣೆಯಲ್ಲಿ ಇವೆಲ್ಲವೂ ಇಂದಿಗೂ ಪ್ರಮುಖ ಭರವಸೆ, ಚರ್ಚಾ ವಿಷಯಯಾಗಿವೆ. 'ಮಾಸ್ಟರ್ ಪ್ಲಾನ್' ಚುನಾವಣೆ ಕಣದಲ್ಲಿ ರಂಗೇರುತ್ತದೆ.

ಮುಖ್ಯಮಂತ್ರಿಯೇ ಉಸ್ತುವಾರಿ: 1999ರಿಂದ ಒಂದು ಅವಧಿ ಬಿಟ್ಟರೆ ರಾಜಧಾನಿ ಬೆಂಗಳೂರನ್ನು ಮುಖ್ಯಮಂತ್ರಿಯಾದವರು ತಮ್ಮ ಉಸ್ತುವಾರಿಯಲ್ಲೇ ಇಟ್ಟುಕೊಂಡು ಬಂದಿದ್ದಾರೆ. ಇದು ಒಂದು ರೀತಿಯಲ್ಲಿ ಒಳಿತನ್ನು ಮಾಡಿದ್ದರೂ, ತುರ್ತು ಜಾರಿ ಯೋಜನೆಗಳಲ್ಲಿ ಸಾಕಷ್ಟು ಹಿನ್ನಡೆಯೂ ಆಗಿದೆ. ಪ್ರತಿ ಜಿಲ್ಲೆಗೆ ಸಚಿವರನ್ನು ಉಸ್ತುವಾರಿ ಮಾಡಿದಾಗ ಅಲ್ಲಿ ಅವರದ್ದೇ ಪ್ರಮುಖ ಪಾತ್ರ. ಅಭಿವೃದ್ಧಿ ಯೋಜನೆಗಳಿಗೆ ನಿರ್ಧಾರವೂ ಅಲ್ಲೇ ಆಗುತ್ತದೆ. ಆದರೆ, ಬೆಂಗಳೂರಿನಲ್ಲಿ ಗೆದ್ದವರಲ್ಲಿ ನಾಲ್ಕಾರು ಮಂದಿ ಸಚಿವರಾಗುತ್ತಾರೆ. ಮುಖ್ಯಮಂತ್ರಿ ಸೇರಿದಂತೆ ಇವರೆಲ್ಲ ಅಭಿವೃದ್ಧಿಗೆ ಪಾಲುದಾರರು. ಹಲವು 'ಶಕ್ತಿ ಪೀಠ'ಗಳ ರಚನೆಯಾಗುವುದರಿಂದ ನಿರೀಕ್ಷಿತ ಮಟ್ಟದಲ್ಲಿ ಮೂಲಸೌಕರ್ಯಗಳು ವೇಗ ಪಡೆಯದಿರುವುದು ನಗರವನ್ನು ನೋಡಿದರೆ ಅರಿವಾಗುತ್ತದೆ.

ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ನಗರಾಭಿವೃದ್ಧಿ ಇಲಾಖೆಯಿಂದ ಬೆಂಗಳೂರು ನಗರವನ್ನು ಬೇರ್ಪಡಿಸಿ, ಅದನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡರು. ಸಿಂಗಪುರ ಮಾಡುವ ಕನಸು ಕಂಡಿದ್ದ ಅವರು ನಗರಕ್ಕಾಗಿಯೇ ಕಾರ್ಯಪಡೆ ರಚಿಸಿದ್ದರು. ಇದಾದ ನಂತರದಲ್ಲೂ ಎಲ್ಲ ಮುಖ್ಯಮಂತ್ರಿಯವರು ನಗರವನ್ನು ತಮ್ಮ ತೆಕ್ಕೆಯಲ್ಲೇ ಉಳಿಸಿಕೊಂಡರು. ಸಿದ್ದರಾಮಯ್ಯ ಮುಖ್ಯಮಂತ್ರಿಯಾದಾಗ ಬೆಂಗಳೂರು ಅಭಿವೃದ್ಧಿ ಸಚಿವ ಎಂಬ ಹೊಸ ಸ್ಥಾನ ಸೃಷ್ಟಿಸಿ, ಕೆ.ಜೆ. ಜಾರ್ಜ್ ಅವರಿಗೆ ಉಸ್ತುವಾರಿ ವಹಿಸಿದ್ದರು. ಇದೆಲ್ಲ ಏನೇ ಇದ್ದರೂ ಹಣಕಾಸು, ಆರ್ಥಿಕ ಇಲಾಖೆಯಿಂದಲೇ ಬರಬೇಕು.

2006ರಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿ ಬಿಟ್ಟರೆ, ಉಳಿದವರ ಕಾಲದಲ್ಲಿ ಮುಖ್ಯಮಂತ್ರಿ ಬಳಿಯೇ ಹಣಕಾಸು ಖಾತೆಯೂ ಇತ್ತು. ಹೀಗಾಗಿ, ಬೆಂಗಳೂರಿನ ಅಭಿವೃದ್ಧಿಗೆ ಮುಖ್ಯಮಂತ್ರಿಯವರೇ ಅಸ್ತು ಎನ್ನಬೇಕು. 2018ರಲ್ಲಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ, ಬೆಂಗಳೂರು ಉಸ್ತುವಾರಿ ಮುಖ್ಯಮಂತ್ರಿಯಾದವರ ಬಳಿಯೇ ಇದೆ. ರಾಜ್ಯದ ಜವಾಬ್ದಾರಿ ಹೊಂದಿರುವ ಮುಖ್ಯಮಂತ್ರಿಯವರು ನಗರದಲ್ಲಿ 'ಐಕಾನಿಕ್ ಡೆವೆಲಪ್‌ಮೆಂಟ್' ಮಾಡಬೇಕಾದರೆ ಸಾಕಷ್ಟು ಸಮಯ ನೀಡಬೇಕು. ಬಿಬಿಎಂಪಿ, ಬಿಡಿಎ, ಜಲಮಂಡಳಿಗಳ ಪಾತ್ರವನ್ನು ಜವಾಬ್ದಾರಿಯುತಗೊಳಿಸಬೇಕು. ಇವೆಲ್ಲವೂ ಚುನಾವಣಾ ರಾಜಕಾರಣ ಮಾತು, ಭರವಸೆಗಳಾಗಿವೆ ಇಂದಿಗೂ ಇವೆ.

ಎಚ್.ಡಿ. ದೇವೇಗೌಡ ಮುಖ್ಯಮಂತ್ರಿಯಾಗಿದ್ದಾಗ ನಗರದ ಪ್ರಥಮ ಮೇಲ್ಸೇತುವೆಯಿಂದ (ಸಿರ್ಸಿ ವೃತ್ತ) ಹಿಡಿದು, ಎಸ್.ಎಂ. ಕೃಷ್ಣ ಅವರ ಎಲೆಕ್ಟ್ರಾನಿಕ್ ಸಿಟಿ, ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಅವರ ಕಾಲದ 'ನಮ್ಮ ಮೆಟ್ರೊ', ಬೃಹತ್ ಮೇಲ್ಸೇತುವೆಗಳು ಸೇರಿದಂತೆ ಅಭಿವೃದ್ಧಿ ಕಾಮಗಾರಿಗಳಿಗೇ ಹೆಚ್ಚಿನ ಮಣೆ ಹಾಕಲಾಗುತ್ತಿದೆ. ಆದರೂ ನಗರಕ್ಕೆ ಇದೆಲ್ಲ ಸಾಲುತ್ತಿಲ್ಲ. ಅದಕ್ಕೇ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ನೀಡುವ ಮಾತುಗಳು ವಿಧಾನಸಭೆ ಚುನಾವಣೆಗಳಲ್ಲಿ ಎಂದಿಗೂ ಕೇಳಿಬರುತ್ತಲೇ ಇವೆ.

ಅಭಿವೃದ್ಧಿ ಕಾಮಗಾರಿಗಳ ಮಂತ್ರ ಒಂದೆಡೆಯಾದರೆ, ಪಕ್ಷ ಹಾಗೂ ವೈಯಕ್ತಿಕ ವರ್ಚಸ್ಸು ನಗರದ 28 ವಿಧಾನಸಭೆ ಕ್ಷೇತ್ರಗಳಲ್ಲಿ ಹೆಚ್ಚಿದೆ. 2018ರಿಂದ ಸುಮಾರು 18 ಕ್ಷೇತ್ರಗಳಲ್ಲಿ ಮೂರು ಬಾರಿ ಒಂದೇ ಅಭ್ಯರ್ಥಿ ಗೆಲುವು ಸಾಧಿಸಿರುವುದು ವೈಯಕ್ತಿಕ ವರ್ಚಸ್ಸನ್ನು ಸಾಬೀತುಪಡಿಸುತ್ತದೆ. ಕೆಲವು ಬಾರಿ ಪಕ್ಷವನ್ನೂ ಮರೆತು ವ್ಯಕ್ತಿಗೆ ಮತದಾರ ಮಣೆ ಹಾಕಿದ್ದಾನೆ. ಬೆಂಗಳೂರು ಅಭಿವೃದ್ಧಿಗೆ ಇನ್ನೂ ಹಣ ಬೇಕೇ? ಕಾಮಗಾರಿಗಳು ಬೇಕೇ ಎಂಬ ಬಗ್ಗೆ ಸಾಕಷ್ಟು ಪ್ರಶ್ನೆಗಳಿವೆ. ರಾಜ್ಯದ ಭಂಡಾರ ತುಂಬುವಲ್ಲಿ ಮುಕ್ಕಾಲು ಪಾಲು ಹೊಂದಿರುವ ಬೆಂಗಳೂರಿನಲ್ಲಿ, ಒಂದು ಬಾರಿ ಸಂಚರಿಸಿದರೆ, ಅತಿ ಮಳೆಯಲ್ಲಾಗುವ ಸಮಸ್ಯೆಗಳನ್ನು ಅನುಭವಿಸಿದರೆ ರಾಜಧಾನಿ ಇನ್ನೂ ಅಭಿವೃದ್ಧಿ ಆಗಬೇಕು ಎಂಬುದು ಮನದಟ್ಟಾಗುತ್ತದೆ. ಅದಕ್ಕೇ ಇಂದಿಗೂ 'ಅಭಿವೃದ್ಧಿ ಕಾಮಗಾರಿಗಳ ಮಂತ್ರವೇ' ಚುನಾವಣೆ ರಾಜಕಾರಣವಾಗಿ ಮುಂದುವರಿದಿದೆ.

ಬೆಂಗಳೂರಿನವರು ಸಿಎಂ ಆಗಿಲ್ಲ

ರಾಜ್ಯ ಸರ್ಕಾರ ರಚನೆಯಲ್ಲಿ ನಗರದ 28 ಕ್ಷೇತ್ರಗಳ ಫಲಿತಾಂಶ ಪಕ್ಷಗಳಿಗೆ ಪ್ರಮುಖವಾಗಿದ್ದರೂ, ಈವರೆಗೆ ಈ ಕ್ಷೇತ್ರಗಳಲ್ಲಿ ಗೆದ್ದವರು ಮುಖ್ಯಮಂತ್ರಿಯಾಗಿಲ್ಲ. ಪ್ರಥಮ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯ ಅವರು ಬೆಂಗಳೂರು ಜಿಲ್ಲೆಗೆ ಸೇರಿದ್ದವರು ಎಂಬ ಖ್ಯಾತಿ ಬಿಟ್ಟರೆ ನಂತರ ಇನ್ಯಾರು ಆ ಪದವಿಗೇರಿಲ್ಲ. ಹನುಮಂತಯ್ಯ ಅವರು 1952 ಗೆದ್ದಿದ್ದ ರಾಮನಗರ ವಿಧಾನಸಭೆ ಕ್ಷೇತ್ರ ಅಂದಿನ ಮೈಸೂರು ರಾಜ್ಯದಲ್ಲಿ ಬೆಂಗಳೂರು ಜಿಲ್ಲೆಯ ಭಾಗವಾಗಿತ್ತು. ಇದು ಬಿಟ್ಟರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರಾಮನಗರ ಇದ್ದಾಗ ಎಚ್.ಡಿ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದರು.



ಮತದಾನ ಪ್ರಮಾಣ ಕಡಿಮೆ!

ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಬೆಂಗಳೂರಿನ 28 ವಿಧಾನಸಭೆ ಕ್ಷೇತ್ರಗಳಲ್ಲಿ ಮತದಾನ ಪ್ರಮಾಣ ಕಡಿಮೆ. ರಾಜ್ಯ ಚುನಾವಣಾ ಆಯೋಗ, ಬಿಬಿಎಂಪಿ, ಜಿಲ್ಲಾಡಳಿತ ಸಾಕಷ್ಟು ಪ್ರಯಾಸಪಡುತ್ತಿದ್ದರೂ, ಸುಶಿಕ್ಷಿತ ನಾಗರಿಕರು ಮತದಾನದಿಂದ ಹೊರಗುಳಿಯುತ್ತಿದ್ದಾರೆ. ಹೀಗಾಗಿಯೇ, ಕಳೆದ ಬಾರಿ 90 ಲಕ್ಷ ಮತದಾರರಲ್ಲಿ 49 ಲಕ್ಷ ಮಂದಿ ಮಾತ್ರ ಮತದಾನದ ಹಕ್ಕು ಚಲಾಯಿಸಿದ್ದಾರೆ. ಈ ಬಾರಿ ಇನ್ನೂ ಆರು ಲಕ್ಷ ಮತದಾರರು ಹೆಚ್ಚಾಗಿದ್ದಾರೆ.

ಮತದಾನ ಪ್ರಮಾಣ ಕಡಿಮೆಯಾಗುವುದಕ್ಕೆ ಸಾಕಷ್ಟು ಕಾರಣಗಳಿವೆ. ಮತದಾನದ ದಿನ ರಜೆ ಸಿಗುವ ಸಂದರ್ಭದಲ್ಲಿ ಹಲವರು ಪಿಕ್‌ನಿಕ್‌ಗೆ ಹೋಗುತ್ತಾರೆ. ಕೆಲವರಿಗೆ ಮತದಾನದಲ್ಲಿ ಆಸಕ್ತಿಯೇ ಇರುವುದಿಲ್ಲ ಎಂಬ ಹಲವು ಕಾರಣಗಳು ಬಹಿರಂಗವಾಗಿವೆ. ಇದಲ್ಲದೆ, ನಗರಕ್ಕೆ ಉದ್ಯೋಗವನ್ನರಸಿ ರಾಜ್ಯದ ಹಲವು ಪ್ರದೇಶಗಳೂ ಸೇರಿದಂತೆ ದೇಶದ ನಾನಾ ರಾಜ್ಯಗಳಿಂದ ಬಂದ ಜನರು ಇಲ್ಲಿ ನೆಲೆಸಿದ್ದಾರೆ. ಬಹುತೇಕರು ಇಲ್ಲೂ ಮತದಾರರ ಚೀಟಿ ಹೊಂದಿದ್ದಾರೆ. ರಾಜ್ಯ ವಿವಿಧ ಗ್ರಾಮಗಳಿಂದ ಬಂದವರಿಗೆ ಇಲ್ಲಿಗಿಂತಲೂ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮತ ಚಲಾಯಿಸುವುದೇ ಆದ್ಯತೆ. ಅವರು ಎರಡೆರಡು ಕಡೆ ಮತದಾರರ ಗುರುತಿನ ಚೀಟಿ ಹೊಂದಿರುತ್ತಾರೆ. ಹೀಗಾಗಿ ಒಟ್ಟಾರೆ ಮತ ಪ್ರಮಾಣ ಕುಸಿತವಾಗುತ್ತಿದೆ.

ಈ ಬಾರಿ ಮತದಾನ ಪ್ರಮಾಣ ಹೆಚ್ಚಿಸಲು ಪಣ ತೊಟ್ಟಿರುವ ಜಿಲ್ಲಾ ಆಡಳಿತ, ಜಿಲ್ಲಾ ಚುನಾವಣಾಧಿಕಾರಿ ಹಾಗೂ ರಾಜ್ಯ ಚುನಾವಣೆ ಆಯೋಗ ಶೇ 75ರಷ್ಟು ಮತದಾನದ ಗಡಿ ಮುಟ್ಟುವ ಗುರಿ ಹೊಂದಿದೆ. ಆದ್ದರಿಂದಲೇ ಈ ಬಾರಿ ಶೇ 75ರಷ್ಟು ಮತದಾನದ ಗಡಿಯನ್ನು ಮುಟ್ಟಬೇಕು ಎಂಬ ಗುರಿಯನ್ನು ಜಿಲ್ಲಾ ಆಡಳಿತ, ಜಿಲ್ಲಾ ಚುನಾವಣಾಧಿಕಾರಿ ಹಾಗೂ ರಾಜ್ಯ ಚುನಾವಣೆ ಆಯೋಗ ಹೊಂದಿದೆ.

2018ರಲ್ಲಿ ಮತದಾನದ ಪ್ರಮಾಣ

ಚುನಾವಣಾ ಜಿಲ್ಲೆಗಳು (ತಲಾ 7 ಕ್ಷೇತ್ರ)	ಒಟ್ಟು ಮತದಾರರು	ಮತದಾನ ಮಾಡಿದವರು	ಶೇಕಡ
ಬೆಂಗಳೂರು ನಗರ	31,82,418	18,23,899	57.31
ಬೆಂಗಳೂರು ಉತ್ತರ	20,63,196	11,24,718	54.51
ಬೆಂಗಳೂರು ಕೇಂದ್ರ	17,73,048	9,80,668	55.31
ಬೆಂಗಳೂರು ದಕ್ಷಿಣ	20,17,753	10,51,317	52.10
ಒಟ್ಟು	90,36,415	49,80,602	55.12
2013ರಲ್ಲಿ 57.82			



ಬೆಂಗಳೂರಿನ ಮಹದೇವಪುರದಲ್ಲಿ ನಡೆಯುತ್ತಿರುವ ಮೆಟ್ರೊ ಕಾಮಗಾರಿ ದೃಶ್ಯ – ಪ್ರಜಾವಾಣಿ ಚಿತ್ರ

ರಾಹುಲ್ 'ಪುರ' ಸಂಚಾರ

ವಿಜಯಪುರದಲ್ಲಿ ವಿಧಾನಸಭೆ ಚುನಾವಣೆ ಅಂಗವಾಗಿ ಭಾನುವಾರ ಸಂಜೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ರೋಡ್ ಶೋ ನಡೆಸಿದರು

ಆಸ್ಪತ್ರೆಯಲ್ಲೇ ಕಾರ್ಯತಂತ್ರ ರೂಪಿಸುತ್ತಿರುವ ಎಚ್‌ಡಿಕೆ

ಬೆಂಗಳೂರು: ಜ್ವರದ ಕಾರಣದಿಂದ ಆಸ್ಪತ್ರೆಗೆ ದಾಖಲಾಗಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಚಿಕಿತ್ಸೆಯ ಮಧ್ಯದಲ್ಲೇ ಚುನಾವಣಾ ಪ್ರಚಾರದ ಕಾರ್ಯತಂತ್ರ ರೂಪಿಸುತ್ತಿದ್ದಾರೆ. ನಗರದ ಮಣಿಪಾಲ್ ಆಸ್ಪತ್ರೆಗೆ ಶನಿವಾರ ದಾಖಲಾಗಿರುವ ಕುಮಾರಸ್ವಾಮಿ, ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾನುವಾರ ತಮ್ಮ ಸಿಬ್ಬಂದಿಯನ್ನು ಆಸ್ಪತ್ರೆಗೆ ಕರೆಸಿಕೊಂಡು ಚುನಾವಣಾ ಪ್ರಚಾರದ ಪ್ರವಾಸ ವೇಳಾಪಟ್ಟಿ ಕುರಿತು ಚರ್ಚಿಸಿದ್ದಾರೆ. ಇದೇ 28ರಿಂದ ಬೀದರ್ ಭಾಗದಿಂದ ಪ್ರವಾಸ ಆರಂಭಿಸುವ ಬಗ್ಗೆಯೂ ತಾತ್ಕಾಲಿಕ ವೇಳಾಪಟ್ಟಿಯನ್ನು ಸಿಬ್ಬಂದಿಗೆ ನೀಡಿದ್ದಾರೆ.

'ಚುನಾವಣೆಯ ಒತ್ತಡ ಇರುವುದರಿಂದ ಕುಮಾರಸ್ವಾಮಿ ಅವರು ಆಸ್ಪತ್ರೆಯಿಂದಲೂ ಕೆಲಸ ಮಾಡುತ್ತಿದ್ದಾರೆ. ಅಲ್ಲಿಂದಲೇ ಪಕ್ಷದ ನಾಯಕರು ಮತ್ತು ಅಭ್ಯರ್ಥಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದಾರೆ. ಚುನಾವಣಾ ಪ್ರಚಾರ ಮತ್ತು ಮತದಾರರನ್ನು ಸೆಳೆಯುವ ಕುರಿತು ಆಸ್ಪತ್ರೆಯಿಂದಲೇ ಮಾರ್ಗದರ್ಶನ ನೀಡುತ್ತಿದ್ದಾರೆ' ಎಂದು ಅವರ ಸಿಬ್ಬಂದಿ ತಿಳಿಸಿದ್ದಾರೆ.

ಮಂಡ್ಯ ಜೆಡಿಎಸ್ ಬಂಡಾಯ: ಸಂಧಾನ ವಿಫಲ

ಮಂಡ್ಯ: ಜೆಡಿಎಸ್ ಬಂಡಾಯ ಅಭ್ಯರ್ಥಿಗಳ ಮನವೊಲಿಸಲು ಎಚ್.ಡಿ.ದೇವೇಗೌಡ ಅವರ ಮಗ ಎಚ್.ಡಿ. ರಮೇಶ್ ಅವರು ಭಾನುವಾರ ನಡೆಸಿದ ಸಂಧಾನ ವಿಫಲವಾಯಿತು.

ಮಂಡ್ಯ ಕ್ಷೇತ್ರಕ್ಕೆ ಟಿಕೆಟ್ ಘೋಷಿಸಿ ಅಂತಿಮವಾಗಿ ಮನ್‌ಮುಲ್ ಅಧ್ಯಕ್ಷ ಬಿ.ಆರ್. ರಾಮಚಂದ್ರ ಅವರಿಗೆ 'ಬಿ' ಫಾರಂ ನೀಡಿದ್ದಕ್ಕೆ ಎಂ. ಶ್ರೀನಿವಾಸ್ ಅವರು ತಮ್ಮ ಶಾಸಕ ಸ್ಥಾನ ಹಾಗೂ ಪಕ್ಷಕ್ಕೆ ರಾಜೀನಾಮೆ ಘೋಷಿಸಿದ್ದಾರೆ. ಅವರ ಮೂವರು ಬೆಂಬಲಿಗರು ಬಂಡಾಯ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದು 'ಸ್ವಾಭಿಮಾನಿ ಪಡೆ' ಹೆಸರಿನಲ್ಲಿ ಪ್ರಚಾರ ಕೈಗೊಂಡಿದ್ದಾರೆ. ಬಂಡಾಯ ಶಮನ ಮಾಡಲು ಎಚ್.ಡಿ.ರಮೇಶ್ ಅವರು ಶ್ರೀನಿವಾಸ್ ಮನೆಗೆ ಭೇಟಿ ನೀಡಿ, ಪಕ್ಷದ ನಿರ್ಧಾರಕ್ಕೆ ಬೆಲೆ ಕೊಟ್ಟು ಅಭ್ಯರ್ಥಿ ಗೆಲುವಿಗೆ ಸಹಕರಿಸುವಂತೆ ಕೋರಿದರು.

ಇದನ್ನು ನಿರಾಕರಿಸಿದ ಶ್ರೀನಿವಾಸ್ 'ನಮ್ಮ ಮೂವರು ಬೆಂಬಲಿಗರಲ್ಲಿ ಒಬ್ಬರು ಕಣದಲ್ಲಿ ಉಳಿಯಲಿದ್ದಾರೆ. ಸೋಮವಾರ ಬೆಳಿಗ್ಗೆ ನಿರ್ಧಾರ ಕೈಗೊಂಡು ಚುನಾವಣೆಗೆ ಹೋಗುವುದು ನಿಶ್ಚಿತ' ಎಂದು ಸ್ಪಷ್ಟವಾಗಿ ಹೇಳಿದರು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಕೆ.ಟಿ. ಶ್ರೀಕಂಠೇಗೌಡ ಅವರು ಎಚ್.ಡಿ. ದೇವೇಗೌಡರಿಗೆ ಕರೆ ಮಾಡಿ ಶ್ರೀನಿವಾಸ್ ಅವರಿಗೆ ಮೊಬೈಲ್ ಫೋನ್ ಕೊಟ್ಟರು. 'ಕ್ಷಮಿಸಿ ಅಪ್ಪಾಜಿ, ನಮ್ಮ ಮರ್ಯಾದೆ ಹೋಗಿದೆ, ಚುನಾವಣೆ ನಡೆಸುತ್ತೇವೆ' ಎಂದು ಹೇಳಿ ಕರೆ ಸ್ಥಗಿತಗೊಳಿಸಿದರು.

ಸೆಲೆಬ್ರಿಟಿ ಮಾತು

ಮತದಾನದಿಂದ ದೇಶದ ಅಭಿವೃದ್ಧಿ

ಜ್ಯೋತಿ ಸಣ್ಣಕ್ಕಿ, ರಾಷ್ಟ್ರೀಯ ಪ್ಯಾರಾಶೂಟರ್

ಮತದಾನ ನಮ್ಮ ಮೂಲಭೂತವಾದ ಹಕ್ಕು. ನಮ್ಮೆಲ್ಲರ ಮತದಿಂದ ದೇಶದ ಅಭಿವೃದ್ಧಿಗೆ ದಾರಿಯಾಗುತ್ತದೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಮನೆಯಿಂದಲೇ ಮತದಾನ ಮಾಡುವ ಅವಕಾಶವನ್ನು ಚುನಾವಣಾ ಅಯೋಗವು ಕಲ್ಪಿಸಿದೆ. ಈ ಅವಕಾಶವನ್ನು ಬಳಸಿಕೊಂಡು ನೂರಕ್ಕೆ ನೂರು ಪ್ರಮಾಣದಲ್ಲಿ ಮತದಾನವಾಗಲು ಕೈಜೋಡಿಸಿ. ಯಾರೂ ತಮ್ಮ ಮತವನ್ನು ಆಮಿಷಕ್ಕೆ ಮಾರಿಕೊಳ್ಳಬಾರದು. ಪ್ರಜಾಪ್ರಭುತ್ವದ ಉತ್ತಮ ವ್ಯವಸ್ಥೆಗೆ, ದೇಶದ ಅಭಿವೃದ್ಧಿಗೆ ಮತದಾನ ಮಾಡುವುದು ಬಹುಮುಖ್ಯ.

ಪ್ರಜಾ ಪತ್ರ

ಭರವಸೆ ಈಡೇರಿಸುವ ಬದ್ಧತೆ ಇರಲಿ

ಪ್ರಜಾಪ್ರಭುತ್ವದ ಹಬ್ಬದಲ್ಲಿ ಮತದಾನವು ಶ್ರೇಷ್ಠ ಹಾಗೂ ಅಮೂಲ್ಯವಾದ ಹಕ್ಕು. ಅಧಿಕ ಮತ ಪಡೆದು ನಾಯಕನಾಗುವವನು, ಕೊಟ್ಟಿರುವ ಭರವಸೆಗಳನ್ನು ಪ್ರಾಮಾಣಿಕವಾಗಿ ಈಡೇರಿಸಲಿ. ಎಲ್ಲಿಯೂ, ಯಾವ ಸಂದರ್ಭದಲ್ಲಿಯೂ ಮತದಾರರನ್ನು ದ್ವೇಷಿಸುವ, ಜಾತೀಯತೆ ಮತ್ತು ಅರಾಜಕತೆಯನ್ನು ಸೃಷ್ಟಿಸುವ ನಾಯಕನಾಗದಿರಲಿ. ತನ್ನ ಕ್ಷೇತ್ರದ ಮೂಲಭೂತ ಸೌಕರ್ಯಕ್ಕೆ ಹೆಚ್ಚು ಒತ್ತು ನೀಡಿ, ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿ. ಮತದಾನ ನಮ್ಮ ಹಕ್ಕಾಗಿದ್ದು, ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂಬುದು ನೆನಪಿರಲಿ.

ಮಹಾದೇವ್ ಎನ್., ಕೊಳ್ಳೇಗಾಲ

ಆಮಿಷಕ್ಕೆ ಒಳಗಾಗದೆ ಮತ ಚಲಾಯಿಸಿ

ಚುನಾವಣೆಗೆ ಸ್ಪರ್ಧಿಸುವ ವ್ಯಕ್ತಿಯು ಪ್ರಜೆಗಳ ಕಲ್ಯಾಣದ ಜತೆಗೆ ದೇಶದ ಪ್ರಗತಿ ಮತ್ತು ಒಳಿತಿಗೆ ಒತ್ತು ನೀಡಬೇಕು. ಚುನಾವಣಾ ಸಮಯದಲ್ಲಿ ಬಂಡವಾಳವನ್ನು ಹೂಡಿ, ಲಾಭ ಗಳಿಸುವ ಉದ್ದೇಶವನ್ನು ಹೊಂದಿರಬಾರದು. ಬಂಡವಾಳ ಹೂಡಿಕೆಗೆ ಬೇರೆ ಕ್ಷೇತ್ರಗಳಿವೆ. ದೇಶದ ಪ್ರಗತಿಯು ಪ್ರಜೆಗಳು ಆಯ್ಕೆ ಮಾಡುವ ವ್ಯಕ್ತಿಯಿಂದ ಎಂಬುದನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಆಮಿಷಕ್ಕೆ ಒಳಗಾಗದೆ ಮತ ಚಲಾಯಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಮತಗಟ್ಟೆಗೆ ಬಂದು ಮತ ಚಲಾಯಿಸುವವರ ಪ್ರಮಾಣ ಕಡಿಮೆಯಾಗಿದೆ. ಅದರಲ್ಲೂ ಯುವ ಸಮುದಾಯವೇ ಗೈರಾಗುತ್ತಿರುವುದು ವಿಷಾದನೀಯ. ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸಿ, ಉತ್ತಮ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕು.

ವೀಣಾ, ಹುಣಸೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಮಾತಿನೇಟು

ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಜನರ ಪ್ರೀತಿ-ವಿಶ್ವಾಸ ಹಾಗೂ ಕಾಂಗ್ರೆಸ್ ಪಕ್ಷದ ಶಕ್ತಿ ನನ್ನೊಂದಿಗೆ ಇರುವವರೆಗೆ ಯಾರಿಂದಲೂ, ಏನೂ ಮಾಡಲಾಗದು. ನನ್ನ ಚಲನವಲನಗಳ ಮೇಲೆ ಕಣ್ಣಿಡಲು ಮಹಾರಾಷ್ಟ್ರದ ನಾಗ್ಪುರದಿಂದ (ಆರ್‌ಎಸ್‌ಎಸ್ ಕೇಂದ್ರ ಕಚೇರಿ) ಬಂದಿದ್ದಾರಂತೆ. ಅಲ್ಲಿಯೇ ಇತ್ತೀಚೆಗೆ ನಡೆದ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಏಕೆ ಸೋಲು ಅನುಭವಿಸಿತು? ನನ್ನ ಮೇಲೆ ನಿಗಾ ಇಡಲು, ನಾನ್ಯಾವುದೇ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿಲ್ಲ.

ಜಗದೀಶ ಶೆಟ್ಟರ್, ಕಾಂಗ್ರೆಸ್ ಅಭ್ಯರ್ಥಿ

'ಬಂಡಾಯ' ಬೆಂಬಲಿಗರ ಹುನ್ನಾರವಂತೆ...

• ಸಿದ್ದಯ್ಯ ಹಿರೇಮಠ

ಭಾವು ಪತ್ತಾರ್

ಚಹಾದಂಗಡಿ ಚುನಾವಣಾ ಪುರಾಣ

'ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಗದೇ ನಿರಾಸೆಗೆ ಒಳಗಾಗಿರುವ ಮಾಜಿ ಶಾಸಕರು, ಹಾಲಿ ಶಾಸಕರು, ಈಗ ತಾನೇ ರಾಜಕಾರಣದಲ್ಲಿ ಕಣ್ಣು ಬಿಡುತ್ತಿರುವ ಸ್ಪರ್ಧಾಕಾಂಕ್ಷಿಗಳು ತಮ್ಮ ಪಕ್ಷದ ಮುಖಂಡರ ವಿರುದ್ಧ ಹಿಂಗ್ ಎದ್ದಾರಂತ... ಹಿಂಗ ಇದ್ದಕ್ಕಿದ್ದಂಗ ಪಕ್ಷ ಬಿಟ್ಟು ಎದ್ದು ಹೋಗುವವರನ್ನು 'ಬಂಡಾಯ ಏಳೂದು' ಅಂತಾರಂತ'.

–ಬೆಳ್ಳಂಬೆಳಿಗ್ಗೆ ಬಾಜಿ ದೊಡ್ಡೇಶಿಯ ಚಹದಂಗಡಿಯ ಕಟ್ಟೆ ಮೇಲೆ, ಚಹ ಹೀರುತ್ತ ಕುಳಿತು ಹೀಗೆ ಹರಟೆಯಲ್ಲಿ ತೊಡಗಿದ್ದವರ ನಡುವೆ ಬಂದು ಕೂತ ಬಸಣ್ಣ, ತನಗೂ ಒಂದು ಚಹ ಹೇಳುವಂತೆ ಸನ್ನೆ ಮಾಡುತ್ತಲೇ ಮಾತಿಗಿಳಿದ.

'ಸಾಲೀಗೆ ಹೋಗೌರು ಪರೀಕ್ಷೆ ಹತ್ರ ಬಂದಾಗ ಓದಾಕಂತ ಬೆಳಗೋಮುಂಜಾನೆ ಏಳ್ತಾರಲ್ಲ ಅದಕ್ಕೆ ದೌಡ ಏಳೂದು ಅಂತ ಕರೀತೀವಿ. ಇದೇನ್ಲೇಪಾ ಹೊಸಾದು, ಬಂಡಾಯ ಏಳೋದು ಅಂದ್ರ..? ಪೇಪರ್‌ನಲ್ಲಿ ಹುದುಗಿ ಹೋಗಿದ್ದ ಬಡಿಗೇರ ಮಾನಪ್ಪನ್ನ ಕೇಳಿದ. 'ನೋಡ್ ಬಸಣ್ಣಾ, ಯಾರಿಗೆ ಇಲೆಕ್ಷನ್ ನಿಂದ್ರಾಕ ಟಿಕೀಟ್ ಸಿಗೂದಿಲ್ಲಾ ಅಂಥೌರೆಲ್ಲಾ ಪಕ್ಷ ಬಿಟ್ ಹೋಗ್ತಾರಲ್ಲ.. ಅದಕ್ಕ ಬಂಡಾಯ ಏಳೂದು ಅಂತಾರ. ಹಿಂಗ ಬಂಡಾಯ ಎದ್ದೌರೆಲ್ಲಾ ಒಟ್ಟ ಯಾರ್ ಮಾತೂ ಕೇಳೂದಿಲ್ಲ. ಹೆಂಡತಿ, ಮಕ್ಕಳು, ಅಣತಮ್ಮಗೂಳು ಅಷ್ಟ ಯಾಕ, ಇಷ್ಟ್ ದಿನಾ ಅವರೇ ಹಾಡಿ ಹೊಗಳತಿದ್ರಲ್ಲ ಆ ಮುಖಂಡರು ಹೇಳೀದ್ರೂ ಸುತರಾಂ ಕಿವಿಗೆ ಹಾಕ್ಕೋಳೂದಿಲ್ಲ' ಅಂದ.

'ಮತ್ತ ಅವರು ಯಾರ ಮಾತಂತ ಕೇಳ್ತಾರೋ ಮಾನಪ್ಪಾ' ಬಸಣ್ಣ ಮಾತನ್ನು ಮುಂದುವರಿಸುವ ಭರದಲ್ಲಿ ಪ್ರಶ್ನಿಸಿದ.

'ಬಂಡಾಯಾ ಏಳೌರೆಲ್ಲಾ ಬರೇ ತಮ್ಮ ಅಭಿಮಾನಿಗಳು, ಬೆಂಬಲಿಗರ ಮಾತನ್ನ ಮಾತ್ರ ಕೇಳ್ತಾರ ನೋಡು' ಮರು ಉತ್ತರ ಬಂತು. 'ಹೌದಾ ಅದ್ಯಾಕೋ ಬಸಣ್ಣ' ಕುತೂಹಲದಿಂದ ಮತ್ತೊಂದು ಪ್ರಶ್ನೆ ಎಸೆದೇ ಬಿಟ್ಟ.

'ಟಿಕೀಟ್ ಸಿಕ್ಕಿಲ್ಲಾ ಅಂತ ನನಗ ಒಟ್ಟೊಟ್ಟ ಬೇಜಾರಾಗಿಲ್ಲಾ. ಆದ್ರ ನನ್ ಹಿಂದ ಓಡಾಡೂ ಅಭಿಮಾನಿಗಳಿಗೆ, ಬೆಂಬಲಿಗರಿಗೆ ಭಾಳ ಬ್ಯಾಸರಾಗೇತಿ. ಅವರು ಊರಾಗ ಮಕಾ ಎತ್ಕೊಂಡು ತಿರಗ್ಯಾಡಾಕೂ ಆಗವಲ್ದಂತ. ನಾನಂತೂ ಔರು ಹೇಳಿದಂಗ ಕೇಳಾಕುಂತೇನಿ.... ಸಾಹೇಬ್ರ, ಏನರ ಆಗ್ಲಿ.. ತೇಲಲಿ ಮುಳುಗ್ಲಿ ನೀವು ಎಲೆಕ್ಷನ್‌ಗೆ ನಿಲ್ಲಾಕಬೇಕು ಅಂತ ಎಲ್ಲಾರೂ ಸಲಹೆ ನೀಡ್ಯಾರ. ನಾನಂತೂ ಔರ್ ಮಾತು ಬಿಟ್ ಹಾಕಂಗಿಲ್ಲಾ ಅದಕ್ಕ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸ್ತೇನಿ ಅಂತ ಹೇಳಿ ತಾಲೂಕ್ ಕಚೇರಿ ಒಳಗ ನಾಮಪತ್ರಾ ಕೊಟ್ ಬಂದಾರೇ ನಪಾ' ಮಾನಪ್ಪ ವಿವರಣೆ ನೀಡಿದ.

'ಸಾಕ್ ಬಿಡ್ರೀ ನಿಮಗೂ ವಯಸ್ಸಾತು ಪಕ್ಷ ಈ ಸಲಾ ಬ್ಯಾರೇದೌರಿಗೆ ಟಿಕೀಟ್ ಕೊಟ್ಟೈತಿ. ಔರಿಗೇ ಸಪೋರ್ಟ್ ಮಾಡಿ ಗೆಲ್ಲೂನು ಅಂತ ಈ ಅಭಿಮಾನಿಗಳು, ಬೆಂಬಲಿಗರು ಯಾಕ ಹೇಳೂದಿಲ್ಲ ಅಂತಿನಿ. ಎಲ್ಲಾರೂ ಹಿಂಗ್ ಬಂಡೆದ್ದವರನ್ನ ಮತ್ತ ಇಲೆಕ್ಷನ್‌ಗೆ ನಿಲ್ಸಾಕ ನೋಡ್ತಾರಲ್ಲ'– ನಡಕ ಬಾಯಿ ಹಾಕಿದ ಮುಂದಿನಮನೀ ನಾಗ್ಯಾ ಕೇಳೇಬಿಟ್ಟಾ. 'ಈ ಸಲಾ ಪಕ್ಷದೌರು ಭಾಳ ಮುಂಚೇ ಆಂತರಿಕ ಸಮೀಕ್ಷೆ ಅಂತ ನಡಿಸ್ಯಾರಂತ. ಇಂಥೌರು ಮತ್ತ ಈ ಸಲಾ ಇಲೆಕ್ಷನ್‌ಗೆ ನಿಂತ್ರ ಸೋಲೂದು ಗ್ಯಾರಂಟಿ ಅಂತ ರಿಪೋರ್ಟ್ ಬಂದೈತಿ. ಅದಕ್ಕ ಹೊಸಬರಿಗೆ ಮಣೇ ಹಾಕ್ಯಾರ' ಮಾನಪ್ಪ ದನಿಗೂಡಿಸಿದ. 'ಹೌದೋ ಇಂವಾ ಏನೂ ಕ್ಯಲಸಾ ಮಾಡಿಲ್ಲಾ. ಸೋಲತಾನಾ ಅಂತ ಅಭಿಮಾನಿಗಳಿಗೂ ಗೊತ್ತೈತ್ಯಲ್ಲ. ಆದ್ರೂ ಮತ್ತ ಯಾಕ ನಿಲ್ಸಾಕ ತ್ತಾರಾ? ಬಸಣ್ಣ ಕೇಳಿದ. ಇಷ್ಟ್ ದಿನಾ ಪಕ್ಷ ಎಲ್ಲಾ ಕೊಟ್ರೂ ಇವರಿಗೆ ಸಮಾಧಾನನ ಇಲ್ಲಾ. ಜನ ಓಟ್ ಹಾಕಿ ಗೆಲ್ಸೀದ್ರೂ ಖಬರಿಲ್ಲ. ಒಂದ್ ಸ್ವಲ್ಪ್ ಕೆಲಸಾನೂ ಮಾಡಿಲ್ಲಾ ಅನ್ನೂದು ಅಭಿಮಾನಿಗಳಿಗೂ ಗೊತ್ತೈತಿ. ಇಂಥೌರು ಸಾಕಷ್ಟ್ ರೊಕ್ಕಾ ಮಾಡ್ಕೊಂಡು ಸರಳ ಸರ ಕೋಳೂದು ಯಾರಿಗೂ ಇಷ್ಟಾ ಇಲ್ಲಾ. ಮತ್ತ ಇಲೆಕ್ಷನ್‌ಗೆ ನಿಂತು ತಮ್ಮತ್ರ ಇರೋ ದುಡ್ಡರ ಖರ್ಚ್ ಮಾಡ್ಲಿ. ಒಂದ್ ಹದಿನೈದ್ ದಿನಾ ತಮ್ಮದೂ ಚೈನಿ ನಡೀಲಿ. ನೋಡೂಣು... ವಯಸ್ಸಾಗಿಂದರ ಇಂಥೌರಿಗೆ ಬುದ್ದಿ ಬರಲಿ ಅಂತ ಹುರಿದುಂಬ್ಸಿ ನಾಮಪತ್ರ ಕೊಡ್ಸ್ಯಾರ ಎಂದು ಹೇಳುತ್ತ ಮಾನಪ್ಪ ಎದ್ ಹೋದ.

ಕ್ಷೇತ್ರದ ಕೂಗು

• **ಕ್ಷೇತ್ರ: ಶಿಗ್ಗಾವಿ-ಸವಣೂರು**
• **ಶಾಸಕ: ಬಸವರಾಜ ಬೊಮ್ಮಾಯಿ (ಬಿಜೆಪಿ)**

▸ ಜಾನಪದ ವಿಶ್ವವಿದ್ಯಾಲಯ ಆರಂಭವಾಗಿ 10 ವರ್ಷ ಕಳೆದರೂ ಕಾಯಂ ಸಿಬ್ಬಂದಿ ನೇಮಕವಾಗಿಲ್ಲ ಹಾಗೂ ಹೆಚ್ಚಿನ ಅನುದಾನವಿಲ್ಲದೆ ಅಭಿವೃದ್ಧಿ ಕಾರ್ಯಗಳು ನನೆಗುದಿಗೆ ಬಿದ್ದಿವೆ. ಜಾನಪದ ಕಲಾವಿದರ ತವರೂರು ಎನಿಸಿದ ಶಿಗ್ಗಾವಿ ಪಟ್ಟಣದಲ್ಲಿ ಕಲಾಮಂದಿರ ನಿರ್ಮಾಣವಾಗಬೇಕು. ಬಂಕಾಪುರದಲ್ಲಿ ಕ್ರೀಡಾಂಗಣ ನಿರ್ಮಾಣವಾಗಬೇಕು ಹಾಗೂ ನವಿಲುಧಾಮ ಅಭಿವೃದ್ಧಿಪಡಿಸಬೇಕು.

• **ಕ್ಷೇತ್ರ: ಹಾವೇರಿ**
• **ಶಾಸಕ: ನೆಹರು ಓಲೇಕಾರ (ಬಿಜೆಪಿ)**

▸ ಜಿಲ್ಲಾ ಕೇಂದ್ರ ಹಾವೇರಿ ನಗರದಲ್ಲಿ 24x7 ಕುಡಿಯುವ ನೀರಿನ ಯೋಜನೆ ಮತ್ತು ಒಳಚರಂಡಿ ಯೋಜನೆ ನನೆಗುದಿಗೆ ಬಿದ್ದಿವೆ. ಹಾವೇರಿಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಯಾಗಬೇಕು. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

• **ಕ್ಷೇತ್ರ: ಹಿರೇಕೆರೂರು**
• **ಶಾಸಕ: ಬಿ.ಸಿ.ಪಾಟೀಲ (ಬಿಜೆಪಿ)**

▸ ನೂತನ ತಾಲ್ಲೂಕು ಕೇಂದ್ರವಾಗಿ ರಟ್ಟೀಹಳ್ಳಿ ನಾಲ್ಕು ವರ್ಷ ಪೂರೈಸಿದರೂ ಇಲ್ಲಿ ತಾಲ್ಲೂಕುಮಟ್ಟದ ಸರ್ಕಾರಿ ಕಚೇರಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲು ಕೈಗಾರಿಕಾ ವಲಯ ಸ್ಥಾಪನೆಯಾಗಬೇಕು. ಬಡವಿದ್ಯಾರ್ಥಿಗಳಿಗಾಗಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆಯ ವ್ಯಾಪ್ತಿಯ ವಸತಿ ನಿಲಯಗಳನ್ನು ಸ್ಥಾಪಿಸಬೇಕು.



• **ಕ್ಷೇತ್ರ: ರಾಣೆಬೆನ್ನೂರು**
• **ಶಾಸಕ: ಅರುಣಕುಮಾರ ಪೂಜಾರ (ಬಿಜೆಪಿ)**

▸ ತುಂಗಾ ಮೇಲ್ದಂಡೆ ಕಾಲುವೆಗೆ ಜಮೀನು ಕಳೆದುಕೊಂಡ ತಾಲ್ಲೂಕಿನ ರೈತರಿಗೆ ಭೂ ಪರಿಹಾರ ಸಿಕ್ಕಿಲ್ಲ. ನಗರದ ಸುತ್ತ ವರ್ತುಲ ರಸ್ತೆ ನಿರ್ಮಾಣವಾಗಬೇಕು. ತುಂಗಭದ್ರಾ ನದಿಗೆ ಅಡ್ಡಲಾಗಿ ಮುದೇನೂರು ಬಳಿ ಚೆಕ್ ಡ್ಯಾಂ ನಿರ್ಮಾಣ ಮಾಡಬೇಕು. 'ಮೆಕ್ಕೆಜೋಳ ಪಾರ್ಕ್' ನಿರ್ಮಾಣವಾಗಬೇಕು. ಕೃಷ್ಣಮೃಗ ಅಭಯಾರಣ್ಯ ಅಭಿವೃದ್ಧಿಪಡಿಸಬೇಕು.

• **ಕ್ಷೇತ್ರ: ಬ್ಯಾಡಗಿ**
• **ಶಾಸಕ: ವಿರೂಪಾಕ್ಷಪ್ಪ ಬಳ್ಳಾರಿ (ಬಿಜೆಪಿ)**

▸ ಬ್ಯಾಡಗಿ ಪಟ್ಟಣದ ಮುಖ್ಯರಸ್ತೆ ಕಿರಿದಾಗಿರುವ ಕಾರಣ ನಿತ್ಯ ಸಂಚಾರ ದಟ್ಟಣೆ ಉಂಟಾಗಿ, ಜನರು ರೋಸಿ ಹೋಗಿದ್ದಾರೆ. ಮುಖ್ಯರಸ್ತೆ ವಿಸ್ತರಣೆಯಾಗಬೇಕು ಎಂದು 12 ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಮೋಟೆಬೆನ್ನೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳ್ಳದ ಕಾರಣ ಸರ್ವಿಸ್ ರಸ್ತೆಯಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ.

• **ಕ್ಷೇತ್ರ: ಹಾನಗಲ್**
• **ಶಾಸಕ: ಶ್ರೀನಿವಾಸ್ ಮಾನೆ (ಕಾಂಗ್ರೆಸ್)**

▸ ಹಾನಗಲ್ ಪಟ್ಟಣದ ಮುಖ್ಯರಸ್ತೆಯನ್ನು ವಿಸ್ತರಣೆ ಮಾಡುವ ಮೂಲಕ ಅಭಿವೃದ್ಧಿಪಡಿಸಬೇಕು. ಪಟ್ಟಣಕ್ಕೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. 'ಒಂದು ಜಿಲ್ಲೆ ಹಲವು ಬೆಳೆ' ಯೋಜನೆಯಡಿ ಘೋಷಣೆಯಾದ ಮಾವು ಬೆಳೆಗೆ ಹಾನಗಲ್ ಕ್ಷೇತ್ರದಲ್ಲಿ ಪ್ರೋತ್ಸಾಹ ಮತ್ತು ಮಾವು ಸಂಸ್ಕರಣಾ ಘಟಕ ನಿರ್ಮಾಣಗೊಳ್ಳಬೇಕು.

ನಾವೀಗ ಡಿಜಿಟಲ್ ಯುಗದಲ್ಲಿದ್ದೇವೆ. ಈ ಕಾಲಮಾನಕ್ಕೆ ಹೊಂದುವಂತಹ ಕೌಶಲಯುಕ್ತ ಕೋರ್ಸ್‌ಗಳನ್ನು ಕಲಿತರೆ, ಭವಿಷ್ಯದ ವೃತ್ತಿ ಬದುಕು ಸರಾಗವಾಗಿ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ 'ಇ-ಕಾಲದ' ಕೌಶಲ ಕೋರ್ಸ್‌ಗಳನ್ನು ಪರಿಚಯಿಸುವ ಲೇಖನಗಳ ಸರಣಿ 'ಇ-ಕೋರ್ಸ್'.

ಡಿಜಿಟಲ್ ಮಾರ್ಕೆಟಿಂಗ್ ಕೋರ್ಸ್

ಸಿಬಂತಿ ಪದ್ಮನಾಭ ಕೆ. ವಿ.

ಇದು ಡಿಜಿಟಲ್ ಕಾಲ. ಮೊಬೈಲ್ ನೆಪದಿಂದ ಪ್ರಪಂಚ ಅಂಗೈಯಲ್ಲೇ ಬಂದು ಕುಳಿತಿದೆ. ದಿನನಿತ್ಯದ ಬಹುತೇಕ ವ್ಯವಹಾರಗಳು ಮೊಬೈಲ್ ಮೂಲಕವೇ ನಡೆಯುತ್ತವೆ. ಹೀಗಾಗಿ ಕಂಪನಿಗಳು ಗ್ರಾಹಕರನ್ನು ಆಕರ್ಷಿಸಲು ಅದೇ ಡಿಜಿಟಲ್ ಹಾದಿಯನ್ನು ಹಿಡಿಯದೆ ಬೇರೆ ದಾರಿ ಇಲ್ಲ. ತಮ್ಮ ಉತ್ಪನ್ನ ಹಾಗೂ ಸೇವೆಗಳನ್ನು ಅವರಿಗೆ ತಲುಪಿಸಲು ಕಂಪನಿಗಳಿಗೆ ಪತ್ರಿಕೆ, ಟಿವಿ, ರೇಡಿಯೊದಂತಹ ಮಾಧ್ಯಮಗಳು ಸಾಕಾಗುವುದಿಲ್ಲ. ಡಿಜಿಟಲ್ ಮಾರ್ಕೆಟಿಂಗ್ ಹೆಚ್ಚು ಪರಿಣಾಮಕಾರಿ ಎಂದು ಎಲ್ಲರಿಗೂ ಅರ್ಥವಾಗಿದೆ. ಆನ್‌ಲೈನ್ ಮಾರ್ಕೆಟಿಂಗ್ ಇಂದು ಹೆಚ್ಚು ವ್ಯಾಪಕವಾಗಿರುವುದರಿಂದ ಅದಕ್ಕೆ ಸಂಬಂಧಿಸಿದ ಕೋರ್ಸುಗಳನ್ನು ಮಾಡಿಕೊಳ್ಳುವುದು ಈ ಕಾಲದ ಯುವಕರಿಗೆ ಪ್ರಯೋಜನಕರ.

ಏನಿದು ಕೋರ್ಸ್?

ಇಂಟರ್ನೆಟ್ ಮಾರ್ಕೆಟಿಂಗ್, ಆನ್‌ಲೈನ್ ಮಾರ್ಕೆಟಿಂಗ್, ಡಿಜಿಟಲ್ ಮಾರ್ಕೆಟಿಂಗ್ ಎಲ್ಲವೂ ಒಂದೇ ಅರ್ಥದ ಪದಗಳು. ಮೊಬೈಲ್, ಲ್ಯಾಪ್‌ಟಾಪ್, ಡೆಸ್ಕ್‌ಟಾಪ್ ಇತ್ಯಾದಿ ಮಾಧ್ಯಮಗಳ ಮೂಲಕ ಉತ್ಪನ್ನ ಹಾಗೂ ಸೇವೆಗಳ ಜಾಹೀರಾತು ಮಾಡುವುದೇ ಡಿಜಿಟಲ್ ಮಾರ್ಕೆಟಿಂಗ್. ಇದರ ಕೌಶಲಗಳನ್ನು ಕಲಿಸಲು ಇಂದು ಹಲವಾರು ಕೋರ್ಸ್‌ಗಳು ಲಭ್ಯವಿವೆ. ಡಿಜಿಟಲ್ ಮಾರ್ಕೆಟಿಂಗ್ ಕೋರ್ಸ್‌ಗಳನ್ನು ಕಲಿತವರು ಅದೇ ಕ್ಷೇತ್ರದಲ್ಲಿ ಆಕರ್ಷಕ ವೇತನದ ಉದ್ಯೋಗಗಳನ್ನು ಪಡೆಯಬಹುದು.

ಯಾರು ಮಾಡಬಹುದು?

ಈ ಬಗೆಯ ಕೋರ್ಸ್‌ಗಳು ಆನ್‌ಲೈನ್‌ನಲ್ಲಿ ಲಭ್ಯವಿದ್ದು, ಇಂತಹದೇ ವಿದ್ಯಾರ್ಹತೆಯುಳ್ಳವರು ಮಾಡಬೇಕೆಂಬ ನಿಯಮವಿಲ್ಲ. ಪಿಯುಸಿ, ಪದವಿ ವ್ಯಾಸಂಗ ಮಾಡುತ್ತಲೇ ಇದನ್ನು ಮಾಡಬಹುದು. ಕೆಲವು ಸಂಸ್ಥೆಗಳು ಶುಲ್ಕ ಅಪೇಕ್ಷಿಸುತ್ತವಾದರೂ, ಉಚಿತವಾಗಿ ದೊರೆಯುವ ಕೋರ್ಸ್‌ಗಳು ಬೇಕಾದಷ್ಟು ಇವೆ. ಇವುಗಳಿಂದ ದೊರೆಯುವ ಕೌಶಲ ಹಾಗೂ ಪ್ರಮಾಣಪತ್ರಗಳು ಸುಲಭವಾಗಿ ಉತ್ತಮ ಉದ್ಯೋಗಗಳನ್ನು ಪಡೆಯಲು ನೆರವಾಗುತ್ತವೆ.

1 ಇ-ಕೋರ್ಸ್

ಎಲ್ಲಿ ಕೋರ್ಸ್‌ಗಳು ಲಭ್ಯ?

- 'ಫಂಡಮೆಂಟಲ್ಸ್ ಆಫ್ ಡಿಜಿಟಲ್ ಮಾರ್ಕೆಟಿಂಗ್' ಎಂಬ ಕೋರ್ಸ್‌ನ್ನು ಸ್ವತಃ ಗೂಗಲ್ ಕಂಪನಿ ಉಚಿತವಾಗಿ ನೀಡುತ್ತಿದೆ. 26 ಪಾಠಗಳನ್ನು ಹೊಂದಿರುವ 40 ಗಂಟೆಗಳ ಈ ಕೋರ್ಸ್ ಆರಂಭಿಕ ಹಂತದಲ್ಲಿರುವವರಿಗೆ ಸೂಕ್ತವಾಗಿದೆ. ಕೋರ್ಸ್ ಕುರಿತ ಮಾಹಿತಿಗೆ ಈ ಲಿಂಕ್ ಕ್ಲಿಕ್ ಮಾಡಿ: https://learndigital.withgoogle.com/
- 'ಮಾಸ್ಟರ್ ಡಿಜಿಟಲ್ ಮಾರ್ಕೆಟಿಂಗ್' ಶೀರ್ಷಿಕೆಯಡಿಯಲ್ಲಿ ಹತ್ತು ಸರಳ ಕೋರ್ಸ್‌ಗಳನ್ನು ಲಿಂಕ್ಡ್‌ಇನ್ ಒದಗಿಸುತ್ತಿದೆ. ಇವುಗಳಲ್ಲಿ ಕೆಲವು ಉಚಿತವಾಗಿಯೂ ಲಭ್ಯವಿವೆ. ವಿವರಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ: https://www.linkedin.com/learning/paths/
- ಡಿಜಿಟಲ್ ಮಾರ್ಕೆಟಿಂಗ್ ಕೌಶಲಗಳನ್ನು ಕಲಿಸುವ ಹತ್ತಾರು ಕೋರ್ಸ್‌ಗಳನ್ನು ಇನ್ಫೊಸಿಸ್ ಸ್ಪ್ರಿಂಗ್‌ಬೋರ್ಡ್ ಉಚಿತವಾಗಿ ಒದಗಿಸುತ್ತದೆ. ವಿಡಿಯೊ ಉಪನ್ಯಾಸಗಳು, ಸಿದ್ಧಪಾಠಗಳ ಮೂಲಕ ಇಲ್ಲಿ ತರಬೇತಿ ನಡೆಯುತ್ತದೆ. ವಿವರಗಳಿಗಾಗಿ ಇಲ್ಲಿ ಕ್ಲಿಕ್ ಮಾಡಿ; https://infyspringboard.onwingspan.com/web/en/
- ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಆನ್‌ಲೈನ್ ಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕಾಗಿ 'ಸ್ವಯಂ' ಎಂಬ ಜಾಲತಾಣವನ್ನು ಅಭಿವೃದ್ಧಿಪಡಿಸಿದೆ. ನೂರಾರು ಉಚಿತ ಕೋರ್ಸ್‌ಗಳ ಆಗರವೇ ಇಲ್ಲಿದೆ. ವಿವಿಧ ಡಿಜಿಟಲ್ ಮಾರ್ಕೆಟಿಂಗ್ ಕೋರ್ಸ್‌ಗಳೂ ಇದರಲ್ಲಿ ಸೇರಿವೆ. ವಿವರಗಳಿಗಾಗಿ ಇಲ್ಲಿ ನೋಡಿ: https://swayam.gov.in/

ಏನೆಲ್ಲ ಕಲಿಯಬಹುದು?

ಬೇರೆಬೇರೆ ಹಂತದ ಡಿಜಿಟಲ್ ಮಾರ್ಕೆಟಿಂಗ್ ಕೋರ್ಸ್‌ಗಳು ಲಭ್ಯವಿವೆ. ಪ್ರಾಥಮಿಕ, ಮಾಧ್ಯಮಿಕ, ಉನ್ನತ ಹಂತದ ಕೋರ್ಸ್‌ಗಳನ್ನು ತಮ್ಮ ಅವಶ್ಯಕತೆಗೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಬಹುದು. ಸರ್ಚ್ ಎಂಜಿನ್ ಆಪ್ಟಿಮೈಸೇಶನ್, ಸರ್ಚ್ ಎಂಜಿನ್ ಮಾರ್ಕೆಟಿಂಗ್, ಕಂಟೆಂಟ್ ಮಾರ್ಕೆಟಿಂಗ್, ಇನ್‌ಫ್ಲುಯೆನ್ಸರ್ ಮಾರ್ಕೆಟಿಂಗ್, ಇ-ಮೇಲ್ ಮಾರ್ಕೆಟಿಂಗ್, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಹೀಗೆ ವಿವಿಧ ಕೌಶಲಗಳನ್ನು ಕಲಿಸಿಕೊಡಲಾಗುತ್ತದೆ.

ಇಂಟರ್ನೆಟ್‌ನಲ್ಲಿ ಬೇರೆಬೇರೆ ಕಾರಣಗಳಿಗಾಗಿ ಜನರು ಏನನ್ನಾದರೂ ಹುಡುಕುತ್ತಿರುತ್ತಾರೆ. ಒಂದು ಕಂಪನಿಯ ಉತ್ಪನ್ನ, ಸೇವೆ ಅಥವಾ ವೆಬ್‌ಸೈಟ್ ಇಂತಹ ಹುಡುಕಾಟಗಳ ಸಂದರ್ಭದಲ್ಲಿ ಹೆಚ್ಚುಹೆಚ್ಚು ದೊರೆಯುವಂತೆ ಮಾಡುವುದನ್ನು ಸರ್ಚ್ ಎಂಜಿನ್ ಆಪ್ಟಿಮೈಸೇಶನ್ (ಎಸ್‌ಇಒ) ಎನ್ನುತ್ತಾರೆ. ಸರ್ಚ್ ಎಂಜಿನ್ ಮಾರ್ಕೆಟಿಂಗ್ ಇದಕ್ಕೆ ಹತ್ತಿರವಾದ ಇನ್ನೊಂದು ಕೌಶಲ. ಕಂಪನಿ ಅಥವಾ ಅದರ ಉತ್ಪನ್ನಗಳ ಬಗ್ಗೆ ಅಂತರ್ಜಾಲದಲ್ಲಿ ಸಾಕಷ್ಟು ಉಚಿತ ಮಾಹಿತಿ/ಓದಿನ ಸಾಮಗ್ರಿ ಲಭ್ಯವಾಗಿಸುವುದು, ಅವುಗಳನ್ನು ಸಿದ್ಧಪಡಿಸುವುದನ್ನು ಕಂಟೆಂಟ್ ಮಾರ್ಕೆಟಿಂಗ್ ಎನ್ನುತ್ತಾರೆ.

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್ ಇತ್ಯಾದಿ ಸೋಷಿಯಲ್ ಮೀಡಿಯಗಳಲ್ಲಿ ಈಗಾಗಲೇ ಸಾಕಷ್ಟು ಅಭಿಮಾನಿಗಳನ್ನು, ಫಾಲೋವರ್‌ಗಳನ್ನು ಹೊಂದಿರುವವರ ಮೂಲಕ ವಿವಿಧ ಉತ್ಪನ್ನಗಳನ್ನು ಜಾಹೀರು ಮಾಡಿಸುವುದನ್ನು ಇನ್‌ಫ್ಲುಯೆನ್ಸರ್ ಮಾರ್ಕೆಟಿಂಗ್ ಎನ್ನುತ್ತಾರೆ. ಈ ಕೌಶಲಗಳನ್ನೆಲ್ಲ ಡಿಜಿಟಲ್ ಮಾರ್ಕೆಟಿಂಗ್ ಕೋರ್ಸುಗಳು ಕಲಿಸಿಕೊಡುತ್ತವೆ.

ಸಿದ್ಧತೆ ಹೇಗಿರಬೇಕು?

ಡಿಜಿಟಲ್ ಮಾರ್ಕೆಟಿಂಗ್ ಕೋರ್ಸ್‌ನಲ್ಲಿ ತೊಡಗಿಸಿಕೊಳ್ಳುವವರಿಗೆ ತಕ್ಕಮಟ್ಟಿನ ಕಂಪ್ಯೂಟರ್ ಜ್ಞಾನ ಅಗತ್ಯ. ಕಂಪ್ಯೂಟರ್ ಹಾಗೂ ಇಂಟರ್ನೆಟ್ ಬಳಕೆಯ ಪ್ರಾಥಮಿಕ ತಿಳಿವಳಿಕೆ ಇದ್ದರೆ ಮುಂದೆ ತರಬೇತಿಯ ಸಂದರ್ಭದಲ್ಲಿ ಹೆಚ್ಚಿನ ಕೌಶಲ ಬೆಳೆಸಿಕೊಳ್ಳಬಹುದು. ಮೊಬೈಲ್ ಮೂಲಕವೂ ಕೋರ್ಸ್‌ನ್ನು ಪಡೆಯಬಹುದು. ಇದು ಸಾಮಾನ್ಯವಾಗಿ ಇಂಗ್ಲಿಷ್‌ನಲ್ಲಿ ಇರುವುದರಿಂದ ಇಂಗ್ಲಿಷ್ ಓದಿ ಹಾಗೂ ಕೇಳಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಅಪೇಕ್ಷಣೀಯ. ಕಂಟೆಂಟ್ ರೈಟಿಂಗ್ ಈ ಕ್ಷೇತ್ರದ ಒಂದು ಭಾಗವಾಗಿರುವುದರಿಂದ ಬರವಣಿಗೆ ಕೌಶಲಗಳನ್ನು ಉತ್ತಮಪಡಿಸಿಕೊಳ್ಳುವುದು ಮುಖ್ಯ. ಒಳ್ಳೆಯ ಭಾಷಾ ಕೌಶಲ ಬೆಳೆಸಿಕೊಂಡವರಿಗೆ ಇದರಲ್ಲಿ ಉಜ್ವಲ ಭವಿಷ್ಯವಿದೆ.

(ಲೇಖಕರು: ಸಹಾಯಕ ಪ್ರಾಧ್ಯಾಪಕ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ)

(ಮುಂದಿನ ವಾರ: ಸರ್ಚ್ ಇಂಜಿನ್ ಆಪ್ಟಿಮೈಸೇಶನ್ ಕೋರ್ಸ್)

ಎಂಜಿನಿಯರಿಂಗ್, ಎಂಬಿಬಿಎಸ್ ಯಾವ ಆಯ್ಕೆ ಸೂಕ್ತ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಪಿಯುಸಿ ಮುಗಿಸುತ್ತಿದ್ದು ಮುಂದೆ ಎಂಜಿನಿಯರಿಂಗ್ ಅಥವಾ ಎಂಬಿಬಿಎಸ್ ಮಾಡ ಬೇಕೆಂದುಕೊಂಡಿದ್ದೇನೆ. ಇವೆರಡರಲ್ಲಿ ಆಯ್ಕೆ ಮಾಡಲು ಗೊಂದಲವಿದೆ. ಮಾರ್ಗದರ್ಶನ ನೀಡಿ.

ಹೆಸರು, ಊರು ತಿಳಿಸಿಲ್ಲ.

ನೀವು ಕೇಳಿರುವ ಎರಡೂ ಆಯ್ಕೆಗಳು ಉತ್ತಮವಾದದ್ದು. ಆದರೂ, ನಿಮಗೆ ಯಾವುದು ಹೆಚ್ಚು ಸೂಕ್ತವೆಂದು ಮೌಲ್ಯಮಾಪನ ಮಾಡಬೇಕು. ವೈದ್ಯರಾಗಲು ಸೇವಾ ಮನೋಭಾವ, ಜ್ಞಾಪಕ ಶಕ್ತಿ, ನಿಷ್ಠೆ, ಪ್ರಾಮಾಣಿಕತೆ, ಸಮಯದ ನಿರ್ವಹಣೆ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಸಮತೋಲನ ಅಗತ್ಯವಾದರೆ, ಎಂಜಿನಿಯರಿಂಗ್ ವೃತ್ತಿಗೆ ಗಣಿತದಲ್ಲಿ ತಜ್ಞತೆ, ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ ಅಗತ್ಯವಾಗುತ್ತದೆ. ಹಾಗಾಗಿ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಒಲವು ಮತ್ತು ಕೌಶಲಗಳ ಮೌಲ್ಯಮಾಪನ ಮಾಡಿ, ವೈಯಕ್ತಿಕ/ಕುಟುಂಬದ ಮೌಲ್ಯಗಳು, ಸವಾಲುಗಳು, ಅಗತ್ಯಗಳು, ಧ್ಯೇಯಗಳನ್ನು ಗುರುತಿಸಿ, ವೃತ್ತಿಯ ಆಯ್ಕೆಯನ್ನು ಮಾಡುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

2. ನಾನು 12ನೇ ತರಗತಿಯಲ್ಲಿದ್ದು ಡಾಕ್ಟರ್ ಆಗಬೇಕೆಂದಿದ್ದೇನೆ. ಸರ್ಕಾರಿ ಸೀಟ್ ಪಡೆಯಲು ಸಿಇಟಿ ಬರೆದರೆ ಸಾಕೇ ಅಥವಾ ನೀಟ್ ಬರೆಯಲೇಬೇಕೇ? ಒಳ್ಳೆಯ ಕಾಲೇಜಿನಲ್ಲಿ ಸೀಟ್ ಸಿಗಲು ಯಾವುದನ್ನು ಬರೆಯಬೇಕು?

ಹೆಸರು, ಊರು ತಿಳಿಸಿಲ್ಲ.

ದೇಶದ ವಿವಿಧ ಕಾಲೇಜುಗಳ ವೈದ್ಯಕೀಯ ಸಂಬಂಧಿತ ಪದವಿ ಪೂರ್ವ ಕೋರ್ಸ್‌ಗಳಿಗೆ, ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು, ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ), ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್- ಯುಜಿ) ಯನ್ನು ಆಯೋಜಿಸುತ್ತದೆ. ನೀಟ್ ಪರೀಕ್ಷೆಯ ಮಾದರಿಯಂತೆ, ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವವಿಜ್ಞಾನ ವಿಷಯಗಳ 180 ಪ್ರಶ್ನೆಗಳಿರುತ್ತವೆ. ಸರಿಯಾದ ಉತ್ತರಗಳಿಗೆ 4 ಅಂಕಗಳೂ, ತಪ್ಪಾದ ಪ್ರತಿ ಉತ್ತರಕ್ಕೆ 1 ಅಂಕವನ್ನು ಕಡಿತಗೊಳಿಸಲಾಗುತ್ತದೆ. ಈ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆಯುವ ರ್‍ಯಾಂಕ್ ಆಧಾರದ ಮೇಲೆ ಸೀಟ್ ಹಂಚಿಕೆಯಾಗುತ್ತದೆ. ಕಳೆದ ವರ್ಷಗಳಲ್ಲಿ, ರ್‍ಯಾಂಕ್ ಆಧಾರದ ಮೇಲೆ ವಿವಿಧ ಕಾಲೇಜುಗಳ ಸೀಟ್ ಹಂಚಿಕೆಯ ಮಾಹಿತಿಯನ್ನು ವಿಶ್ಲೇಷಿಸಿ, ನಿಮಗೆ ಸೂಕ್ತವೆನಿಸುವ ಕಾಲೇಜು ಪ್ರವೇಶಕ್ಕೆ ಬೇಕಾಗುವ ರ್‍ಯಾಂಕ್ ಮತ್ತು ಅಂಕಗಳನ್ನು ಅಂದಾಜು ಮಾಡಿ, ಪರೀಕ್ಷೆಯ ಕಾರ್ಯತಂತ್ರವನ್ನು ರೂಪಿಸಬೇಕು. ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕೆ 'ನೀಟ್' ಪರೀಕ್ಷೆ ಕಡ್ಡಾಯ; ಸಿಇಟಿ ಪರೀಕ್ಷೆ ಬರೆಯುವ ಅಗತ್ಯವಿಲ್ಲ. ಒಳ್ಳೆಯ ಕಾಲೇಜುಗಳನ್ನು ಗುರುತಿಸುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = DmaXk-MuoOI

3. ನಾನು ಬಿಕಾಂ ಮುಗಿಸಿದ್ದೇನೆ, ಮುಂದೆ ಎಂಕಾಂ ಮತ್ತು ಎಂಬಿಎ ಇವೆರಡರಲ್ಲಿ ಯಾವುದನ್ನು ವೃತ್ತಿಯ ಅವಕಾಶಗಳ ದೃಷ್ಟಿಯಿಂದ ಆರಿಸಿಕೊಳ್ಳಬಹುದು?

ವಿದ್ಯಾ, ಹುಬ್ಬಳ್ಳಿ.

ವೃತ್ತಿಯ ದೃಷ್ಟಿಯಿಂದ ಎಂಬಿಎ ಕೋರ್ಸ್ ನಂತರ ಹೆಚ್ಚಿನ ಕ್ಷೇತ್ರಗಳಲ್ಲಿ (ಬ್ಯಾಂಕಿಂಗ್, ಇನ್‌ಶ್ಯೂರೆನ್ಸ್, ಫೈನಾನ್ಸ್, ರೀಟೇಲ್, ಸರ್ಕಾರಿ ಇತ್ಯಾದಿ) ಅವಕಾಶಗಳಿವೆ. ಎಂಕಾಂ ಅಥವಾ ಎಂಬಿಎ ನಂತರ, ಆಯಾ ಕ್ಷೇತ್ರಗಳಲ್ಲಿನ ಕೆಲಸದ ವಿವರಗಳಿಗೆ (ಜಾಬ್ ಪ್ರೊಫೈಲ್) ತಕ್ಕಂತೆ ಜ್ಞಾನ, ಆಸಕ್ತಿ, ಅಭಿರುಚಿ ಮತ್ತು ಕೌಶಲಗಳ ಅಗತ್ಯವಿರುತ್ತದೆ. ಹಾಗಾಗಿ, ನಿಮಗೆ ಯಾವ ವೃತ್ತಿ/ಕೋರ್ಸ್ ಸೂಕ್ತವೆಂದು ಪರಿಶೀಲಿಸಲು, ವೃತ್ತಿಯೋಜನೆ ಮಾಡುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v = oyUMPrEKPPU

4. ನಾನು ಎಂ.ಎಸ್ಸಿ (ಬಯೋ ಕೆಮಿಸ್ಟ್ರಿ) ಮಾಡಿ ಕೆಲಸದಲ್ಲಿದ್ದೇನೆ. ಈಗ, ಡೇಟಾ ಸೈನ್ಸ್ ಬಗ್ಗೆ ಆಸಕ್ತಿಯಿದೆ. ಯಾವ ಕೋರ್ಸ್ ಮಾಡಬಹುದು?

ಸಚಿನ್, ಊರು ತಿಳಿಸಿಲ್ಲ.

ಡೇಟಾ ಸೈನ್ಸ್ ಬೇಡಿಕೆಯಲ್ಲಿರುವ ಕ್ಷೇತ್ರ. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಆಸಕ್ತಿಯ ಜೊತೆಗೆ ಸಮಸ್ಯೆಗಳ ಪರಿಹಾರ, ವಿವರಗಳಿಗೆ ಗಮನ, ಮಷಿನ್ ಲರ್ನಿಂಗ್, ಪ್ರೋಗ್ರಾಮಿಂಗ್ ಮುಂತಾದ ಕೌಶಲಗಳಿರಬೇಕು. ಈಗ ನೀವು ಕೆಲಸ ಮಾಡುತ್ತಿರುವ ಕ್ಷೇತ್ರದಲ್ಲಿ ಮುಂದುವರಿಯುತ್ತಾ ಡೇಟಾ ಸೈನ್ಸ್ ಕ್ಷೇತ್ರದ ತಜ್ಞತೆಗಾಗಿ, ಅಲ್ಪಾವಧಿ ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡಬಹುದು. ಇದಾದ ನಂತರ, ವೃತ್ತಿ ದೃಷ್ಟಿಯಿಂದ ಈ ಕ್ಷೇತ್ರ ಸೂಕ್ತವೆನಿಸಿದರೆ, ಸ್ನಾತಕೋತ್ತರ ಪದವಿಯನ್ನೂ ಮಾಡಬಹುದು.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

RAJYA VOKKALIGARA SANGHA (R)

BANGALORE INSTITUTE OF TECHNOLOGY

K.R. Road, V.V. Pura, Bengaluru - 560 004 | www.bit-bangalore.edu.in

Recognised By All India Council for Technical Education (AICTE), New Delhi

Affiliated to Visvesvaraya Technological University (VTU), Belagavi

Accredited by National Board of Accreditation UG Programs (9)

Accredited with Grade A+ NAAC

ADMISSIONS : 2023-2024

PROGRAMMES OFFERED

BACHELOR OF ENGINEERING (B.E.)
- Computer Science and Engineering
- Information Science and Engineering
- Artificial Intelligence and Machine Learning
- Computer Science and Engineering (Data Science)
- Computer Science and Engineering (IOT & Cyber Security including Blockchain Technology)
- Electronics and Communication Engineering
- Electronics Engineering (VLSI Design & Technology)
- Electronics and Telecommunication Engineering
- Electronics and Instrumentation Engineering
- Electrical and Electronics Engineering
- Mechanical Engineering
- Robotics and Artificial Intelligence
- Civil Engineering

POST GRADUATE PROGRAMMES
- Master of Computer Applications
- Master of Business Administration

MASTER OF TECHNOLOGY (M.Tech)
- Structural Engineering
- VLSI Design and Embedded Systems
- Computer Science and Engineering

Ph.D. Programmes & M.Sc Engineering (By Research)
- 13 VTU approved Research Centers

CET CODE : E008 COMED-K : E019
PGCET CODE : MBA - B131
MCA - C411 M.Tech : T812

Placements
1200+ Offers during 2022
800+ Offers during 2023 (Upto March)
Highest Salary of ₹37.5LPA

25 Gold Medals in the Year 2022

VTU RANKS

Year	Ranks
2021 - 2022	28
2020 - 2021	24
2019 - 2020	22

HIGHLIGHTS IN BIT
- Premier institution imparting quality education in Engineering, Technical & Management discipline since 1979
- The college has adopted the National Education Policy (NEP)
- 30+ Student Activity Clubs.
- Innovation & Entrepreneurship Cell to develop leadership qualities in students.
- MOU's with more than 150 companies.
- Excellent placement opportunities with more than 200 companies visiting BIT every year for campus recruitment.
- R&D and Center of Excellence in all the departments.
- Skill Development Lab in Association with Mistral Solutions, Capgemini and Increesol.
- The Week-Hansa Research Survey-2022 accords, BIT - one among the Top 3 private engineering colleges in Bengaluru.
- Dynamic Professional Body Forum (PBF).
- State of the art infrastructure and highly qualified faculty.
- Idea Lab, IPR and BIT Startup Cell.

Highly qualified, experienced and competent teaching faculty

Pioneer in Placements with outstanding track record

INSTITUTION'S INNOVATION COUNCIL (Ministry of Education Initiative)

ARIIA ATAL RANKING OF INSTITUTIONS ON INNOVATION ACHIEVEMENTS

Shri C.N. Balakrishna, President, RVS
Dr. Renukaprasad K.V., Vice President, RVS
Shri D. Hanumanthaiah, Vice President, RVS
Shri T. Konappa Reddy, General Secretary, RVS
Shri Raghavendra, Joint Secretary, RVS
Shri R. Prakash, Treasurer, RVS
Shri M. Puttaswamy, Chairman, GC, BIT
Dr. M.U. Aswath, Principal, BIT

For Admission Contact
+91 94485 12954, 94485 12984
Email : admissionsection@bit-bangalore.edu.in

ಗೂಂಜ್ ಗ್ರಾಸ್‌ರೂಟ್ಸ್ ಫೆಲೊಷಿಪ್

ಫೆಲೊಷಿಪ್

ವಿವರ: ಲಾಭರಹಿತ ಸಂಸ್ಥೆ ಗೂಂಜ್, ಮೆಟ್ರಿಕ್ಯುಲೇಷನ್ ಪಾಸಾದ ವಿದ್ಯಾರ್ಥಿಗಳಿಂದ 'ಗೂಂಜ್ ಗ್ರಾಸ್‌ರೂಟ್ಸ್ ಫೆಲೊಷಿಪ್–2023–24' ಕಾರ್ಯಕ್ರಮಕ್ಕಾಗಿ ಅರ್ಜಿ ಆಹ್ವಾನಿಸಿದೆ. ಇದು ಒಂದು ವರ್ಷ ಅವಧಿಯ ಫೆಲೊಷಿಪ್ ಆಗಿದೆ. ಈ ಫೆಲೊಷಿಪ್‌ಗೆ ಆಯ್ಕೆಯಾದ ವಿದ್ಯಾರ್ಥಿಗಳು, ಭಾರತದಾದ್ಯಂತ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಚಟುವಟಿಕೆಗಳಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಅರ್ಹತೆ: ಜುಲೈ 31, 2023ರೊಳಗೆ ಮೆಟ್ರಿಕ್ಯುಲೇಷನ್ ಉತ್ತೀರ್ಣರಾದ 18 ರಿಂದ 30 ವರ್ಷ ದೊಳಗಿನ (ಜುಲೈ 31,2023ರವರೆಗೆ) ಅಭ್ಯರ್ಥಿಗಳು ಈ ಫೆಲೊಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರಿಗೆ ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿ ಓದಲು, ಬರೆಯಲು ಹಾಗೂ ಮಾತನಾಡಲು ಬರಬೇಕು. ಜೊತೆಗೆ ನಿಯೋಜನೆಯ ಪ್ರದೇಶದ ನೆಲದ ವಾಸ್ತವ ವಿಚಾರಗಳು, ಭೌಗೋಳಿಕ ಮತ್ತು ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ತಿಳುವಳಿಕೆ ಹೊಂದಿರಬೇಕು

ಆರ್ಥಿಕ ನೆರವು : ಮಾಸಿಕ ₹12 ಸಾವಿರ

ಅರ್ಜಿ ಸಲ್ಲಿಸಲು ಕೊನೆ ದಿನ: 25/5/2023

ಅರ್ಜಿ ಸಲ್ಲಿಸುವ ವಿಧಾನ: ಇಮೇಲ್ ಮೂಲಕ (fellowship@goonj.org)

ಹೆಚ್ಚಿನ ಮಾಹಿತಿಗೆ: www.b4s.in/praja/GGS5

(ಕೃಪೆ:www.buddy4study.com)

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

CHEMISTRY

88) Which of the following is not related to drug-enzyme interaction?

a) Co-enzymes b) Enzyme inhibitor
c) Allosteric site d) Antagonist

Ans: (d)

Expln:- Antagonists impede the action of drugs by occupying the enzyme sites themselves and hence is the odd one out.

89) Benzaldehyde and acetone can be best distinguished using ....

a) Sodium hydroxide solution
b) Fehling's solution
c) Tollen's reagent d) 2, 4- DNPH

Ans:- c

90) Arrange the following compounds in the increasing order of their acidic strength:

i) m-nitrophenol, ii) m-cresol,
iii) phenol, iv) m-chlorophenol.

(a) ii < iv < iii < i **(b) ii < iii < i < iv**
(c) iii < ii < i < iv **(d) ii < iii < iv< i**

Ans: (d) ii < iii < iv< i

Expln:- m-cresol has electron-releasing group (CH_3). Hence it decreases the acidic strength. Both nitro and chloro have –I effect. Hence they show higher acidic strength. But nitro is a stronger –I group than chloro group. Hence m-minitro phenol is more acidic than m-chlorophenol.

91) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

92) For freundlich isotherm a graph of log(x/m) is plotted against log P. the slope of the line and its y-axis intercept, respectively corresponds to

a) $\frac{1}{n}$, k b) $\log\frac{1}{n}$, k
c) $\frac{1}{n}$, log k d) $\log\frac{1}{n}$, logk

Ans:- c; Freundlich adsorption isotherm can be written as,

$$\log\frac{x}{m} = \log k + \frac{1}{n}\log P$$



93) Which of the following is not true?

a) Ampicillin is not a natural antibiotic.
b) Vancomycin is a broad spectrum antibiotic.
c) Erythromycin is a bacteriostatic antibiotic.
d) Prontosil is not converted into sulphanilamide in the body.

Ans: (d) Prontosil is not converted into sulphanilamide in the body.

94) The compound that reacts the fastest with sodium methoxide is



Ans:- (a)

Expln:- electron withdrawing groups (-NO_2) increase the reactivity of the aryl halide (-ArCl). Hence, 2-4-dinitrochlorobenzene reacts fastest.

95) The pair of compounds having identical shapes for their molecules is

a) CH_4, SF_4 b) BCl_2, ClF_3
c) XeF_2, $ZnCl_2$ d) SI_2, CO_2

Ans:- (c)

Expln:- XeF_2 is linear in shape with 2 bond pairs and 3 lone pairs of electrons.

$ZnCl_2$ is also linear in shape with 2 bond pairs of electrons.

96) Using MOT, compare O_2^+ and O_2^- species and choose the incorrect option

a) O_2^- is less stable.
b) Both O_2^+ and O_2^- are paramagnetic.
c) O_2^+ has higher bond order than O_2^-
d) O_2^+ is diamagnetic while O_2^- is paramagnetic.

Ans: (d)

Expl:- O_2^+ has 15 electrons and O_2^- has 17 electrons, both of them are paramagnetic.

97) For the reversible reaction

$A_{(g)} + B_{(g)} \rightleftharpoons C_{(g)} + D_{(g)};\ \Delta G^0 = -350\,kJ$

Which of the following statements is true?

a) Equilibrium constant is greater than 1
b) The entropy change is negative
c) The reaction is thermodynamically not feasible
d) The reaction should be instantaneous

Ans:- (a)

98) While charging the lead storage battery,

a) $PbSO_4$ on cathode is reduced to Pb
b) $PbSO_4$ on anode is oxidized to PbO_2
c) $PbSO_4$ on anode is reduced to Pb
d) $PbSO_4$ on cathode is oxidized to Pb.

Ans: (C)

Expln:- During charging of lead storage battery, at the anode: $PbSO_4 + 2e^- \rightarrow Pb + SO_4^{2-}$

99) Sucrose is NOT a reducing sugar since

a) it is chemically stable
b) it contains no free aldehydes or keto group adjacent to a CH-OH group
c) it is built up of a fructose unit
d) it is optically active

Ans:- (b)

100) Butylated hydroxyl toluene as a food additive acts as

a) Antioxidant b) flavouring agent
c) colouring agent d) emulsifier.

Ans:- (a)

MATHEMATICS

MULTIPLE CHOICE QUESTIONS

58) If an LPP admits optimal solution at two consecutive verties of a feasible region then

a) The required optimal solution is at the midpoint of the line joining the two points
b) The optimal solution occurs at every point on the line joining these two points
c) The LPP under Consideration is not solvable
d) The LPP under Consideration must be reconstructed

Ans:- b

59) Area bounded by the curve $y = x^3$, the x-axis and the ordinates at x = -2 and x = 1, is

(A) −9 sq.units (B) $-\frac{15}{4}$ sq.units
(C) $\frac{15}{4}$ sq.units (D) $\frac{17}{4}$ sq.units.

Ans : (D) $\frac{17}{4}$ sq.units



$$\text{Required area} = \int_{-2}^{0} x^3\,dx + \int_{0}^{1} x^3\,dx$$

$$= \left[\frac{x^4}{4}\right]_{-2}^{0} + \left[\frac{x^4}{4}\right]_{0}^{1}$$

$$= 0 - \frac{(-2)^4}{4} + \frac{1}{4} = -4 + \frac{1}{4}.$$

Area cannot be negative. ∴ Required area $= 4 + \frac{1}{4} = \frac{17}{4}$.

60) The area in square units bounded by the normal at (1, 2) to the parabola $y^2 = 4x$, x-axis and the curve is given by

(A) $\frac{10}{3}$ (B) $\frac{7}{3}$
(C) $\frac{4}{3}$ (D) None of these

Ans : (A) $\frac{10}{3}$



$y^2 = 4x$

$\therefore 2y\frac{dy}{dx} = 4$ i.e., $\frac{dy}{dx} = \frac{4}{2y} = \frac{2}{y}$

$\left(\frac{dy}{dx}\right)_{(1,2)} = 1 =$ slope of tangent.

∴ Slope of normal = −1.

Equation of normal at (1,2) is $y - 2 = -1(x - 1)$

i.e., $x + y = 3$

x + y = 3

x	3	3
y	0	3

$$\text{Required area} = \int_{0}^{1} \sqrt{4x}\,dx + \int_{1}^{3} (3 - x)\,dx$$

$$= 2\int_{0}^{1} \sqrt{x}\,dx + \left[3x - \frac{x^2}{2}\right]_{1}^{3}$$

$$= 2 \times \frac{2}{3}\left[x^{3/2}\right]_0^1 + \left[9 - \frac{9}{2} - 3 + \frac{1}{2}\right]$$

$$= \frac{4}{3} + 6 - 4 = \frac{10}{3} \text{ sq. units.}$$

61) Area bounded by the y axis, y = cos x, y = sin x when $0 \le x \le \frac{\pi}{2}$ is

(A) $\sqrt{2} - 1$ (B) $2(\sqrt{2} - 1)$
(C) $(\sqrt{2} + 1)$ (D) $\sqrt{2}$

Ans : (A) $\sqrt{2} - 1$

Expln :– The two curves are y = cos x, y = sin x

i.e., sin x = cos x ⇒ tan x = 1 ∴ $x = \frac{\pi}{4}$

∴ The two curves intersect at $x = \frac{\pi}{4}$.

$$\text{Required area} = \int_{0}^{\pi/4} (\cos x - \sin x)\,dx$$

$$= [\sin x + \cos x]_0^{\pi/4}$$

$$= \left(\frac{1}{\sqrt{2}} + \frac{1}{\sqrt{2}}\right) - 1 = \sqrt{2} = -1.$$

62) The area in square units of the region bounded by $y^2 = 9x$ and y = 3x is

(A) 2 (B) $\frac{1}{4}$ (C) $\frac{1}{2}$ (D) 1

Ans : (C) $\frac{1}{2}$

Expln:- Solving $y^2 = 9x$ and $y = 3x$ we get x = 0 or 1. ∴ y = 0 or 3

i.e., point of intersection of two curves is (1, 3).



$$\text{Required area} = \int_{0}^{1} 3\sqrt{x}\,dx - \int_{0}^{1} 3x\,dx$$

$$= 3 \times \frac{2}{3}\left[x^{3/2}\right]_0^1 - 3\left[\frac{x^2}{2}\right]_0^1$$

$$= 2 - \frac{3}{2} = \frac{1}{2}.$$

63) The rate of change of volume of a sphere with respect to itssurface area when theradius is 4 cm is

A) 4 cm^2/cm^2 B) 2 cm^2/cm^2
C) 6 cm^2/cm^2 D) 8 cm^2/cm^2

Ans:-B

Expln:-

Volume of a sphere $V = \frac{4}{3}\pi r^3$

$\frac{dy}{dt} = \frac{4}{3} \times 3r^2 \frac{dr}{dt} = 4\pi r^2 \frac{dr}{dt}$

$S = 4\pi r^2\ \therefore \frac{ds}{dt} = 4\pi \times 2r \times \frac{dr}{dt}$

When r = 4cm, $\frac{dv}{dt} = 64\pi\frac{dr}{dt}$, $\frac{ds}{dt} = 32\pi\frac{dr}{dt}$

$\therefore \frac{dy}{dt}\Big/\frac{ds}{dt} = 2cm^2/cm^2$

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ವಿದ್ಯಾರ್ಥಿ ವೇತನ ಕೈಪಿಡಿ

ಸಿಡ್ನಿ ಸ್ಕಾಲರ್ಸ್ ಇಂಡಿಯಾ ಸ್ಕಾಲರ್‌ಷಿಪ್ ಪ್ರೋಗ್ರಾಂ 2023

ವಿವರ: ಸಿಡ್ನಿ ಸ್ಕಾಲರ್ಸ್ ಇಂಡಿಯಾ ಸ್ಕಾಲರ್‌ಷಿಪ್ ಪ್ರೋಗ್ರಾಂ 2023, ಭಾರತೀಯ ಪದವಿ / ಸ್ನಾತಕೋತ್ತರ ಪದವಿ ಕಲಿಯುವ ವಿದ್ಯಾರ್ಥಿಗಳಿಗೆ ಸಿಡ್ನಿ ವಿಶ್ವವಿದ್ಯಾಲಯ ನೀಡುತ್ತಿರುವ ಸ್ಕಾಲರ್‌ಷಿಪ್ ಪ್ರೋಗ್ರಾಂ.

ಅರ್ಹತೆ: ಈ ವಿದ್ಯಾರ್ಥಿವೇತನ ಭಾರತೀಯ ನಾಗರಿಕರಿಗೆ ಮುಕ್ತವಾಗಿದೆ. ಅರ್ಜಿದಾರರು, ಉನ್ನತ ಶಿಕ್ಷಣ ಬೆಂಬಲ ಕಾಯಿದೆ 2003 ರ ಅನ್ವಯ ಯಾವುದೇ ಷರತ್ತುಗಳಿಲ್ಲದೇ ಸಿಡ್ನಿ ವಿಶ್ವವಿದ್ಯಾಲಯದಿಂದ ಅಂತರರಾಷ್ಟ್ರೀಯ ವಿದ್ಯಾರ್ಥಿಯಾಗಿ ಪದವಿ ಅಥವಾ ಸ್ನಾತಕೋತ್ತರ ಪದವಿಗೆ ಪ್ರವೇಶಿಸುವ ಕರೆ ಪತ್ರ(ಆಫರ್ ಲೆಟರ್) ಹೊಂದಿರಬೇಕು .

ಆರ್ಥಿಕ ನೆರವು: ನಿರ್ದಿಷ್ಟ ಅವಧಿಗೆ ₹21,96,069.47(40,000 ಆಸ್ಟ್ರೇಲಿಯನ್ ಡಾಲರ್)ವರೆಗೆ

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಅರ್ಜಿ ಸಲ್ಲಿಸುವ ಕೊನೆ ದಿನ: 04/06/2023

ಹೆಚ್ಚಿನ ಮಾಹಿತಿಗೆ: www.b4s.in/praja/SSIS3

ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್ ಪ್ರೋಗ್ರಾಂ 2023

ವಿವರ: ಎಸ್‌ಬಿಐ ಫೌಂಡೇಷನ್ ಪದವಿ, ಎಂಬಿಎ/ಪಿಜಿಡಿಎಂ ಮತ್ತು ಪಿಎಚ್‌ಡಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತಮ್ಮ ಉನ್ನತ ಶಿಕ್ಷಣ ಮುಂದುವರಿಸಲು ಬೆಂಬಲ ನೀಡುವುದಕ್ಕಾಗಿ 'ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್ ಪ್ರೋಗ್ರಾಂ 2023' ಅನ್ನು ರೂಪಿಸಿದೆ.

ಅರ್ಹತೆ: ಉನ್ನತಮಟ್ಟದ ಎನ್‌ಐಆರ್‌ಎಫ್ ವಿಶ್ವವಿದ್ಯಾಲಯಗಳು / ಕಾಲೇಜುಗಳು ಮತ್ತು ಐಐಟಿಗಳಲ್ಲಿ ಮೊದಲ ವರ್ಷದ ಪದವಿ ಓದುತ್ತಿರುವವರು, ಐಐಎಂಗಳಲ್ಲಿ ಎಂಬಿಎ/ಪಿಜಿಡಿಎಂ ಓದುತ್ತಿರುವ ಹಾಗೂ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪಿಎಚ್. ಡಿ ಮಾಡುತ್ತಿರುವ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಶೇ 75ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವರಮಾನ ₹3 ಲಕ್ಷ ಮೀರಿರಬಾರದು

ಆರ್ಥಿಕ ನೆರವು: ಒಂದು ವರ್ಷಕ್ಕೆ ₹ 5,00,000 ವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 30-04-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

www.b4s.in/praja/SBIFS2

ಐಐಎಚ್‌ಎಸ್ ಅರ್ಬನ್ ಫೆಲೋಸ್ ಪ್ರೋಗ್ರಾಂ 2023–24

ಇದು ಪದವಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಗಾಗಿ ಬೆಂಗಳೂರಿನ ಭಾರತೀಯ ಮಾನವ ವಸಾಹತುಗಳ ಸಂಸ್ಥೆ(ಇಂಡಿಯನ್ ಇನ್‌ಸ್ಟಿಟ್ಯೂಟ್ ಫಾರ್ ಹ್ಯೂಮನ್ ಸೆಟಲ್‌ಮೆಂಟ್ಸ್ (ಐಐಎಚ್‌ಎಸ್)) ರೂಪಿಸಿರುವ ವಿದ್ಯಾರ್ಥಿ ವೇತನ ಆಧಾರಿತ 9 ತಿಂಗಳ ಪೂರ್ಣ ಪ್ರಮಾಣದ ಅಂತರ್‌ಶಿಸ್ತೀಯ ವಸತಿಸಹಿತ ಕೋರ್ಸ್. ಬೆಂಗಳೂರಿನಲ್ಲಿರುವ ಐಐಎಚ್‌ಎಸ್ ಕ್ಯಾಂಪಸ್‌ನಲ್ಲಿ ಈ ಕೋರ್ಸ್ ನಡೆಯಲಿದೆ. ಏಳು ತಿಂಗಳು ಕ್ಲಾಸ್ ರೂಮ್ ತರಬೇತಿ. ನಂತರ ಎರಡು ತಿಂಗಳು ಇಂಟರನ್‌ಷಿಪ್ ಕೂಡ ಇದೆ.

ಅರ್ಹತೆ: ಯಾವುದೇ ವಿಷಯದಲ್ಲಿ ಪದವಿ ಪೂರ್ಣಗೊಳಿಸಿದ, ಸುಲಲಿತವಾಗಿ ಹಾಗೂ ಪ್ರಾಥಮಿಕ ಇಂಗ್ಲಿಷ್ ಓದುವ ಜ್ಞಾನ ಹೊಂದಿರುವ 30 ವರ್ಷದೊಳಗಿನ, ಭಾರತೀಯ ಪ್ರಜೆಗಳು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು. (ಗಮನಿಸಿ - ಇಂಗ್ಲಿಷ್ ಓದುವ ಸಾಮರ್ಥ್ಯ ಕಡಿಮೆ ಇರುವ ಅಭ್ಯರ್ಥಿಗಳಿಗೆ ನೆರವಾಗುವ ವ್ಯವಸ್ಥೆಯಿದೆ)

ಆರ್ಥಿಕ ನೆರವು : ನಿತ್ಯದ ಖರ್ಚು–ವೆಚ್ಚ ಭರಿಸುವ ಜೊತೆಗೆ, ಬೋಧನಾ ಶುಲ್ಕವನ್ನೂ ನೀಡಲಾಗುತ್ತದೆ.

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಅರ್ಜಿಗಳು ಹಾಗೂ ಅಂಚೆ ಮೂಲಕ ಅರ್ಜಿ ಸಲ್ಲಿಸುವ ವಿಳಾಸ: ದ ಅಡ್ಮಿಶನ್ಸ್ ಕಮಿಟಿ ಐಐಎಚ್‌ಎಸ್ ಬೆಂಗಳೂರು ಸಿಟಿ ಕ್ಯಾಂಪಸ್, ನಂ. 197/36, 2ನೇ ಮುಖ್ಯ ರಸ್ತೆ, ಸದಾಶಿವನಗರ ಬೆಂಗಳೂರು 560080

ಹೆಚ್ಚಿನ ಮಾಹಿತಿಗೆ: www.b4s.in/praja/IIHS4

(ಕೃಪೆ:www.buddy4study.com)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ನಮಗೆ ಅಗತ್ಯ ಇದ್ದಷ್ಟನ್ನು ಮಾತ್ರ ತಿಳಿದುಕೊಂಡು, ಮಿಕ್ಕಿದ್ದನ್ನು ನೋಡಿ ಅಚ್ಚರಿಪಡುತ್ತಾ ಇದ್ದುಬಿಡುವುದು ಒಳ್ಳೆಯದು.

-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆಗೆ ಅವಕಾಶ ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ಉತ್ತೇಜನ

ಉನ್ನತ ಶಿಕ್ಷಣದ ಯಾವುದೇ ಕೋರ್ಸ್‌ನ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಯಲ್ಲಿ ಬರೆಯಲು ಅವಕಾಶ ಕಲ್ಪಿಸಿರುವ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಕ್ರಮ ಸ್ವಾಗತಾರ್ಹ. ಸ್ಥಳೀಯ ಭಾಷೆಗಳನ್ನು ಬಲಪಡಿಸಲು ಹಾಗೂ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವ ದಿಸೆಯಲ್ಲಿ ಯುಜಿಸಿ ಮಹತ್ವದ ಹೆಜ್ಜೆಯಿಟ್ಟಿದೆ. ಬೋಧನಾ ಮಾಧ್ಯಮ ಇಂಗ್ಲಿಷ್‌ನಲ್ಲಿದ್ದರೂ ಪರೀಕ್ಷೆಯನ್ನು ಪ್ರಾದೇಶಿಕ ಭಾಷೆಯಲ್ಲಿ ಬರೆಯಲು ಅವಕಾಶ ಕಲ್ಪಿಸಬೇಕು ಎಂದು ವಿಶ್ವವಿದ್ಯಾಲಯಗಳಿಗೆ ಯುಜಿಸಿ ಸೂಚಿಸಿದೆ. ಬೋಧನೆ ಮತ್ತು ಕಲಿಕೆಯಲ್ಲಿ ಪ್ರಾದೇಶಿಕ ಭಾಷೆಗಳ ಬಳಕೆಯನ್ನು ಉತ್ತೇಜಿಸುವಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎನ್ನುವ ಯುಜಿಸಿ ಅಭಿಪ್ರಾಯ ಸರಿಯಾದುದು. ಪ್ರಾದೇಶಿಕ ಭಾಷೆಯಲ್ಲಿ ಬರೆಯುವುದರಿಂದ ವಿದ್ಯಾರ್ಥಿಗೆ ತನ್ನ ಸಾಮರ್ಥ್ಯವನ್ನು ಅತ್ಯುತ್ತಮ ರೀತಿಯಲ್ಲಿ ಅಭಿವ್ಯಕ್ತಗೊಳಿಸುವುದು ಸಾಧ್ಯವಾಗುತ್ತದೆ ಹಾಗೂ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಹೊಂದುವುದು ಸಾಧ್ಯವಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಸಂಚಲನ ಮೂಡಿಸುತ್ತದೆಂದು ನಿರೀಕ್ಷಿಸಲಾಗಿರುವ ಹೊಸ ‘ರಾಷ್ಟ್ರೀಯ ಶಿಕ್ಷಣ ನೀತಿ’ ಕೂಡ ಶಿಕ್ಷಣದಲ್ಲಿ ಭಾರತೀಯ ಭಾಷೆಗಳ ಬಳಕೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದ್ದು, ಆ ಉದ್ದೇಶಕ್ಕೆ ಪೂರಕವಾಗಿ ವಿಶ್ವವಿದ್ಯಾಲಯಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಮಹತ್ವ ದೊರಕಿಸಿಕೊಡಲು ಯುಜಿಸಿ ಮುಂದಾಗಿದೆ. ಬೋಧನೆ ಹೆಚ್ಚು ಪರಿಣಾಮಕಾರಿ ಆಗಲು ಹಾಗೂ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಪ್ರಾದೇಶಿಕ ಭಾಷೆಗಳಲ್ಲಿನ ಸಂವಹನ ಪ್ರಮುಖ ಪಾತ್ರ ವಹಿಸಲಿದೆ. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್‌ನ ಯಾಜಮಾನ್ಯವನ್ನು ತಪ್ಪಿಸಿ, ಪ್ರಾದೇಶಿಕ ಭಾಷೆಗಳಿಗೂ ಸಮಾನ ಅವಕಾಶವನ್ನು ಕಲ್ಪಿಸುವಂತೆ ದಕ್ಷಿಣ ಭಾರತದ ರಾಜ್ಯಗಳು ನಿರಂತರವಾಗಿ ಒತ್ತಾಯಿಸುತ್ತಲೇ ಇವೆ. ಈ ಒತ್ತಾಯದ ಕಾರಣದಿಂದಾಗಿಯೇ, ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಕನ್ನಡ ಸೇರಿದಂತೆ ಎಲ್ಲ ರಾಜ್ಯ ಭಾಷೆಗಳಲ್ಲಿ ಬರೆಯಲು ಕೇಂದ್ರ ಸರ್ಕಾರ ಇತ್ತೀಚೆಗಷ್ಟೇ ಹಸಿರು ನಿಶಾನೆ ತೋರಿದೆ. ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) ಕೂಡ ಕನ್ನಡವೂ ಸೇರಿದಂತೆ ಹದಿಮೂರು ಪ್ರಾದೇಶಿಕ ಭಾಷೆಗಳಲ್ಲಿ ಅಭ್ಯರ್ಥಿಗಳು ಪರೀಕ್ಷೆಗಳನ್ನು ಬರೆಯಲು ಈಗಾಗಲೇ ಅವಕಾಶ ಕಲ್ಪಿಸಿದೆ. ಈಗ ಉನ್ನತ ಶಿಕ್ಷಣದ ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಯುಜಿಸಿ ಅವಕಾಶ ನೀಡಿದೆ. ಇವೆಲ್ಲ ಕ್ರಮಗಳು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್‌ನ ಅನಗತ್ಯ ಮಹತ್ವವನ್ನು ತಪ್ಪಿಸಿ, ಅವಕಾಶಗಳನ್ನು ಎಲ್ಲ ಭಾಷಿಕರಿಗೂ ಮುಕ್ತಗೊಳಿಸುವ ಪ್ರಯತ್ನಗಳಾಗಿವೆ.

ಪ್ರಾದೇಶಿಕ ಭಾಷೆಯಲ್ಲಿ ಕಲಿತು ಪರೀಕ್ಷೆ ಎದುರಿಸುವ ವಿದ್ಯಾರ್ಥಿ, ಉದ್ಯೋಗದ ಸಂದರ್ಭದಲ್ಲಿ ತನ್ನ ಕಲಿಕೆಯನ್ನು ಪ್ರಾದೇಶಿಕ ಭಾಷೆಯಲ್ಲಿಯೇ ಕಾರ್ಯರೂಪಕ್ಕೆ ತರುವಲ್ಲಿ ಎದುರಾಗುವ ಸವಾಲುಗಳ ಬಗ್ಗೆಯೂ ಯೋಚಿಸಬೇಕಾಗಿದೆ

ಉನ್ನತ ಶಿಕ್ಷಣದ ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ನೀಡುವಷ್ಟಕ್ಕೆ ಮಾತ್ರ ಯುಜಿಸಿ ತನ್ನ ಹೊಣೆಗಾರಿಕೆಯನ್ನು ಸೀಮಿತಗೊಳಿಸಿಕೊಳ್ಳಬಾರದು. ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿ ಎದುರಿಸಬೇಕಾದ ಸವಾಲುಗಳ ಬಗ್ಗೆಯೂ ಚಿಂತನೆ ನಡೆಯಬೇಕಾಗಿದೆ. ಇಂಗ್ಲಿಷ್‌ನಲ್ಲಿ ಬೋಧನೆ ನಡೆಯವಾಗ, ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆ ಬರೆಯುವುದು ಯಾವ ವಿದ್ಯಾರ್ಥಿಗೂ ಸುಲಭವಲ್ಲ. ಬೋಧನೆ, ಕಲಿಕೆ ಮತ್ತು ಪರೀಕ್ಷೆಯ ಭಾಷೆಗಳು ಒಂದೇ ಆದಾಗ ಉತ್ತಮ ಫಲಿತಾಂಶ ಸಾಧ್ಯ. ಈ ದಿಸೆಯಲ್ಲಿ ಮೊದಲು ಆಗಬೇಕಾದುದು ಪಠ್ಯಗಳನ್ನು ಪ್ರಾದೇಶಿಕ ಭಾಷೆಗಳಿಗೆ ರೂಪಾಂತರಿಸುವುದು. ಇಂಗ್ಲಿಷ್‌ನಲ್ಲಿ ಕಲಿತು ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವುದರಿಂದ ಹೆಚ್ಚಿನ ಉಪಯೋಗವಾಗದು. ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿರುವ ಯುಜಿಸಿ ಕ್ರಮ, ಜ್ಞಾನವನ್ನು ವಿಕೇಂದ್ರೀಕರಿಸುವ ದಿಸೆಯಲ್ಲಿ ಮೊದಲ ಹೆಜ್ಜೆಯಷ್ಟೇ. ಈ ಉದ್ದೇಶ ಪೂರ್ಣ ರೂಪದಲ್ಲಿ ಯಶಸ್ವಿಯಾಗಬೇಕಾದರೆ, ಪ್ರಾದೇಶಿಕ ಭಾಷೆಗಳಲ್ಲಿ ಅತ್ಯುತ್ತಮ ಪಠ್ಯಗಳನ್ನು ರೂಪಿಸುವ ಕೆಲಸ ನಡೆಯಬೇಕು ಹಾಗೂ ಆ ಪಠ್ಯಗಳನ್ನು ಬೋಧಿಸುವ ಸ್ಥಿತಿಯೂ ರೂಪುಗೊಳ್ಳಬೇಕು. ಬೋಧನೆ, ಕಲಿಕೆ, ಮೌಲ್ಯಮಾಪನ ಪ್ರಕ್ರಿಯೆಯು ಪ್ರಾದೇಶಿಕ ಭಾಷೆಗಳಲ್ಲಿ ನಡೆದರೆ ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆಯ ಪ್ರಮಾಣ ಹೆಚ್ಚಾಗುತ್ತದೆ ಎಂದು ಯುಜಿಸಿ ಹೇಳಿದ್ದರೂ, ಈ ಆಶಯವನ್ನು ಕಾರ್ಯರೂಪಕ್ಕೆ ತರುವಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಏನನ್ನೂ ಹೇಳಿಲ್ಲ. ಪ್ರಸ್ತುತ ಇಂಗ್ಲಿಷ್ ಮಾಧ್ಯಮದಲ್ಲಿರುವ ಉನ್ನತ ಶಿಕ್ಷಣವನ್ನು ಪ್ರಾದೇಶಿಕ ಭಾಷೆಗಳಿಗೆ ಒಗ್ಗಿಸಲು ಅಗತ್ಯವಾದ ಸಂಪನ್ಮೂಲಗಳ ಕ್ರೋಡೀಕರಣ ಸುಲಭದ ಸವಾಲೇನೂ ಅಲ್ಲ. ಈ ಸವಾಲಿಗೆ ಉತ್ತರ ಕಂಡುಕೊಳ್ಳುವ ದಾರಿಗಳನ್ನು ಕಂಡುಕೊಳ್ಳುವವರೆಗೂ, ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲು ಅವಕಾಶ ಕಲ್ಪಿಸಿರುವುದು ಒಂದು ಆಶಯವಾಗಿಯಷ್ಟೇ ಕಾಣಿಸುತ್ತದೆ. ಪ್ರಾದೇಶಿಕ ಭಾಷೆಯಲ್ಲಿ ಕಲಿತು ಪರೀಕ್ಷೆ ಎದುರಿಸುವ ವಿದ್ಯಾರ್ಥಿ, ಉದ್ಯೋಗದ ಸಂದರ್ಭದಲ್ಲಿ ತನ್ನ ಕಲಿಕೆಯನ್ನು ಪ್ರಾದೇಶಿಕ ಭಾಷೆಯಲ್ಲಿಯೇ ಕಾರ್ಯರೂಪಕ್ಕೆ ತರುವಲ್ಲಿ ಎದುರಾಗುವ ಸವಾಲುಗಳ ಬಗ್ಗೆಯೂ ಯೋಚಿಸಬೇಕಾಗಿದೆ. ಜಾಗತಿಕ ಸನ್ನಿವೇಶಗಳಲ್ಲಿ ಉದ್ಯೋಗದ ಭಾಷೆ ಇಂಗ್ಲಿಷ್ ಆಗಿರುವುದರಿಂದ, ಆ ಭಾಷೆಯಲ್ಲಿ ಉತ್ತಮ ಸಾಮರ್ಥ್ಯ ಹೊಂದುವುದು ಅಗತ್ಯ. ಇಲ್ಲದೆಹೋದಲ್ಲಿ, ಕೀಳರಿಮೆ ಉಂಟಾಗಬಹುದು. ಹಾಗಾಗಿ, ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವುದರ ಜೊತೆಗೆ, ವಿದ್ಯಾರ್ಥಿಗಳಿಗೆ ಒಂದು ಭಾಷೆಯಾಗಿ ಇಂಗ್ಲಿಷ್ ಕಲಿಸುವುದೂ ಅಪೇಕ್ಷಣೀಯ.

ದಿನದ ಟ್ವೀಟ್

ಪ್ರಾಮಾಣಿಕವಾಗಿ ಆಚರಿಸಬೇಕೆಂದರೆ...

ಜಗದ್ಗುರು ಬಸವಣ್ಣನವರ ಜನ್ಮದಿನವನ್ನು ಪ್ರಾಮಾಣಿಕವಾಗಿ ಆಚರಿಸಬೇಕೆಂದರೆ, ಪ್ರತ್ಯಕ್ಷವಾಗಿ ಇಲ್ಲವೇ ಅಪ್ರತ್ಯಕ್ಷವಾಗಿ ಜಾತಿಯ ಹೆಸರಿನಲ್ಲಿ ಚುನಾವಣೆಯ ರಾಜಕಾರಣವನ್ನು ನಿಲ್ಲಿಸಬೇಕು, ನಿಷೇಧಿಸಬೇಕು.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಚುನಾವಣೆಯಲ್ಲಿ ಅಭ್ಯರ್ಥಿಗಳ ಕುರಿತು ಪಾಸಿಟಿವ್ ಮತ್ತು ನೆಗೆಟಿವ್ ಅಭಿಯಾನವನ್ನು ಸಾಮಾಜಿಕ ಜಾಲತಾಣಗಳಲ್ಲಿ ನಡೆಸುವುದು ಸಾಮಾನ್ಯ. ಇಂತಹದ್ದನ್ನು ನನ್ನ ಜೀವನದಲ್ಲಿ ತುಂಬಾ ನೋಡಿದ್ದೇನೆ. ಈಗ ನನ್ನ ವಿರುದ್ಧವೂ ಮಾಡಲಾಗುತ್ತಿದೆ. ಮನೆಯಲ್ಲಿ ಕುಳಿತು ಮಾಡುವ ಈ ಕೆಲಸದಿಂದ ಯಾವ ಪರಿಣಾಮವೂ ಬೀರದು. ಜನರ ಮಧ್ಯೆ ಹೋಗಿ ಕೆಲಸ ಮಾಡಿದ್ದು ಮಾತ್ರ ಪ್ರಭಾವ ಬೀರುತ್ತದೆ.

ಜಗದೀಶ ಶೆಟ್ಟರ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 24-4-1998

• **ಹೆಗಡೆ ವಿರುದ್ಧ ಎಐಎಡಿಎಂಕೆ ಸಚಿವರ ಆಕ್ರೋಶ**

ನವದೆಹಲಿ, ಏ. 23– ಜಯಲಲಿತಾ ಅವರ ಒತ್ತಡ ಮತ್ತು ಬ್ಲ್ಯಾಕ್‌ಮೇಲ್ ತಂತ್ರವನ್ನು ಸಹಿಸಿಕೊಂಡು ಹೋಗುವ ಬದಲು ಮತ್ತೆ ಚುನಾವಣೆಗೆ ಹೋಗಿ ಜನಾದೇಶ ಪಡೆಯುವುದು ಸೂಕ್ತ ಎಂಬ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರ ಹೇಳಿಕೆಯನ್ನು ಎಐಎಡಿಎಂಕೆಯ ಕೇಂದ್ರದ ಮೂವರು ಸಚಿವರು ತೀವ್ರವಾಗಿ ಖಂಡಿಸಿದ್ದು, ‘ಹೆಗಡೆ ಅವರನ್ನು ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಳ್ಳಿ; ಇಲ್ಲವಾದರೆ ಸ್ಥಾನ ಬಿಟ್ಟು ಹೋಗಿ ಎಂದು ಪ್ರಧಾನಿ ಅವರು ಸೂಚಿಸಬೇಕು’ ಎಂದು ಆಗ್ರಹಪಡಿಸಿದ್ದಾರೆ.

ಸಚಿವರಾದ ಡಾ. ಎಂ. ತಂಬಿದೊರೆ, ಆರ್. ಜನಾರ್ದನನ್ ಮತ್ತು ಆರ್.ಕೆ. ಕುಮಾರ್ ಇಂದು ಇಲ್ಲಿ ಜಂಟಿ ಹೇಳಿಕೆ ನೀಡಿ ಖಂಡಿಸಿದ್ದಾರೆ. ಇದರಿಂದಾಗಿ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದೊಳಗೆ ನಡೆಯುತ್ತಿರುವ ಸಮರ ತೀವ್ರವಾಗಿದೆ.

• **ತೃಣಮೂಲ ಕಾಂಗ್ರೆಸ್ ಬಿಜೆಪಿ ಮೈತ್ರಿ ಅಂತ್ಯ ಸಂಭವ**

ಕಲ್ಕತ್ತಾ, ಏ. 23 (ಪಿಟಿಐ)– ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷದ ನಡುವಿನ ಮೈತ್ರಿ ತೀವ್ರ ಬಿಕ್ಕಟ್ಟನ್ನು ಎದುರಿಸಿದೆ.

ಉಭಯ ಪಕ್ಷಗಳು ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಮಾಡಿಕೊಂಡಿದ್ದ ಮೈತ್ರಿಯನ್ನು ಪಂಚಾಯಿತಿ ಚುನಾವಣೆಯಲ್ಲಿಯೂ ಮುಂದುವರಿಸುವ ವಿಚಾರದಲ್ಲಿ ಭಿನ್ನಾಭಿಪ್ರಾಯ ತಲೆದೋರಿ ಪರಸ್ಪರ ಟೀಕೆಯಲ್ಲಿ ತೊಡಗಿವೆ.

50 ವರ್ಷಗಳ ಹಿಂದೆ

ಮಂಗಳವಾರ, 24-4-1973

• **ಅರಸು ಹೇಳಿಕೆ ಬಗ್ಗೆ ಮೇಲ್ಮನೆಯಲ್ಲಿ ಜನಸಂಘ ಪ್ರತಿಭಟನೆ: ಸಭೆ ಮುಂದಕ್ಕೆ**

ಬೆಂಗಳೂರು, ಏ. 23– ‘ಸಿಮೆಂಟ್ ವರ್ತಕರು ಜನಸಂಘಕ್ಕೂ ಹಣ ಕೊಟ್ಟಿದ್ದಾರೆ’ ಎಂಬ ಮುಖ್ಯಮಂತ್ರಿ ಅರಸು ಅವರ ಮಾತು ಇಂದು ಸಂಜೆ ವಿಧಾನಪರಿಷತ್ತಿನಲ್ಲಿ ಜನಸಂಘ ಸದಸ್ಯರ ತೀವ್ರ ಪ್ರತಿಭಟನೆಯನ್ನೆದುರಿಸಿ ಬಿಸಿ ವಾತಾವರಣ ಉಂಟಾದಾಗ, ಉಪಸಭಾಪತಿ ನರಸಿಂಹ ಮೂರ್ತಿ ಅವರು ಸಭೆಯನ್ನು ನಾಳೆಗೆ ಮುಂದಕ್ಕೆ ಹಾಕಿದರು.

ಬೆಲೆ ನೀತಿ ಕುರಿತು ಚರ್ಚೆಗೆ ಮುಖ್ಯಮಂತ್ರಿ ಉತ್ತರ ಕೊಡುವಾಗ ಈ ಪ್ರಸಂಗ ನಡೆಯಿತು.

ಒಂದು ಗಂಟೆಗೂ ಮೀರಿ ಜನಸಂಘ ಹಾಗೂ ಪಕ್ಷೇತರ ಸದಸ್ಯರ ಮತ್ತು ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಕೋಪೋದ್ವೇಗದಿಂದ ವಾದ–ವಿವಾದ, ಆರೋಪ– ಪ್ರತ್ಯಾರೋಪ ನಡೆದು ಗೊಂದಲ ಹಾಗೂ ಬಿಸಿ ವಾತಾವರಣ ಉಂಟಾಗಿತ್ತು.

ರಾಜಕಾರಣವನ್ನು ಪಾರ್ಟ್ ಟೈಂ ಉದ್ಯೋಗವಾಗಿಸಿಕೊಂಡ ನಟರಿಂದ ಕಲೆಗೆ ಸುಖವಿಲ್ಲ...

ರಾಜಕಾರಣ ವಿವೇಕದ ‘ರಾಜ್ ಮಾದರಿ’

ಪಡಸಾಲೆ

ರಘುನಾಥ ಚ.ಹ.

ಸಮಕಾಲೀನ ಸಿನಿಮಾ ಕಲಾವಿದರು ಸಕ್ರಿಯ ರಾಜಕಾರಣದ ಬಗ್ಗೆ ಮಾತನಾಡಿದಾಗ ಅಥವಾ ಪಕ್ಷ ರಾಜಕಾರಣದೊಂದಿಗೆ ಗುರುತಿಸಿಕೊಂಡಾಗ, ರಾಜ್‌ಕುಮಾರ್ ನೆನಪಾಗುತ್ತಾರೆ; ‘ಕಲಾವಿದ ಮತ್ತು ರಾಜಕಾರಣದ ಸಂಬಂಧ ಹೇಗಿರಬೇಕು’ ಎನ್ನುವುದಕ್ಕೆ ಮಾದರಿಯಾಗಿ ಅವರು ಕಾಣಿಸುತ್ತಾರೆ.

ರಾಜಕಾರಣದೊಂದಿಗೆ ಪ್ರಜ್ಞಾಪೂರ್ವಕ ಅಂತರ ಕಾಪಾಡಿಕೊಂಡಿದ್ದು ಕನ್ನಡನಾಡಿನ ಜನಮಾನಸದಲ್ಲಿ ರಾಜ್‌ಕುಮಾರ್ ನೆಲೆ ನಿಲ್ಲುವುದಕ್ಕೆ ಪ್ರಮುಖ ಕಾರಣಗಳಲ್ಲೊಂದು. ಚುನಾವಣಾ ರಾಜಕಾರಣವನ್ನು ನಿರಾಕರಿಸಿದ ಕಾರಣದಿಂದಾಗಿ, ರಾಜಕೀಯದ ಬಗ್ಗೆ ರಾಜ್‌ಕುಮಾರ್ ನಿರಾಸಕ್ತರಾಗಿದ್ದರು ಮತ್ತು ರಾಜಕೀಯ ಪ್ರಜ್ಞೆ ಅಷ್ಟಾಗಿ ಇರಲಿಲ್ಲ ಎನ್ನುವಂಥ ಅಭಿಪ್ರಾಯಗಳು ಆಗಾಗ ವ್ಯಕ್ತವಾಗುತ್ತವೆ. ಆದರೆ, ರಾಜ್‌ಕುಮಾರ್ ಅವರಲ್ಲಿ ರಾಜಕೀಯ ಎಚ್ಚರವಿತ್ತು; ಅದನ್ನು ಯಾವ ರೀತಿಯಲ್ಲಿ ವ್ಯಕ್ತಪಡಿಸಬೇಕು ಎನ್ನುವ ವಿವೇಕವೂ ಇತ್ತು. ಜನರ ಹಿತ ಮತ್ತು ವಿವೇಕವನ್ನು ಹಂಬಲಿಸುವ ರಾಜಕೀಯ ಪ್ರಜ್ಞೆ ಅವರದಾಗಿತ್ತು. ಅವರು ಪ್ರತಿಪಾದಿಸಿದ ರಾಜಕೀಯ ಪ್ರಜ್ಞೆ, ಒಬ್ಬರ ವಿರುದ್ಧ ಮತ್ತೊಬ್ಬರು ನಡೆಸುವ ಪಿತೂರಿಯ ಸ್ವರೂಪದ್ದಾಗಿರಲಿಲ್ಲ; ಜಾತಿ ಮತ್ತು ಅಧಿಕಾರ ಚಲಾವಣೆಯ ಅರ್ಥವನ್ನೂ ಪಡೆದುಕೊಂಡಿರಲಿಲ್ಲ.

ಓರ್ವ ಕಲಾವಿದನ ರಾಜಕೀಯ ಪ್ರಜ್ಞೆ ಪ್ರಖರವಾಗಿ ವ್ಯಕ್ತಗೊಳ್ಳಬೇಕಾದುದು ಅವನು ಅಭಿನಯಿಸುವ ಪಾತ್ರಗಳ ಮೂಲಕ ಎನ್ನುವುದಕ್ಕೆ ರಾಜ್ ಸಿನಿಮಾಗಳು ಅತ್ಯುತ್ತಮ ಉದಾಹರಣೆಗಳು. ಅವರ ಸಿನಿಮಾಗಳನ್ನು, ಸಮಾಜ ವಿಜ್ಞಾನ ಮತ್ತು ರಾಜಕೀಯ ವಿಜ್ಞಾನದ ಪಠ್ಯಗಳಂತೆ ನೋಡಬಹುದು. ರಾಜ್ ಸಿನಿಮಾಗಳು ಕೌಟುಂಬಿಕ ಆದರ್ಶದ ಮಾದರಿಗಳನ್ನು ಪ್ರತಿನಿಧಿಸುವುದರ ಜೊತೆಗೆ, ವ್ಯಸನಗಳಿಂದ ಮುಕ್ತವಾದ ಸಾಮಾಜಿಕ ಮಾದರಿಗಳನ್ನೂ ಎದುರಿಗಿಡುತ್ತವೆ. ‘ಬಂಗಾರದ ಮನುಷ್ಯ’, ‘ಮಣ್ಣಿನ ಮಗ’ ರೀತಿಯ ಸಿನಿಮಾಗಳು ಕೃಷಿ ಸಂಸ್ಕೃತಿಯ ಔನ್ನತ್ಯ ವನ್ನು ಪ್ರತಿಪಾದಿಸಿದರೆ, ‘ಜೀವನಚೈತ್ರ’, ‘ಶಬ್ದವೇಧಿ’ ಸಿನಿಮಾಗಳು ಸಾಮಾಜಿಕ ವ್ಯಸನಗಳ ವಿರುದ್ಧದ ದಿಟ್ಟ ದನಿಗಳಾಗಿವೆ. ಕಲಾವಿದನಾಗಿ ರಾಜ್‌ಕುಮಾರ್ ತನ್ನ ಕಾಲದ ಜನರ ಮೇಲೆ ಬೀರಿದ ಪ್ರಭಾವವನ್ನು, ನಾಡಿನ ಬೇರೆ ಯಾವುದೇ ಕಲಾವಿದನಾಗಲೀ ರಾಜಕಾರಣಿಯಾಗಲೀ ಅಥವಾ ಸ್ವಾಮೀಜಿಯಾಗಲೀ ಸಾಧಿಸುವುದು ಸಾಧ್ಯವಾಗಿಲ್ಲ. ಕುವೆಂಪು ಅವರು ತಮ್ಮ ಬರವಣಿಗೆಯ ಮೂಲಕ ಆಧುನಿಕ ಕರ್ನಾಟಕದ ಏಳಿಗೆಗೆ ಕಟ್ಟಿಕೊಟ್ಟ ತಾತ್ವಿಕತೆಯನ್ನು, ರಾಜ್‌ಕುಮಾರ್ ತಮ್ಮ ಸಿನಿಮಾ ಮತ್ತು ವ್ಯಕ್ತಿತ್ವದ ಮೂಲಕ ಕಟ್ಟಿಕೊಟ್ಟರು. ಕುವೆಂಪು ಮತ್ತು ರಾಜಕುಮಾರ್ ಇಬ್ಬರೂ ರೈತರು, ಕಾರ್ಮಿಕರು, ಮಹಿಳೆಯರು ಸೇರಿದಂತೆ ಸಮಾಜದ ಎಲ್ಲ ವರ್ಗಗಳನ್ನು ಮುಟ್ಟಿದ್ದು, ಪ್ರಭಾವಿಸಿದ್ದು, ನುಡಿಯ ಹೆಸರಿನಲ್ಲಿ ಇಡೀ ನಾಡನ್ನು ಒಟ್ಟಾಗಿಸಿದ್ದು– ‘ಆಧುನಿಕ ಕರ್ನಾಟಕ’ ಚರಿತ್ರೆಯ ಅಪೂರ್ವ ವಿದ್ಯಮಾನ.

ಪುಸ್ತಕ ಸಂಸ್ಕೃತಿಯಿಂದ ದೂರವುಳಿದವರನ್ನೂ ಸಿನಿಮಾಗಳ ಮೂಲಕ ತಲುಪಿದ ಸಾಧನೆ ರಾಜ್ ಅವರದು. ಜನರ ಮನಸ್ಸನ್ನು ಸ್ವಸ್ಥವಾಗಿಡುವ ಕೆಲಸವನ್ನು ಅವರ ಸಿನಿಮಾಗಳು ನಿರಂತರವಾಗಿ ಮಾಡುತ್ತಲೇ ಬಂದಿವೆ. ಗೋಕಾಕ್ ಚಳವಳಿ ಸೇರಿದಂತೆ ನಾಡು–ನುಡಿಯ ಹಿತಾಸಕ್ತಿಗೆ ಆತಂಕ ಎದುರಾದಾಗಲೆಲ್ಲ ಜನರ ಜೊತೆ ರಾಜ್ ನಿಲ್ಲುತ್ತಿದ್ದುದನ್ನು ಕೂಡ ಅವರ ರಾಜಕೀಯ ಪ್ರಜ್ಞೆಯ ಭಾಗವಾಗಿಯೇ ನೋಡಬೇಕು. ಸಮಾಜ ಕಡೆಗಣ್ಣಿನಿಂದ ನೋಡುವ ಸಮುದಾಯಗಳು ಪ್ರತಿನಿಧಿಸುವ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಆಯಾ ಸಮುದಾಯಗಳಿಗೆ ರಾಜ್‌ಕುಮಾರ್ ತಂದುಕೊಟ್ಟ ಆತ್ಮಪ್ರತ್ಯಯ ಅಸಾಧಾರಣವಾದುದು. ನೇಕಾರ, ಕಮ್ಮಾರ, ಕುಂಬಾರ, ಬೇಡ, ಕುರಿಗಾಹಿ– ಹೀಗೆ ಅವರು ನಿರ್ವಹಿಸಿದ ಪಾತ್ರಗಳು ಆಯಾ ವರ್ಗಗಳಿಗೆ ಆತ್ಮವಿಶ್ವಾಸ ತಂದುಕೊಡುವುದರ ಜೊತೆಗೆ, ಆ ಸಮುದಾಯಗಳಿಗೆ ಮುಖ್ಯವಾಹಿನಿಯಲ್ಲಿ ಸ್ವಲ್ಪ ಮಟ್ಟಿಗಿನ ಸ್ವೀಕೃತಿ ತಂದುಕೊಟ್ಟವು.

ಭಕ್ತಿಪ್ರಧಾನ ಪಾತ್ರಗಳ ನಿರ್ವಹಣೆಗೆ ರಾಜ್‌ಕುಮಾರ್ ಹೆಸರುವಾಸಿ. ಆದರೆ, ಅವರ ಭಕ್ತಿ ಭಾವಪ್ರಧಾನವಷ್ಟೇ ಆಗಿರದೆ, ಬಂಡಾಯದ ಸಂಕೇತವೂ ಆಗಿದೆ. ನಾಯಕನಾಗಿ ನಟಿಸಿದ ಮೊದಲ ಚಿತ್ರ, 1954ರ ‘ಬೇಡರ ಕಣ್ಣಪ್ಪ’ದಿಂದಲೇ ಭಕ್ತಿ–ಬಂಡಾಯದ ಪರಂಪರೆ ಆರಂಭವಾಯಿತೆನ್ನಬೇಕು. ದಿನ್ನನ ಭಕ್ತಿಯ ಔನ್ನತ್ಯದ ಈ ಕಥನ, ದೇವರ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ವಿಡಂಬಿಸುತ್ತದೆ. ‘ಭಕ್ತ ಕನಕದಾಸ’ (1960), ‘ಭಕ್ತ ಕುಂಬಾರ’ (1974) ಸಿನಿಮಾಗಳನ್ನು ಕೂಡ ಭಕ್ತಿಯ ನೆಲೆಗಟ್ಟಿನಲ್ಲಿ ಜಾತಿಯನ್ನು ಪ್ರಶ್ನಿಸುವ ಪ್ರಯತ್ನಗಳ ರೂಪದಲ್ಲಿ ಗಮನಿಸಬೇಕು. ಈ ಎರಡೂ ಸಿನಿಮಾಗಳ ನಾಯಕ ಪಾತ್ರಗಳು ಕುಲದ ನೆಲೆಗಳನ್ನು ಪ್ರಶ್ನಿಸುತ್ತವೆ. ಕುಲ ಕುಲವೆಂದು ಹೊಡೆದಾಡದಿರಿ ಎಂದು ಕನಕದಾಸರು ಕರೆ ನೀಡಿದರೆ, ಕುಂಬಾರ ಗೋರನದು ‘ಮಾನವ ದೇಹವು ಮೂಳೆ ಮಾಂಸದ ತಡಿಕೆ’ ಎನ್ನುವ ಜೀವನದ ನಶ್ವರತೆಯನ್ನು ಸಾರುವ ತಾತ್ವಿಕತೆ. ರಾಜ್ ಸಿನಿಮಾಗಳ ‘ಭಕ್ತಿ–ಬಂಡಾಯ’ದ ಸಮನ್ವಯಕ್ಕೆ ಮತ್ತೊಂದು ಉತ್ತಮ ಉದಾಹರಣೆ ‘ಭಕ್ತ ಚೇತ’ (1961). ಚಮ್ಮಾರನ ಪಾತ್ರದಲ್ಲಿ ರಾಜ್‌ಕುಮಾರ್ ನಟಿಸಿದ ಈ ಸಿನಿಮಾದಲ್ಲಿ ಸಮ ಸಮಾಜದ ಹಂಬಲದ ಜೊತೆಗೆ, ಅಸ್ಪೃಶ್ಯತೆಯ ವಿರುದ್ಧದ ದನಿಯೂ ಇದೆ.

ರಾಜಕಾರಣಿಯೊಬ್ಬ, ಮಠಾಧೀಶನೊಬ್ಬ ಮಾಡಬೇಕಾದ ಕೆಲಸವನ್ನು ರಾಜ್ ಸಿನಿಮಾಗಳು ಸದ್ದಿಲ್ಲದೆ ಮಾಡಿವೆ. ಜಾತಿಯ ನೆಲೆಗಳನ್ನು ಸಡಿಲವಾಗಿಸುತ್ತ ಸೌಹಾರ್ದತ್ತ ಸಮಾಜವನ್ನು ಮುನ್ನಡೆಸುವ ಕೆಲಸ ‘ರಾಜಕೀಯ ಪ್ರಜ್ಞೆ’ ಇಲ್ಲದಿದ್ದಲ್ಲಿ ಸಾಧ್ಯವಾದೀತೆ?

ಸಾಮಾಜಿಕ ನ್ಯಾಯದ ಕುರಿತಂತೆ ರಾಜ್ ಅವರ ನಿಲುವಿಗೆ ಉದಾಹರಣೆಯಾಗಿ, ಡಬ್ಬಿಂಗ್ ಚಳವಳಿ ಸಂದರ್ಭದಲ್ಲಿ ಅವರು ನೀಡಿದ ಹೇಳಿಕೆಯನ್ನು ಗಮನಿಸಬಹುದು: ‘ಡಬ್ಬಿಂಗ್ ಚಿತ್ರಗಳಿಂದ ಕನ್ನಡದಲ್ಲಿ ತಯಾರಾಗುವ ಚಿತ್ರಗಳಿಗೆ ಕೊಡಲಿ ಪೆಟ್ಟು. ಹತ್ತು ಚಿತ್ರ ತಯಾರಾದರೆ ಹಲವರಿಗೆ ಅವಕಾಶವಿದೆ. ಅದರಲ್ಲಿ ಐದು ಡಬ್ ಆದರೆ ಒಂದಿಷ್ಟು ಜನರಿಗೆ ಅವಕಾಶ ತಪ್ಪುತ್ತೆ. ಇದೊಂದು ವ್ಯವಹಾರ, ಸಂಪಾದನೆಯೇ ಅದರ ಮೂಲ ಉದ್ದೇಶ ಎಂಬ ಮಾತು ನಿಜವಾದರೂ ಅದು ಕಲೆಯನ್ನು ಬಿಟ್ಟು ಆಡುವ ಮಾತಲ್ಲ. ಕಲೆ, ವ್ಯವಹಾರಗಳು ಸಮರಸ ಸಾಧಿಸಬೇಕು. ಒಂದಕ್ಕಾಗಿ ಇನ್ನೊಂದು ತ್ಯಾಗ ಆಗಬಾರದು. ಆಯಾ ಭಾಷೆಯ ಜನ ಆಯಾ ಭಾಷೆಯ ಕಲಾವಿದರನ್ನೇ ಗೊತ್ತು ಮಾಡಿಕೊಂಡು ಚಿತ್ರ ತೆಗೆಯಲಿ. ಕೆಲವು ಚಿತ್ರಗಳು ಬಡವಾಗಿರಬಹುದು. ಲೋಕದಲ್ಲಿ ಬಡವ–ಶ್ರೀಮಂತರಿಬ್ಬರಿಗೂ ಬಾಳಲು ಅವಕಾಶ ಇಲ್ಲವೇ? ಹಾಗೆಯೇ ಇದು ಸಹ. ಯಾವ ಭಾಷೆಯಿಂದ ಯಾವ ಭಾಷೆಗೂ ಡಬ್ ಆಗಬಾರದು’. ಡಬ್ಬಿಂಗ್ ಸಂದರ್ಭವನ್ನು ಮರೆತು, ‘ಕಲೆ–ವ್ಯವಹಾರ ಸಮರಸ ಸಾಧಿಸಬೇಕು’ ಹಾಗೂ ‘ಲೋಕದಲ್ಲಿ ಬಡವ–ಶ್ರೀಮಂತರಿಬ್ಬರಿಗೂ ಬಾಳಲು ಅವಕಾಶವಿದೆ’ ಎನ್ನುವ ಮಾತುಗಳನ್ನು ಗಮನಿಸಬೇಕು. ಕಲೆ ಹಾಗೂ ರಾಜಕೀಯ ಪ್ರಜ್ಞೆಯನ್ನೊಳಗೊಂಡ ಸಾಮಾಜಿಕ ತಿಳಿವಳಿಕೆ ರಾಜ್ ಅವರಲ್ಲಿ ಯಾವ ರೂಪದಲ್ಲಿತ್ತು ಎನ್ನುವುದಕ್ಕೆ ಈ ಮಾತುಗಳು ಉದಾಹರಣೆಯಂತಿವೆ.

ಕಲೆ ಮತ್ತು ರಾಜಕಾರಣದ ‘ಅಪೂರ್ವ ಸಂಗಮ’ದ ರೂಪದಲ್ಲಿ ‘ರಾಜ್ ಮಾದರಿ’ಯನ್ನು ಪರಿಶೀಲಿಸುವಾಗ, ಕಲಾವಿದನೊಬ್ಬ ಸಕ್ರಿಯ ರಾಜಕಾರಣದಲ್ಲಿ ಭಾಗಿಯಾಗುವುದು ತಪ್ಪೇ ಎನ್ನುವ ಪ್ರಶ್ನೆ ಎದುರಾಗುತ್ತದೆ. ಖಂಡಿತಾ ತಪ್ಪಲ್ಲ. ರಾಜ್‌ರ ಸಮಕಾಲೀನ ಕಲಾವಿದರಾದ ತೆಲುಗಿನ ಎನ್.ಟಿ.ರಾಮರಾವ್ ಹಾಗೂ ತಮಿಳಿನ ಎಂ.ಜಿ.ರಾಮಚಂದ್ರನ್ ರಾಜಕಾರಣದಲ್ಲಿ ಸಕ್ರಿಯರಾಗಿದ್ದರು, ಮುಖ್ಯಮಂತ್ರಿ ಸ್ಥಾನಕ್ಕೂ ಸಂದಿದ್ದರು. ಇಲ್ಲೊಂದು ಸೂಕ್ಷ್ಮ ಗಮನಿಸಬೇಕು: ಆ ಹಿರಿಯರೆಲ್ಲ ರಾಜಕಾರಣಿಗಳಾದ ನಂತರ ಕಲಾವಿದರಾಗಿ ನೇಪಥ್ಯಕ್ಕೆ ಸರಿದರು. ಬಹುಶಃ, ವ್ಯಕ್ತಿಯೊಬ್ಬ ಏಕಕಾಲಕ್ಕೆ ಕಲಾವಿದನೂ ರಾಜಕಾರಣಿಯೂ ಆಗಿರುವುದು ಸಾಧ್ಯ ಇಲ್ಲ. ರಾಜಕಾರಣವನ್ನೇ ನಟನೆಯಾಗಿಸಿಕೊಂಡವರಿಗೆ ಈ ಮಾತು ಅನ್ವಯಿಸುವುದಿಲ್ಲ.

ಸಿನಿಮಾ ಹಾಗೂ ಸಕ್ರಿಯ ರಾಜಕಾರಣ ಎರಡರಲ್ಲೂ ವ್ಯಾಪಾರವನ್ನೇ ಕಾಣುತ್ತಿರುವ ಇಂದಿನ ಕಲಾವಿದರು, ಕಲೆಯನ್ನೂ ವ್ಯಾಪಾರವನ್ನೂ ಒಂದೇ ಎಂದು ತಿಳಿದಂತಿದೆ. ಪ್ರಸ್ತುತ ರಾಜಕಾರಣದ ಮಾತುಗಳನ್ನಾಡುವ ಸಿನಿಮಾ ನಟರನ್ನು ನೋಡಿದರೆ, ರಾಜಕಾರಣವೂ ಒಂದು ಪಾತ್ರದಂತೆ ಅಥವಾ ಪಾರ್ಟ್ ಟೈಂ ಉದ್ಯೋಗದಂತೆ ಅವರಿಗೆ ಕಾಣಿಸುತ್ತಿರುವಂತಿದೆ. ಇಂಥವರಿಂದ ಕಲೆಗೂ ಸುಖವಿಲ್ಲ, ರಾಜಕಾರಣಕ್ಕೂ ಉಪಯೋಗವಿಲ್ಲ. ಈ ಹೊತ್ತಿನ ಸಾಮಾಜಿಕ ಕ್ಷೋಭೆಯ ಸಂದರ್ಭಕ್ಕೂ, ರಾಜ್‌ರಂಥ ಕಲಾವಿದ ಅಥವಾ ಕುವೆಂಪು ಅವರಂಥ ಬರಹಗಾರ ಇಲ್ಲದಿರುವುದಕ್ಕೂ ಸಂಬಂಧ ಇಲ್ಲದಿಲ್ಲ.

ಚುರುಮುರಿ

ಒಣಒಣ ಭಣಭಣ

• ಸುಮಂಗಲಾ

‘ನೋಡಿಲ್ಲಿ... ನಾವು ಚೀನಾ ದೇಶಾನ ಹಿಂದೆ ಹಾಕಿ, ಫಸ್ಟ್ ಬಂದೀವಿ...’ ಬೆಕ್ಕಣ್ಣ ಪೇಪರು ಹಿಡಿದು ಸುದ್ದಿ ತೋರಿಸುತ್ತ ಖುಷಿಯಿಂದ ವದರಿತು.

‘ಎದರಾಗೆ ಫಸ್ಟ್ ಬಂದೀವಿ ಅಂತ ಮೊದ್ಲು ನೋಡು, ಆಮೇಲೆ ಖುಷಿ ಪಡು. ನಾವು ಚೀನಾ ದೇಶ ಹಿಂದಿಕ್ಕಿದ್ದು ಜನಸಂಖ್ಯೆವಳಗ. ಇಡೀ ವಿಶ್ವದಾಗೆ ನಮ್ಮಲ್ಲಿ ಜನಸಂಖ್ಯೆ ಭಯಂಕರ ಹೆಚ್ಚಾಗೈತಿ, ಅಂದ್ರ ಇನ್ನು ಕೆಲ ವರ್ಷಗಳಲ್ಲಿ ಮಂದಿಗಿ ನಿಲ್ಲಾಕೆ ಜಾಗ, ಕುಡಿಲಾಕೆ ನೀರೂ ಸಿಗಂಗಿಲ್ಲ’.

‘ಓ ಹಂಗೇನು...’ ಎಂದು ಉದ್ಗರಿಸಿದ ಬೆಕ್ಕಣ್ಣ, ‘ಹಂಗಾರೆ ಇದು ಬ್ಯಾಡ್ ಡೇಟಾ. ಕೆಟ್ಟ ಅಂಕಿಸಂಖ್ಯೆ. ಅಂದ್ರ ಅವರ ಸಮೀಕ್ಷಾ ವಿಧಾನನೇ ತಪ್ಪೈತಿ. ನಮ್ಮಲ್ಲಿ ಒಂದು ಸಮುದಾಯವನ್ನು ಬಿಟ್ಟು, ಇನ್ನುಳಿದ ಸಮುದಾಯದವರ ಜನಸಂಖ್ಯೆ ಇಳಿಯಾಕೆ ಹತ್ತೈತಿ’ ಎಂದು ವಾದಿಸತೊಡಗಿತು.

‘ಎಷ್ಟ್ ಮಂದಿ ಅಂತ ತಲೆ ಎಣಿಸೂದಷ್ಟೆ, ಸಮೀಕ್ಷಾ ವಿಧಾನದಾಗೆ ಏನು ತಪ್ಪಿರತೈತಿ?’ ನಾನು ಗದರಿದೆ. ‘ಜನಸಂಖ್ಯೆ ಹೆಚ್ಚಾತಂದರ ನಮ್ಮಲ್ಲಿ ಯುವಶಕ್ತಿ ಹೆಚ್ಚಾಗೈತಿ ಅಂತ ಖುಷಿಪಡಬಕು’ ಎಂದು ಗುರುಗುಟ್ಟಿದ ಬೆಕ್ಕಣ್ಣ ಮುಂದಿನ ಸುದ್ದಿಗೆ ಹಾರಿತು.

‘ಲಿಂಗಾಯತ ಅಣೆಕಟ್ಟು ಒಡೀತೈತಿ ಅಂತ ಡಿಕೇಶಣ್ಣ ಹೇಳ್ಯಾನ... ಇದ್ಯಾವ ನದಿಗೆ ಕಟ್ಟಿದ ಅಣೆಕಟ್ಟು?’ ಎಂದು ತಲೆ ಕೆರೆದುಕೊಂಡಿತು.

‘ನದಿಗಲ್ಲಲೇ, ಅದು ಮತದಾರರಿಗೆ ಕಟ್ಟಿದ್ದು’ ಎಂದು ನಾನು ವಿವರಿಸಿದೆ.

‘ಅದಕ್ಕೆ ನಮ್ಮ ಬೊಮ್ಮಾಯಿ ಅಂಕಲ್ಲು ನಮ್ ಅಣೆಕಟ್ಟು ಭದ್ರ ಐತೆ, ಕೈಹೊಂಡದಾಗೆ ನೀರೇ ಇಲ್ಲ ಅಂದಾರೆ. ಎಷ್ಟರ ರೂಪಕಭಾಷೆವಳಗೆ ಮಾತಾಡ್ತರವ್ವಾ ಇವ್ರು’ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡಿತು.

‘ಅವ್ರ ಹೊಂಡದಾಗೆ ಬಿಡು... ಈ ವರ್ಷ ಬ್ಯಾಸಿಗಿ ಎಷ್ಟ್ ಜೋರೈತಿ. ಇರೋ ನಾಕಾರು ಕೆರೆ, ಬಾವಿವಳಗೂ ನೀರಿಲ್ಲ ಅಂತ ಮಂದಿ ಗೋಳಾಡಕಹತ್ಯಾರ’.

‘ಅದಕ್ಕೇ ನಮ್ಮ ರಾಜಕಾರಣಿಗಳು, ಬಿಲ್ಡರುಗಳು ಕೆರೆ, ಬಾವಿನೇ ನುಂಗಿ ನೀರು ಕುಡಿದಾರೆ. ಶ್ರೀಸಾಮಾನ್ಯರ ಬದುಕು ಮಾತ್ರ ಒಣಒಣ ಭಣಭಣ’ ಎಂದು ರೂಪಕಭಾಷೆಯಲ್ಲಿಯೇ ನನ್ನ ಮೂತಿಗೆ ತಿವಿಯಿತು.

ಸಂಗತ

ಫೇಲಾದರೇನಂತೆ... ಕತ್ತೆ ಬಾಲ...!

ಫೇಲಾದರೆ ಅರ್ಧ ಅಥವಾ ಒಂದು ವರ್ಷವಷ್ಟೇ ನಷ್ಟ. ಮತ್ತೆ ದೃಢ ಮನಸ್ಸಿನಿಂದ ಪ್ರಯತ್ನಿಸಿದರೆ ಎದ್ದು ನಿಲ್ಲಬಹುದು, ಓಡಲೂಬಹುದು

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಮಂಗಳೂರು ಆಕಾಶವಾಣಿಯಲ್ಲಿ ನಾನು ‘ಯುವವಾಣಿ’ ಕಾರ್ಯಕ್ರಮ ನೋಡಿಕೊಳ್ಳುತ್ತಿದ್ದಾಗ ಇದು ನಡೆಯಿತು. ರೆಕಾರ್ಡಿಂಗಿಗೆ ಬರಬೇಕಾಗಿದ್ದ ಒಬ್ಬ ಯುವತಿ ತುಂಬಾ ತಡವಾಗಿ ಬಂದಳು. ನನಗೆ ಕೋಪ ಬಂದಿದ್ದರೂ ಮೊದಲು ರೆಕಾರ್ಡಿಂಗ್ ಕಾರ್ಯ ಮುಗಿಸಿದೆ. ಚೆಕ್ ಕೊಡಿಸಿದೆ. ಆದರೆ, ಆ ಯುವತಿಗೆ ತಾನು ಏಕೆ ತಡವಾಗಿ ಬಂದೆ ಎಂಬುದನ್ನು ನನ್ನ ಬಳಿ ಹೇಳಿಕೊಳ್ಳುವ ತವಕವಿತ್ತು. ಆಯಿತು, ಹೇಳು, ಎಂದು ನಾನು ಅರೆಮನಸ್ಸಿನಿಂದ ಕಿವಿಗೊಟ್ಟೆ. ಆಕೆ ಹೇಳಿದ ಮಾತು ನನ್ನ ಹೃದಯವನ್ನು ಹಿಂಡಿತ್ತು.

ಆಕೆಯ ಸ್ನೇಹಿತೆ ಪಿಯುಸಿಯಲ್ಲಿ ಫೇಲ್ ಆಗಿದ್ದಳು. ಎರಡು ದಿನಗಳಿಂದ ಆಕೆಯ ಪತ್ತೆ ಇರಲಿಲ್ಲ. ಅಂದು ಬೆಳಿಗ್ಗೆ ಅವಳ ಶವ ಅವರ ಕಾಂಪೌಂಡಿನ ಬಾವಿಯಲ್ಲಿ ತೇಲುತ್ತಿತ್ತು. ಆ ಕಾರಣಕ್ಕಾಗಿ ನನ್ನ ನಿರೂಪಕಿ ಬರುವುದು ತಡವಾಗಿತ್ತು. ಆ ಹುಡುಗಿ ಫೇಲಾಗಿದ್ದ ಕಾರಣಕ್ಕೆ ಬಾವಿಗೆ ಹಾರಿಕೊಂಡ ದಿನ ನಾನು, ಪಿಯುಸಿಯಲ್ಲಿ ರ‍್ಯಾಂಕ್ ಗಳಿಸಿದ್ದ ನಾಲ್ಕು ಜನರ ಸಂದರ್ಶನವನ್ನು ಯುವವಾಣಿಯಲ್ಲಿ ಬಹಳ ಹೆಮ್ಮೆಯಿಂದ ಪ್ರಸಾರ ಮಾಡಿದ್ದೆ. ಆ ಧಿಮಾಕಿನಲ್ಲಿ, ಫೇಲಾದ, ಫೇಲಾಗಿದ್ದಕ್ಕಾಗಿ ಜೀವವನ್ನು ಕಳೆದುಕೊಳ್ಳುವ ಎಳೆಯ ಮನಸ್ಸುಗಳನ್ನು ಮರೆತಿದ್ದಕ್ಕೆ ಬಹಳ ಖೇದವೆನ್ನಿಸಿತು.

ಯುವವಾಣಿಯಲ್ಲಿ ಮರುದಿವಸವೇ ‘ಫೇಲಾದರೇನಂತೆ ಕತ್ತೆ ಬಾಲ, ಕುದುರೆ ಜುಟ್ಟು’ ಎನ್ನುವ ಶೀರ್ಷಿಕೆಯಡಿಯಲ್ಲಿ, ಐದು ಜನ ಫೇಲಾದ ಯುವಕಯುವತಿಯರ ಜೊತೆಗಿನ ಸಂವಾದವನ್ನು ಪ್ರಸಾರ ಮಾಡಿದೆವು. ಇದನ್ನು ಪ್ರತಿವರ್ಷವೂ ಮಾಡಿದೆವು. ಈ ಪ್ರಸಾರಕ್ಕೆ ಫೇಲಾದ ವಿದ್ಯಾರ್ಥಿಗಳೂ ಸಕಾರಾತ್ಮಕವಾಗಿ ಸ್ಪಂದಿಸಿದರು. ಆ ಸಂವಾದದಲ್ಲಿ ಆ ವಿದ್ಯಾರ್ಥಿಗಳು ತಾವು ಫೇಲಾಗಿದ್ದೇಕೆ ಎಂಬುದನ್ನು ನಮ್ಮೊಂದಿಗೆ ಹಂಚಿಕೊಂಡರು. ಅವರ ಮಾತುಗಳು, ನಾಲ್ಕು ದಶಕಗಳ ನಂತರವೂ ಸಂಗತವಾಗಿವೆ.

ಸಾಮಾನ್ಯವಾಗಿ ಹೆಚ್ಚು ಅಂಕ, ರ‍್ಯಾಂಕುಗಳನ್ನು ಪಡೆದ ವಿದ್ಯಾರ್ಥಿಗಳು ಕುಟುಂಬದಿಂದ ಪ್ರೇರಣೆ, ಬೆಂಬಲ, ಸೌಕರ್ಯಗಳನ್ನು ಪಡೆದಿರುತ್ತಾರೆ. ಬಡ ಕುಟುಂಬದ ಮಕ್ಕಳೂ ಅಪರೂಪಕ್ಕೆ ರ‍್ಯಾಂಕ್ ಪಡೆಯುತ್ತಾರೆ. ಇವೆಲ್ಲಾ ವಿಶೇಷ ಉದಾಹರಣೆಗಳು. ಇಂಥ ಯಶೋಗಾಥೆಗಳಲ್ಲಿ ಶಿಕ್ಷಣ ವ್ಯವಸ್ಥೆ, ಶಾಲಾ ಕಾಲೇಜು, ಶಿಕ್ಷಕರ ಪಾತ್ರವೆಷ್ಟು ಎಂಬ ಪ್ರಶ್ನೆಯನ್ನು ನಾವು ಪ್ರಾಮಾಣಿಕವಾಗಿ ಕೇಳಿಕೊಳ್ಳಬೇಕು. ಶಿಕ್ಷಣ ವ್ಯವಸ್ಥೆ ಸಾರ್ವತ್ರಿಕಗೊಂಡ ನಂತರ ಮುಖ್ಯವಾಗಿ ಅದು, ಬಡ ವರ್ಗದ, ಮೊದಲನೇ ಪೀಳಿಗೆಯ ಸಾಕ್ಷರರ, ಕುಟುಂಬದ ದುಡಿಮೆಯಲ್ಲಿಯೂ ಭಾಗವಹಿಸುವುದು ಅನಿವಾರ್ಯವಾದ, ಶಾಲೆಕಾಲೇಜುಗಳಿಂದ ದೂರದಲ್ಲಿರುವ, ಮುಖ್ಯವಾಗಿ ಬಾಲೆಯರ ಪರಿಸ್ಥಿತಿಗೆ ಸ್ಪಂದಿಸುವಂತೆ ಇದೆಯೇ ಎಂದು ನೋಡಿದಾಗ, ನಾವು ರ‍್ಯಾಂಕ್ ಪಡೆದವರನ್ನು ನೋಡಿ ‘ನಮ್ಮಿಂದಲೇ ಅದು ಸಾಧ್ಯವಾಗಿದ್ದು’ ಎಂದು ಎದೆ ತಟ್ಟಿಕೊಳ್ಳುವುದು ಆತ್ಮವಂಚನೆಯಾಗುತ್ತದೆ.

ಹಾಗೆಂದು ಇದರಲ್ಲಿ ಫೇಲಾಗುವ ವಿದ್ಯಾರ್ಥಿಗಳ ತಪ್ಪೇನೂ ಇಲ್ಲ ಎಂದು ಹೇಳಲಾಗದು. ಇರುವ ಸೌಲಭ್ಯ, ಅವಕಾಶವನ್ನು ಬಳಸಿಕೊಂಡು, ಪಾಸಾಗುವಷ್ಟಾದರೂ ಅಂಕ ಗಳಿಸುವುದು ಬಹಳ ಕಷ್ಟದ ಕೆಲಸವೇನಲ್ಲ. ದಿನನಿತ್ಯ ತರಗತಿಗಳಿಗೆ ಹಾಜರಾಗಿ, ತದೇಕಚಿತ್ತದಿಂದ ಪಾಠಗಳನ್ನು ಆಲಿಸಿ, ಏನಾದರೂ ಅರ್ಥವಾಗದಿದ್ದಾಗ ಮುಲಾಜಿಲ್ಲದೇ ‘ಅರ್ಥವಾಗಲಿಲ್ಲ ಸರ್, ಇನ್ನೊಮ್ಮೆ ಅರ್ಥ ಮಾಡಿಸಿ’ ಎಂದು ಹೇಳುವ ‘ಭಂಡತನ’ವನ್ನು ತೋರುತ್ತಾ ಇದ್ದರೆ ಸಾಕಾಗುತ್ತದೆ. ಈ ಆತ್ಮಸ್ಥೈರ್ಯ ಮೂಡುವುದೂ ವ್ಯವಸ್ಥೆಯಿಂದ ಎಂಬುದನ್ನು ನಾವು ಮತ್ತೆ ಮರೆಯುವಂತಿಲ್ಲ.

ಮೊಬೈಲ್, ವಿವಿಧ ರೀತಿಯ ರೋಚಕ ಆ್ಯಪ್‌ಗಳು, ಆನ್‌ಲೈನ್ ಆಟಗಳು, ರೀಲುಗಳು, ಕಿರುಚಿತ್ರದಂತಹವುಗಳ ಮುಖ್ಯ ಗ್ರಾಹಕರು ಅಂದರೆ ಯುವಜನ. ಉದ್ಯಮಗಳು ಯುವ ಮನಸ್ಸುಗಳನ್ನು ಗೆದ್ದಲು ಹಿಡಿಸಿ ತಮ್ಮ ಉತ್ಪನ್ನಗಳನ್ನು ಪರವಶತೆಯಿಂದ ಬಳಸುವಂತೆ ಮಾಡುವ ಎಲ್ಲಾ ಅಸ್ತ್ರಗಳನ್ನು ಇವರ ಮೇಲೆ ಪ್ರಯೋಗಿಸುತ್ತಾರೆ. ಇಂಥ ಮಕ್ಕಳಿಗೆ, ತಮಗೆ ಮೊಬೈಲ್ ಕೊಡಿಸದೇ ಇರುವ, ಕೊಡಿಸಿದರೂ ಬಳಕೆಯ ಮೇಲೆ ನಿರ್ಬಂಧ ಹೇರುವ ತಾಯಿತಂದೆ ಶತ್ರುಗಳ ಹಾಗೆ ಕಾಣುತ್ತಾರೆ.

ಪೋಷಕರು ಮತ್ತು ಬೆಳೆಯುವ ಮಕ್ಕಳ ನಡುವಿನ ಸೌಹಾರ್ದದಲ್ಲಿ ಹುಳಿ ಹಿಂಡಿ, ಬೇಳೆ ಬೇಯಿಸಿಕೊಳ್ಳುವ ಹಲವಾರು ದುಷ್ಟಶಕ್ತಿಗಳು ಸುತ್ತಲೂ ವಿಜೃಂಭಿಸುತ್ತಿರುವ ಸನ್ನಿವೇಶದಲ್ಲಿ, ಸಾಧಾರಣ ಪೋಷಕರು ಅಸಹಾಯಕರಾಗಿಬಿಡುತ್ತಿದ್ದಾರೆ. ಆಗ, ದೇಶದ ಅಮೂಲ್ಯ ಸಂಪನ್ಮೂಲವಾದ ಯುವಜನರ ಭವಿಷ್ಯವನ್ನು ಸುರಕ್ಷಿತ, ಸುಭದ್ರಗೊಳಿಸುವ ಜವಾಬ್ದಾರಿ ಸರ್ಕಾರದ ಮೇಲಿರುತ್ತದೆ. ಆಡಳಿತಾರೂಢ ಸರ್ಕಾರಗಳು ನಿರ್ದಿಷ್ಟವಾದ ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ದುಡಿಯದೇ ಇದ್ದರೆ ಯುವಜನರ ಬಹುದೊಡ್ಡ ಸಂಖ್ಯೆ ದೇಶಕ್ಕೆ, ಕುಟುಂಬಕ್ಕೆ ಕೊನೆಗೆ ತನಗೆ ತಾನೇ ನಿಷ್ಪ್ರಯೋಜಕವಾಗುತ್ತದೆ.

ಪ್ರತಿಯೊಬ್ಬರ ಜೀವ ಅಮೂಲ್ಯವಾದದ್ದು, ಒಬ್ಬರ ಜೀವ ಅವರೊಬ್ಬರಿಗೇ ಸೇರಿದ್ದಲ್ಲ. ಕುಟುಂಬದಲ್ಲಿ, ಸಮಾಜದಲ್ಲಿ ಅವರ ಒಂದು ಜೀವದೊಂದಿಗೆ ಹಲವರ ಜೀವಗಳು, ಜೀವನಗಳು, ಕನಸುಗಳು ತಳಕು ಹಾಕಿಕೊಂಡಿರುತ್ತವೆ. ಹೀಗಾಗಿ, ಒಂದು ಆತ್ಮಹತ್ಯೆಯು ಹಲವು ಜೀವಗಳ ‘ಹತ್ಯೆ’ಗೂ ಕಾರಣವಾಗುತ್ತದೆ ಎಂಬ ಸರಳ ಸತ್ಯವನ್ನು ಯುವಜನರಿಗೆ ಮನನ ಮಾಡಿಸುವುದು ವ್ಯವಸ್ಥೆಯ ಜವಾಬ್ದಾರಿಯಲ್ಲವೇ?

ಫೇಲಾದರೆ ಅರ್ಧ ಅಥವಾ ಒಂದು ವರ್ಷವಷ್ಟೇ ನಷ್ಟ. ಎಡವಿದ್ದು ಏತಕ್ಕೆ ಎಂದು ಅರಿತುಕೊಂಡು, ದೃಢ ಮನಸ್ಸಿನಿಂದ ಪ್ರಯತ್ನಿಸಿದರೆ ಎದ್ದು ನಿಲ್ಲಬಹುದು, ಓಡಲೂಬಹುದು, ಅಲ್ಲವೇ ಯುವಮನಸ್ಸುಗಳೇ!

ವಾಚಕರ ವಾಣಿ

ಸ್ವಾಮೀಜಿಯ ಮಾದರಿ ನಡೆ

ಹುಬ್ಬಳ್ಳಿಯ ವೀರ ಭಿಕ್ಷಾವೃತ್ತಿ ಮಠದ ಮಾಜಿ ಪೀಠಾಧ್ಯಕ್ಷ ಶಿವಶಂಕರ ಸ್ವಾಮೀಜಿ, ಬಾಗಲಕೋಟೆ ಜಿಲ್ಲೆಯ ತೇರದಾಳ ಮತಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಅವರು ನಾಮಪತ್ರ ಸಲ್ಲಿಸುವ ಮೊದಲು ತಮ್ಮ ಭಕ್ತರ ಸಭೆ ಕರೆದು, ಪೀಠಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಪೀಠದ ಜವಾಬ್ದಾರಿಯನ್ನು ಪೂರ್ಣ ತ್ಯಜಿಸಿದ ನಂತರ ಸ್ಪರ್ಧೆಗೆ ಇಳಿದಿದ್ದಾರೆ. ಪೀಠಾಧಿಕಾರಿಯಾಗಿ ರಾಜಕೀಯ ಮಾಡುವುದು ಸರಿಯಲ್ಲ, ಅದು ಮಠದ ಭಕ್ತರಿಗೆ ಮುಜುಗರವನ್ನು ಉಂಟುಮಾಡುತ್ತದೆ ಎಂದು ಅವರು ಹೇಳಿದ್ದಾರೆ. ಸ್ವಾಮೀಜಿಯ ನಿಲುವು ನಿಜಕ್ಕೂ ಮೆಚ್ಚತಕ್ಕ ಸಂಗತಿ. ಧಾರ್ಮಿಕ ಪೀಠದಲ್ಲಿ ಕುಳಿತು ದಿನವಿಡೀ ರಾಜಕೀಯದಲ್ಲಿ ತೊಡಗಿರುವ ಮಠಾಧಿಪತಿಗಳಿಗೆ ಇದೊಂದು ನೀತಿ ಪಾಠವಾಗಿದೆ.

ಡಾ. ಸಿದ್ಧಣ್ಣ ಉತ್ನಾಳ, ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಚುನಾವಣೆ: ಅಭ್ಯರ್ಥಿ ವೆಚ್ಚ ಮಾಡುವುದೇಕೆ?

ಚುನಾವಣೆ ಎದುರಿಸಲು ಅಭ್ಯರ್ಥಿಗಳೇಕೆ ವೆಚ್ಚ ಮಾಡಬೇಕು? ಈ ರೀತಿ ವೆಚ್ಚ ಮಾಡಿ ಸ್ಪರ್ಧಿಸುವವರ ನಿರೀಕ್ಷೆ ಕೂಡ ಹಣ, ಆಸ್ತಿಯನ್ನು ಹೆಚ್ಚಿಸಿಕೊಳ್ಳುವುದೇ ಆಗಿರುತ್ತದೆ ಅಲ್ಲವೇ? ಅದ್ದೂರಿ ಪ್ರಚಾರ ಕೈಗೊಂಡು ದುಂದುವೆಚ್ಚ ಮಾಡುವುದರ ಬದಲು ಸಮೂಹ ಮಾಧ್ಯಮಗಳ ಮೂಲಕ ಮಾತ್ರವೇ ಅಭ್ಯರ್ಥಿಯು ಮತದಾರರನ್ನು ಸಂಪರ್ಕಿಸುವಂಥ ವ್ಯವಸ್ಥೆ ಜಾರಿಯಾದರೆ, ಆಮಿಷಗಳನ್ನು ತೋರಿಸಿ ಮತ ಕೇಳುವುದು ತಪ್ಪುತ್ತದೆ. ಅಲ್ಲದೆ ರಾಜಕೀಯ ಪಕ್ಷಗಳು ‘ಪಾರ್ಟಿ ಫಂಡ್’ ಹೆಸರಿನಲ್ಲಿ ಹಣ ಸಂಗ್ರಹ ಮಾಡುವುದಕ್ಕೂ ಕಡಿವಾಣ ಬೀಳುತ್ತದೆ.

ಇಂಥ ಸುಧಾರಣೆ ತರಲು ಇರುವ ಸರಳ ಉಪಾಯವೆಂದರೆ, ಅಭ್ಯರ್ಥಿಯು ತನ್ನ ಪರಿಚಯ, ತನಗಿರುವ ಆಡಳಿತಾಸಕ್ತಿ, ಕೈಗೊಳ್ಳಬಹುದಾದ ಅಭಿವೃದ್ಧಿ ಯೋಜನೆಗಳ ಬಗ್ಗೆ ಜನರೊಂದಿಗೆ ಸಂವಹನ ನಡೆಸಲು ‘ಮಾಧ್ಯಮ ಖರ್ಚು’ ಎಂದು ಸರ್ಕಾರವೇ ಭರಿಸುವಂಥ ಹಾಗೂ ಅಭ್ಯರ್ಥಿಗಳು ಉಚಿತವಾಗಿ ಸಾರ್ವಜನಿಕ ಸಾರಿಗೆಯನ್ನು ಬಳಸಿಕೊಳ್ಳುವ ಅವಕಾಶ ಕಲ್ಪಿಸುವಂಥ ಬದಲಾವಣೆಗಳಾದರೆ, ರಾಜಕೀಯ ಆಸಕ್ತಿ ಮತ್ತು ಸಾಮಾಜಿಕ ಸುಧಾರಣೆಯ ಬಗ್ಗೆ ಕಾಳಜಿಯುಳ್ಳವರೂ ಚುನಾವಣೆಯಲ್ಲಿ ಸ್ಪರ್ಧಿಸಲು ಅನುವಾಗುತ್ತದೆ. ಇದು ಉತ್ತಮ ಸರ್ಕಾರ ರಚನೆಗೆ ನಾಂದಿಯಾಗಬಹುದು. ಹೆಚ್ಚಿನದಾಗಿ ಹಣ, ಆಸ್ತಿ ಹೊಂದಿರುವವರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯ ಎನ್ನುವಂಥ ವಾತಾವರಣ ನಿರ್ಮಾಣವಾಗುತ್ತಿರುವುದನ್ನು ತಡೆಯಬಹುದು.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಸೌಹಾರ್ದದ ನಡೆಗೆ ಮುನ್ನುಡಿಯಾಗಲಿ

ಈದ್ ಪ್ರಯುಕ್ತ ಮುಸ್ಲಿಮರು ಮಂತ್ರಾಲಯದಲ್ಲಿ ರಾಯರ ದರ್ಶನ ಮಾಡಿರುವ ವರದಿ (ಪ್ರ.ವಾ., ಏ. 23) ಓದಿ ಮಹದಾನಂದವಾಯಿತು. ರಾಯಚೂರಿನ ಮುಸಲ್ಮಾನ ಬಂಧುಗಳು, ಸಂವಿಧಾನದ ಮಹತ್ವ, ಧರ್ಮಪಾಲನೆಯ ಮೂಲಕ ಸರ್ವರೊಂದಿಗೆ ಸಹಬಾಳ್ವೆ ನಡೆಸುವ ಸಂದೇಶವನ್ನೂ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರಿಂದ ಪಡೆದಿದ್ದಾರೆ. ಮಂತ್ರಾಕ್ಷತೆ, ಪರಿಮಳ ಪ್ರಸಾದವನ್ನೂ ಅವರಿಗೆ ವಿತರಿಸಲಾಗಿದೆ.

ಇದು ಇಂದಿನ ತುರ್ತು. ಸಾಮಾಜಿಕ ಜೀವನದಲ್ಲಿ ಧಾರ್ಮಿಕ ಕೇಂದ್ರಗಳು ಸೌಹಾರ್ದ ಮೆರೆದಲ್ಲಿ ಒಳಗಿನ ದುಷ್ಟ ಶಕ್ತಿಗಳ ದಮನವಾಗುತ್ತದೆ. ಇಂತಹ ಸೌಹಾರ್ದ ನಡೆಗೆ ಕನ್ನಡ ನಾಡು ಮುನ್ನುಡಿ ಬರೆಯಲಿ.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ನಂದಿನಿ: ಸ್ಪರ್ಧೆಗೆ ಅಣಿಗೊಳಿಸೋಣ

‘ದ್ವೇಷ ಭಾಷಣಕ್ಕೆ ನಮ್ಮ ಮತ ಇಲ್ಲ’ ಎಂಬ ಅಭಿಯಾನದ ಮೂಲಕ, ಹದ ಮೀರಿ ಉಲ್ಬಣಿಸುತ್ತಿರುವ ರಾಜಕಾರಣದ ಆತಂಕಗಳ ನಡುವೆ ಸಾಹಿತಿ, ಚಿಂತಕರ ಚಾವಡಿಯು ಮತದಾರರಲ್ಲಿ ಜಾಗೃತಿ ಅಭಿಯಾನದ ಮುನ್ನುಡಿಗೆ ನಾಂದಿ ಹಾಡಿದೆ (ಪ್ರ.ವಾ., ಏ. 21). ದ್ವೇಷ ಭಾಷಣಕ್ಕೆ ಮತ ಬೇಡ ಅನ್ನುವುದು ಸರಿಯಾಗಿದೆ. ಆದರೆ ಅಲ್ಲಿ ಪರಾಕ್ರಾಂತವಾಗುತ್ತಿರುವ ನಂದಿನಿ ಮತ್ತು ಅತಂತ್ರ ಆಗಬಹುದಾದ ಹೈನು ಆಸರೆಯ ರೈತರ ಬಗ್ಗೆ ಉಲ್ಲೇಖವಾಗಿರುವುದು ಏಕೋ ಬಾಲಿಶ ಅನಿಸಿತು. ಹೈನು ಆಧಾರಿತ ರೈತರಿಗೆ ಸೂಕ್ತ ಬೆಂಬಲ ಬೆಲೆ, ಗೊಬ್ಬರ, ಮೇವು ಕೊಡದೆ ತೀವ್ರ ಉಪೇಕ್ಷೆ ಮಾಡಲಾಗಿದೆ. ನಂದಿನಿಯ ಒಳಗಡೆಯೇ ಮುಲುಗುಡುತ್ತಿರುವ ಹೇರಳ ಹಳವಂಡಗಳ ಬಗ್ಗೆ ಇಲ್ಲದ ಕಳವಳ ಮತ್ತು ನಂದಿನಿಯ ಕೆಲ ಪಟ್ಟಭದ್ರ ವೆಂಡರುಗಳಿಂದಲೇ ಸೃಷ್ಟಿಯಾದ ನಂದಿನಿ ವಿರೋಧದ ಪ್ರಚಾರಗಳ ಕುರಿತು ಇಲ್ಲದ ಕಾಳಜಿಯು ನಂದಿನಿ ಕುರಿತು ಯಾರೋ ಒದರಿದ ಅಧಿಕೃತವಲ್ಲದ ಮಾತುಗಳಲ್ಲಿ ಕಲ್ಪಿಸಿಕೊಂಡ ಭಯದ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲು ಮುಂದಾಗುವುದು ಎಷ್ಟು ಸರಿ?

ಅಕಸ್ಮಾತ್ ಈಗ ಅಮೂಲ್ ನಮ್ಮ ನೆಲಕ್ಕೆ ಬಂದು ರೈತರಿಗೆ ಲೀಟರಿಗೆ ₹ 5 ಹೆಚ್ಚುವರಿಯಾಗಿ ಕೊಟ್ಟರೆ ನಾವು ರೈತರ ಪರ ಇರಬೇಕೇ ಅಥವಾ ರೈತರೇ ಕಟ್ಟಿದ ನಂದಿನಿಯ ವೈಭವದ ಕಡೆಗೆ ಇರಬೇಕೆ? ಹಾಗೆ ಜಾಗೃತಿಯನ್ನು ಬಿತ್ತುವ ಮೊದಲು, ಸಹಕಾರಿ ಕ್ಷೇತ್ರದ ರೂಪುರೇಷೆ ಮತ್ತು ವ್ಯಾವಹಾರಿಕ ಜಾಣ್ಮೆಗಳ ಕುರಿತೂ ಯೋಚಿಸಬೇಕಲ್ಲವೇ? ಕನ್ನಡ ನೆಲದಲ್ಲಿ ಅಮೂಲ್ ಆನ್‌ಲೈನ್ ವಹಿವಾಟಿಗೆ ಈಗಾಗಲೇ ನಂದಿನಿ ಅದೇ ರೀತಿಯ ತಕ್ಕ ಉತ್ತರ ಕೊಡಲು ಸಜ್ಜಾಗಿದೆ. ಈಗ ಕೇರಳವು ನಂದಿನಿಯನ್ನು, ನಾವು ಅಮೂಲ್ ಅನ್ನು ವಿರೋಧಿಸಿದ ಹಾಗೆ ವಿರೋಧಿಸಿದೆ! ಅದು ನಿಜವಾದರೆ ನಷ್ಟ ನಮ್ಮ ರೈತರಿಗೇ ಅಲ್ಲವೆ? ಹಾಗಾಗಿ ಕೇರಳದ ಸಹಕಾರಿ ಹಾಲು ಮಹಾಮಂಡಳವಾದ ‘ಮಿಲ್ಮ’ ಕೂಡಾ ನಂದಿನಿಯ ಹಾಗೆ ಜಾಣ್ಮೆ ತೋರಬೇಕಿದೆ. ಭಾವನೆಗಳ ಬಿಕರಿಗಿಂತ ಇಲ್ಲಿ ಸ್ಪರ್ಧೆ ಮುಖ್ಯ. ನಮ್ಮ ರೈತರನ್ನು ಸ್ಪರ್ಧೆಗೆ ಅಣಿಗೊಳಿಸುವ ನಂದಿನಿಯ ಉಪಕ್ರಮ ಮುಖ್ಯ. ಅವರು ಶಕ್ತರಾದರೆ ನಂದಿನಿ ಸಶಕ್ತ.

ಕೆ.ಪುರುಷೋತ್ತಮ ರೆಡ್ಡಿ, ಪಾವಗಡ

ತನಿಖೆಗೆ ಒಳಪಡಲಿ ಆದಾಯದ ಮೂಲ

ಪ್ರಸಕ್ತ ವಿಧಾನಸಭಾ ಚುನಾವಣೆಗೆ ಪುನರಾಯ್ಕೆ ಬಯಸಿ ಕೆಲವರು ನಾಮಪತ್ರ ಸಲ್ಲಿಸಿದ್ದಾರೆ. ಆದರೆ ಅವರ ಮೂಲ ಆದಾಯವು ಹಲವು ಪಟ್ಟು ಹೆಚ್ಚಾಗಿರುವುದು ಕಂಡುಬಂದಿದೆ. ಅವರ ಅಧಿಕಾರಾವಧಿಯಲ್ಲಿ ಕೊರೊನಾ ಕಾರಣದಿಂದ ಸುಮಾರು ಎರಡು ವರ್ಷಗಳ ಕಾಲ ಎಲ್ಲ ಬಗೆಯ ಆರ್ಥಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಿತ್ತು. ಇದರ ನಡುವೆಯೂ ಇವರ ಮೂಲ ಆದಾಯ ಹೆಚ್ಚಾಗಿದೆ ಅನ್ನುವುದಾದರೆ, ಆ ಆದಾಯ ಎಲ್ಲಿಯದು ಎನ್ನುವುದರ ಬಗ್ಗೆ ತನಿಖೆಯಾಗಲಿ. ಅದು ಭ್ರಷ್ಟಾಚಾರದ ಮೂಲದಿಂದ ಬಂದಿದ್ದಾಗಿದ್ದರೆ ಸೂಕ್ತ ಕಾನೂನು ಕ್ರಮ ಜರುಗಿಸುವ ಪ್ರಾಮಾಣಿಕ ಪ್ರಯತ್ನ ನಡೆಯಲಿ.

ಸಾಗರ್ ದ್ರಾವಿಡ್, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಿಬಿಎಸ್‌ಇ ಪಠ್ಯ ಪರಿಷ್ಕರಣೆಗೆ ಆಕ್ಷೇಪ

ಪಠ್ಯಪುಸ್ತಕ ಪರಿಷ್ಕರಣೆ ಈಗ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗುತ್ತಿದೆ. ಇದು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ನಡುವೆ ವಾಗ್ವಾದಕ್ಕೆ ಕಾರಣವಾಗಿದೆ. ಕೇಂದ್ರೀಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ (ಸಿಬಿಎಸ್‌ಇ) 12ನೇ ತರಗತಿಯ ರಾಜ್ಯಶಾಸ್ತ್ರ ಮತ್ತು ಇತಿಹಾಸ ಪುಸ್ತಕಗಳಿಂದ ಮಹಾತ್ಮ ಗಾಂಧಿಗೆ ಸಂಬಂಧಿಸಿದ ಪಠ್ಯದಲ್ಲಿ ಕೆಲವು ಅಂಶಗಳನ್ನು ಕೈಬಿಡಲಾಗಿದೆ. ಮೊಘಲರಿಗೆ ಸಂಬಂಧಿಸಿದ ಇಡೀ ಪಾಠವನ್ನೇ ತೆಗೆದುಹಾಕಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಕರ್ನಾಟಕ ಸರ್ಕಾರವು ವರ್ಷದ ಹಿಂದೆ ನಡೆಸಿದ್ದ ಪಠ್ಯಪುಸ್ತಕ ಪರಿಷ್ಕರಣೆಗೆ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ, ಕರ್ನಾಟಕದಲ್ಲಿನ ಬಿಜೆಪಿ ಸರ್ಕಾರವು ಅನುಸರಿಸಿದ್ದ ಮಾದರಿಯನ್ನೇ, ಕೇಂದ್ರದಲ್ಲಿನ ಬಿಜೆಪಿ ಸರ್ಕಾರ ಅನುಸರಿಸುತ್ತಿದೆ ಎಂಬುದು ವಿರೋಧ ಪಕ್ಷಗಳ ಆರೋಪ

ಪ್ರಜಾವಾಣಿ ವಾರ್ತೆ

ಶಾಲಾ ಮತ್ತು ಕಾಲೇಜು ಪಠ್ಯಪುಸ್ತಕಗಳಲ್ಲಿ ನಿಗದಿತ ವರ್ಷಗಳ ಅಂತರದಲ್ಲಿ ಪರಿಷ್ಕರಣೆ ಮಾಡುವುದು ರೂಢಿ. ರಾಜ್ಯಮಟ್ಟದಲ್ಲಿ ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕಗಳನ್ನು ರಾಜ್ಯ ಸರ್ಕಾರ ರಚಿಸುವ ಸಮಿತಿಯು ಪರಿಷ್ಕರಣೆ ಮಾಡುತ್ತದೆ. ಕೇಂದ್ರದಲ್ಲಿ ಸಿಬಿಎಸ್‌ಇ ಪಠ್ಯಕ್ರಮದ ಪಠ್ಯಪುಸ್ತಕಗಳನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಪರಿಷ್ಕರಣೆ ಕಾರ್ಯ ನಡೆಸುತ್ತದೆ. ಎನ್‌ಸಿಇಆರ್‌ಟಿಯು 2023–24ನೇ ಶೈಕ್ಷಣಿಕ ವರ್ಷದ ಪರಿಷ್ಕೃತ ಪಠ್ಯಪುಸ್ತಕಗಳನ್ನು ಈಚೆಗೆ ಬಿಡುಗಡೆ ಮಾಡಿತ್ತು. ಈ ಪರಿಷ್ಕೃತ ಪಠ್ಯಪುಸ್ತಕಗಳ ಬಗ್ಗೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಸಿಬಿಎಸ್‌ಇಯ 12ನೇ ತರಗತಿಯ 'ರಾಜ್ಯಶಾಸ್ತ್ರ ಮತ್ತು ಇತಿಹಾಸ' ಪಠ್ಯಪುಸ್ತಕಗಳ ಪರಿಷ್ಕರಣೆಗೆ ಕಾಂಗ್ರೆಸ್ ಸೇರಿ ಎಲ್ಲಾ ಪ್ರಮುಖ ವಿರೋಧ ಪಕ್ಷಗಳ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮಹಾತ್ಮಾ ಗಾಂಧಿ ಅವರ ಹಂತಕರ ಬಗ್ಗೆ, ಹಿಂದೂ–ಮುಸ್ಲಿಂ ಒಗ್ಗಟ್ಟಿನ ಬಗ್ಗೆ ಮತ್ತು ಆರ್‌ಎಸ್‌ಎಸ್ ನಿಷೇಧದ ಬಗ್ಗೆ ಪಠ್ಯಭಾಗಗಳನ್ನು ಈ ಪಠ್ಯಪುಸ್ತಕಗಳಿಂದ ಕೈಬಿಡಲಾಗಿದೆ ಎಂಬುದು ವಿರೋಧ ಪಕ್ಷಗಳ ಟೀಕೆ.

12ನೇ ತರಗತಿಯ ರಾಜ್ಯಶ್ಯಾಸ್ತ್ರ–2 ಪಠ್ಯಪುಸ್ತಕದ ಮೊದಲ ಪಾಠದಲ್ಲಿ ಮಹಾತ್ಮ ಗಾಂಧಿ ಅವರಿಗೆ ಸಂಬಂಧಿಸಿದ ಒಂದು ಪ್ರತ್ಯೇಕ ಭಾಗವನ್ನು ನೀಡಲಾಗಿದೆ. 'ಮಹಾತ್ಮ ಗಾಂಧಿಯ ತ್ಯಾಗ' ಎಂಬ ಈ ಪಠ್ಯಭಾಗದಲ್ಲಿ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಕೋಲ್ಕತ್ತ ಮತ್ತು ದೆಹಲಿಯಲ್ಲಿ ಹಿಂದೂ–ಮುಸ್ಲಿಮರ ನಡುವೆ ನಡೆದ ಗಲಭೆಯ ವಿವರಗಳಿವೆ. ಮಹಾತ್ಮ ಗಾಂಧಿ ಅವರು ಉಪವಾಸ ಸತ್ಯಾಗ್ರಹ ನಡೆಸಿದ್ದು ಭಾರಿ ಪರಿಣಾಮ ಬೀರಿತ್ತು. ಗಲಭೆ ತಣ್ಣಗಾಯಿತು ಎಂದು ಈ ಪಠ್ಯಭಾಗದಲ್ಲಿ ವಿವರಿಸಲಾಗಿದೆ.

ಹಳೆಯ ಪಠ್ಯಪುಸ್ತಕದಲ್ಲಿ, ಹಿಂದೂ ತೀವ್ರಗಾಮಿಗಳು ಗಾಂಧೀಜಿ ಹತ್ಯೆಗೆ ಹಲವು ಬಾರಿ ಯತ್ನಿಸಿದ್ದರು. ಗಾಂಧೀಜಿ ಹತ್ಯೆಯ ನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲಾಗಿತ್ತು ಎಂಬ ವಿವರ ಇತ್ತು. ಅದನ್ನು ಈಗ ತೆಗೆದುಹಾಕಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

12ನೇ ತರಗತಿಯ ಇತಿಹಾಸ ಪಠ್ಯಪುಸ್ತಕದಲ್ಲಿಯೂ ಗಾಂಧೀಜಿ ಅವರ ಹತ್ಯೆಗೆ ಸಂಬಂಧಿಸಿದ ವಿವರಗಳಿವೆ. ಇತಿಹಾಸ ಪಠ್ಯಪುಸ್ತಕ ಭಾಗ–3ರ ಮೂರನೇ ಅಧ್ಯಾಯದಲ್ಲಿ ಗಾಂಧಿ ಅವರ ಹತ್ಯೆಗೆ ಸಂಬಂಧಿಸಿದ ವಿವರಗಳಿವೆ. 'ಜನವರಿ 30ರಂದು ಸಂಜೆಯ ಪ್ರಾರ್ಥನೆಯ ನಂತರ ಒಬ್ಬ ಯುವಕ ಗಾಂಧಿಯನ್ನು ಹತ್ಯೆಮಾಡಿದ. ಆತನ ಹೆಸರು ನಾಥೂರಾಮ್ ಗೋಡ್ಸೆ' ಎಂದಷ್ಟೇ ವಿವರಿಸಲಾಗಿದೆ. ಇಲ್ಲಿಯೂ ಕೆಲವು ವಿವರಗಳನ್ನು ಕೈಬಿಡಲಾಗಿದೆ ಎಂಬುದು ಕಾಂಗ್ರೆಸ್‌ನ ಆರೋಪ.



12ನೇ ತರಗತಿಯ ರಾಜ್ಯಶಾಸ್ತ್ರ ಭಾಗ–2 ಪಠ್ಯಪುಸ್ತಕ

ಕರ್ನಾಟಕ ಸರ್ಕಾರವೂ 2022–23ನೇ ಸಾಲಿನ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಿತ್ತು. ಆ ಪರಿಷ್ಕರಣೆಯು ವಿವಾದದ ಸ್ವರೂಪ ಪಡೆದಿತ್ತು. 8, 9 ಮತ್ತು 10ನೇ ತರಗತಿಯ ಇತಿಹಾಸ, ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಹಲವು ಬದಲಾವಣೆ ತರಲಾಗಿತ್ತು.

ಈ ಪಠ್ಯಪುಸ್ತಕಗಳಲ್ಲಿ ಈ ಹಿಂದೆ ಇದ್ದ ಹಲವು ಸಮಾಜ ಸುಧಾರಕರ ಕುರಿತ ಪಾಠಗಳನ್ನು ತೆಗೆದುಹಾಕಲಾಗಿತ್ತು. ಬಸವಣ್ಣ, ಪೆರಿಯಾರ್, ನಾರಾಯಣ ಗುರು ಅವರ ಪಠ್ಯಭಾಗಗಳನ್ನು ತೆಗೆದುಹಾಕಿತ್ತು. ಈ ಬಗ್ಗೆ 'ಪ್ರಜಾವಾಣಿ' ವರದಿ ಪ್ರಕಟಿಸಿದ ನಂತರ ದೊಡ್ಡ ಮಟ್ಟದಲ್ಲಿ ಚರ್ಚೆ ನಡೆದಿತ್ತು. ಈ ಪಠ್ಯ ಭಾಗಗಳನ್ನು ಮತ್ತೆ ಸೇರಿಸಲಾಗಿತ್ತು. ಡಾ.ಬಿ.ಆರ್. ಅಂಬೇಡ್ಕರ್, ಮಹಾತ್ಮ ಗಾಂಧಿ ಅವರಿಗೆ ಸಂಬಂಧಿಸಿದ ಪಠ್ಯಭಾಗಗಳಲ್ಲಿ ಕೆಲವು ಅಂಶಗಳನ್ನು ತೆಗೆದುಹಾಕಲಾಗಿತ್ತು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

ಮುಸ್ಲಿಂ ಮತ್ತು ದಲಿತ ಲೇಖಕರ ಪಾಠಗಳನ್ನು ಕನ್ನಡ ಭಾಷಾ ಪಠ್ಯಪುಸ್ತಕಗಳಿಂದ ತೆಗೆದುಹಾಕಲಾಗಿತ್ತು. ಈ ಪರಿಷ್ಕರಣೆಯನ್ನು ವಿರೋಧಿಸಿ, ಕನ್ನಡದ ಹಲವು ಸಾಹಿತಿಗಳು 'ಈ ಪಠ್ಯಪುಸ್ತಕದಲ್ಲಿ ತಮ್ಮ ಬರಹವನ್ನು ಬಳಸಬೇಡಿ. ಅದಕ್ಕೆ ನೀಡಿರುವ ಅನುಮತಿಯನ್ನು ವಾಪಸ್ ಪಡೆದಿದ್ದೇವೆ' ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದರು.

ಪಠ್ಯಪುಸ್ತಕ ಪರಿಶೀಲನೆಗೆ ರೋಹಿತ್ ಚಕ್ರತೀರ್ಥ ನೇತೃತ್ವದಲ್ಲಿ ರಚಿಸಿದ್ದ ಸಮಿತಿಯು, ಪರಿಶೀಲನೆಯ ಬದಲಿಗೆ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಿತ್ತು. ಇದಕ್ಕೂ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಪದೇ–ಪದೇ ಪರಿಷ್ಕರಣೆಯ ಕಾರಣಕ್ಕೆ ಪಠ್ಯಪುಸ್ತಕಗಳ ಮುದ್ರಣ ವಿಳಂಬವಾಗಿತ್ತು.

ಕರ್ನಾಟಕದಲ್ಲಿ ಪಠ್ಯಪುಸ್ತಕಗಳ ಪರಿಷ್ಕರಣೆ ವೇಳೆ ಯಾವ ಸ್ವರೂಪದ ಅಂಶಗಳನ್ನು ಕೈಬಿಡಲಾಗಿತ್ತೋ ಅವೇ ರೀತಿಯ ಅಂಶಗಳನ್ನು ಎನ್‌ಸಿಇಆರ್‌ಟಿ ಸಹ ತನ್ನ ಪರಿಷ್ಕರಣೆಯಲ್ಲಿ ಕೈಬಿಟ್ಟಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಈಗ, ಎನ್‌ಸಿಇಆರ್‌ಟಿಯ ಪಠ್ಯಪುಸ್ತಕಗಳನ್ನು ರಾಜ್ಯ ಪಠ್ಯಕ್ರಮದಲ್ಲೂ ಅಳವಡಿಸಿಕೊಳ್ಳಬೇಕು ಎಂದು ಉತ್ತರ ಪ್ರದೇಶ ಸರ್ಕಾರವು ಆದೇಶ ಹೊರಡಿಸಿದೆ.

ಪರಿಷ್ಕರಣೆಗೂ ಮುನ್ನ, ಗಾಂಧೀಜಿ ಹತ್ಯೆ ಮತ್ತು ಆರ್‌ಎಸ್‌ಎಸ್ ನಿಷೇಧ ವಿವರಗಳು

Gandhiji's actions were however not liked by all. Extremists in both the communities blamed him for their conditions. He was particularly disliked by those who wanted Hindus to take revenge or who wanted India to become a country for the Hindus, just as Pakistan was for Muslims. They accused Gandhiji of acting in the interests of the Muslims and Pakistan. Gandhiji thought that these people were misguided. He was convinced that any attempt to make India into a country only for the Hindus would destroy India. His steadfast pursuit of Hindu-Muslim unity provoked Hindu extremists so much that they made several attempts to assassinate Gandhiji. Despite this he refused to accept armed protection and continued to meet everyone during his prayer meetings. Finally, on 30 January 1948, one such extremist, Nathuram Vinayak Godse, walked up to Gandhiji during his evening prayer in Delhi and fired three bullets at him, killing him instantly. Thus ended a life long struggle for truth, non-violence, justice and tolerance.

Gandhiji's death had an almost magical effect on the communal situation in the country. Partition-related anger and violence suddenly subsided. The Government of India cracked down on organisations that were spreading communal hatred. Organisations like the Rashtriya Swayamsewak Sangh were banned for some time. Communal politics began to lose its appeal.

'ಗಾಂಧೀಜಿ ಅವರ ನಡೆಗಳು ಎಲ್ಲರಿಗೂ ಇಷ್ಟವಾಗಲಿಲ್ಲ. ಎರಡೂ ಸಮುದಾಯಗಳ ತೀವ್ರಗಾಮಿಗಳು ತಮ್ಮ ಸ್ಥಿತಿಗೆ ಗಾಂಧಿಯೇ ಕಾರಣ ಎಂದು ದೂರಿದರು. ಹಿಂದೂಗಳು ಸೇಡು ತೀರಿಸಿಕೊಳ್ಳಬೇಕು ಮತ್ತು ಮುಸ್ಲಿಮರಿಗೆ ಪಾಕಿಸ್ತಾನ ಇರುವಂತೆ, ಭಾರತವು ಹಿಂದೂಗಳ ರಾಷ್ಟ್ರವಾಗಬೇಕು ಎಂದು ಬಯಸುವವರು ಗಾಂಧಿಯನ್ನು ಇಷ್ಟಪಡುತ್ತಿರಲಿಲ್ಲ. ಗಾಂಧೀಜಿ ಅವರು ಮುಸ್ಲಿಮರು ಮತ್ತು ಪಾಕಿಸ್ತಾನದ ಪರವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಅಂತಹವರು ದೂರುತ್ತಿದ್ದರು. ಈ ಜನರ ಹಾದಿ ತಪ್ಪಿಸಲಾಗಿದೆ ಎಂದು ಗಾಂಧೀಜಿ ಭಾವಿಸಿದ್ದರು. ಭಾರತವನ್ನು ಹಿಂದೂಗಳ ರಾಷ್ಟ್ರವನ್ನಾಗಿಸುವ ಯಾವುದೇ ಪ್ರಯತ್ನ ಭಾರತವನ್ನು ಧ್ವಂಸ ಮಾಡುತ್ತವೆ ಎಂದು ಗಾಂಧೀಜಿ ನಂಬಿದ್ದರು. ಹಿಂದೂ–ಮುಸ್ಲಿಮರ ಒಗ್ಗಟ್ಟಿಗಾಗಿ ಗಾಂಧೀಜಿ ಅವರು ನಡೆಸಿದ ಯತ್ನಗಳು ಹಿಂದೂ ತೀವ್ರಗಾಮಿಗಳನ್ನು ಪ್ರಚೋದಿಸಿತ್ತು. ಅವರು ಗಾಂಧೀಜಿ ಹತ್ಯೆಗೆ ಹಲವು ಬಾರಿ ಯತ್ನಿಸಿದ್ದರು. ಹೀಗಿದ್ದರೂ ಗಾಂಧೀಜಿ ಅವರು ಭದ್ರತೆಯನ್ನು ನಿರಾಕರಿಸಿದ್ದರು ಮತ್ತು ಪ್ರಾರ್ಥನಾ ಸಭೆಯಲ್ಲಿ ಎಲ್ಲರನ್ನೂ ಭೇಟಿ ಮಾಡುವುದನ್ನು ಮುಂದುವರಿಸಿದ್ದರು. ಅಂತಿಮವಾಗಿ 1948ರ ಜನವರಿ 30ರಂದು ಅಂತಹ ಒಬ್ಬ ತೀವ್ರಗಾಮಿ ನಾಥೂರಾಮ್ ಗೋಡ್ಸೆ, ಸಂಜೆಯ ಪ್ರಾರ್ಥನಾ ಸಭೆಯ ನಂತರ ಗಾಂಧಿಯ ಎದುರಿಗೆ ಬಂದ. ಗಾಂಧೀಜಿಗೆ ಮೂರು ಗುಂಡುಗಳನ್ನು ಹಾರಿಸಿದ. ಗಾಂಧೀಜಿ ಅಲ್ಲೇ ಮೃತಪಟ್ಟರು. ಸತ್ಯ, ಅಹಿಂಸೆ, ನ್ಯಾಯ ಮತ್ತು ಸಹಿಷ್ಣುತೆಗಾಗಿ ಜೀವನಪರ್ಯಂತ ನಡೆಸಿದ್ದ ಹೋರಾಟ ಅಲ್ಲಿ ಅಂತ್ಯವಾಯಿತು' ಎಂದು ಈ ಮೊದಲು ಇದ್ದ ಪಠ್ಯಭಾಗದಲ್ಲಿ ವಿವರಿಸಲಾಗಿತ್ತು.

'ದೇಶದ ಕೋಮು ಪರಿಸ್ಥಿತಿ ಮೇಲೆ ಗಾಂಧೀಜಿ ಅವರ ಸಾವು ತೀವ್ರ ಪರಿಣಾಮ ಬೀರಿತು. ದೇಶ ವಿಭಜನೆ ಕುರಿತ ಸಿಟ್ಟು ಮತ್ತು ಹಿಂಸಾಚಾರಗಳು ದಿಢೀರ್ ಸ್ತಬ್ಧವಾದವು. ಕೋಮು ದ್ವೇಷವನ್ನು ಹರಡುತ್ತಿದ್ದ ಸಂಘಟನೆಗಳ ಮೇಲೆ ಭಾರತ ಸರ್ಕಾರ ಕ್ರಮ ತೆಗೆದುಕೊಂಡಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದಂತಹ ಸಂಘಟನೆಗಳನ್ನು ಕೆಲಕಾಲ ನಿಷೇಧಿಸಲಾಗಿತ್ತು. ಕೋಮು ರಾಜಕಾರಣವು ದುರ್ಬಲವಾಗಲು ಆರಂಭವಾಯಿತು' ಎಂದು ಮೊದಲು ಇದ್ದ ಪಠ್ಯಭಾಗದಲ್ಲಿ ವಿವರಿಸಲಾಗಿತ್ತು.

ಆಧಾರ: ಎನ್‌ಸಿಇಆರ್‌ಟಿಯ ಪಠ್ಯಪುಸ್ತಕಗಳು, ಪಿಟಿಐ, ರಾಜಕೀಯ ಪಕ್ಷಗಳ ಟ್ವೀಟ್‌ಗಳು

ಪರಿಷ್ಕರಣೆಯ ನಂತರ ಗಾಂಧೀಜಿ ಹತ್ಯೆ ವಿವರಗಳು

ಎನ್‌ಸಿಇಆರ್‌ಟಿ ಈಗ ನಡೆಸಿರುವ ಪರಿಷ್ಕರಣೆಯಲ್ಲಿ ಗಾಂಧೀಜಿ ಹತ್ಯೆಯ ವಿವರಗಳನ್ನು ಬದಲಿಸಿದೆ. ಬದಲಾಗಿರುವ ಪಠ್ಯಭಾಗವು ಈ ರೀತಿ ಇದೆ.

'ಗಾಂಧೀಜಿ ಅವರ ನಡೆಗಳು ಎಲ್ಲರಿಗೂ ಇಷ್ಟವಾಗಲಿಲ್ಲ. ಎರಡೂ ಸಮುದಾಯಗಳಲ್ಲಿನ ತೀವ್ರಗಾಮಿಗಳು ತಮ್ಮ ಸ್ಥಿತಿಗೆ ಗಾಂಧೀಜಿಯೇ ಕಾರಣ ಎಂದು ದೂರಿದರು. ಇದರ ಹೊರತಾಗಿಯೂ ಅವರು ಪ್ರಾರ್ಥನಾ ಸಭೆಯ ನಂತರ ಎಲ್ಲರನ್ನೂ ಭೇಟಿಯಾಗುವುದನ್ನು ಮುಂದುವರಿಸಿದರು. ಅಂತಿಮವಾಗಿ 1948ರ ಜನವರಿ 30ರಂದು ಅಂತಹ ಒಬ್ಬ ತೀವ್ರಗಾಮಿ ನಾಥೂರಾಮ್ ಗೋಡ್ಸೆ, ಸಂಜೆಯ ಪ್ರಾರ್ಥನಾ ಸಭೆಯ ನಂತರ ಗಾಂಧಿಯ ಎದುರಿಗ ಬಂದ. ಗಾಂಧೀಜಿಗೆ ಮೂರು ಗುಂಡುಗಳನ್ನು ಹಾರಿಸಿದ. ಗಾಂಧೀಜಿ ಅಲ್ಲೇ ಮೃತಪಟ್ಟರು. ಸತ್ಯ, ಅಹಿಂಸೆ, ನ್ಯಾಯ ಮತ್ತು ಸಹಿಷ್ಣುತೆಗಾಗಿ ಜೀವನಪರ್ಯಂತ ನಡೆಸಿದ್ದ ಹೋರಾಟ ಅಲ್ಲಿ ಅಂತ್ಯವಾಯಿತು' ಎಂದು ಪರಿಷ್ಕೃತ ಪಠ್ಯಭಾಗದಲ್ಲಿ ವಿವರಿಸಲಾಗಿದೆ.

Gandhiji's actions were however not liked by all. Extremists in both the communities blamed him for their conditions. Despite this he continued to meet everyone during his prayer meetings. Finally, on 30 January 1948, one such extremist, Nathuram Vinayak Godse, walked up to Gandhiji during his evening prayer in Delhi and fired three bullets at him, killing him instantly. Thus ended a lifelong struggle for truth, non-violence, justice and tolerance.

Anti-Muslim riots in Gujarat

In February-March 2002, large-scale violence against Muslims took place in Gujarat. The immediate provocation for this violence was an incident that took place at a station called Godhra. A bogey of a train that was returning from Ayodhya and was full of *Karsevaks* was set on fire. Fifty-seven people died in that fire. Suspecting the hand of the Muslims in setting fire to the bogey, large-scale violence against Muslims began in many parts of Gujarat from the next day. This violence continued for almost a whole month. Nearly 1100 persons, mostly Muslims, were killed in this violence. The National Human Rights Commission criticised the Gujarat government's role in failing to control violence, provide relief to the victims and prosecute the perpetrators of this violence. The Election Commission of India ordered the assembly elections to be postponed. As in the case of anti-Sikh riots of 1984,

ಗುಜರಾತ್ ಗಲಭೆಗೆ ಕೊಕ್

ಈ ಹಿಂದೆ ಇದ್ದ, ಸಿಬಿಎಸ್‌ಇ 12ನೇ ತರಗತಿಯ ರಾಜ್ಯಶಾಸ್ತ್ರ ಭಾಗ–2 ಪಠ್ಯಪುಸ್ತಕದಲ್ಲಿ ಗುಜರಾತ್ ಗಲಭೆಗೆ ಸಂಬಂಧಿಸಿದ ಪ್ರತ್ಯೇಕ ಪಠ್ಯ ಭಾಗವನ್ನು ನೀಡಲಾಗಿತ್ತು. 8ನೇ ಅಧ್ಯಾಯದಲ್ಲಿ 'ಗುಜರಾತ್‌ನಲ್ಲಿ ಮುಸ್ಲಿಂ ವಿರೋಧಿ ಗಲಭೆ' ಎಂದು ಪಠ್ಯ ಭಾಗವಿತ್ತು. ಗೋಧ್ರಾ ರೈಲು ಬೆಂಕಿಯಲ್ಲಿ ಕರಸೇವಕರು ಮೃತಪಟ್ಟ ನಂತರ, ಗುಜರಾತ್‌ನಲ್ಲಿ ಮುಸ್ಲಿಮರ ವಿರುದ್ಧ ಗಲಭೆ ನಡೆದಿತ್ತು. ಈ ಗಲಭೆಯಲ್ಲಿ 1,100ಕ್ಕೂ ಹೆಚ್ಚು ಜನ ಮೃತಪಟ್ಟಿದ್ದರು, ಅದರಲ್ಲಿ ಹೆಚ್ಚಿನವರು ಮುಸ್ಲಿಮರು. ಈ ಗಲಭೆಯನ್ನು ನಿಯಂತ್ರಿಸುವಲ್ಲಿ ಗುಜರಾತ್ ಸರ್ಕಾರ ವಿಫಲವಾಗಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ತನ್ನ ವಾರ್ಷಿಕ ವರದಿಯಲ್ಲಿ ಹೇಳಿತ್ತು ಎಂದು ಈ ಪಾಠಭಾಗದಲ್ಲಿ ವಿವರಿಸಲಾಗಿತ್ತು.

2018ರಲ್ಲಿ ಈ ಪಠ್ಯಪುಸ್ತಕವನ್ನು ಪರಿಸ್ಕರಿಸಲಾಗಿತ್ತು. ಆಗ 'ಗುಜರಾತ್ ಗಲಭೆ' ಎಂದಷ್ಟೇ ಈ ಪಾಠಭಾಗದ ಹೆಸರನ್ನು ಬದಲಿಸಲಾಗಿತ್ತು. ವಿವರವನ್ನು ಹಾಗೇ ಉಳಿಸಿಕೊಳ್ಳಲಾಗಿತ್ತು. ಈಗ ಮಾಡಿರುವ ಪರಿಷ್ಕರಣೆಯಲ್ಲಿ ಇಡೀ ಪಠ್ಯಭಾಗವನ್ನೇ ತೆಗೆದುಹಾಕಲಾಗಿದೆ.

ಪ್ರಜಾವಾಣಿ ಸಿನಿ ಸಮ್ಮಾನ ದಿನಗಣನೆ ಪ್ರಾರಂಭ

1961. ಉತ್ತರ ಕರ್ನಾಟಕದಲ್ಲಿ ನೆರೆ. ಸಂತ್ರಸ್ತರಿಗೆ ಪರಿಹಾರ ಸಂಗ್ರಹಿಸಲು 'ಪ್ರಜಾವಾಣಿ' ಮುಂದಾಗಿತ್ತು. ಆಗ ವರನಟ ಎಂದೇ ಗುಣವಿಶೇಷಣ ಸಂಪಾದಿಸಿದ್ದ ರಾಜ್‌ಕುಮಾರ್ ಜತೆಯಾದರು. ಅವರೇ ಬಂದಮೇಲೆ ಚಿತ್ರರಂಗದ ಇನ್ನಷ್ಟು ಜನರು ಬರದೇ ಇರಲು ಸಾಧ್ಯವೆ? ಮದ್ರಾಸ್‌ನಲ್ಲಿ ನೆಲೆಗೊಂಡಿದ್ದ ಕನ್ನಡ ಸಿನಿಮಾ ಚಿತ್ರೀಕರಣ ಚಟುವಟಿಕೆ ನಮ್ಮ ರಾಜ್ಯಕ್ಕೆ ಸ್ಥಳಾಂತರಗೊಳ್ಳಲು ಅಗತ್ಯವಿದ್ದ ಸ್ಫೂರ್ತಿಯ ಬೀಜ ಬಿತ್ತಿದ್ದು ಆ ಪರಿಹಾರ ಸಂಗ್ರಹ ಅಭಿಯಾನ.

ಪತ್ರಿಕೆ ಹಾಗೂ ಕನ್ನಡ ಚಿತ್ರರಂಗದ ನಡುವಿನ ಸಾಂಸ್ಕೃತಿಕ ಕೊಡು-ಕೊಳುವಿಕೆಯ ಗಟ್ಟಿತನಕ್ಕೆ ಇದು ಒಂದು ಉದಾಹರಣೆಯಷ್ಟೆ. 'ಪ್ರಜಾವಾಣಿ' ಮೊದಲಿನಿಂದಲೂ ಸಿನಿಮಾ ಕ್ಷೇತ್ರವನ್ನು ಕನ್ನಡ ಸಂಸ್ಕೃತಿಯ ಭಾಗವಾಗಿಯೇ ನೋಡುತ್ತಾ ಬಂದಿದೆ. ಮದ್ರಾಸ್‌ಗೂ ಆಗೀಗ ಬೆಂಗಳೂರಿನಿಂದ ಪ್ರಮುಖ ಹುದ್ದೆಯಲ್ಲಿದ್ದ ಪತ್ರಕರ್ತರು ಹೋಗಿ, ಸಿನಿಮಾ ವರದಿಗಳನ್ನು ಪ್ರಕಟಿಸಿದ್ದು ಗಮನಾರ್ಹ. ದೇಶದ ವಿವಿಧೆಡೆ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳು ನಡೆದಾಗಲೂ ಪ್ರತ್ಯಕ್ಷ ವರದಿಗಾರಿಕೆಗೆ ಪತ್ರಿಕೆ ಒತ್ತುನೀಡಿತ್ತು.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಕಿರುತೆರೆಯ ವ್ಯಾಪಕತೆ ಹೆಚ್ಚಾದ ಮೇಲೆ ಧಾರಾವಾಹಿ ತಂತ್ರಜ್ಞರ, ನಟ-ನಟಿಯರ ಪರಿಚಯ ಮಾಡಿಕೊಡಲೂ ಪುಟ ಮೀಸಲಿಟ್ಟ ಪತ್ರಿಕೆ 'ಪ್ರಜಾವಾಣಿ'. ಸಿನಿಮಾ ವಿಮರ್ಶೆ, ವಿಶ್ಲೇಷಣೆ, ಅಂಕಣಗಳು ಮೊದಲಿನಿಂದಲೂ ಘನತೆ ಕಾಪಾಡಿಕೊಂಡು ಬಂದಿರುವುದು ಕೂಡ ಹೆಗ್ಗಳಿಕೆ.

'ಪ್ರಜಾವಾಣಿ ದೀಪಾವಳಿ ವಿಶೇಷಾಂಕ'ದ ಕಥಾಸ್ಪರ್ಧೆಯು ನಾಡಿನ ಹಮ್ಮೆಯ ಕಥೆಗಾರರನ್ನು ಬೆಳಕಿಗೆ ತಂದಿದೆ. ಆ ಮೂಲಕ ಸಾಹಿತ್ಯ ದೀವಿಗೆಗಳನ್ನು ತೇಲಿಬಿಟ್ಟಿದೆ. ಆ ದೀವಿಗೆಗಳ ಬೆಳಕು ಸದಾ ಕಾಲ ಉಳಿದಿರುವುದು ಹೆಮ್ಮೆ. ಇಂತಹುದೇ ಪರಂಪರೆಯನ್ನು ಸಿನಿಮಾ ಪ್ರಶಸ್ತಿಗಳ ಮೂಲಕವೂ ಸೃಷ್ಟಿಸುವುದು ಪತ್ರಿಕೆಯ ಹೆಬ್ಬಯಕೆ.

ಕನ್ನಡ ಚಿತ್ರರಂಗವೀಗ ರಾಷ್ಟ್ರಮಟ್ಟದಲ್ಲಿ ಛಾಪು ಮೂಡಿಸುತ್ತಿರುವ ಜತೆಗೆ ಸದ್ದೂ ಮಾಡತೊಡಗಿದೆ. ಜನಪ್ರಿಯತೆ ಹಾಗೂ ಗುಣಮಟ್ಟದ ದೃಷ್ಟಿಯಿಂದ ಹೊಮ್ಮಲಿರುವ ಗಟ್ಟಿ ಕಾಳುಗಳ ಸಂಖ್ಯೆ ಹೆಚ್ಚೇ ಆಗಲಿದೆ ಎನ್ನುವ ಆಶಾವಾದ ಪತ್ರಿಕೆಯದ್ದು. ಜನಪ್ರಿಯ ಹಾಗೂ ಪರ್ಯಾಯ ಎರಡೂ ಮಾದರಿಗಳಲ್ಲಿ ಗಮನಾರ್ಹವಾದ ಸಿನಿಮಾಗಳು ಮೂಡಿಬರುತ್ತಿವೆ. ಅವುಗಳ ಸಂಖ್ಯಾಸಮೃದ್ಧಿಯ ಆಶಯದೊಂದಿಗೆ ಇಂಧನ ರೂಪದಲ್ಲಿ 'ಪ್ರಜಾವಾಣಿ ಸಿನಿ ಸಮ್ಮಾನ'ವನ್ನು ಪ್ರಾರಂಭಿಸುತ್ತಿದೆ. 2022ರಲ್ಲಿ ತೆರೆಕಂಡ ಸಿನಿಮಾಗಳಲ್ಲಿ ಪ್ರಶಸ್ತಿಗಳು ಯಾರು ಯಾರಿಗೆ ಸಲ್ಲಲಿವೆ ಎನ್ನುವ ಕುತೂಹಲ ತಣಿಯಲು ದಿನಗಣನೆ ಶುರುವಾಗುತ್ತಿದೆ.

ಸಂಕೀರ್ಣವೂ ಪಾರದರ್ಶಕವೂ ಆದ ಆಯ್ಕೆ ಪ್ರಕ್ರಿಯೆಯ ಈ ಪ್ರಶಸ್ತಿ ಕನ್ನಡ ಚಿತ್ರರಂಗದ ನಿಜಸಾಧಕರ ಕಿರೀಟಕ್ಕೆ ಹೊಳೆಯುವ ಗರಿಯಾದೀತೆಂಬ ಸದಾಶಯ ಪತ್ರಿಕೆಯದ್ದು.

ಪ್ರಶಸ್ತಿಯ ರೂಪುರೇಷೆ ಹಾಗೂ ಪತ್ರಿಕೆಗೂ ಚಿತ್ರರಂಗಕ್ಕೂ ಇರುವ ನಂಟಿನ ಇನ್ನಷ್ಟು ಮಾಹಿತಿ ನಿತ್ಯವೂ ಓದುಗರಿಗೆ ಇನ್ನು ಕೆಲವು ದಿನಗಳ ಕಾಲ ಈ ಪುಟದಲ್ಲಿ ಲಭ್ಯವಾಗಲಿದೆ. ಕುತೂಹಲದ ಕಣ್ಣು ಎಲ್ಲ ಓದುಗರದೂ ಆಗಲಿ ಎನ್ನುವುದು ಆಶಯ.

ಬೆಂಗಳೂರಿನಲ್ಲಿ 'ಪಿಎಸ್–2' ತಂಡ



ಮಣಿರತ್ನಂ ಆ್ಯಕ್ಷನ್ ಕಟ್ ಹೇಳಿರುವ 'ಪೊನ್ನಿಯಿನ್ ಸೆಲ್ವನ್(ಪಿಎಸ್)' ಸಿನಿಮಾದ ಎರಡನೇ ಭಾಗ ಏಪ್ರಿಲ್ 28ರಂದು ಐದು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಇತ್ತೀಚೆಗೆ ಭೇಟಿ ನೀಡಿದ್ದ ಚಿತ್ರತಂಡ ಅದ್ಧೂರಿಯಾಗಿ ಪ್ರಚಾರ ಮಾಡಿದೆ.

ಉತ್ತರ ಭಾರತದಲ್ಲಿ ಪ್ರಚಾರ ಪೂರ್ಣಗೊಳಿಸಿರುವ ಚಿತ್ರತಂಡ ದಕ್ಷಿಣ ಭಾರತದ ಪ್ರಮುಖ ನಗರಗಳಲ್ಲಿ ಪ್ರಚಾರ ಆರಂಭಿಸಿದೆ. ನಟ ವಿಕ್ರಮ್, ನಟಿ ತ್ರಿಷಾ, ಕಾರ್ತಿ ಹಾಗೂ ಜಯಂರವಿ ಪ್ರಚಾರದಲ್ಲಿ ಭಾಗಿಯಾಗಿದ್ದರು. 'ನನಗೆ ಎಲ್ಲಾ ರೀತಿಯ ಪಾತ್ರಗಳನ್ನು ಮಾಡಲು ಇಷ್ಟ. ಆದಿತ್ಯ ಕರಿಕಾಳನ್ ಪಾತ್ರ ನನಗೆ ತೃಪ್ತಿ ಕೊಟ್ಟಿದೆ. ಪಿಎಸ್–2 ಒಂದೊಳ್ಳೆ ಐತಿಹಾಸಿಕ ಸಿನಿಮಾ' ಎಂದರು ವಿಕ್ರಮ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ನಂದಿನಿ-ಅಮೂಲ್** ಸಂಘರ್ಷದ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಂದಿನಿ ಪಾರ್ಲರ್‌ಗೆ ಭೇಟಿ ನೀಡಿ ಐಸ್‌ಕ್ರೀಂ ಸವಿದಿದ್ದರು. ನಂದಿನಿ ಕರ್ನಾಟಕದ ಹೆಮ್ಮೆ ಎಂದು ಶ್ಲಾಘಿಸಿದ್ದರು. ಕರ್ನಾಟಕದಲ್ಲಿ ನಂದಿನಿ ಪರವಾಗಿ ಮಾತನಾಡುವ ರಾಹುಲ್ ಅವರು ದೆಹಲಿಯಲ್ಲಿ ಅಮೂಲ್ ಪರ ಪ್ರಚಾರ ಮಾಡುತ್ತಿದ್ದಾರೆ ಎಂದು ಹೇಳಲಾಗುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಚಿತ್ರದ ಹಿನ್ನೆಲೆಯಲ್ಲಿ ಅಮೂಲ್ ಗೋಲ್ಡ್ ಹಾಲಿನ ಕಾರ್ಟನ್ ಬಾಕ್ಸ್‌ನ ಚಿತ್ರವೊಂದು ಕಾಣಿಸುತ್ತದೆ. ರಾಹುಲ್ ಅವರು ಅಮೂಲ್ ಮಳಿಗೆಗೆ ಭೇಟಿ ನೀಡಿದ್ದಾರೆ ಎಂದು ಈ ಚಿತ್ರವನ್ನು ಉದ್ದೇಶಿಸಿ ಹೇಳಲಾಗಿದೆ. ಬಿಜೆಪಿ ನಾಯಕರು ಈ ಚಿತ್ರವನ್ನು ಹಂಚಿಕೊಂಡಿದ್ದು, ರಾಹುಲ್ ಅವರ ದ್ವಂದ್ವ ನಿಲುವನ್ನು ಪ್ರಶ್ನಿಸಿದ್ದಾರೆ. ಆದರೆ ಇದು ಸುಳ್ಳು.

✓ **ರಾಹುಲ್ ಗಾಂಧಿ** ಅವರು ದೆಹಲಿಯಲ್ಲಿ ಅಮೂಲ್ ಮಳಿಗೆಗೆ ಭೇಟಿ ನೀಡಿಲ್ಲ. ಅವರು ಅಮೂಲ್ ಪರ ಪ್ರಚಾರ ನಡೆಸುತ್ತಿದ್ದಾರೆ ಎಂಬುದು ಸುಳ್ಳು ಎಂದು 'ಇಂಡಿಯಾಟುಡೇ' ವರದಿ ಮಾಡಿದೆ. ರಾಹುಲ್ ಅವರು ಏ.18ರಂದು ದೆಹಲಿಯ ಚಾಂದಿನಿ ಚೌಕ್, ಬಂಗಾಳಿ ಮಾರ್ಕೆಟ್‌ನಲ್ಲಿ ಓಡಾಡಿ ಬೀದಿಬದಿ ಆಹಾರ ಸವಿಸಿದ್ದರು. ತಂಪು ಪಾನೀಯದ ಅಂಗಡಿಗೆ ಹೋಗಿದ್ದ ಅವರು ಕೈಯಲ್ಲಿ ಕಲ್ಲಂಗಡಿ ಹಣ್ಣನ್ನು ಹಿಡಿದಿರುವುದು ಚಿತ್ರದಲ್ಲಿ ಕಾಣುತ್ತದೆ. ಈ ಚಿತ್ರದ ಹಿನ್ನೆಲೆಯಲ್ಲಿ ಅಮೂಲ್ ಗೋಲ್ಡ್ ಹಾಲಿನ ಕಾರ್ಟನ್ ಬಾಕ್ಸ್‌ನ ಚಿತ್ರವೊಂದು ಕಾಣಿಸುತ್ತದೆ. ಇದನ್ನೇ ನೆಪವಾಗಿಟ್ಟುಕೊಂಡು, ರಾಹುಲ್ ಅವರು ಅಮೂಲ್ ಪರ ಪ್ರಚಾರ ನಡೆಸುತ್ತಿದ್ದಾರೆ, ದ್ವಂದ್ವ ನಿಲುವು ಪ್ರದರ್ಶಿಸುತ್ತಿದ್ದಾರೆ ಎಂದು ತಪ್ಪಾಗಿ ಹೇಳಲಾಗಿದೆ ಎಂದು ಇಂಡಿಯಾಟುಡೇ ವರದಿ ಮಾಡಿದೆ. ಡಿಸ್‌ಪ್ಲೇ ಉದ್ದೇಶಕ್ಕೆ ಅಮೂಲ್ ಹಾಲಿನ ಉತ್ಪನ್ನಗಳ ಬಾಕ್ಸ್‌ಗಳನ್ನು ಇಟ್ಟಿದ್ದೆ ಎಂದು ಅಂಗಡಿ ಮಾಲೀಕ ತಿಳಿಸಿದ್ದಾರೆ. ಅಮೂಲ್ ಪರವಾಗಿ ರಾಹುಲ್ ಏನನ್ನೂ ಮಾತನಾಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಯಾವ ಪ್ರಯತ್ನವೂ ಚಿಕ್ಕದಲ್ಲ

ಅರೆದಿನದ ನಮ್ಮ ಯತ್ನದಿನದೇನೆನ್ನದಿರು |
ಕಿರಿದುಮೊಡಗೂಡಿರಲು ಸಿರಿಯಹುದು ಬಾಳ್ಗೆ ||
ಪರಿಪೋಷಿಸದೆ ನಿನ್ನೊಡಲ ದಾರಿಮರದ ಫಲ |
ಕಿರುಜಾಜಿ ಸೊಗಕುಡದೆ? – ಮಂಕುತಿಮ್ಮ || **868** ||

ಪದ-ಅರ್ಥ: ಅರೆದಿನದ = ಅರ್ಧದಿನದ, ಯತ್ನದಿನದೇನೆನ್ನದಿರು = ಯತ್ನದಿನ್ = ಅದೇನು + ಎನ್ನದಿರು, ಕಿರಿದು ಮೊಡಗೂಡಿರಲು = ಕಿರಿದುಮ್ (ಕಿರಿದಾದದ್ದು) + ಒಡಗೂಡಿರಲು, ಪರಿಪೋಷಿಸದೆ = ಪೋಷಿಸಲಾರದೆ, ನಿನ್ನೊಡ-ಲ = ನಿನ್ನ + ಒಡಲ, ಸೊಗಕುಡದೆ = ಸೊಗ + ಕುಡ-ದೆ(ಕೊಡದೆ).

ವಾಚ್ಯಾರ್ಥ: ನಮ್ಮ ಅಲ್ಪ ಪ್ರಯತ್ನದಿಂದ ಏನಾದೀತು ಎನ್ನಬೇಡ. ಚಿಕ್ಕವಾದವುಗಳೆಲ್ಲ ಒಂದಾದರೆ ಅದೇ ಬಾಳಿಗೆ ಸಂಪತ್ತಾಗುತ್ತದೆ. ಪ್ರವಾಸದಲ್ಲಿ ದಾರಿಯ ಮರದ ಹಣ್ಣು ನಿನ್ನನ್ನು ಪೋಷಿಸಲಾರದೆ? ಪುಟ್ಟ ಜಾಜಿ ಹೂವು ಮುದ ಕೊಡದೆ?

ವಿವರಣೆ: ಪ್ರಪಂಚದಲ್ಲಿ ಯಾವುದೂ ಸಣ್ಣದಲ್ಲ, ಯಾರೂ ಸಣ್ಣವರಲ್ಲ ಮತ್ತು ಯಾವ ಪ್ರಯತ್ನವೂ ಸಣ್ಣದಲ್ಲ. ಕೆಲವೊಮ್ಮೆ ಮಾಡುವ ಕೆಲಸ ತುಂಬ ಸಣ್ಣದು, ಅದರಿಂದ ಯಾವ ಪ್ರಯೋಜನವೂ ಇಲ್ಲ ಎನ್ನಿಸುತ್ತದೆ. ಆದರೆ ಆ ಪ್ರಯತ್ನ ಮುಂದುವರೆದಾಗ ಅದ್ಭುತವಾದ ಪರಿಣಾಮವಾಗುತ್ತದೆ. ಕಳೆದ ವರ್ಷ ಅಮೇರಿಕೆಯ ಅರಿಝೋನಾ ಪ್ರದೇಶದಲ್ಲಿರುವ 'ಗ್ರಾಂಡ್ ಕಾನ್ಯನ್' ನೋಡಲು ಹೋಗಿದ್ದೆ. ಅದು ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದು. ನದಿ ಹರಿದು ನಿರ್ಮಾಣವಾದ ಕೊರಕಲೇ ಗ್ರಾಂಡ್ ಕಾನ್ಯನ್. ಈ ಕಣಿವೆ ಸುಮಾರು ಇನ್ನೂರಾ ಎಪ್ಪತ್ತೇಳು ಮೈಲು ಉದ್ದ ಹಾಗೂ ಹದಿನೆಂಟು ಮೈಲುಗಳಷ್ಟು ಅಗಲವಾಗಿದೆ. ಇಷ್ಟು ದೊಡ್ಡ ಕಣಿವೆ ಆದದ್ದು ಹೇಗೆ? ಅದರ ಇತಿಹಾಸ ಕುತೂಹಲಕಾರಿಯಾ-ಗಿದೆ. ಸುಮಾರು ಅರವತ್ತು ಲಕ್ಷ ವರ್ಷಗಳ ಹಿಂದೆ ಒಂದು ಪುಟ್ಟ ನದಿ ಕೊಲರಾಡೋ ಈ ಪ್ರದೇಶದಲ್ಲಿ ಹರಿಯತೊಡಗಿತು. ಹರಿಯುತ್ತಿದ್ದಂತೆ ಪಕ್ಕದ ಮಣ್ಣನ್ನು ಸೆಳೆದುಕೊಂಡು ಹೊರಟಿತು. ವರ್ಷಗಳು, ಶತಕಗಳು ಕಳೆದಂತೆ ಮಣ್ಣು ಕೊರೆದು ಕೊರೆದು ಪುಟ್ಟ ಕೊರಕಲಾಯಿತು. ಅದನ್ನು ಯಾರಾದರೂ ವರ್ಷದಿಂದ ವರ್ಷಕ್ಕೆ ಗಮನಿಸಿದ್ದರೆ ಯಾವ ವ್ಯತ್ಯಾಸವೂ ಕಾಣುತ್ತಿರಲಿಲ್ಲ. ಆದರೆ ನೀರಿನ ಪ್ರಯತ್ನ ನಿಲ್ಲಲಿಲ್ಲ. ಲಕ್ಷಾಂತರ ವರ್ಷಗಳ ನಂತರ ತನ್ನ ಕೊರೆತದಿಂದ ಪ್ರಪಂಚದ ಅದ್ಭುತವನ್ನು ಸೃಷ್ಟಿಸುತ್ತೇನೆ ಎಂಬ ಕಲ್ಪನೆಯೂ ನದಿಗೆ ಅಂದು ಇರಲಿಕ್ಕಿಲ್ಲ. ಎರಡು ಊರುಗಳ ನಡುವೆ ಒಂದು ಬೆಟ್ಟ. ಅದನ್ನು ಕೊರೆದರೆ ಎರಡೂ ಊರುಗಳ ಸಂಪರ್ಕ ಸುಲಭ. ಕೆಲವು ಜನ ಅದನ್ನು ಕೊರೆಯ-ತೊಡಗಿದರು. ದಾರಿಯಲ್ಲೊಂದು ದೊಡ್ಡ ಬಂಡೆ. ಎರಡೂ ಊರವರು ರಸ್ತೆಯ ಆಸೆ ಬಿಟ್ಟರು. ಒಬ್ಬ ಮಾತ್ರ ನಿತ್ಯ ಉಳಿ, ಸುತ್ತಿಗೆ ತೆಗೆದುಕೊಂಡು ಹೋಗಿ ಕಲ್ಲು ಒಡೆಯತೊಡಗಿದ. ಜನ ನಕ್ಕರು. ಒಬ್ಬನೇ ಏನು ಮಾಡಿಯಾನು? ಅವನಿಂದ ಕಾರ್ಯವಾದೀತೇ ಎಂದು ನಗೆಯಾಡಿದರು. ಆದರೆ ಆತ ದಿನವೂ ಸ್ವ-ಲ್ಪಸ್ವಲ್ಪವೇ ಕಲ್ಲು ಕತ್ತರಿಸಿದ. ಒಂದು ವರ್ಷದಲ್ಲಿ ಕಲ್ಲು ಮರೆಯಾಗಿತ್ತು. ದಿನನಿತ್ಯದ ಪುಟ್ಟ ಪ್ರಯತ್ನ ದೊಡ್ಡ ಫಲ ನೀಡಿತ್ತು. ಕಗ್ಗ ಹೇಳುತ್ತದೆ ಸಣ್ಣ ಸಣ್ಣ ಪ್ರಯತ್ನಗಳೇ ಮಹಾಸಾಧನೆಗೆ ಅಡಿಪಾಯ. ಪ್ರವಾಸದಲ್ಲಿ, ಹಸಿವಾದಾಗ, ಏನೂ ದೊರೆಯದಾಗ ದಾರಿಬದಿಯ ಮರದಲ್ಲಿಯ ಫಲ ನಮಗೆ ಪೋಷಣೆ ಕೊಡದೆ? ಬೇಲಿಯಲ್ಲಿ ಅರಳಿದ ಜಾಜಿಯ ಹೂವು ಮುದ ನೀಡಿ ಶ್ರಮ ಪರಿಹಾರ ಮಾಡದೆ? ಯಾವುದೂ ಸಣ್ಣದಲ್ಲ. ಪ್ರತಿಯೊಂದು ಪ್ರಯತ್ನವೂ ಮಹತ್ತಾದದ್ದರ ಒಂದು ಹೆಜ್ಜೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಚತುರ್ಥಿ ಗಂ. 08-25 ನಕ್ಷತ್ರ: ಮೃಗಶಿರಾ ಗಂ. 26-07 ಯೋಗ: ಶೋಭನ ಗಂ. 07-48, ಕರಣ: ವಿಷ್ಟಿ ಗಂ. 08-25, ಮೇಷ ಮಾಸದ 10 ನೇ ದಿನ,
ಮಳೆನಕ್ಷತ್ರ: ಅಶ್ವಿನಿ 3, ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 06-16 ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ : 03 ಶವ್ವಾಲ್,
ಅದೃಷ್ಟ ಸಂಖ್ಯೆ : 11, 1

ಮೇಷ: ಔಷಧಿ, ರಸಗೊಬ್ಬರ ಮತ್ತು ಕೀಟನಾಶಕಗಳಂಥ ರಾಸಾಯನಿಕ ವಸ್ತುಗಳನ್ನು ತಯಾರು ಮಾಡುವವರಿಗೆ ಹೊಸ ಪ್ರಯೋಗವು ಫಲಿತಾಂಶ ನೀಡಲಿದೆ. ಪ್ರೇಮಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು.

ವೃಷಭ: ಹವ್ಯಾಸಿ ಛಾಯಾಗ್ರಾಹಕರಿಗೆ ಪ್ರಶಸ್ತಿ ಅಥವಾ ಸಮಾಜದಲ್ಲಿ ಹೆಸರು ಲಭಿಸುವುದರ ಜೊತೆಗೆ ಬೇಡಿಕೆ ಹೆಚ್ಚಾಗಲಿದೆ. ಈ ದಿನದ ಪೂರ್ವಾರ್ಧದಲ್ಲಿ ಎಲ್ಲಾ ವ್ಯವಹಾರಗಳೂ ಸಾಮಾನ್ಯ ಗತಿಯಲ್ಲಿ ಮುಂದುವರಿಯಲಿದೆ.

ಮಿಥುನ: ಪಿತ್ರಾರ್ಜಿತ ಕೃಷಿ ಪ್ರದೇಶ ಅಥವ ಗೃಹ ಮಾರಾಟವು ಹಿರಿಯರ ಮನಸ್ಸನ್ನು ನೋವಿಸಲಿದೆ. ಬುದ್ಧಿಮಟ್ಟ ಸ್ಥಿಮಿತವಿಲ್ಲದೇ ದುರಾಲೋಚನೆಗಳು ಬರಬಹುದು. ತಿಳಿದು ತಪ್ಪು ಮಾಡದಿರಿ.

ಕರ್ಕಾಟಕ: ಭೂಮಿ ಅಥವಾ ವಾಹನ ಖರೀದಿಯಲ್ಲಿ ಮೋಸ ಹೋಗುವ ಅದರಲ್ಲೂ ದಾಖಲೆಗಳ ವಿಚಾರದಲ್ಲಿ ವ್ಯತ್ಯಾಸ ಆಗಬಹುದು. ಗಡಿಬಿಡಿಯನ್ನು ಇತರರ ಹೆಗಲ ಮೇಲೆ ಹೊರೆಸುವಂತಹ ಮೂರ್ಖತನದ ಕೆಲಸ ಮಾಡದಿರಿ.

ಸಿಂಹ: ಆತುರದಲ್ಲಿ ವಿದ್ಯಾಭ್ಯಾಸ ಹಾಗು ವೃತ್ತಿಯ ಬಗ್ಗೆ ತೆಗೆದುಕೊಳ್ಳುವ ನಿರ್ಧಾರಗಳಿಂದ ಪಶ್ಚಾತಾಪ ಪಡಬೇಕಾಗುವುದು. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿ ಬಂದಿದೆ.

ಕನ್ಯಾ: ರಾಜಕೀಯ ವಲಯದ ಕಾರ್ಯಕರ್ತರಿಗೆ ಅರಿವಿಗೆ ಬರದಂತೆ ಮುನ್ನಡೆಯುವ ಅವಕಾಶಗಳು ಕೈತಪ್ಪುವ ಸಾಧ್ಯತೆ ಇದೆ. ಗಾರ್ಮೆಂಟ್ಸ್ ಕೆಲಸಗಾರರಿಗೆ ವೇತನ ಹೆಚ್ಚುವುದರಿಂದ ಸಂತಸವಿರುವುದು.

ತುಲಾ: ಯಾರೋ ಮಾಡಿದ ತಪ್ಪುಗಳಿಗೆ ಅಧಿಕಾರಿಗಳ ಜತೆಯಲ್ಲಿ ಸಂಕಷ್ಟಕ್ಕೆ ಸಿಲುಕುವ ಸನ್ನಿವೇಶಗಳಿರಬಹುದು. ಚಾಣಕ್ಷತನದ ನಿಮ್ಮ ಮಾತುಗಳನ್ನು ಸರಿಯಾದ ಸಮಯದಲ್ಲಿ ಭಯ ಬಿಟ್ಟು ಪ್ರಯೋಗಿಸಿ.

ವೃಶ್ಚಿಕ: ನೀತಿ ನಿಯಮಗಳಿಗೆ ಬದ್ಧರಾದರೆ, ಸತ್ಯ ನಿಮ್ಮದಾಗಿದ್ದರೆ ಉದ್ಯೋಗದಲ್ಲಿ ಹೆದರುವ ಅವಶ್ಯಕತೆ ಕಂಡುಬಾರದು. ನಿಮ್ಮ ಈ ದಿನದ ಪ್ರಮುಖ ಕೆಲಸಗಳಿಗೆ ಪೂರ್ವ ತಯಾರಿ ಮಾಡಿಕೊಳ್ಳುವುದು ಅಗತ್ಯವೆನಿಸುವುದು.

ಧನು: ಹಿರಿಯರ ಜೊತೆಯಲ್ಲಿ ತೀರ್ಥಯಾತ್ರೆಗೆ ಪಾಲ್ಗೊಂಡು ದೇವರ ದರ್ಶನ ಮಾಡುವುದರಿಂದ ದಿವ್ಯ ಅನುಭೂತಿಯೊಂದಿಗೆ ಮನಸ್ಸಿಗೆ ನೆಮ್ಮದಿ ಸಿಗುವುದು. ದೇಹದಲ್ಲಿ ವಾತ ಕೈ-ಕಾಲು ನೋವು ಕಾಣಿಸಿಕೊಳ್ಳಬಹುದು.

ಮಕರ: ರಬ್ಬರ್, ಪ್ಲಾಸ್ಟಿಕ್ ವಸ್ತುಗಳ ತಯಾರಿಕೆಯ ವ್ಯವಹಾರದಲ್ಲಿರುವವರು ಹೆಚ್ಚಿನ ಏಳಿಗೆ ಕಂಡು ನೆಮ್ಮದಿ ಕಾಣುವರು. ಮಾತೃವರ್ಗದ ಸಂಬಂಧಿಗಳ ಮನೆಯಲ್ಲಿ ಮಂಗಳ ಕಾರ್ಯಗಳು ಜರುಗಲಿದೆ.

ಕುಂಭ: ದಾಂಪತ್ಯ ಜೀವನದಲ್ಲಿ ತಾಳ್ಮೆ-ಸಮಾಧಾನದಿಂದ ಮುಂದುವರಿ-ಯುವುದರಿಂದ ಮನೆಯಲ್ಲಿ ಸುಖ, ಶಾಂತಿ ಹಾಗೂ ನೆಮ್ಮದಿ ದೊರಕುವುದು. ಮಹಿಳೆಯರಿಗೆ ಋಣಾತ್ಮಕ ಚಿಂತನೆಯು ಆರೋಗ್ಯವನ್ನು ಹಾಳು ಮಾಡುತ್ತದೆ.

ಮೀನ: ವೈದ್ಯರಿಗೆ ವೃತ್ತಿಯಲ್ಲಿ ಆಶ್ಚರ್ಯಕರ ಘಟನೆ ನಡೆದು ದೇವರಿದ್ದಾನೆ ಎಂಬ ನಂಬಿಕೆ ಅನುಭವಕ್ಕೆ ಬರುವಂತಾಗುವುದು. ಪ್ರಯಾಣ ಸಮಯದಲ್ಲಿ ಸ್ನೇಹಿತರೊಂದಿಗೆ ಭೋಗ ವಸ್ತುವಿನ ಖರೀದಿಯ ಅವಕಾಶವು ನಿಮ್ಮದಾಗಲಿದೆ.

ಪದಬಂಧ 5298 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗುಡಿ ಹತ್ತಿರವಿರುವ ಕುಟೀರ (4)
3.ಆಹಾರವನ್ನು ಸೇವಿಸದಿರುವಿಕೆ (4)
5.ಪ್ರತಿ ಮಾತಾಡದೇ ಮಾಡಿದ ಶಪಥ (3)
6. ಅತಿಯಾದ ದುಃಖ (4)
7.ಮೂಲವಸ್ತು ಉಲ್ಟಾ ಆಗಿದೆ (2)
8.ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲು ಭೂಮಿ (7)
11.ಒಂದು ವಸ್ತುವನ್ನು ಇನ್ನೊಂದು ಜೋರಾಗಿ ತಾಗುವುದು (2)
12.ಪಟ ಹಿಡಿದಾಗಲೇ ಈ ಪೇಚಾಟ! (4)
13.ಮಾರುತ್ತಿರುವಾಗ ಬೀಸಿದ ಗಾಳಿ (3)
16.ಭೋಜನ ಸಮಾರಂಭಕ್ಕೆಕ್ಕೆ ಬೇಕಾದ ಸಾಧನ ಸಾಮಗ್ರಿ (4)
17.ನಡುವೆ ವರ ಉಲ್ಟಾ ನಿಂತು ನೀಡಿದ ಆಶ್ವಾಸನೆ (4)

ಮೇಲಿಂದ ಕೆಳಕ್ಕೆ
1.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ (2)
2.ಸತಿಯೊಡನಿರುವ ಉಪಪತ್ನಿ (3)
4.ಹತ್ತಿರಕ್ಕೊಂದು ಪರ್ಯಾಯ ಪದ (3)
5.ಇದು ಮುಖ್ಯವಾದುದು (3)
6.ಪದ್ಮದಿಂದ ಜನಿಸಿದವನು (3)
9.ಗರಿ ಸಿಕ್ಕಿಸಿಕೊಳ್ಳ ಬಹುದಾದ ಕಿರೀಟ (3)
10.ಹೀಚುಗಾಯಿ ಹಿಡಿದಿರುವಾಗಿನ ಸ್ಪಂದನ! (3)
12.ತೆಳುವಾದ ಸೀರೆ (3)
14.ರಕ್ತವನ್ನು ಹೀಗೂ ಹೇಳುವರು (3)
15.ಬಯಕೆ ಇಲ್ಲಿ ವ್ಯಕ್ತವಾಗಿದೆ (2)



5297ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಹಿಷ್ಣುತೆ 3.ತಾಪತ್ರಯ 5.ಕಸಾಯಿ 7.ಜಮ 9.ನಾಳ 10.ತಕಲಿ 11.ನಕ್ಷೆ 12.ನಿಜ 14.ಮನವಿ 16.ಷರಬತ್ತು 17.ಭಯಂಕರ

ಮೇಲಿಂದ ಕೆಳಕ್ಕೆ: 1.ಸಹಜ 2.ತೆಕ 3.ತಾಯಿ 4.ಯಮಳ 6.ಸಾಮೂಹಿಕಭೋಜನ 8.ಮಹತ್ವಾಕಾಂಕ್ಷೆ 9.ನಾಯಕಸಾನಿ 11.ನಹುಷ 13.ಜಠರ 14.ಮತ್ತು 15.ವಿಭ

ಸುಡೊಕು 5684

	9				5		6	
2	7		4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5683 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಕಿರುತೆರೆ ನಟ ಸಂಪತ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಸಂಪತ್ ಕುಮಾರ್

ಬೆಂಗಳೂರು: ಧಾರಾವಾಹಿ ಹಾಗೂ ಸಿನಿಮಾ ಸಹನಟ ಸಂಪತ್ ಕುಮಾರ್ ಜೆ. (30) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ನೆಲಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೊಪ್ಪ ತಾಲ್ಲೂಕಿನ ಹರಿಹರಪುರ ಬಳಿಯ ಸಿಗದಾಳು ಗ್ರಾಮದ ಸಂಪತ್, ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. 'ಅಗ್ನಿಸಾಕ್ಷಿ' ಧಾರಾವಾಹಿಯಲ್ಲಿ ಅಭಿನಯಿಸುತ್ತಿದ್ದರು. ಕಂಬ್ಳಿಹುಳ, ಬಾಲಾಜಿ ಫೋಟೊ ಸ್ಟುಡಿಯೊ ಸಿನಿಮಾಗಳಲ್ಲಿ ನಟಿಸಿದ್ದರು' ಎಂದು ಪೊಲೀಸರು ಹೇಳಿದರು.

'ಸಂಪತ್ ಅವರು 2022ರಲ್ಲಿ ಮದುವೆಯಾಗಿದ್ದರು. 4 ತಿಂಗಳ ಗರ್ಭಿಣಿಯಾಗಿದ್ದ ಪತ್ನಿ ಜೊತೆ ಅರಿಶಿನಕುಂಟೆ ಬಳಿಯ ಮನೆಯೊಂದರಲ್ಲಿ ವಾಸವಿದ್ದರು

'ಶನಿವಾರ ರಾತ್ರಿ ಇಬ್ಬರ ನಡುವೆ ಜಗಳವಾಗಿ ಕೋಣೆಗೆ ಹೋಗಿದ್ದವರು ಒಳಗಿನಿಂದ ಚಿಲಕ ಹಾಕಿಕೊಂಡು ಫ್ಯಾನ್‌ಗೆ ನೇಣು ಬಿಗಿದುಕೊಂಡರು ಎಂದು ಪೊಲೀಸರು ತಿಳಿಸಿದರು.

ಬಸವ ಧರ್ಮ ಪೀಠ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ

'ಸತ್ಯ ನುಡಿದು ವಿಶ್ವ ಗುರುವಾದ ಬಸವಣ್ಣ'

ಪ್ರಜಾವಾಣಿ ವಾರ್ತೆ

ಕೂಡಲಸಂಗಮ (ಬಾಗಲಕೋಟೆ): 'ಸತ್ಯ ಹೇಳಲು ಧೈರ್ಯ ಬೇಕು. ಅಂತಹ ಧೈರ್ಯ ತೋರಿದ ಬಸವಣ್ಣನವರು ವಿಶ್ವಕ್ಕೆ ಬೆಳಕಾಗಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದರು.

ಕೂಡಲಸಂಗಮದಲ್ಲಿ ಭಾನುವಾರ ಬಸವ ಧರ್ಮ ಪೀಠದಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸತ್ಯ ಹೇಳಿದ ಬಸವಣ್ಣ ಅವರ ಮೇಲೆ ಆಕ್ರಮಣವಾಯಿತು. ಬೆದರಿಸುವ ಕೆಲಸ ಆಯಿತು. ಅವರು ಹೆದರಲಿಲ್ಲ. ಹೀಗಾಗಿಯೇ ಸಮಾಜ ಅವರನ್ನು ಹತ್ತು ಶತಮಾನಗಳ ನಂತರವೂ ಗೌರವಿಸುತ್ತಿದೆ' ಎಂದರು.

'ಮೌಢ್ಯ, ಅಂಧಶ್ರದ್ಧೆಯ ಸಮಾಜದಲ್ಲಿ ಸಮಾನತೆಗಾಗಿ ಬಸವಣ್ಣ ಶ್ರಮಿಸಿದರು. 12ನೇ ಶತಮಾನದಲ್ಲಿಯೇ ಅನುಭವ ಮಂಟಪ ಸ್ಥಾಪಿಸಿ ಹಿಂದೂಸ್ತಾನದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದ ಕೀರ್ತಿ ಅವರಿಗೆ ಸಲ್ಲುತ್ತದೆ' ಎಂದರು. ಬಸವಣ್ಣ ಅವರು ಹೋರಾಡಿದ ವಿಷಯಗಳಿಗಾಗಿ ಸ್ವಾಮೀಜಿಗಳೂ ಹೋರಾಟ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕೂಡಲಸಂಗಮದಲ್ಲಿ ಭಾನುವಾರ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಬಸವಣ್ಣನ ಐಕ್ಯಸ್ಥಳದ ದರ್ಶನ ಪಡೆದು, ನಮಿಸಿದರು

ಗದಗದ ತೋಂಟದಾರ್ಯ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಮಾತನಾಡಿ, ಅನುಭವ ಮಂಟಪದಲ್ಲಿ ಮಹಿಳೆಗೆ ಅವಕಾಶ ನೀಡುವ ಮೂಲಕ ಮಹಿಳೆಯರಿಗೆ ಮೊದಲ ಬಾರಿಗೆ ಧಾರ್ಮಿಕ ಸ್ವಾತಂತ್ರ್ಯ ಕಲ್ಪಿಸಿದ ಕೀರ್ತಿ ಬಸವಣ್ಣನಿಗೆ ಸಲ್ಲುತ್ತದೆ ಎಂದರು.

ಇಳಕಲ್ ವಿಜಯ ಮಹಾಂತೇಶ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ, ವಿಜಯಪುರದ ವನಶ್ರೀ ಮಠದ ಜಯಬಸವ ಕುಮಾರ ಸ್ವಾಮೀಜಿ, ಅಥಣಿ ಗಚ್ಚಿನಮಠದ ಶಿವಬಸವ ಸ್ವಾಮೀಜಿ, ಯರನಾಳ ವಿರಕ್ತಮಠದ ಗುರುಸಂಗನಬಸವ ಸ್ವಾಮೀಜಿ, ಮಮದಾಪುರದ ವಿರಕ್ತಮಠದ ಅಭಿನವ ಮುರುಘೇಂದ್ರ ಸ್ವಾಮೀಜಿ, ಬಸವ ಧರ್ಮ ಪೀಠ ಮಹಾದೇಶ್ವರ ಸ್ವಾಮೀಜಿ, ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಇದ್ದರು.

ಲಿಂಗಾಯತ ಮತದತ್ತ ಕಾಂಗ್ರೆಸ್ ಕಣ್ಣು

ಬಾಗಲಕೋಟೆ: ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಅವರಿಗೆ ಟಿಕೆಟ್ ನಿರಾಕರಣೆ ಮಾಡುವ ಮೂಲಕ ಲಿಂಗಾಯತರಿಗೆ ಬಿಜೆಪಿ ಅನ್ಯಾಯ ಮಾಡುತ್ತಿದೆ ಎಂಬ ಕೂಗಿನ ನಡುವೆಯೇ ಬಸವ ಜಯಂತಿಗೆ ರಾಹುಲ್ ಗಾಂಧಿ ಅವರನ್ನು ಕರೆಸಿ ಲಿಂಗಾಯತ ಮತಗಳನ್ನು ಸೆಳೆಯಲು ಕಾಂಗ್ರೆಸ್ ಮುಂದಾಗಿದೆ.

ಕಳೆದ ಚುನಾವಣೆಯಲ್ಲಿ ಪ್ರತ್ಯೇಕ ಲಿಂಗಾಯತ ಧರ್ಮದ ಮೂಲಕ ಬಿಜೆಪಿಯ ಬುಟ್ಟಿಯಲ್ಲಿದ್ದ ಲಿಂಗಾಯತ ಮತ ಸೆಳೆಯಲು ಕಾಂಗ್ರೆಸ್ ಯತ್ನಿಸಿತ್ತು. ಈ ಬಾರಿ ಬಸವ ಜಯಂತಿ ಕಾರ್ಯಕ್ರಮಕ್ಕೆ ರಾಹುಲ್ ಗಾಂಧಿ ಅವರನ್ನು ಕರೆಯುವ ಮೂಲಕ ಮತ್ತೊಮ್ಮೆ ಇಂತಹುದೇ ಯತ್ನಕ್ಕೆ ಕಾಂಗ್ರೆಸ್ ಮುಂದಾಗಿದೆ.

ಕಾರ್ಯಕ್ರಮವನ್ನು ಬಸವ ಧರ್ಮ ಪೀಠ ಆಯೋಜಿಸಿತ್ತಾದರೂ, ಎರಡು ದಿನಗಳಿಂದ ಕಾಂಗ್ರೆಸ್ ಮುಖಂಡರೇ ಓಡಾಡುತ್ತಿದ್ದಾರೆ. ವೇದಿಕೆ ಮೇಲೆಯೂ ಕಾಂಗ್ರೆಸ್ ಮುಖಂಡರೇ ಇದ್ದರು.

ವಿಭೂತಿ ಧರಿಸಿ ಬಂದ ರಾಹುಲ್

ಬಸವ ಜಯಂತಿ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವಿಭೂತಿ ಧರಿಸಿ ವೇದಿಕೆ ಮೇಲೆ ಬಂದು ಗಮನ ಸೆಳೆದರು.

ಸಂಗಮೇಶ್ವರ ಹಾಗೂ ಬಸವಣ್ಣ ಐಕ್ಯಸ್ಥಳಕ್ಕೆ ಭೇಟಿ ನೀಡುವಾಗಲೂ ವಿಭೂತಿ ಧರಿಸಿದ್ದರು. ಸಂಗಮೇಶ್ವರನಿಗೆ ಆರತಿ ಬೆಳಗಿ, ಬಸವಣ್ಣನಿಗೆ ನಮನ ಸಲ್ಲಿಸಿದರು.

ಸುದ್ದಿ 2 ನಿಮಿಷ

ಪಿಯುಸಿ ತೇರ್ಗಡೆಯಾದ ಗ್ರಾಮ ಪಂಚಾಯಿತಿ ಅಧ್ಯಕ್ಷೆ!

ಪುತ್ತೂರು: ತಾಲ್ಲೂಕಿನ ಪಾಣಾಜೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭಾರತಿ ಭಟ್ ಖಾಸಗಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಉತ್ತೀರ್ಣರಾಗಿದ್ದಾರೆ. 38 ವರ್ಷದ ಅವರು ಕಲಾ ವಿಭಾಗದಲ್ಲಿ 421 ಅಂಕ ಗಳಿಸಿದ್ದಾರೆ.

23 ವರ್ಷಗಳ ಹಿಂದೆ ಎಂಟನೇ ತರಗತಿ ಉತ್ತೀರ್ಣರಾದ ಬಳಿಕ ತಂದೆಯ ವಿಯೋಗ ಹಾಗೂ ಆರ್ಥಿಕ ಸಮಸ್ಯೆಯಿಂದಾಗಿ ಭಾರತಿ ವಿದ್ಯಾಭ್ಯಾಸ ಮೊಟಕುಗೊಳಿಸಿದ್ದರು.

ಕಾಸರಗೋಡಿನ ಬದಿಯಡ್ಕ ಚಾಂಗುಳಿ ವೆಂಕಟ್ರಮಣ ಭಟ್ ಅವರನ್ನು ವಿವಾಹವಾಗಿ ಪಾಣಾಜೆಯಲ್ಲಿ ವಾಸವಾಗಿರುವ ಅವರು, ಎರಡು ವರ್ಷಗಳ ಹಿಂದೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿ ವಿಜಯಿಯಾಗಿದ್ದರು.

2021-22ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಪುತ್ತೂರಿನ ನೆಲ್ಲಿಕಟ್ಟೆಯ ಕೋಟ ಶಿವರಾಮ ಕಾರಂತ ಪ್ರೌಢಶಾಲೆಯಲ್ಲಿ ಖಾಸಗಿಯಾಗಿ ಬರೆದು ಶೇ 54 ಅಂಕ ಪಡೆದಿದ್ದರು. ಪುತ್ತೂರು ತಾಲ್ಲೂಕಿನ ಕೊಂಬೆಟ್ಟು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಖಾಸಗಿಯಾಗಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಪತಿ ವೆಂಕಟ್ರಮಣ ಭಟ್, ಪುತ್ರಿಯರಾದ ಅದಿತಿ (8ನೇ ತರಗತಿ) ಮತ್ತು ಅನಘಾ (6ನೇ ತರಗತಿ) ಅವರೊಂದಿಗೆ ಜೀವನ ನಡೆಸುತ್ತಿರುವ ಅವರು ಪದವಿ ಶಿಕ್ಷಣ ಪಡೆಯುವ ಕನಸು ಹೊಂದಿದ್ದಾರೆ.

ಕಣದಲ್ಲಿ ಮಾವಂದಿರು: ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದ ಇಬ್ಬರು ಐಪಿಎಸ್ ಅಧಿಕಾರಿಗಳನ್ನು ಭಾನುವಾರ ವರ್ಗಾವಣೆ ಮಾಡಲಾಗಿದೆ.

ಬೆಂಗಳೂರು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಎಸ್. ಗಿರೀಶ್ ಅವರನ್ನು ವರ್ಗಾವಣೆ ಮಾಡಿ, ಅವರ ಜಾಗಕ್ಕೆ ಧರ್ಮೇಂದ್ರಕುಮಾರ್ ಮೀನಾ ಅವರನ್ನು ವರ್ಗಾಯಿಸಲಾಗಿದೆ.

ದಾವಣಗೆರೆ ಎಸ್ಪಿ ಸಿ.ಬಿ. ರಿಷ್ಯಂತ್ ಅವರನ್ನು ವರ್ಗಾಯಿಸಲಾಗಿದ್ದು, ಅವರ ಸ್ಥಾನಕ್ಕೆ ಡಾ. ಕೆ. ಅರುಣ್ ಅವರನ್ನು ವರ್ಗಾವಣೆ ಮಾಡಲಾಗಿದೆ.

'ಗಿರೀಶ್ ಅವರ ಮಾವ ಕೆ.ಎನ್. ರಾಜಣ್ಣ, ಮಧುಗಿರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ. ರಿಷ್ಯಂತ್ ಅವರ ಮಾವ ಎಸ್. ಮುನಿರತ್ನ, ಬೆಂಗಳೂರು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ. ಮಾವಂದಿರು ಚುನಾವಣೆ ಅಭ್ಯರ್ಥಿಗಳಾಗಿರುವುದರಿಂದ, ಅಳಿಯಂದಿರಾದ ಗಿರೀಶ್ ಹಾಗೂ ರಿಷ್ಯಂತ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಚುನಾವಣೆ ಮುಗಿಯುವವರೆಗೂ ಅವರಿಬ್ಬರು ಪೊಲೀಸ್ ಇಲಾಖೆ ಪ್ರಧಾನ ಕಚೇರಿಯಲ್ಲಿ ಕೆಲಸ ಮಾಡಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನತ್ತ ಹೊರಟಿದ್ದ ತೂತ್ತುಕುಡಿ ಎಕ್ಸ್‌ಪ್ರೆಸ್

ಮುಂಗಡ ಟಿಕೆಟ್ ಕಾಯ್ದಿರಿಸಿದ್ದವರು ನಿಲ್ದಾಣದಲ್ಲೇ ನಿಂತಿದ್ದು, ಪರ್ಯಾಯ ವ್ಯವಸ್ಥೆ ಮಾಡಿಕೊಡುವಂತೆ ನಿಲ್ದಾಣದ ಅಧಿಕಾರಿಗಳನ್ನು ಒತ್ತಾಯಿಸಿದರು

ಬೇರ್ಪಟ್ಟ ರೈಲು ಬೋಗಿಗಳು ತಪ್ಪಿದ ಅನಾಹುತ

ರಾಮನಗರ: ಮೈಸೂರಿನಿಂದ ಬೆಂಗಳೂರು ಕಡೆಗೆ ಹೊರಟಿದ್ದ ತೂತ್ತುಕುಡಿ ಎಕ್ಸ್‌ಪ್ರೆಸ್ ಬೋಗಿಗಳು ಭಾನುವಾರ ರಾತ್ರಿ ಇಲ್ಲಿನ ರೈಲು ನಿಲ್ದಾಣದಲ್ಲಿ ಏಕಾಏಕಿ ಬೇರ್ಪಟ್ಟಿದ್ದು, ಪ್ರಯಾಣಿಕರು ಆತಂಕಕ್ಕೀಡಾಗಿದ್ದರು.

ರಾತ್ರಿ 8ಕ್ಕೆ ರಾಮನಗರ ನಿಲ್ದಾಣ ಬಂದ ರೈಲು ಅಲ್ಲಿಂದ ಮತ್ತೆ ಪ್ರಯಾಣ ಮುಂದುವರಿಸುತ್ತಲೇ ಶಬ್ದ ಕಾಣಿಸಿಕೊಂಡಿತು. ನೋಡುನೋಡುತ್ತಲೇ ರೈಲಿನ ಮಧ್ಯಭಾಗದ ಬೋಗಿಗಳು ಬೇರ್ಪಟ್ಟವು. ಇದರಿಂದ ಪ್ರಯಾಣಿಕರು ಆತಂಕಕ್ಕೆ ಒಳಗಾದರು.


ರೈಲಿನಿಂದ ಬೇರ್ಪಟ್ಟ ಬೋಗಿ

ಘಟನೆ ಬಳಿಕ ರೈಲು ರಾಮನಗರ ನಿಲ್ದಾಣದಲ್ಲೇ ನಿಂತಿದ್ದು, ಹಳಿಗಳ ದುರಸ್ತಿ ಕಾರ್ಯಕ್ಕೆ ಸಿದ್ಧತೆ ನಡೆದಿತ್ತು. ಮತ್ತೊಂದು ಹಳಿಯಲ್ಲಿ ಬೆಂಗಳೂರು–ಮೈಸೂರು ನಡುವಿನ ರೈಲುಗಳು ಸಂಚಾರ ಮುಂದುವರಿಸಿದವು.

'ರೈಲು ರಾಮನಗರ ನಿಲ್ದಾಣ ಬಿಟ್ಟು ಹೊರಟಿತ್ತು. ಆಗ ಏಕಾಏಕಿ ಶಬ್ದ ಬಂತು. ನಾವಿದ್ದ ಬೋಗಿಯು ಮುಂದೆ ಇದ್ದ ಬೋಗಿಯಿಂದ ಬೇರ್ಪಟ್ಟು ಹಳಿ ಮೇಲೆ ಹಾಗೆಯೇ ನಿಂತುಕೊಂಡಿತ್ತು. ಮುಂದಿದ್ದ ಬೋಗಿಗಳು ಸ್ವಲ್ಪ ದೂರ ಹೋಗಿ ನಿಂತವು. ಇದರಿಂದ ಗಾಬರಿ ಆಯಿತು. ರೈಲ್ವೆ ಸಿಬ್ಬಂದಿ ಕೂಡ ನೆರವಿಗೆ ಬರಲಿಲ್ಲ' ಎಂದು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಶ್ರೀಜಿತ್ ಎಂಬುವರು ಮಾಹಿತಿ ನೀಡಿದರು.

ಸಿದ್ಧಗಂಗಾ: ಪಟ್ಟಾಧಿಕಾರ ಮಹೋತ್ಸವ

ಕಂಚುಗಲ್ ಬಂಡೆಮಠ, ದೇವನಹಳ್ಳಿಯ ಬಸವಕಲ್ಯಾಣ ಮಠಕ್ಕೂ ನೇಮಕ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಉತ್ತರಾಧಿಕಾರಿಯಾಗಿ ಶಿವಸಿದ್ದೇಶ್ವರ ಸ್ವಾಮೀಜಿ (ಮನೋಜ್ ಕುಮಾರ್) ಪಟ್ಟಾಧಿಕಾರ ಮಹೋತ್ಸವ ಧಾರ್ಮಿಕ ವಿಧಿವಿಧಾನಗಳೊಂದಿಗೆ ಭಾನುವಾರ ನೆರವೇರಿತು.

ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಖಾ ಮಠಗಳಾದ ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೆ ಮಠಕ್ಕೆ ಮಹಾಲಿಂಗ ಸ್ವಾಮೀಜಿ (ಕೆ.ಎಂ.ಹರ್ಷ), ದೇವನಹಳ್ಳಿಯ ಬಸವಕಲ್ಯಾಣ ಮಠದ ಸದಾಶಿವ ಸ್ವಾಮೀಜಿ (ಗೌರೀಶ್ ಕುಮಾರ್) ಉತ್ತರಾಧಿಕಾರಿಗಳಾಗಿ ಪಟ್ಟಾಧಿಕಾರ ಮಾಡಲಾಯಿತು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಪಟ್ಟಾಧಿಕಾರ ಮಹೋತ್ಸವದಲ್ಲಿ ನಾಡಿನ ವಿವಿಧ ಮಠಾಧೀಶರು ಭಾಗವಹಿಸಿದ್ದರು.

ಬೆಳಗಿನ ಜಾವದಲ್ಲಿಯೇ ಮಂಗಳ ಸ್ನಾನ, ಶಿವಪೂಜೆ, ಮಂತ್ರೋಪದೇಶ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ನೆರವೇರಿದವು. ತಳಿರು ತೋರಣಗಳಿಂದ ಮಠವನ್ನು ಅಲಂಕರಿಸಲಾಗಿತ್ತು. ಮಠದ ಆವರಣದಲ್ಲಿರುವ ಶಿವಕುಮಾರ ಸ್ವಾಮೀಜಿ ಗದ್ದುಗೆಯನ್ನು ಹೂವುಗಳಿಂದ ಸಿಂಗರಿಸಲಾಗಿತ್ತು.

ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಭಾನುವಾರ ಸಿದ್ಧಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಹೊಸ ಉತ್ತರಾಧಿಕಾರಿಗಳಾಗಿ ಮಹಾಲಿಂಗ ಸ್ವಾಮೀಜಿ, ಶಿವಸಿದ್ದೇಶ್ವರ ಸ್ವಾಮೀಜಿ, ಸದಾಶಿವ ಸ್ವಾಮೀಜಿ ಪಟ್ಟಾಧಿಕಾರ ಮಹೋತ್ಸವ ನೆರವೇರಿತು.

ಸನ್ಯಾಸ ದೀಕ್ಷೆಯ ನಂತರ ಮೂವರೂ ಉತ್ತಾರಾಧಿಕಾರಿಗಳು ಗದ್ದುಗೆ ದರ್ಶನ ಪಡೆದರು. ಇದೇ ವೇಳೆ ನೂತನ ಸ್ವಾಮೀಜಿಗಳ ತಂದೆ–ತಾಯಿಯನ್ನು ಮಠದ ವತಿಯಿಂದ ಗೌರವಿಸಲಾಯಿತು.

'ಶಿವಕುಮಾರ ಸ್ವಾಮೀಜಿ ಆಶಯ, ಆಶೀರ್ವಾದದಿಂದ ಮಠ ನಡೆಯುತ್ತಿದೆ. ನಾನು ಯಾವತ್ತೂ ಅಧಿಕಾರ, ಕುರ್ಚಿಗಾಗಿ ಆಸೆ ಪಟ್ಟವನಲ್ಲ. ಪಡುವವನೂ ಅಲ್ಲ. ನೂತನ ಉತ್ತರಾಧಿಕಾರಿ ನೇಮಕದಿಂದ ನನ್ನ ಕೆಲಸ ಕಡಿಮೆ ಆಗಬಹುದು' ಎಂದು ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

'ಕಾವಿ ಧರಿಸಿದ ಮಾತ್ರಕ್ಕೆ ಪರಿಪೂರ್ಣ ಸ್ವಾಮಿಯಲ್ಲ. ನಾನು ಕೂಡ ಪರಿಪೂರ್ಣನಲ್ಲ. ಕಲಿತುಕೊಳ್ಳುವುದು ತುಂಬಾ ಇದೆ. ಮಠದ ದೊಡ್ಡ ಶಕ್ತಿ ಪೂಜಾ ನಿಷ್ಠೆ. ಏನೇ ಕಷ್ಟ ಬಂದರೂ ಪೂಜೆ ಮಾಡಿದರೆ ಕಳೆದು ಹೋಗುತ್ತದೆ ಎಂದು ಪೂಜ್ಯರು ಹೇಳುತ್ತಿದ್ದರು' ಎಂದು ನೆನಪಿಸಿಕೊಂಡರು.

'ಕಾಯಾ, ವಾಚಾ, ಮನಸಾ ಶುದ್ಧ ಜೀವಿಯಾಗಿ ಕೆಲಸ ಮಾಡುತ್ತೇನೆ. ಸಮಾಜ ಸೇವೆಯಲ್ಲಿ ಸಮರ್ಪಿಸಿಕೊಳ್ಳುತ್ತೇನೆ. ಮಠದ ಅಲಿಖಿತ ಸಂವಿಧಾನಕ್ಕೆ ಬದ್ಧನಾಗಿ ಇರುತ್ತೇನೆ. ಅದರಂತೆ ನಡೆದುಕೊಳ್ಳುತ್ತೇನೆ' ಎಂದು ಸಿದ್ಧಗಂಗಾ ಮಠದ ಉತ್ತರಾಧಿಕಾರಿ ಶಿವಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ಬೇಲಿ ಮಠದ ಶಿವರುದ್ರ ಸ್ವಾಮೀಜಿ, ಬಸವಕಲ್ಯಾಣ ಮಠದ ಮಹದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಮರಳಿ ಕಾಣಿಸಿ ಅಚ್ಚರಿ ಮೂಡಿಸಿದ 'ಬ್ಲೂ ಟಿಕ್'

ಒಂದನೇ ಪುಟದಿಂದ...

ಬಾಲಿವುಡ್ ನಟರಾದ ಶಾರುಕ್ ಖಾನ್, ಸಲ್ಮಾನ್ ಖಾನ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವು ಪ್ರಸಿದ್ಧ ವ್ಯಕ್ತಿಗಳು ಶುಲ್ಕ ಪಾವತಿಸಿರಲಿಲ್ಲ. ಹಾಗಾಗಿ, ಅವರೆಲ್ಲರ ಖಾತೆಯಿಂದ 'ಬ್ಲೂ ಟಿಕ್' ಮಾಯವಾಗಿತ್ತು. ಕ್ರಿಕೆಟಿಗರಾದ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ ಅವರ ಖಾತೆಯಲ್ಲೂ ಈಗ ಕಾಣಿಸಿಕೊಂಡಿದೆ.

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, 'ನಾನು ಶುಲ್ಕ ಪಾವತಿಸಿಲ್ಲ. ಆದರೆ, ನನ್ನ ಖಾತೆಯಲ್ಲಿ ಮತ್ತೆ ಬ್ಲೂ ಟಿಕ್ ಕಾಣಿಸಿಕೊಂಡಿದೆ. ಮಸ್ಕ್ ನನ್ನ ಶುಲ್ಕವನ್ನು ನೀವೇ ಪಾವತಿಸಿದ್ದೀರಾ' ಎಂದು ಟ್ವೀಟ್ ಮಾಡಿದ್ದಾರೆ.

'ಬ್ಲೂ ಟಿಕ್' ಮರಳಿರುವುದಕ್ಕೆ ಅಚ್ಚರಿ ವ್ಯಕ್ತಪಡಿಸಿರುವ ನೊಬೆಲ್ ಪ್ರಶಸ್ತಿ ಪುರಸ್ಕೃತೆ ಮಲಾಲಾ ಯೂಸುಫ್‌ಝೈ, 'ಈ ಬಗ್ಗೆ ನನಗೇನೂ ಗೊತ್ತಿಲ್ಲ. ಆದರೆ, ಮತ್ತೆ ಅದು ಮರಳಿರುವುದಕ್ಕೆ ಖುಷಿಯಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಡಿ.ಸಿ. ಹೆಸರಲ್ಲಿ ನಕಲಿ ಆದೇಶ

ಒಂದನೇ ಪುಟದಿಂದ...

'ನಕಲಿ ಆದೇಶ ಬಳಸಿಕೊಂಡು ಹಲವು ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗಿದೆ. ಜಿಲ್ಲಾಧಿಕಾರಿ ನಕಲಿ ಸಹಿ ಹಾಗೂ ನಕಲಿ ಮೊಹರು ಸಹ ಬಳಸಲಾಗಿದೆ. ಜೊತೆಗೆ, ಜಿಲ್ಲಾಧಿಕಾರಿ ಕಚೇರಿಯ ಅಭಿಲೇಖಾಲಯ ಶಾಖೆಯ ಹೆಸರಿನಲ್ಲಿ ನಕಲಿ ದೃಢೀಕರಣ ಪ್ರತಿಗಳನ್ನೂ ಸೃಷ್ಟಿಸಲಾಗಿದೆ. ಈ ಎಲ್ಲ ದಾಖಲೆಗಳನ್ನು ಬಳಸಿಕೊಂಡು ಅಕ್ರಮವಾಗಿ ರಸ್ತೆ ನಿರ್ಮಾಣ ಮಾಡಿ ಸರ್ಕಾರವನ್ನು ವಂಚಿಸಿರುವುದು ಗಮನಕ್ಕೆ ಬಂದಿದೆ. ರಸ್ತೆ ನಿರ್ಮಾಣ ಮಾಡಿದ್ದು ಯಾರು? ನಕಲಿ ದಾಖಲೆ ಸೃಷ್ಟಿಸಿದ್ದು ಹೇಗೆ? ಈ ಎಲ್ಲ ಮಾಹಿತಿ ತನಿಖೆಯಿಂದ ತಿಳಿಯಬೇಕಿದೆ' ಎಂದು ಮೂಲಗಳು ತಿಳಿಸಿವೆ.

ಹೊನ್ನಾಳಿ ತಾಲ್ಲೂಕಿನ ಹಿರೇಗೋಣಿಗೆರೆ ಗ್ರಾಮದ ಬಳಿ ಘಟನೆ

ನದಿಯಲ್ಲಿ ಕೊಚ್ಚಿ ಹೋದ ಯುವಕರು

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ಎತ್ತುಗಳ ಮೈ ತೊಳೆಯಲು ತುಂಗಭದ್ರಾ ನದಿಗೆ ತೆರಳಿದ್ದ ತಾಲ್ಲೂಕಿನ ಹಿರೇಗೋಣಿಗೆರೆ ಗ್ರಾಮದ ಮೂವರು ಯುವಕರು ಭಾನುವಾರ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾರೆ.

ಗ್ರಾಮದ ಕಿರಣ್ (21), ಪವನ್ ಕುಮಾರ್ (19) ಮತ್ತು ವರುಣ್ (19) ನೀರು ಪಾಲಾದವರು. ವರುಣ್ ಮೃತದೇಹ ಪತ್ತೆಯಾಗಿದ್ದು, ಇನ್ನಿಬ್ಬರು ಯುವಕರಿಗಾಗಿ ಅಗ್ನಿಶಾಮಕದಳದ ಸಿಬ್ಬಂದಿ ಹಾಗೂ ಗ್ರಾಮಸ್ಥರು ಹುಡುಕಾಟ ನಡೆಸಿದ್ದಾರೆ.

ಕಿರಣ್

ವರುಣ್

ಪವನ್

ಬಸವ ಜಯಂತಿ ದಿನ ಈ ವರ್ಷದ ಬೇಸಾಯ ಆರಂಭಿಸುವ ಪದ್ಧತಿ ಇದೆ. ಸ್ನೇಹಿತರಾಗಿರುವ ಈ ಯುವಕರು ಜಮೀನಿಗೆ ತೆರಳಿ ಬೇಸಾಯ ಹೂಡಿದ ಬಳಿಕ ದಣಿದ ಎತ್ತುಗಳಿಗೆ ಮೈ ತೊಳೆದು, ನೀರು ಕುಡಿಸುವ ಸಲುವಾಗಿ ನದಿಗೆ ಇಳಿದಿದ್ದರು.

ಎತ್ತುಗಳೊಂದಿಗೆ ಮೊದಲು ನದಿಗೆ ಇಳಿದಿದ್ದ ಕಿರಣ್ ಅವರು ನೀರಿನ ಸೆಳೆತಕ್ಕೆ ಸಿಲುಕಿದ್ದಾನೆ. ಆತನನ್ನು ರಕ್ಷಿಸಲು ಧಾವಿಸಿದ ಪವನ್‌ಕುಮಾರ್ ಮತ್ತು ವರುಣ್ ಸಹ ನೀರು ಪಾಲಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸಿಡಿಲು ಬಡಿದು 8 ಹಸು ಸಾವು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಕುಂದುಕೆರೆ ಗ್ರಾಮದಲ್ಲಿ ಭಾನುವಾರ ಸಂಜೆ ಸಿಡಿಲು ಬಡಿದು ಎಂಟು ಹಸುಗಳು, ತಲಾ ಎರಡು ಮೇಕೆ ಮತ್ತು ಕುರಿಗಳು ಮೃತಪಟ್ಟಿವೆ.

ಗ್ರಾಮದಲ್ಲಿ ಎರಡು ಗಂಟೆಗೂ ಹೆಚ್ಚು ಕಾಲ ಗುಡುಗು ಸಹಿತ ಬಿರುಸಿನ ಮಳೆಯಾಗಿದೆ. ಈ ವೇಳೆ ಹಸು, ಮೇಕೆ, ಕುರಿಗಳು ಜಮೀನಿನಲ್ಲಿ ಮೇಯುತ್ತಿದ್ದವು. ಮೃತಪಟ್ಟ ಏಳು ಹಸು, ಎರಡು ಮೇಕೆ, ಎರಡು ಕುರಿಗಳು ಗ್ರಾಮದ ರಾಜಪ್ಪ ಅವರಿಗೆ ಸೇರಿವೆ. ಇನ್ನೊಂದು ಹಸು ಬಸವಣ್ಣ ಅವರದ್ದು.

ಕಪ್ಪೆಚಿಪ್ಪು ಹೆಕ್ಕಲು ಹೋಗಿ ನಾಲ್ವರು ಸಾವು

ಉಡುಪಿ: ಬ್ರಹ್ಮಾವರ ಸಮೀಪದ ಹೂಡೆಯ ಕಿಣಿಯಾರ ಕುದ್ರುವಿನಲ್ಲಿ (ಹೊಳೆ) ಭಾನುವಾರ ಕಪ್ಪೆ ಚಿಪ್ಪು ಹೆಕ್ಕಲು ಹೋಗಿದ್ದ ನಾಲ್ವರು ನೀರು ಪಾಲಾಗಿದ್ದಾರೆ.

ಹೂಡೆಯವರಾದ ಇಬಾಸ್, ಫೈಜಾನ್ ಹಾಗೂ ಶೃಂಗೇರಿಯ ಫರ್ಹಾನ್ ಹಾಗೂ ಸುಫಾನ್ ಮೃತರು. ಈದ್ ಉಲ್ ಫಿತ್ರ್ ಅಂಗವಾಗಿ ಶೃಂಗೇರಿಯಿಂದ ಬ್ರಹ್ಮಾವರದ ಹೂಡೆಯಲ್ಲಿರುವ ಸಂಬಂಧಿಗಳ ಮನೆಗೆ ಯುವಕರು ಬಂದಿದ್ದರು. ಸ್ಥಳೀಯರೊಟ್ಟಿಗೆ ಹೊಳೆಯಲ್ಲಿ ಕಪ್ಪೆಚಿಪ್ಪು ತೆಗೆಯಲು ದೋಣಿಯಲ್ಲಿ ಹೋಗಿದ್ದರು.

7 ಮಂದಿ ಒಟ್ಟಾಗಿ ಕಪ್ಪೆ ಚಿಪ್ಪು ತೆಗೆಯುವಾಗ ಆಕಸ್ಮಿಕವಾಗಿ ಆಳವಾದ ಗುಂಡಿಗೆ ಇಳಿದಿದ್ದಾರೆ. ಮೂವರು ಈಜಿ ಸುರಕ್ಷಿತ ಸ್ಥಳ ತಲುಪಿದ್ದು, ನಾಲ್ವರು ಮೃತಪಟ್ಟಿದ್ದಾರೆ ಎಂದು ಬ್ರಹ್ಮಾವರ ಠಾಣೆ ಪೊಲೀಸರು ತಿಳಿಸಿದ್ದಾರೆ.

ರಂಗಕ್ಕೆ ನಾಯಕರು: ಪ್ರಚಾರಕ್ಕೆ ಬಿರುಸು

ಪ್ರಧಾನಿ ಮೋದಿ, ಅಮಿತ್ ಶಾ ನೆಚ್ಚಿದ ಬಿಜೆಪಿ

ಒಂದನೇ ಪುಟದಿಂದ...

ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 15 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಮತ ಸೆಳೆಯಲು ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕರ್ನಾಟಕದಲ್ಲಿ ಬಿಜೆಪಿಯನ್ನು ಗೆಲುವಿನ ದಡ ಮುಟ್ಟಿಸುವ ಹೊಣೆಯನ್ನು ನೇರವಾಗಿ ಕೈಗೆ ತೆಗೆದುಕೊಂಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯದಲ್ಲಿ ಪ್ರಚಾರವನ್ನು ಈಗಾಗಲೇ ಆರಂಭಿಸಿದ್ದಾರೆ. ಪ್ರಚಾರ ಸಭೆ, ಚುನಾವಣಾ ಕಾರ್ಯತಂತ್ರದ ಸಭೆಗಳನ್ನು ಮುಗಿಸಿ ಶನಿವಾರವಷ್ಟೇ ದೆಹಲಿಗೆ ತೆರಳಿದ್ದ ಶಾ, ಭಾನುವಾರ ರಾಜ್ಯಕ್ಕೆ ಮರಳಿದ್ದಾರೆ.

ಮೈಸೂರು, ಹಾಸನ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅವರು ಸೋಮವಾರದಿಂದ ಎರಡು ದಿನ ಪ್ರಚಾರ ನಡೆಸಲಿದ್ದಾರೆ. ಅವರು ಚುನಾವಣಾ ಪ್ರಚಾರದ ಕೊನೆಯವರೆಗೂ ಕರ್ನಾಟಕದಲ್ಲೇ ವಾಸ್ತವ್ಯ ಹೂಡುವ ಯೋಚನೆಯಲ್ಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಏಪ್ರಿಲ್ 26 ಮತ್ತು 30ರಂದು ರಾಜ್ಯದಲ್ಲಿ ಬಿಜೆಪಿ ಪರ ಪ್ರಚಾರ ನಡೆಸುವರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಸ್ಮೃತಿ ಇರಾನಿ ಸೇರಿದಂತೆ ಹಲವರ ಪ್ರಚಾರ ಕಾರ್ಯಕ್ರಮಗಳು ನಿಗದಿಯಾಗಿವೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರದಿಂದ ಪ್ರವಾಸ ಆರಂಭಿಸಿದ್ದು, ಮೊದಲ ದಿನವೇ ಮೂರು ಜಿಲ್ಲೆಗಳ ಒಂಬತ್ತು ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿದರು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಕೂಡ ಪ್ರಚಾರ ಆರಂಭಿಸಿದ್ದು, ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರವಾಸಕ್ಕೆ ವೇಳಾಪಟ್ಟಿ ಅಂತಿಮಗೊಳಿಸಿದ್ದಾರೆ.

ಅಖಾಡಕ್ಕೆ ಧುಮುಕಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ

ಒಂದನೇ ಪುಟದಿಂದ...

ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಕೂಡ ರಾಹುಲ್ ಜತೆ ಪ್ರಚಾರದಲ್ಲಿ ಭಾಗಿಯಾಗುವರು. ಇಬ್ಬರೂ ದಿನಕ್ಕೆ ತಲಾ ಮೂರು ಕ್ಷೇತ್ರಗಳಲ್ಲಿ ಪ್ರವಾಸ ಮಾಡಲು ಯೋಚಿಸಿದ್ದಾರೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕೂಡ ಪ್ರಚಾರದಲ್ಲಿ ಭಾಗವಹಿಸಲಿದ್ದು, ಬೆಂಗಳೂರು ಮತ್ತು ಉತ್ತರ ಕರ್ನಾಟಕದಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯದ ಉದ್ದಗಲ ಪ್ರವಾಸಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಿರಂತರ 15 ದಿನ ಪ್ರಚಾರ ನಡೆಸುವರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವ ಜಗದೀಶ ಶೆಟ್ಟರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಸೇರಿದಂತೆ ಹಲವು ಪ್ರಮುಖರೂ ಪಕ್ಷದ ಪರ ಪ್ರಚಾರಕ್ಕೆ ಸನ್ನದ್ಧರಾಗಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸೇರಿದಂತೆ ಹಲವು ನಾಯಕರು ರಾಜ್ಯದಲ್ಲೇ ಬೀಡುಬಿಟ್ಟಿದ್ದು, ಪ್ರಚಾರ ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ಎಚ್.ಡಿ. ಕುಮಾರಸ್ವಾಮಿಯೇ ಜೆಡಿಎಸ್ ಬಲ

ಒಂದನೇ ಪುಟದಿಂದ...

ನಾಮಪತ್ರ ಸಲ್ಲಿಕೆ ಅವಧಿಯಲ್ಲೇ ಕೆಲವು ಜಿಲ್ಲೆಗಳ ಪ್ರವಾಸ ಮುಗಿಸಿರುವ ಕುಮಾರಸ್ವಾಮಿ, ಮುಂದೆ ದಿನ ವೊಂದಕ್ಕೆ ಏಳರಿಂದ ಎಂಟು ಕ್ಷೇತ್ರಗಳಲ್ಲಿ ಮತಯಾಚನೆಗೆ ಯೋಜನೆ ರೂಪಿಸಿಕೊಂಡಿದ್ದಾರೆ.

ಪಕ್ಷವು ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಬಹುತೇಕ ಕ್ಷೇತ್ರಗಳಿಗೆ ಭೇಟಿ ನೀಡುವ ಗುರಿ ಹೊಂದಿದ್ದಾರೆ.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಮಂಡ್ಯ, ಮೈಸೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಮಾತ್ರ ಪ್ರಚಾರ ನಡೆಸುವರು. ಹಾಸನ ಜಿಲ್ಲೆಯಲ್ಲಿ ಪ್ರಚಾರದ ಹೊಣೆಯನ್ನು ಎಚ್.ಡಿ. ರೇವಣ್ಣ ಅವರಿಗೆ ನೀಡಲಾಗಿದೆ. ನಿಖಿಲ್ ಕುಮಾರಸ್ವಾಮಿ ಮತ್ತು ಸಂಸದ ಪ್ರಜ್ವಲ್ ರೇವಣ್ಣ ಅವರೂ ರಾಜ್ಯದ ವಿವಿಧೆಡೆ ಪ್ರಚಾರ ಸಭೆಗಳನ್ನು ನಡೆಸುವರು ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ರಾಜ್ಯದ 9 ಮೃಗಾಲಯ: ಕೋವಿಡ್ ನಂತರ ಪ್ರವಾಸಿಗರಿಂದ ಉತ್ತಮ ಸ್ಪಂದನೆ

ಮೊದಲ ಬಾರಿಗೆ ₹100 ಕೋಟಿ ದಾಟಿದ ಆದಾಯ

• ವೆಂಕಟೇಶ್ ಜಿ.ಎಚ್

ಶಿವಮೊಗ್ಗ: ಕೋವಿಡ್ ವೇಳೆ ಕಳೆಗುಂದಿದ್ದ ರಾಜ್ಯದ ಮೃಗಾಲಯಗಳಿಗೆ ಈ ವರ್ಷ ಪ್ರವಾಸಿಗರಿಂದ ಉತ್ತಮ ಸ್ಪಂದನೆ ದೊರೆತಿದೆ. 2022-23ನೇ ಸಾಲಿನಲ್ಲಿ ರಾಜ್ಯದ 9 ಮೃಗಾಲಯಗಳಿಗೆ 65.77 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ. ಇದೇ ಮೊದಲ ಬಾರಿಗೆ ಆದಾಯದ ಪ್ರಮಾಣ ₹ 100 ಕೋಟಿ ದಾಟಿದೆ.

'ಮಾಸ್ಟರ್ ಪ್ಲಾನ್ ರೂಪಿಸಿ ಅದರಡಿ ರಾಜ್ಯದ ಎಲ್ಲಾ ಮೃಗಾಲಯಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಮಾಡಿದ್ದು, ಆದಾಯ ಹೆಚ್ಚಳಕ್ಕೆ ಪ್ರಮುಖ ಕಾರಣ' ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ ತಿಳಿಸಿದ್ದಾರೆ.

'ಮೈಸೂರು, ಬೆಂಗಳೂರು ನಂತರ ಇತರೆ ಮೃಗಾಲಯಗಳಲ್ಲೂ ಹುಲಿ, ಸಿಂಹ, ಚಿರತೆಗಳನ್ನು ತಂದು ಇರಿಸಲಾಗಿದೆ. ಮೃಗಾಲಯಗಳ ಆಧುನೀಕರಣ, ವಿಸ್ತರಣೆ, ರಸ್ತೆ, ಶೌಚಾಲಯ ಸೇರಿದಂತೆ ಉತ್ತಮ ಸೌಲಭ್ಯ ನೀಡಲಾಗುತ್ತಿದೆ. ಅಂತೆಯೇ ಪ್ರವಾಸಿಗರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗಿದೆ' ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ನಂತರ ಜನರ ಮನಸ್ಥಿತಿಯಲ್ಲೂ ಬದಲಾವಣೆ ಆಗಿದೆ. ಜನರು ದೈಹಿಕ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ರಜೆಯ ದಿನಗಳಲ್ಲಿ ಮಕ್ಕಳನ್ನು ಮೊಬೈಲ್ ಫೋನ್, ಟಿ.ವಿ.ಗಳಿಂದ ದೂರವಿಡಲು ಮನೆ ಮಂದಿಯೆಲ್ಲಾ ಪ್ರವಾಸ ಹೋಗುತ್ತಿರುವುದು ಕಾಣುತ್ತಿದೆ. ಮೃಗಾಲಯಗಳ ಆದಾಯ ಹೆಚ್ಚಳಕ್ಕೆ ಇದೂ ಕಾರಣ. ಮೈಸೂರು, ಬೆಂಗಳೂರು ಹೊರತಾಗಿ ರಾಜ್ಯದ ಉಳಿದ ಮೃಗಾಲಯಗಳಿಗೆ ಅಪರೂಪದ ಪ್ರಾಣಿಗಳನ್ನು ಕರೆತರಲಾಗಿದೆ. ಮಾಧ್ಯಮಗಳಿಂದಲೂ ಸಮರ್ಪಕ ಪ್ರಚಾರ ದೊರೆತಿದ್ದು ಪೂರಕವಾಗಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಬದಲಾದ ವಾತಾವರಣ: ಮೊದಲೆಲ್ಲಾ ಮೃಗಾಲಯಗಳಲ್ಲಿ ಪ್ರಾಣಿಗಳನ್ನು ಸರಳುಗಳ ಹಿಂದೆ ಕೂಡಿ ಹಾಕಲಾಗುತ್ತಿತ್ತು. ಪ್ರವಾಸಿಗರಿಗೂ ಅವುಗಳನ್ನು ಬಂಧನದಲ್ಲಿಟ್ಟಿರುವ ಭಾವನೆ ಮೂಡುತ್ತಿತ್ತು. ಆದರೆ ಆಧುನೀಕರಣದ ನಂತರ ಪಾರದರ್ಶಕ ಗಾಜಿನ ಗೋಡೆಗಳ (ಗ್ಲಾಸ್ ಎನ್‌ಕ್ಲೋಸರ್) ನಡುವೆ ಪ್ರಾಣಿಗಳು ಕಾಣಸಿಗುತ್ತಿವೆ.

ಮಧ್ಯೆ ಗಾಜಿನ ತಡೆಗೋಡೆ ಇದೆ ಎಂಬ ಭಾವನೆ ಬಿಟ್ಟರೆ, 'ಪ್ರಾಣಿಗಳನ್ನು ನೈಜ ಪರಿಸರದಲ್ಲಿ ಕಾಣುತ್ತಿದ್ದೇವೆ' ಎಂಬ ಭಾವನೆ ಪ್ರವಾಸಿಗರಲ್ಲಿ ಮೂಡುತ್ತಿದೆ. ಶಿವಮೊಗ್ಗ ಮೃಗಾಲಯಕ್ಕೆ ನೀರಾನೆಗಳು ಬಂದಿವೆ. ಕಾಡೆಮ್ಮೆಗಳ ಸಫಾರಿಯನ್ನೂ ಆರಂಭಿಸಲಾಗಿದೆ. ಬದಲಾದ ವಾತಾವರಣ, ಹೊಸ ಅಪರೂಪದ ಪ್ರಾಣಿಗಳು ಪ್ರವಾಸಿಗರನ್ನು ಸೆಳೆಯುತ್ತಿವೆ ಎಂದು ಮೃಗಾಲಯದ ಅಧಿಕಾರಿಗಳು ಹೇಳುತ್ತಾರೆ.

ಆದಾಯ ಪಟ್ಟಿಯಲ್ಲಿ ಬೆಂಗಳೂರಿನ ಬನ್ನೇರುಘಟ್ಟ ಮೃಗಾಲಯ ಮೊದಲ ಸ್ಥಾನದಲ್ಲಿದೆ. ದಾವಣಗೆರೆಯ ಆನಗೋಡು ಪಾರ್ಕ್‌ನ ಮೃಗಾಲಯ ಕೊನೆ ಸ್ಥಾನದಲ್ಲಿದೆ.

'ಶಿವಮೊಗ್ಗದ ತ್ಯಾವರೆಕೊಪ್ಪ ಮೃಗಾಲಯ ಈ ವರ್ಷ ಗಳಿಸಿರುವ ಆದಾಯ ಅಲ್ಲಿನ ಪ್ರಾಣಿಗಳಿಗೆ ಆಹಾರ ಮತ್ತು ಮೇವು ಖರೀದಿಯ ಸ್ವಾವಲಂಬನೆಗೆ ನೆರವಾಗಿದೆ. ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಕೊಡುವ ಅನುದಾನವನ್ನು ಬಳಸಲಾಗುತ್ತಿದೆ' ಎಂದು ಬಿ.ಪಿ.ರವಿ ತಿಳಿಸಿದರು.

ಈ ವರ್ಷ ಕರ್ನಾಟಕದ ಮೃಗಾಲಯಗಳು ಗಳಿಸಿರುವ ಆದಾಯ

₹95.18 ಕೋಟಿ ಪ್ರವಾಸಿಗರಿಂದ

₹5 ಕೋಟಿ ದತ್ತು, ಬಡ್ಡಿ ಇತರೆ

₹112.68 ಕೋಟಿ ಒಟ್ಟು

₹12.50 ಕೋಟಿ ಸರ್ಕಾರದಿಂದ

ರಾಜ್ಯದ ಮೃಗಾಲಯಗಳು	ಈ ವರ್ಷದ ಆದಾಯ	ಪ್ರವಾಸಿಗರ ಸಂಖ್ಯೆ
ಮೈಸೂರು ಮೃಗಾಲಯ	₹30. 58 ಕೋಟಿ	30.74 ಲಕ್ಷ
ಬೆಂಗಳೂರಿನ ಬನ್ನೇರಘಟ್ಟ ಮೃಗಾಲಯ	₹53.90 ಕೋಟಿ	20.22 ಲಕ್ಷ
ಶಿವಮೊಗ್ಗ ಮೃಗಾಲಯ	₹ 4.13 ಕೋಟಿ	3 ಲಕ್ಷ
ಹಂಪಿ ಮೃಗಾಲಯ	₹ 2.13 ಕೋಟಿ	1.54 ಲಕ್ಷ
ಬೆಳಗಾವಿ ಮೃಗಾಲಯ	₹ 96 ಲಕ್ಷ	2.29 ಲಕ್ಷ
ಗದಗ ಬಿಂಕದಕಟ್ಟೆ ಮೃಗಾಲಯ	₹ 93 ಲಕ್ಷ	1.69 ಲಕ್ಷ
ಚಿತ್ರದುರ್ಗ ಜೋಗಿಮಟ್ಟಿ ಮೃಗಾಲಯ	₹45.35 ಲಕ್ಷ	1.54 ಲಕ್ಷ
ಕಲಬುರಗಿ ಮೃಗಾಲಯ	₹ 17.26 ಲಕ್ಷ	97 ಸಾವಿರ
ದಾವಣಗೆರೆ ಆನಗೋಡು ಪಾರ್ಕ್‌ನ ಮೃಗಾಲಯ	₹ 11.20 ಲಕ್ಷ	54 ಸಾವಿರ
ಮೈಸೂರು ಕಾರಂಜಿ ಕೆರೆ	₹1.84 ಕೋಟಿ	3.24 ಲಕ್ಷ

ಪ್ರಜಾವಾಣಿ ಗ್ರಾಫಿಕ್ಸ್

ಆದಾಯ ಪ್ರಮಾಣದಲ್ಲಿ ಏರಿಕೆಯು ರಾಜ್ಯದ ಪ್ರವಾಸೋದ್ಯಮಕ್ಕೆ ಮೃಗಾಲಯಗಳು ಆದ್ಯತೆಯ ಸ್ಥಾನ ತಂದುಕೊಟ್ಟಿರುವ ದ್ಯೋತಕ.

ಬಿ.ಪಿ. ರವಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ

ಅಮೃತ್ ಪಾಲ್ ಬಂಧನ

ಒಂದನೇ ಪುಟದಿಂದ...

ಹರಿದಾಡಿದ ವಿಡಿಯೊ: ಅಮೃತ್‌ಪಾಲ್ ಸಿಂಗ್ ಬಂಧನಕ್ಕೆ ಒಳಗಾದ ಬೆನ್ನಲ್ಲೇ, ಅವರ ಕಿರು ಭಾಷಣದ ತುಣುಕುಳ್ಳ ವಿಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತು. 'ನಾನಾಗಿಯೇ ಪೊಲೀಸರ ಮುಂದೆ ಶರಣಾದೆ' ಎಂದು ಅವರು ಹೇಳಿದ್ದಾರೆ ಎನ್ನಲಾದ ದೃಶ್ಯಗಳು ಈ ವಿಡಿಯೊದಲ್ಲಿವೆ.

'ನಾನು ಶರಣಾಗಲು ನಿರ್ಧರಿಸಿದ್ದೇನೆ. ಈ ಬಂಧನವೇ ಅಂತ್ಯವಲ್ಲ, ಇದು ಆರಂಭವಷ್ಟೆ. ನಾನು ಅಪರಾಧಿ ಅಲ್ಲ. ಭಗವಂತನ ನ್ಯಾಯಾಲಯದ ಮುಂದೆ ಹೋಗುವೆ' ಎಂದು ವಿಡಿಯೊದಲ್ಲಿ ಅವರು ಹೇಳಿದ್ದಾರೆ ಎನ್ನಲಾಗಿದೆ.

ಅಮೃತ್‌ಪಾಲ್ ಅವರು ಭಿಂದ್ರನ್‌ವಾಲೆ ಭಾವಚಿತ್ರದ ಮುಂದೆ ಕುಳಿತಿರುವ ದೃಶ್ಯಗಳಿರುವ ವಿಡಿಯೊ ಕೂಡ ಇದೆ. 'ಪೊಲೀಸರಿಗೆ ಶರಣಾಗಲು ಸಿದ್ಧನಾಗಿದ್ದ ಅಮೃತ್‌ಪಾಲ್ ಸಿಂಗ್‌ರನ್ನು ನಾನು ಗುರುದ್ವಾರದಲ್ಲಿ ಭೇಟಿ ಮಾಡಿದ್ದೆ' ಎಂಬುದಾಗಿ ಅಕಾಲ್ ತಖ್ತ್‌ನ ಜಥೇದಾರ್ ಜಸ್ಬೀರ್ ಸಿಂಗ್ ರೋಡೆ ಹೇಳಿರುವುದು ಮತ್ತೊಂದು ವಿಡಿಯೊದಲ್ಲಿದೆ.

ಶರಣಾಗಿರುವ ಕುರಿತು ಅಮೃತ್‌ಪಾಲ್ ಸಿಂಗ್ ಹೇಳಿಕೆಯನ್ನು ಸಾರಾಸಗಟಾಗಿ ತಳ್ಳಿ ಹಾಕಿರುವ ಐಜಿಪಿ ಸುಖ್‌ಚೈನ್ ಸಿಂಗ್ ಗಿಲ್, 'ತಲೆಮರೆಸಿಕೊಂಡಿದ್ದ ಅಮೃತ್‌ಸಿಂಗ್ ಪಾಲ್‌ನನ್ನು ಬಂಧಿಸಲಾಗಿದೆ' ಎಂದು ಹೇಳಿದರು.

'ಪಂಜಾಬ್ ಪೊಲೀಸ್‌ನ ಗುಪ್ತಚರ ವಿಭಾಗ ಸಿಬ್ಬಂದಿ ಹಾಗೂ ಅಮೃತಸರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿದರು. ರೋಡೆ ಗ್ರಾಮದಲ್ಲಿ ಆತ ಅಡಗಿರುವುದು ಗೊತ್ತಾಯಿತು. ಆತ ಅವಿತಿದ್ದ ಜಾಗ ಹಾಗೂ ಇಡೀ ಗ್ರಾಮವನ್ನು ಪೊಲೀಸರು ಸುತ್ತುವರಿದಿದ್ದರು' ಎಂದರು.

'ಅಮೃತ್‌ಪಾಲ್ ಸಿಂಗ್ ಗುರುದ್ವಾರದಲ್ಲಿ ಅಡಗಿದ್ದು ಗೊತ್ತಿತ್ತು. ಗುರುದ್ವಾರದ ಪಾವಿತ್ರ್ಯವನ್ನು ಕಾಪಾಡಬೇಕಿತ್ತು. ಹೀಗಾಗಿ ಒಳಗೆ ಪ್ರವೇಶಿಸಲಿಲ್ಲ. ಆದರೆ, ಆ ಸ್ಥಳವನ್ನು ಸುತ್ತುವರಿಯಲಾಗಿತ್ತು. ಹೀಗಾಗಿ ಆತನಿಗೆ ತಪ್ಪಿಸಿಕೊಳ್ಳಲು ಅವಕಾಶವೇ ಇಲ್ಲ ಎಂಬ ಸಂದೇಶವನ್ನು ಆತನಿಗೆ ರವಾನಿಸಲಾಯಿತು' ಎಂದು ಗಿಲ್ ತಿಳಿಸಿದರು.

ಮೇಲ್ವಿಚಾರಣೆ–ಮಾನ್: ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ವಿಡಿಯೊ ಸಂದೇಶವನ್ನು ಬಿಡುಗಡೆ ಮಾಡಿದರು. 'ಅಮೃತ್ ಪಾಲ್ ಸಿಂಗ್ ಬಂಧನದೊಂದಿಗೆ ಮುಕ್ತಾಯವಾದ ಕಾರ್ಯಾಚರಣೆ ಕುರಿತು ರಾತ್ರಿಯಿಂದಲೇ ಮೇಲ್ವಿಚಾರಣೆ ಮಾಡುತ್ತಿದ್ದೆ' ಎಂದು ಹೇಳಿದ್ದಾರೆ.

ಪತ್ನಿ ಪ್ರಯಾಣಕ್ಕೆ ತಡೆ: ಅಮೃತ್‌ಪಾಲ್ ಸಿಂಗ್ ಪತ್ನಿ ಕಿರಣ್‌ದೀಪ್ ಕೌರ್ ಅವರನ್ನು ಅಮೃತಸರದ ಶ್ರೀ ಗುರು ರಾಮ್‌ದಾಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲಂಡನ್‌ಗೆ ತೆರಳುವ ವಿಮಾನಕ್ಕೆ ಹತ್ತಲು ಯತ್ನಿಸುತ್ತಿದ್ದಾಗ ವಲಸೆ ವಿಭಾಗದ ಅಧಿಕಾರಿಗಳು ಈಚೆಗೆ ತಡೆದಿದ್ದರು. ನಂತರ ಅವರನ್ನು ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದರು.

ದಿಬ್ರೂಗಢ ಸೆಂಟ್ರಲ್ ಜೈಲಿಗೆ ಅಮೃತ್‌ಪಾಲ್ ಸಿಂಗ್

ದಿಬ್ರೂಗಢ, ಅಸ್ಸಾಂ (ಪಿಟಿಐ): ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್ ಅವರನ್ನು ಹೊತ್ತ ವಿಶೇಷ ವಿಮಾನ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಭಾನುವಾರ ಮಧ್ಯಾಹ್ನ ಇಳಿಯಿತು.

'ಕೆಲ ಅಗತ್ಯ ಕಾನೂನಾತ್ಮಕ ಪ್ರಕ್ರಿಯೆಗಳನ್ನು ಪೂರೈಸಿದ ನಂತರ, ಬಿಗಿ ಭದ್ರತೆಯೊಂದಿಗೆ ಅವರನ್ನು ದಿಬ್ರೂಗಢ ಸೆಂಟ್ರಲ್ ಜೈಲಿಗೆ ಕರೆದೊಯ್ಯಲಾಯಿತು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಮಾನ ನಿಲ್ದಾಣದಿಂದ ಜೈಲು 15 ಕಿ.ಮೀ. ದೂರದಲ್ಲಿದೆ. ಅಮೃತ್‌ಪಾಲ್ ಸಿಂಗ್ ಅವರನ್ನು ಜೈಲಿಗೆ ಕರೆದೊಯ್ಯುವಾಗ ಮಾರ್ಗದುದ್ದಕ್ಕೂ ಹೈ-ಅಲರ್ಟ್ ಘೋಷಿಸಿದ್ದ ಸಂಚಾರ ಪೊಲೀಸರು, ವಾಹನಗಳ ಸುಗಮ ಸಂಚಾರಕ್ಕೆ ಕ್ರಮ ಕೈಗೊಂಡಿದ್ದರು.

'ಸೆಂಟ್ರಲ್ ಜೈಲಿಗೆ ಬಹು ಹಂತದ ಭದ್ರತೆ ವ್ಯವಸ್ಥೆ ಮಾಡಲಾಗಿದೆ. ಅಸ್ಸಾಂ ಪೊಲೀಸ್‌ನ ವಿಶೇಷ ಪಡೆ 'ಬ್ಲ್ಯಾಕ್ ಕ್ಯಾಟ್ ಕಮಾಂಡೊ'ಗಳು, ಸಿಆರ್‌ಪಿಎಫ್ ಹಾಗೂ ಇತರ ಭದ್ರತಾ ಸಿಬ್ಬಂದಿಯನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದೆ' ಎಂದು ಹಿರಿಯ ಅಧಿಕಾರಿ ಹೇಳಿದ್ದಾರೆ.

ಅಮೃತ್‌ಪಾಲ್ ಸಿಂಗ್ ಸಹಚರರಾದ ದಲ್ಜೀತ್ ಸಿಂಗ್ ಕಲ್ಸಿ, ಪಾಪಲ್‌ಪ್ರೀತ್ ಸಿಂಗ್, ಕುಲ್ವಂತ್ ಸಿಂಗ್ ಧಲಿವಾಲ್, ವಾರಿಂದರ್ ಸಿಂಗ್ ಜೋಹಲ್, ಗುರ್ಮೀತ್ ಸಿಂಗ್ ಬುಕ್ಕಾನ್‌ವಾಲ, ಹರ್ಜೀತ್ ಸಿಂಗ್, ಭಗವಂತ್ ಸಿಂಗ್, ಬಸಂತ್ ಸಿಂಗ್ ಹಾಗೂ ಗುರ್ಮಿಂದರ್‌ಪಾಲ್ ಸಿಂಗ್ ಔಜ್ಲಾ ಎಂಬುವವರನ್ನು ಇದೇ ಜೈಲಿನಲ್ಲಿ ಇರಿಸಲಾಗಿದೆ.

ಜನಸ್ತೋಮ — ಉತ್ತರಾಖಂಡದ ಹರಿದ್ವಾರದಲ್ಲಿ ಗಂಗಾ ನದಿ ತಟದಲ್ಲಿರುವ 'ಹರ್ ಕಿ ಪೌಡಿ' ಘಾಟ್‌ನಲ್ಲಿ ಭಾನುವಾರ ನಡೆದ ಆರತಿ ಹಾಗೂ ಇತರ ಧಾರ್ಮಿಕ ವಿಧಿಗಳಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು –ಎಎಫ್‌ಪಿ ಚಿತ್ರ

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಎಚ್ಚರಿಕೆ

ಶಾಂತಿ ಕದಡಿದರೆ ಕಠಿಣ ಕ್ರಮ

ಚಂಡೀಗಢ (ಪಿಟಿಐ): 'ಸಮಾಜದಲ್ಲಿನ ಶಾಂತಿ ಕದಡಿ, ಸೌಹಾರ್ದವನ್ನು ಹಾಳುಗೆಡಹಲು ಯತ್ನಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಭಾನುವಾರ ಹೇಳಿದರು.

ಭಗವಂತ ಮಾನ್

ತಲೆಮರೆಸಿಕೊಂಡಿದ್ದ ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್ ಬಂಧನದ ನಂತರ ಅವರು ವಿಡಿಯೊ ಸಂದೇಶವನ್ನು ಬಿಡುಗಡೆ ಮಾಡಿದ್ದಾರೆ.

'ದೇಶದ ಶತ್ರುಗಳ ಹಾಗೂ ಕೆಲ ಸಮಾಜ ವಿರೋಧಿ ಶಕ್ತಿಗಳ ಕೈಗೊಂಬೆಗಳಾಗಿದ್ದವರನ್ನು ಬಂಧಿಸಲಾಗಿದೆ' ಎಂದು ಹೇಳಿದ್ದಾರೆ.

'ಅಮೃತ್‌ಪಾಲ್ ಬಂಧನಕ್ಕಾಗಿ ಕಳೆದ ಒಂದು ತಿಂಗಳಿನಿಂದ ಹೆಚ್ಚು ಕಾಲ ನಡೆದ ಕಾರ್ಯಾಚರಣೆ ಸಂದರ್ಭದಲ್ಲಿ ಶಾಂತಿ ಕಾಪಾಡಿದ ರಾಜ್ಯದ ಜನತೆಗೆ ಧನ್ಯವಾದ ಹೇಳುವೆ. ಅಮಾಯಕ ವ್ಯಕ್ತಿ ತೊಂದರೆ ಕೊಡುವುದಿಲ್ಲ, ಸೇಡಿನ ರಾಜಕೀಯವನ್ನೂ ಮಾಡುವುದಿಲ್ಲ. ಆದರೆ, ಈ ನೆಲದ ಕಾನೂನು ಉಲ್ಲಂಘಿಸುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

'ಈ ಕಾರ್ಯಾಚರಣೆ ಸಂದರ್ಭದಲ್ಲಿ ಸಂಯಮದಿಂದ ವರ್ತಿಸಿದ ಅಧಿಕಾರಿಗಳೊಂದಿಗೆ ನಾನು ನಿರಂತರ ಸಂಪರ್ಕದಲ್ಲಿದ್ದೆ, ಕಾರ್ಯಾಚರಣೆ ವೇಳೆ ಪೊಲೀಸರು ಬಹಳ ಸಂಯಮ ಪ್ರದರ್ಶಿಸಿದ್ದಾರೆ' ಎಂದಿದ್ದಾರೆ.

ಕಾನೂನು ಹೋರಾಟ: ಅಮೃತ್‌ಪಾಲ್ ಸಿಂಗ್‌ನನ್ನು ಪೊಲೀಸರು ಬಂಧಿಸಿದ್ದಕ್ಕೆ ಪ್ರತಿಕ್ರಿಯಿಸಿರುವ ತಂದೆ–ತಾಯಿ ಹಾಗೂ ಕುಟುಂಬ ಸದಸ್ಯರು, 'ತಿಂಗಳ ನಂತರ ಆತನನ್ನು ನೋಡಿದ್ದಕ್ಕೆ ಸಂತಸವಾಗಿದೆ' ಎಂದಿದ್ದಾರೆ. 'ಕುಟುಂಬ ಸದಸ್ಯರು ದಿಬ್ರೂಗಢಕ್ಕೆ ಹೋಗಿ, ಜೈಲಿನಲ್ಲಿರುವ ಆತನನ್ನು ಭೇಟಿ ಮಾಡುತ್ತೇವೆ. ಜೊತೆಗೆ, ಆತನ ಬಿಡುಗಡೆಗಾಗಿ ಕಾನೂನು ಹೋರಾಟ ನಡೆಸುತ್ತೇವೆ' ಎಂದು ಆತನ ಚಿಕ್ಕಪ್ಪ ಸುಖ್‌ಚೈನ್ ಸಿಂಗ್ ಹೇಳಿದ್ದಾರೆ.

ಶಾಂತಿ ಕಾಪಾಡಲು ಬದ್ಧ–ಕೇಜ್ರಿವಾಲ್

(ನವದೆಹಲಿ ವರದಿ): ಪಂಜಾಬ್‌ನಲ್ಲಿ ಶಾಂತಿ ಹಾಗೂ ಸುರಕ್ಷತೆಯನ್ನು ಖಾತ್ರಿಪಡಿಸಲು ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ಸರ್ಕಾರ ಬದ್ಧ, ಅಗತ್ಯ ಬಿದ್ದರೆ ಸರ್ಕಾರ ಇನ್ನಷ್ಟೂ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ' ಎಂದು ಪಕ್ಷದ ರಾಷ್ಟ್ರೀಯ ಸಂಚಾಲಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಅಮೃತ್‌ಪಾಲ್ ಸಿಂಗ್ ಬಂಧನದ ಹಿನ್ನೆಲೆಯಲ್ಲಿ ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಈ ಕಾರ್ಯಾಚರಣೆ ಕೈಗೊಂಡಿದ್ದಕ್ಕಾಗಿ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರನ್ನು ಅಭಿನಂದಿಸಿದ್ದಾರೆ.

ಅಮೃತ್‌ಪಾಲ್ ಸಿಂಗ್ ಬಂಧನ: ಘಟನಾವಳಿಗಳು

ಚಂಡೀಗಢ: ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ ಅಮೃತ್‌ಪಾಲ್ ಸಿಂಗ್‌ರನ್ನು ಪಂಜಾಬ್ ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಬಂಧನದ ವರೆಗಿನ ಘಟನಾವಳಿಗಳ ಕುರಿತ ವಿವರ ಇಲ್ಲಿದೆ.

ಸೆ.22, 2022: ಸಾಮಾಜಿಕ ಹೋರಾಟಗಾರ ಹಾಗೂ ನಟ ದೀಪ್ ಸಿಧು ಸ್ಥಾಪಿಸಿದ್ದ 'ವಾರಿಸ್ ಪಂಜಾಬ್ ದೆ' ಸಂಘಟನೆಯ ಮುಖ್ಯಸ್ಥನಾಗಿ ಅಮೃತ್‌ಪಾಲ್ ಸಿಂಗ್ ಅಧಿಕಾರ ಸ್ವೀಕಾರ. ಹತ್ಯೆಗೀಡಾದ ಉಗ್ರ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆ ಅವರ ಊರಾದ ಮೋಗಾ ಜಿಲ್ಲೆಯ ರೋಡೆ ಗ್ರಾಮದಲ್ಲಿ ಅಧಿಕಾರ ಸ್ವೀಕಾರ ಕಾರ್ಯಕ್ರಮ ನಡೆಯಿತು

ಡಿ.12, 2022: ಜಲಂಧರದ ಗುರುದ್ವಾರವೊಂದರಲ್ಲಿದ್ದ ಕುರ್ಚಿಗಳನ್ನು ಅಮೃತ್‌ಪಾಲ್ ಸಿಂಗ್ ಬೆಂಬಲಿಗರು ಸುಟ್ಟು ಹಾಕುತ್ತಾರೆ. ಗುರುದ್ವಾರದಲ್ಲಿ ಕುರ್ಚಿಗಳು ಹಾಗೂ ಸೋಫಾಗಳನ್ನು ಇಡುವುದು ಸಿಖ್ ಸಂಪ್ರದಾಯಕ್ಕೆ ವಿರುದ್ಧ ಎಂಬುದು ಅವರ ವಾದವಾಗಿತ್ತು.

ಫೆ.10, 2023: ಬ್ರಿಟನ್ ನಿವಾಸಿ, ಅನಿವಾಸಿ ಭಾರತೀಯಳಾದ ಕಿರಣ್‌ದೀಪ್ ಕೌರ್ ಎಂಬುವವರೊಂದಿಗೆ ಅಮೃತಸರ ಬಳಿಯ ಜಲ್ಲುಪುರ ಖೇರಾ ಗ್ರಾಮದಲ್ಲಿ ಅಮೃತ್‌ಪಾಲ್ ಸಿಂಗ್ ಮದುವೆ

ಫೆ.16: ರೂಪ್‌ನಗರ ಜಿಲ್ಲೆಯ ಚಮ್‌ಕೌರ್ ಸಾಹಿಬ್ ಗ್ರಾಮ ನಿವಾಸಿಯೊಬ್ಬರನ್ನು ಅಪಹರಿಸಿ, ಥಳಿಸಿದ ಆರೋಪದಡಿ ಅಮೃತ್‌ಪಾಲ್ ಸಿಂಗ್ , ಆತನ ಬೆಂಬಲಿಗ ಲವ್‌ಪ್ರೀತ್ ಸಿಂಗ್ ತೂಫಾನ್ ಸೇರಿ ಇತರರ ವಿರುದ್ಧ ಪ್ರಕರಣ ದಾಖಲು

ಫೆ.17: ಲವ್‌ಪ್ರೀತ್ ಸಿಂಗ್ ಬಂಧನ

ಫೆ.23: ಲವ್‌ಪ್ರೀತ್ ಸಿಂಗ್ ಬಿಡುಗಡೆಗೆ ಆಗ್ರಹ. ಅಮೃತಸರ ನಗರದ ಹೊರವಲಯದಲ್ಲಿರುವ ಅಜ್ನಾಲಾ ಪೊಲೀಸ್ ಠಾಣೆಗೆ ಅಮೃತ್‌ಪಾಲ್ ಸಿಂಗ್ ಹಾಗೂ ಬೆಂಬಲಿಗರ ಮುತ್ತಿಗೆ. ಬಂದೂಕು ಕೋವಿ, ಖಡ್ಗ ಝಳಪಿಸಿದ ಪ್ರತಿಭಟನಾಕಾರರಿಂದ ಗಲಾಟೆ

ಫೆ.24: ನ್ಯಾಯಾಂಗ ಬಂಧನದಿಂದ ಲವ್‌ಪ್ರೀತ್ ಸಿಂಗ್ ಬಿಡುಗಡೆ

ಮಾರ್ಚ್ 18: ಅಮೃತ್‌ಪಾಲ್ ಸಿಂಗ್ ಹಾಗೂ ಆತನ ಸಹಚರರ ವಿರುದ್ಧ ಪಂಜಾಬ್ ಪೊಲೀಸರಿಂದ ಕಾರ್ಯಾಚರಣೆ ಆರಂಭ. ಆತನಿದ್ದ ಹಾಗೂ ಹಿಂಬಾಲಿಸುತ್ತಿದ್ದ ವಾಹನಗಳನ್ನು ಜಲಂಧರ ಬಳಿ ತಡೆದ ಪೊಲೀಸರು. ವಾಹನಗಳನ್ನು ಬದಲಾಯಿಸುವ ಮೂಲಕ ಪರಾರಿಯಾದ ಅಮೃತ್‌ಪಾಲ್ ಸಿಂಗ್. ಇದೇ ವೇಳೆ ಪಂಜಾಬ್‌ನಾದ್ಯಂತ ಮೊಬೈಲ್ ಇಂಟರ್‌ನೆಟ್ ಸೇವೆಗಳು ಸ್ಥಗಿತ

ಮಾರ್ಚ್ 20: ಅಮೃತ್‌ಪಾಲ್ ಸಿಂಗ್ ಸಂಬಂಧಿ ಹರ್ಜಿತ್ ಸಿಂಗ್ ಬಂಧನ. ಮತ್ತೊಬ್ಬ ಬೆಂಬಲಿಗ ಜಲಂಧರದ ಮೆಹತಪುರದಲ್ಲಿರುವ ಗುರುದ್ವಾರದಲ್ಲಿ ಪೊಲೀಸರಿಗೆ ಶರಣಾಗತ

ಮಾರ್ಚ್ 22: ದ್ವಿಚಕ್ರವಾಹನಕ್ಕೆ ಜೋಡಿಸಿದ್ದ ಗಾಡಿಯೊಂದರಲ್ಲಿ ಅಮೃತ್‌ಪಾಲ್ ಸಿಂಗ್ ಹಾಗೂ ಆತನ ಆಪ್ತ ಪಾಪಲ್‌ಪ್ರೀತ್ ಸಿಂಗ್ ಕುಳಿತಿದ್ದ ಚಿತ್ರವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತು

ಮಾರ್ಚ್ 23: ಅಮೃತ್‌ಪಾಲ್ ಸಿಂಗ್ ಹಾಗೂ ಪಾಪಲ್‌ಪ್ರೀತ್ ಸಿಂಗ್‌ಗೆ ಹರಿಯಾಣದ ಕುರುಕ್ಷೇತ್ರದ ತನ್ನ ಮನೆಯಲ್ಲಿ ಆಶ್ರಯ ನೀಡಿದ್ದ ಮಹಿಳೆಯ ಬಂಧನ

ಮಾರ್ಚ್ 25: ಪೊಲೀಸರ ಮುಂದೆ ಶರಣಾಗುವಂತೆ ಅಮೃತ್‌ಪಾಲ್ ಸಿಂಗ್‌ಗೆ ಅಕಾಲ್ ತಖ್ತ್ ಜಥೇದಾರ್ ಗ್ಯಾನಿ ಹರ್‌ಪ್ರೀತ್ ಸಿಂಗ್ ಸೂಚನೆ

ಮಾರ್ಚ್ 28: ಪೊಲೀಸರು ಬೆನ್ನಟ್ಟಿದ ಕಾರಣ ಕೆಲ ಶಂಕಿತರು ತಮ್ಮ ವಾಹನಗಳನ್ನು ಹೋಶಿಯಾರ್‌ಪುರ ಬಳಿ ಬಿಟ್ಟು ಪರಾರಿ. ಇದರ ಬೆನ್ನಲ್ಲೇ, ಅಮೃತ್‌ಪಾಲ್ ಸಿಂಗ್ ಪತ್ತೆಗೆ ಬೃಹತ್ ಕಾರ್ಯಾಚರಣೆ ಆರಂಭ

ಮಾರ್ಚ್ 29: ಬೈಸಾಖಿ ಹಬ್ಬದಂದು ಸಮುದಾಯದವರ ಸಭೆ (ಸರ್ಬತ್ ಖಾಲ್ಸಾ) ಕರೆಯುವಂತೆ ಆಗ್ರಹಿಸಿ ವಿಡಿಯೊ ಸಂದೇಶ ಬಿಡುಗಡೆ ಮಾಡಿದ ಅಮೃತ್‌ಪಾಲ್ ಸಿಂಗ್

ಮಾರ್ಚ್ 30: ತಾನು ತಲೆಮರೆಸಿಕೊಂಡಿಲ್ಲ, ಶೀಘ್ರವೇ ಜನರ ಮುಂದೆ ಬರುವೆ ಎಂಬ ಸಂದೇಶ ಇದ್ದ ವಿಡಿಯೊ ಹಾಗೂ ಆಡಿಯೊ ಬಿಡುಗಡೆ ಮಾಡಿದ ಅಮೃತ್‌ಪಾಲ್ ಸಿಂಗ್

ಏಪ್ರಿಲ್ 10: ಅಮೃತಸರದ ಕಥುನಂಗಲ್ ಪ್ರದೇಶದಲ್ಲಿ ಪಾಪಲ್‌ಪ್ರೀತ್ ಸಿಂಗ್ ಬಂಧನ

ಏಪ್ರಿಲ್ 15: ಫತೇಗಢದ ಸಿರ್ಹಿಂದ್‌ನಲ್ಲಿ ಅಮೃತ್‌ಪಾಲ್ ಸಿಂಗ್‌ನ ಮತ್ತೊಬ್ಬ ಆಪ್ತ ಜೋಗಾ ಸಿಂಗ್ ಬಂಧನ. ಈತ, ಅಮೃತ್‌ಪಾಲ್ ಸಿಂಗ್ ಹಾಗೂ ಪಾಪಲ್‌ಪ್ರೀತ್ ಸಿಂಗ್‌ಗೆ ಉತ್ತರ ಪ್ರದೇಶದ ಪಿಲಿಭಿತ್‌ನಲ್ಲಿ ಆಶ್ರಯ ನೀಡಿದ್ದಲ್ಲದೇ, ಮಾರ್ಚ್ 28ರಂದು ಈ ಇಬ್ಬರನ್ನು ಪಂಜಾಬ್‌ಗೆ ಕರೆತಂದಿದ್ದ

ಏಪ್ರಿಲ್ 20: ಲಂಡನ್‌ಗೆ ತೆರಳಲು ಅಮೃತಸರದ ಶ್ರೀ ಗುರು ರಾಮ್‌ದಾಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಹತ್ತುತ್ತಿದ್ದ ಅಮೃತ್‌ಪಾಲ್ ಸಿಂಗ್ ಪತ್ನಿ ಕಿರಣ್‌ದೀಪ್ ಕೌರ್ ಅವರನ್ನು ವಲಸೆ ವಿಭಾಗದ ಅಧಿಕಾರಿಗಳು ತಡೆದರು

ಏಪ್ರಿಲ್ 23: ಮೋಗಾ ಜಿಲ್ಲೆಯ ರೋಡೆ ಗ್ರಾಮದಲ್ಲಿ ಅಮೃತ್‌ಪಾಲ್ ಸಿಂಗ್ ಬಂಧನ

ಅಸ್ಸಾಂ ಜೈಲಲ್ಲಿ ಇರಿಸಿದ್ದೇಕೆ?

ಗುವಾಹಟಿ: ಪಂಜಾಬ್‌ನಲ್ಲಿ ಬಂಧಿಸಿದ ನಂತರ ಅಮೃತ್‌ಪಾಲ್ ಸಿಂಗ್‌ರನ್ನು ಅಸ್ಸಾಂಗೆ ಕರೆತಂದು, ದಿಬ್ರೂಗಢದ ಸೆಂಟ್ರಲ್ ಜೈಲಿನಲ್ಲಿ ಇರಿಸಿದ್ದೇಕೆ ಎಂಬ ಪ್ರಶ್ನೆಗಳು ಉದ್ಭವವಾಗಿವೆ.

'ಭದ್ರತೆ ವಿಷಯದಲ್ಲಿ ಯಾವುದೇ ನ್ಯೂನತೆಗಳು ಇರಬಾರದು' ಎಂಬುದೇ ಇಂಥ ನಡೆಗೆ ಕಾರಣ ಎಂದು ಭದ್ರತೆಯ ಉಸ್ತುವಾರಿ ಹೊತ್ತ ಅಧಿಕಾರಿಗಳು ವಿವರಣೆ ನೀಡಿದ್ದಾರೆ.

'ಖಾಲಿಸ್ತಾನ ಪರ ಇರುವ ಗ್ಯಾಂಗ್‌ಸ್ಟರ್‌ಗಳನ್ನು ಪಂಜಾಬ್‌ನ ವಿವಿಧ ಜೈಲುಗಳಲ್ಲಿ ಇರಿಸಲಾಗಿದೆ. ಈ ಪಾತಕಿಗಳಿಂದ ಅಮೃತ್‌ಪಾಲ್ ಸಿಂಗ್ ಹಾಗೂ ಆತನ ಸಹಚರರನ್ನು 'ಸುರಕ್ಷಿತ ದೂರ'ದಲ್ಲಿ ಇರಿಸಬೇಕು ಎಂಬ ಕಾರಣಕ್ಕೆ ದಿಬ್ರೂಗಢಕ್ಕೆ ಕರೆತರಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಖಾಲಿಸ್ತಾನ ಪರ ಸಹಾನುಭೂತಿ ಹೊಂದಿರುವವರು ಜೈಲಿನ ಮುಂದೆ ಪ್ರತಿಭಟನೆ ನಡೆಸುವುದನ್ನು ತಡೆಯುವ ಭಾಗವಾಗಿಯೂ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ದಿಬ್ರೂಗಢ ಜೈಲು ಅತ್ಯಂತ ಸುಭದ್ರವಾದ ಹಳೆ ಜೈಲುಗಳಲ್ಲೊಂದು. ಉಲ್ಫಾ ಬಂಡಾಯದ ಸಂದರ್ಭದಲ್ಲಿ, ಸಂಘಟನೆಯ ಉಗ್ರರನ್ನು ಈ ಜೈಲಿನಲ್ಲಿ ಇರಿಸಲಾಗಿತ್ತು. ಕನಿಷ್ಠ 680 ಕೈದಿಗಳನ್ನು ಇರಿಸಬಹುದಾದ ಸಾಮರ್ಥ್ಯವನ್ನು ಹೊಂದಿದೆ.

ಕುನೊ ಉದ್ಯಾನ ಮತ್ತೊಂದು ಚೀತಾ ಸಾವು

ಭೋಪಾಲ್/ಶ್ಯೋಪುರ (ಪಿಟಿಐ): ದಕ್ಷಿಣ ಆಫ್ರಿಕಾದಿಂದ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಇತ್ತೀಚೆಗೆ ಕರೆತರಲಾಗಿದ್ದ ಚೀತಾವೊಂದು ಭಾನುವಾರ ಮೃತಪಟ್ಟಿದೆ. 'ಉದಯ್' ಎಂದು ಹೆಸರಿಡಲಾಗಿದ್ದ ಚೀತಾಗೆ ಆರು ವರ್ಷ ವಯಸ್ಸಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದು ಕುನೊ ಉದ್ಯಾನದಲ್ಲಿ ಚೀತಾ ಮೃತಪಟ್ಟ ಎರಡನೇ ಪ್ರಕರಣವಾಗಿದೆ.

ಚೀತಾ ನಿಸ್ತೇಜ ಸ್ಥಿತಿಯಲ್ಲಿರುವುದನ್ನು ಬೆಳಗಿನ ಪರಿಶೀಲನೆ ವೇಳೆ ಗುರುತಿಸಲಾಗಿತ್ತು. ಈ ವಿಚಾರವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಮುಖವನ್ನು ಅಡಿಮಾಡಿದ್ದ ಅದನ್ನು ಕರೆತಂದು ಚಿಕಿತ್ಸೆ ನೀಡಲಾಗಿತ್ತು. ಆದರೆ ಸಂಜೆ 4 ಗಂಟೆ ಹೊತ್ತಿಗೆ ಚೀತಾ ಮೃತಪಟ್ಟಿತು. ಒಂದು ತಿಂಗಳ ಹಿಂದೆಯಷ್ಟೇ ಕುನೊ ಉದ್ಯಾನದಲ್ಲಿ 'ಸಶಾ' ಎಂಬ ಚೀತಾ ಮೃತಪಟ್ಟಿತ್ತು.

'ಶಾಸಕಾಂಗ ತೀರ್ಮಾನಿಸಲಿ'

ಸಲಿಂಗ ವಿವಾಹ: ವಕೀಲರ ಪರಿಷತ್ತು ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಲಿಂಗ ಮದುವೆಗೆ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿ ಶಾಸಕಾಂಗವೇ ನಿರ್ಣಯ ಕೈಗೊಳ್ಳಬೇಕು ಎಂದು ಭಾರತೀಯ ವಕೀಲರ ಪರಿಷತ್ತು (ಬಿಸಿಐ) ಭಾನುವಾರ ಪ್ರತಿಪಾದಿಸಿದೆ.

ಈ ವಿಷಯಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಸುಪ್ರೀಂಕೋರ್ಟ್‌ನ ಸಂವಿಧಾನ ಪೀಠ ವಿಚಾರಣೆ ನಡೆಸುತ್ತಿರುವುದು ಕಳವಳ ಹಾಗೂ ಆತಂಕಕಾರಿ ಎಂದು ಹೇಳಿರುವ ಬಿಸಿಐ, ವಿವಾಹ ಎಂಬ ಪರಿಕಲ್ಪನೆಯನ್ನು ನ್ಯಾಯಾಲಯವು ಸರಿ ಮಾಡಲು ಹೊರಟಿರುವುದು ಮಹಾದುರಂತ ಎಂದು ಹೇಳಿದೆ.

ಈ ವಿಷಯದಲ್ಲಿ ದೇಶದ ಕೋಟ್ಯಂತರ ಜನರ ಭಾವನೆಗಳನ್ನು ಸುಪ್ರೀಂಕೋರ್ಟ್ ಗೌರವಿಸಬೇಕು ಎಂದೂ ಪರಿಷತ್ತು ಮನವಿ ಮಾಡಿದೆ.

ಬಿಸಿಐ ಹಾಗೂ ಎಲ್ಲ ರಾಜ್ಯಗಳ ವಕೀಲರ ಪರಿಷತ್ತುಗಳ ಜಂಟಿ ಸಭೆಯಲ್ಲಿ ಈ ಕುರಿತು ಸರ್ವಾನುಮತದ ನಿರ್ಣಯ ಅಂಗೀಕರಿಸಲಾಗಿದೆ.

'ಸಲಿಂಗ ವಿವಾಹಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್ ನೀಡುವ ತೀರ್ಪು ಬರುವ ದಿನಗಳಲ್ಲಿ ಭಾರತದ ಸಾಮಾಜಿಕ ರಚನೆಯನ್ನೇ ಬುಡಮೇಲು ಮಾಡಲಿದೆ. ಈ ವಿಷಯವು ಸಾಮಾಜಿಕ–ಸಾಂಸ್ಕೃತಿಕ ಹಾಗೂ ಧಾರ್ಮಿಕ ನಂಬಿಕೆಗಳ ಮೇಲೆ ದೂರಗಾಮಿ ಪರಿಣಾಮ ಬೀರುವುದು' ಎಂದು ನಿರ್ಣಯದಲ್ಲಿ ಹೇಳಲಾಗಿದೆ.

'ಇದು ಸೂಕ್ಷ್ಮ ವಿಚಾರ. ಹಾಗಾಗಿ, ವಿವಿಧ ಸಾಮಾಜಿಕ–ಧಾರ್ಮಿಕ ಹಿನ್ನೆಲೆ ಹೊಂದಿರುವ ಗುಂಪುಗಳೊಂದಿಗೆ ಶಾಸಕಾಂಗವು ವ್ಯಾಪಕ ಸಮಾಲೋಚನೆ ನಡೆಸಿದ ನಂತರ ಸೂಕ್ತ ನಿರ್ಣಯ ಕೈಗೊಳ್ಳಬೇಕು'

'ನಾಗರಿಕತೆ, ಸಂಸ್ಕೃತಿ ಹಾಗೂ ಮದುವೆಗೆ ಸಂಬಂಧಿಸಿ ಲಭ್ಯವಿರುವ ದಾಖಲೆಗಳ ಪ್ರಕಾರ, ಜೈವಿಕ ಪುರುಷ ಹಾಗೂ ಮಹಿಳೆ ಮದುವೆಯಾಗುವುದನ್ನು ಒಪ್ಪಿಕೊಳ್ಳಲಾಗಿದೆ. ಸಂತಾನೋತ್ಪತ್ತಿ ಇದರ ಹಿಂದಿನ ಉದ್ದೇಶವಾಗಿದೆ. ಹೀಗಾಗಿ, ನ್ಯಾಯಾಲಯವು ಮದುವೆ ಎಂಬ ಮೂಲಭೂತ ಪರಿಕಲ್ಪನೆಯನ್ನು ಬದಲಾಯಿಸುವುದು ವಿನಾಶಕಾರಿಯಾಗಿ ಪರಿಣಮಿಸಲಿದೆ' ಎಂದೂ ನಿರ್ಣಯದಲ್ಲಿ ಹೇಳಲಾಗಿದೆ.

'ಈ ವಿಷಯ ಕುರಿತ ಅರ್ಜಿಗಳು ವಿಚಾರಣೆಗಾಗಿ ಸುಪ್ರೀಂಕೋರ್ಟ್ ಮುಂದೆ ಬಂದಿದ್ದು ತಿಳಿದ ನಂತರ, ಈ ದೇಶದ ಪ್ರಜ್ಞಾವಂತ ನಾಗರಿಕರು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿತರಾಗಿದ್ದಾರೆ. ದೇಶದ ಶೇ 99.9ಕ್ಕೂ ಅಧಿಕ ಜನರು ಸಲಿಂಗ ಮದುವೆಯನ್ನು ವಿರೋಧಿಸುತ್ತಾರೆ' ಎಂದೂ ನಿರ್ಣಯದಲ್ಲಿ ವಿವರಿಸಲಾಗಿದೆ.

'ಸಲಿಂಗ ಮದುವೆ ಕುರಿತು ಅರ್ಜಿದಾರರ ಪರ ಸುಪ್ರೀಂಕೋರ್ಟ್ ತೀರ್ಪು ನೀಡಿದ್ದೇ ಆದಲ್ಲಿ, ಅದನ್ನು ತಮ್ಮ ಸಂಸ್ಕೃತಿ, ಸಾಮಾಜಿಕ–ಧಾರ್ಮಿಕ ಸಂರಚನೆ ವಿರುದ್ಧದ ತೀರ್ಪು ಎಂದೇ ದೇಶದ ಬಹುತೇಕ ಜನರು ಭಾವಿಸುತ್ತಾರೆ. ವಕೀಲರ ಪರಿಷತ್ತು ದೇಶದ ಸಾಮಾನ್ಯ ಜನರ ಧ್ವನಿಯಾಗಿ ಕೆಲಸ ಮಾಡುತ್ತದೆ. ಹೀಗಾಗಿ, ಈ ವಿಷಯದ ಪರವಾಗಿ ಸುಪ್ರೀಂಕೋರ್ಟ್ ನೀಡುವ ತೀರ್ಪು ನಮ್ಮ ದೇಶದ ಸಾಮಾಜಿಕ ರಚನೆಯನ್ನೇ ನಾಶ ಮಾಡುತ್ತದೆ ಎಂಬುದು ಸಭೆಯ ಸ್ಪಷ್ಟ ಅಭಿಪ್ರಾಯ' ಎಂದೂ ಹೇಳಲಾಗಿದೆ.

ಬಿಜೆಪಿ ನಾಯಕರು ಬುದ್ಧಿಹೀನರು: ನಿತೀಶ್

ಪಟ್ನಾ (ಪಿಟಿಐ): 'ಬಿಜೆಪಿ ನಾಯಕರು ಬುದ್ಧಿಹೀನರಾಗಿದ್ದಾರೆ' ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಭಾನುವಾರ ಹೇಳಿದರು.

'ಮುಂದಿನ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ನಿತೀಶ್ ಅವರನ್ನು ಹಾಗೂ ಜೆಡಿಯು ಪಕ್ಷವನ್ನು ಮಣ್ಣುಮುಕ್ಕಿಸುತ್ತೇವೆ' ಎಂದು ಹೇಳಿದ್ದ ಬಿಜೆಪಿಯ ಬಿಹಾರ ಘಟಕದ ಅಧ್ಯಕ್ಷ ಸಮ್ರಾಟ್ ಚೌಧರಿ ಅವರಿಗೆ ನಿತೀಶ್ ಈ ರೀತಿ ತಿರುಗೇಟು ನೀಡಿದರು.

'ಅವರು ಬುದ್ಧಿಹೀನರು. ಅವರು (ಚೌಧರಿ) ಏನು ಹೇಳಿದ್ದಾರೊ ಅದನ್ನು ಮಾಡಿ ತೋರಿಸಲು ಹೇಳಿ ಅವರಿಗೆ. ನಾನು ನನ್ನ ಇಡೀ ರಾಜಕೀಯ ಜೀವನದಲ್ಲಿ ಎಂದಿಗೂ ಇಂಥ ಕೀಳುಮಟ್ಟದ ಭಾಷೆ ಬಳಸಿಲ್ಲ. ಯಾವ ಸೂಕ್ಷ್ಮ ಮನಸ್ಸಿನ ರಾಜಕಾರಣಿಯೂ ಈ ರೀತಿ ಹೇಳಲು ಸಾಧ್ಯವಿಲ್ಲ. ನಾನು ಕೂಡ ವಾಜಪೇಯಿ ಜೊತೆಗೆ ಕೆಲಸ ಮಾಡಿದ್ದೇನೆ. ಅವರ ಬಗ್ಗೆ ಬಹಳ ಗೌರವವಿದೆ' ಎಂದರು.

'ಪುಲ್ವಾಮಾ ದಾಳಿ: ಜನರ ಮುಂದೆ ಸತ್ಯ ಮುಚ್ಚಿಟ್ಟಿಲ್ಲ'

ನವದೆಹಲಿ (ರಾಯಟರ್ಸ್): 'ಪುಲ್ವಾಮಾ ದಾಳಿ ಬಗ್ಗೆ ಜಮ್ಮು ಮತ್ತು ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲ್ಲಿಕ್ ನೀಡಿರುವ ಹೇಳಿಕೆಯ ಸತ್ಯಾಸತ್ಯತೆಯನ್ನು ಪ್ರಶ್ನಿಸಬೇಕಿದೆ' ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

2019ರ ಫೆ. 14ರಂದು ಜಮ್ಮು – ಕಾಶ್ಮೀರದ ಪುಲ್ವಾಮಾ ಬಳಿ ಉಗ್ರರು ನಡೆಸಿದ ದಾಳಿಗೆ ಸಿಆರ್‌ಪಿಎಫ್‌ನ 40 ಯೋಧರು ಹುತಾತ್ಮರಾಗಿದ್ದರು.

'ಈ ದಾಳಿಗೆ ಸರ್ಕಾರದ ಲೋಪವೇ ಕಾರಣ. ಯೋಧರು ಪ್ರಯಾಣಿಸಬೇಕಿದ್ದ ಮಾರ್ಗದ ಸುರಕ್ಷತೆಯ ತಪಾಸಣೆಯೂ ನಡೆದಿರಲಿಲ್ಲ' ಎಂದು ಮಲ್ಲಿಕ್, 'ದಿ ವೈರ್' ಪೋರ್ಟಲ್‌ಗೆ ನೀಡಿದ ಸಂದರ್ಶನದಲ್ಲಿ ಆರೋಪಿಸಿದ್ದರು. ಅವರ ಈ ಹೇಳಿಕೆಯು ದೇಶದಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ಆದರೆ, ಕೇಂದ್ರ ಸರ್ಕಾರ ಈ ಬಗ್ಗೆ ಪ್ರತಿಕ್ರಿಯೆ ನೀಡಿರಲಿಲ್ಲ. ಇಂಡಿಯಾ ಟುಡೇ ಟಿ.ವಿಯಲ್ಲಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಅಮಿತ್ ಶಾ ಅವರು, ಮಲ್ಲಿಕ್ ಹೇಳಿಕೆಗೆ ಮೊದಲ ಬಾರಿಗೆ ಪ್ರತಿಕ್ರಿಯಿಸಿದ್ದಾರೆ.



ಅಮಿತ್ ಶಾ

'ಪುಲ್ವಾಮಾ ದಾಳಿ ಬಗ್ಗೆ ದೇಶದ ಜನರ ಮುಂದೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಾವುದೇ ಸತ್ಯ ಮುಚ್ಚಿಟ್ಟಿಲ್ಲ. ಅದರ ಅಗತ್ಯವೂ ಸರ್ಕಾರಕ್ಕೆ ಇಲ್ಲ' ಎಂದು ಗೃಹ ಸಚಿವರು ಹೇಳಿದ್ದಾರೆ.

ಆಗ ರಾಜನಾಥ್ ಸಿಂಗ್ ಕೇಂದ್ರ ಗೃಹ ಸಚಿವರಾಗಿದ್ದರು. ಪಾಕಿಸ್ತಾನ ಮೂಲದ ಜೈಷ್ ಎ ಮೊಹಮ್ಮದ್ ಉಗ್ರ ಸಂಘಟನೆಯು ಈ ದಾಳಿ ಹೊಣೆ ಹೊತ್ತಿತ್ತು.

ಬಿಜೆಪಿ ಅಧಿಕಾರಕ್ಕೆ ಬಂದರೆ ಮುಸ್ಲಿಂ ಮೀಸಲಾತಿ ರದ್ದು: ಅಮಿತ್ ಶಾ

ಹೈದರಾಬಾದ್: 'ಬಿಜೆಪಿಯು ತೆಲಂಗಾಣದಲ್ಲಿ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿನ ಮುಸ್ಲಿಂ ಮೀಸಲಾತಿಯನ್ನು ತೆಗೆದು ಹಾಕುತ್ತೇವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಘೋಷಿಸಿದ್ದಾರೆ.

ಹೈದರಾಬಾದ್ ಸಮೀಪದ ಚೆವೆಲ್ಲಾದಲ್ಲಿ ಪಕ್ಷದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿಜಯ ಸಂಕಲ್ಪ ಸಭೆಯಲ್ಲಿ ಮಾತನಾಡಿದ ಅವರು, 'ತೆಲಂಗಾಣದಲ್ಲಿ ಮುಸ್ಲಿಮರಿಗೆ ಮೀಸಲಾತಿ ಒದಗಿಸಿರುವುದು ಅಸಾಂವಿಧಾನಿಕವಾದುದು. ಇದಕ್ಕೆ ನಾವು ಕೊನೆ ಹಾಡುತ್ತೇವೆ. ಎಸ್ಸಿ, ಎಸ್ಟಿ ಹಾಗೂ ಒಬಿಸಿಗಳಿಗೆ ಮೀಸಲಾತಿಯ ಹಕ್ಕು ನೀಡುತ್ತೇವೆ' ಎಂದಿದ್ದಾರೆ.

'ರಾಜ್ಯದಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯು ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ತೆಲಂಗಾಣದಲ್ಲಿ ಮುಸ್ಲಿಮರನ್ನು ಹಿಂದುಳಿದ ವರ್ಗಕ್ಕೆ ಸೇರಿಸಲಾಗಿದ್ದು, ಶೇ 4ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.

ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್

'ವೇದ, ಸಂಸ್ಕೃತ ಜ್ಞಾನ ಪೋಷಿಸಿ'

ಸಬರಕಂಠ, ಗುಜರಾತ್ (ಪಿಟಿಐ): 'ಭಾರತವು ವಿಶ್ವ ಗುರು ಆಗಬೇಕಾದರೆ ವೇದ ಹಾಗೂ ಸಂಸ್ಕೃತ ಜ್ಞಾನವನ್ನು ಉಳಿಸಿ ಬೆಳೆಸಬೇಕು' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದ್ದಾರೆ.

ಶ್ರೀ ಭಗವಾನ್ ಯಾಜ್ಞವಲ್ಕ್ಯ ವೇದ ತತ್ವಜ್ಞಾನ ಯೋಗಾಶ್ರಮ ಟ್ರಸ್ಟ್ ಭಾನುವಾರ ಹಮ್ಮಿಕೊಂಡಿದ್ದ ವೇದ ಸಂಸ್ಕೃತಿ ಜ್ಞಾನ ಗೌರವ ಸಮಾರಂಭದಲ್ಲಿ ಮಾತನಾಡಿದ ಅವರು, 'ಭಾರತವು ಅಮೆರಿಕ, ಚೀನಾ ಮತ್ತು ರಷ್ಯಾದ ಹಾಗೆ ಅಧಿಕಾರ ದುರ್ಬಳಕೆ ಮಾಡಿಕೊಳ್ಳುವ ಬಲಿಷ್ಠ ರಾಷ್ಟ್ರವಾಗಿ ಬೆಳೆಯಬೇಕಿಲ್ಲ. ಜಗತ್ತಿನ ಸಮಸ್ಯೆಗೆ ಪರಿಹಾರ ಸೂಚಿಸುವ ಹಾಗೂ ವಿಶ್ವಕ್ಕೆ ಶಾಂತಿಯ ಪಥವನ್ನು ತೋರಿಸುವ ರಾಷ್ಟ್ರವಾಗಿ ಹೊರಹೊಮ್ಮಬೇಕು' ಎಂದಿದ್ದಾರೆ.



ಮೋಹನ್ ಭಾಗವತ್

'ಭಾರತವು ಧರ್ಮ ಪ್ರಸಾರದಲ್ಲಿ ನಂಬಿಕೆ ಇಟ್ಟಿರುವ ರಾಷ್ಟ್ರ. ಎಲ್ಲರನ್ನೂ ಒಗ್ಗೂಡಿಸುವ ಮೂಲಕ ವಿಶ್ವ ಗುರು ಆಗಲು ಹೊರಟಿದೆ. ಗೆಲುವು ಎಂದರೆ ಧರ್ಮ ವಿಜಯ ಎಂದರ್ಥ. ನಾವು ನಮ್ಮ ಮಾತೃಭಾಷೆಯನ್ನು ಚೆನ್ನಾಗಿ ಮಾತನಾಡುವುದನ್ನು ಕಲಿತದ್ದೇ ಆದಲ್ಲಿ ಶೇ 40 ರಷ್ಟು ಸಂಸ್ಕೃತವನ್ನು ತಿಳಿದಂತೆಯೇ' ಎಂದು ಹೇಳಿದ್ದಾರೆ.

ಉಕ್ರೇನ್ ಮತ್ತು ರಷ್ಯಾ ಸಂಘರ್ಷದ ವಿಚಾರದಲ್ಲಿ ಭಾರತದ ನಿಲುವಿನ ಕುರಿತು ಮಾತನಾಡಿರುವ ಅವರು, 'ಭಾರತವು ತಮ್ಮ ಪರವಾಗಿ ನಿಲ್ಲಬೇಕು ಎಂದು ಉಭಯ ರಾಷ್ಟ್ರಗಳೂ ಬಯಸಿದ್ದವು. ಆದರೆ ಭಾರತವು, ರಷ್ಯಾ ಹಾಗೂ ಉಕ್ರೇನ್ ಎರಡೂ ನಮ್ಮ ಮಿತ್ರ ರಾಷ್ಟ್ರಗಳು. ಹೀಗಾಗಿ ಒಬ್ಬರ ಪರವಾಗಿ ನಿಲ್ಲಲು ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿತ್ತು. ಇದು ಯುದ್ಧದ ಸಮಯವಲ್ಲ ಎಂದೂ ತಿಳಿಸಿತ್ತು. ಅಷ್ಟರ ಮಟ್ಟಿಗೆ ದೇಶವು ಈಗ ಬಲಿಷ್ಠವಾಗಿ ಬೆಳೆದಿದೆ' ಎಂದಿದ್ದಾರೆ.

1,003 ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಸೀಟುಗಳು ವ್ಯರ್ಥ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೇಶದಲ್ಲಿ ತುಂಬಾ ಅಮೂಲ್ಯವೆನಿಸಿರುವ 1,003 ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಸೀಟುಗಳು ವ್ಯರ್ಥವಾಗುತ್ತಿವೆ. ಹೀಗಾಗಿಯೇ ಇಂತಹ ವೈದ್ಯರ ಕೊರತೆ ಯಾವಾಗಲೂ ಎದುರಾಗುತ್ತಿದೆ' ಎಂದು ಸುಪ್ರೀಂ ಕೋರ್ಟ್ ಭಾನುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಅರವಿಂದ ಕುಮಾರ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ, 'ಈ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಗಮನ ಸೆಳೆಯಿರಿ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರಿಗೆ ಸೂಚಿಸಿದೆ.

'ಯಾರನ್ನೂ ದಾಖಲಾತಿ ಮಾಡಿಕೊಳ್ಳದಿರುವುದಿಂದಾಗಿ 1,003 ಸೂಪರ್ ಸ್ಪೆಷಾಲಿಟಿ ಸೀಟುಗಳು ಭರ್ತಿಯಾಗದೆ ಉಳಿದಿವೆ ಎಂಬುದು ಈ ಅರ್ಜಿಯ ವಿಚಾರಣೆಯಿಂದ ಗೊತ್ತಾಗಿದೆ. ಒಂದೆಡೆ ನಾವು ಸೂಪರ್ ಸ್ಪೆಷಾಲಿಟಿ ವೈದ್ಯರ ಕೊರತೆ ಎದುರಿಸುತ್ತಿದ್ದೇವೆ. ಮತ್ತೊಂದೆಡೆ ಅಮೂಲ್ಯವಾಗಿರುವಂತಹ ಈ ಸೀಟುಗಳು ವ್ಯರ್ಥವಾಗುತ್ತಿವೆ' ಎಂದು ನ್ಯಾಯಪೀಠ ಬೇಸರ ವ್ಯಕ್ತಪಡಿಸಿದೆ.

ಆರೋಗ್ಯ ಸೇವೆಗಳ ಮಹಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಎಲ್ಲಾ ರಾಜ್ಯಗಳು ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಪ್ರತಿನಿಧಿಗಳು ಈ ಸಮಿತಿಯಲ್ಲಿ ಇರಲಿದ್ದಾರೆ. ಇದರ ಮೂಲಕ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಐಶ್ವರ್ಯ ಭಾಟಿ ಅವರು ನ್ಯಾಯಪೀಠಕ್ಕೆ ತಿಳಿಸಿದರು.

'ಈ ವರ್ಷದ ಜುಲೈನಲ್ಲಿ ಮುಂದಿನ ಶೈಕ್ಷಣಿಕ ಋತು ಆರಂಭಗೊಳ್ಳಲಿದೆ. ಅಷ್ಟರೊಳಗೆ ಪ್ರಸ್ತಾವಿತ ಸಮಿತಿಯು ಈ ಸಮಸ್ಯೆಗೆ ಅಗತ್ಯ ಪರಿಹಾರ ಕಂಡುಹಿಡಿಯಬೇಕು. ಈ ನಿಟ್ಟಿನಲ್ಲಿ ನೀವು ಸಮಿತಿಯ ಗಮನ ಸೆಳೆಯಿರಿ' ಎಂದು ನ್ಯಾಯಪೀಠವು ಐಶ್ವರ್ಯ ಭಾಟಿ ಅವರಿಗೆ ನಿರ್ದೇಶಿಸಿತು.

ವಿಚಾರಣೆಯನ್ನು ಜುಲೈ 4ಕ್ಕೆ ಮುಂದೂಡಿದ ನ್ಯಾಯಪೀಠವು ಅಷ್ಟರೊಳಗೆ ಈ ವಿಚಾರದ ಕುರಿತಾದ ಸ್ಥಿತಿಗತಿಯ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು. ಶುಲ್ಕ ಮರುಪಾವತಿಸುವಂತೆ ಹಾಗೂ ಮೂಲ ದಾಖಲೆಗಳನ್ನು ಮರಳಿಸುವಂತೆ ಸಂಬಂಧಪಟ್ಟ ಕಾಲೇಜುಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸೂಪರ್ ಸ್ಪೆಷಾಲಿಟಿ ಸೀಟುಗಳನ್ನು ತ್ಯಜಿಸಿದ್ದ ಕೆವಿನ್ ಜಾಯ್ ಹಾಗೂ ಇತರರು ಅರ್ಜಿಗಳನ್ನು ಸಲ್ಲಿಸಿದ್ದರು.

ಇವುಗಳ ವಿಚಾರಣೆ ನಡೆಸಿದ ನ್ಯಾಯಪೀಠವು ಮೂಲ ದಾಖಲೆಗಳನ್ನು ಹಿಂದಿರುಗಿಸುವಂತೆ ಸಂಬಂಧಪಟ್ಟ ಕಾಲೇಜುಗಳಿಗೆ ಸೂಚಿಸಿದೆ.

ಸುಧಾ, ಮಯೂರ ಓದಿ

ಕೇಂದ್ರದ ಸಮೀಕ್ಷೆ ಪ್ರಕಟ: ಕರ್ನಾಟಕದಲ್ಲಿ 26,994 ನೀರಿನ ಮೂಲಗಳು

ದೇಶದಲ್ಲಿ 24.14 ಲಕ್ಷ ಜಲಮೂಲಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಜಲಶಕ್ತಿ ಸಚಿವಾಲಯದಿಂದ ಮೊದಲ ಬಾರಿಗೆ ನಡೆದ ಜಲಮೂಲಗಳ ಸಮೀಕ್ಷೆ ಹೊರಬಿದ್ದಿದ್ದು, ದೇಶದಲ್ಲಿ ಒಟ್ಟು 24.14 ಲಕ್ಷ ಜಲಮೂಲಗಳಿವೆ ಎಂದು ವರದಿ ತಿಳಿಸಿದೆ.

ಜಲಮೂಲಗಳಾದ ನೀರಿನ ಕೊಳ, ಕೆರೆ, ಸರೋವರಗಳ ಬಗ್ಗೆ ಸಮೀಕ್ಷೆ ನಡೆಸಲಾಗಿತ್ತು. ಪಶ್ಚಿಮ ಬಂಗಾಳ ಅತಿಹೆಚ್ಚು(7.47 ಲಕ್ಷ) ಜಲಮೂಲಗಳನ್ನು ಹೊಂದಿರುವ ಶ್ರೇಯಕ್ಕೆ ಭಾಜನವಾಗಿದೆ. ಸಿಕ್ಕಿಂನಲ್ಲಿ ಅತಿ ಕಡಿಮೆ(134) ಜಲಮೂಲಗಳಿವೆ. ಕರ್ನಾಟಕದಲ್ಲಿ ಒಟ್ಟು 26,994 ಜಲಮೂಲಗಳಿವೆ ಎಂದು ವರದಿ ತಿಳಿಸಿದೆ.

ದೇಶದಲ್ಲಿ ಒಟ್ಟು 24,24,540 ಜಲಮೂಲಗಳಿವೆ. ಈ ಪೈಕಿ ಗ್ರಾಮೀಣ ಪ್ರದೇಶದಲ್ಲಿ 23,55,055 (ಶೇ 97.1) ಹಾಗೂ ನಗರ ಪ್ರದೇಶದಲ್ಲಿ 69,485 (ಶೇ 2.9) ನೀರಿನ ಮೂಲಗಳಿವೆ.

ಮುಖ್ಯಾಂಶಗಳು

- ಜಲಶಕ್ತಿ ಸಚಿವಾಲಯದಿಂದ ದೇಶದಲ್ಲಿ ಮೊದಲ ಬಾರಿಗೆ ಸಮೀಕ್ಷೆ
- ಪಶ್ಚಿಮ ಬಂಗಾಳ ರಾಜ್ಯದಲ್ಲಿ ಅತಿ ಹೆಚ್ಚು ಜಲಮೂಲಗಳು ಪತ್ತೆ
- ಕಡಿಮೆ ನೀರಿನ ಮೂಲಗಳನ್ನು ಹೊಂದಿರುವ ರಾಜ್ಯ ಸಿಕ್ಕಿಂ
- ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚು

ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ 26,205 ಹಾಗೂ ನಗರ ಪ್ರದೇಶದಲ್ಲಿ 789 ಜಲಮೂಲಗಳಿವೆ ಎಂದು ವರದಿ ತಿಳಿಸಿದೆ.

ಅತಿಹೆಚ್ಚು ನೀರಿನ ಮೂಲಗಳನ್ನು ಹೊಂದಿರುವ ಐದು ರಾಜ್ಯಗಳ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ, ಉತ್ತರಪ್ರದೇಶ, ಆಂಧ್ರಪ್ರದೇಶ, ಒಡಿಶಾ ಹಾಗೂ ಅಸ್ಸಾಂ ಇವೆ. ದೇಶದ ಒಟ್ಟು ನೀರಿನ ಮೂಲಗಳ ಪೈಕಿ ಶೇ 63ರಷ್ಟು ಮೂಲಗಳು ಈ ರಾಜ್ಯದಲ್ಲಿವೆ.

ರಾಜ್ಯದ ನಗರ ಪ್ರದೇಶಗಳಲ್ಲಿ ಅತಿಹೆಚ್ಚು ಜಲಮೂಲ ಹೊಂದಿರುವ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಉತ್ತರ ಪ್ರದೇಶ, ತ್ರಿಪುರ ಸೇರಿವೆ. ಗ್ರಾಮೀಣ ಪ್ರದೇಶದಲ್ಲಿ ಅತಿಹೆಚ್ಚು ಮೂಲಗಳನ್ನು ಹೊಂದಿರುವ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಆಂಧ್ರಪ್ರದೇಶ, ಒಡಿಶಾ ಮತ್ತು ಅಸ್ಸಾಂ ಇವೆ.

ಜಲಮೂಲಗಳ ಪೈಕಿ ಶೇ 59.5 ನೀರಿನ ಕೊಳಗಳು, ಶೇ 15.7 ಕೆರೆಗಳು ಹಾಗೂ ಶೇ 9.3 ಸರೋವರಗಳಿವೆ. ಶೇ. 55.2ರಷ್ಟು ಖಾಸಗಿ ಒಡೆತನದಲ್ಲಿ ಮತ್ತು ಶೇ 44.8 ಸರ್ಕಾರಿ ಹದ್ದುಬಸ್ತಿನಲ್ಲಿವೆ ಎಂದು ವರದಿ ತಿಳಿಸಿದೆ.

ಒಟ್ಟು ಜಲಮೂಲಗಳಲ್ಲಿ ಶೇ 78 ಮಾನವ ನಿರ್ಮಿತವಾಗಿದ್ದರೆ, ಶೇ 22 ನೈಸರ್ಗಿಕ ಮೂಲಗಳಾಗಿವೆ.

ಅವುಗಳ ಸ್ವರೂಪ, ಸ್ಥಿತಿಗತಿ, ಒತ್ತುವರಿ, ಬಳಕೆ, ನೀರಿನ ಸಂಗ್ರಹ ಇತ್ಯಾದಿ ಬಗ್ಗೆ ಅರಿಯಲು ಈ ಸಮೀಕ್ಷೆ ನಡೆಸಲಾಗಿತ್ತು. ಅವುಗಳನ್ನು ಬಳಕೆ ಮಾಡಲಾಗುತ್ತಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮಾಹಿತಿ ಅರಿಯಲು ಸಮೀಕ್ಷೆ ಸಹಕಾರಿಯಾಗಿದೆ ಎಂದು ಜಲಶಕ್ತಿ ಸಚಿವಾಲಯ ತಿಳಿಸಿದೆ.

ಇ–ಹರಾಜು ಸದರ್ನ್ ಬ್ಯಾಟರೀಸ್ ಪ್ರೈವೇಟ್ ಲಿಮಿಟೆಡ್ – ಬೆಂಗಳೂರು.

ಬೆಂಗಳೂರಿನ ಗೌರವಾನ್ವಿತ ರಾಷ್ಟ್ರೀಯ ಕಂಪನಿ ನ್ಯಾಯಪೀಠವು 02ನೇ ಮಾರ್ಚ್ 2023ರ ತನ್ನ ಆದೇಶದಂತೆ, ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್ ರಪ್ಸಿ ಕಾಯಿದೆ, 2016 ರ ಅಡಿ, (ಕಾರ್ಪೊರೇಟ್ ಸಾಲಗಾರ, CIN: 31404KA1996PTC019739) ಸದರ್ನ್ ಬ್ಯಾಟರೀಸ್ ಪ್ರೈವೇಟ್ ಲಿಮಿಟೆಡ್ (ದಿವಾಳಿತನದಲ್ಲಿ) ಸಾಲಗಾರನಾಗಿ ಹೋಗುವ ಕಾಳಜಿಯಿಂದ ಇದರ ಒಡೆತನದ ಆಸ್ತಿಗಳನ್ನು ಸಾರ್ವಜನಿಕ ಹರಾಜು ಪ್ರಕ್ರಿಯೆಯ ಮೂಲಕ ಮಾರಾಟ ನಡೆಸಲು ನಿರ್ಧರಿಸಿದೆ.

ಆಸಕ್ತ ಅರ್ಜಿದಾರರು ಇ–ಹರಾಜು ವೆಬ್‌ಸೈಟ್ https://ncltauction.auctiontiger.net ನಲ್ಲಿ ಅಪ್‌ಲೋಡ್ ಮಾಡಿದ ವಿವರವಾದ ಆಸ್ತಿ ಮಾರಾಟ ಪ್ರಕ್ರಿಯೆಯ ಮೆಮರಾಂಡಮ್‌ನ್ನು ಆಧಾರ ಮಾಡಿಕೊಳ್ಳಬಹುದು. ಅಥವಾ ಆಸ್ತಿ ಮಾರಾಟ ಪ್ರಕ್ರಿಯೆಯ ಮೆಮರಾಂಡಮ್‌ನ ನಕಲಿಗಾಗಿ ಲಿಕ್ವಿಡೇಟರ್ ರವರಿಗೆ sbpl.liquidator@gmail.com ಗೆ ಇ–ಮೇಲ್ ಮೂಲಕ ವಿನಂತಿಯನ್ನು ಕಳುಹಿಸಿ ಪಡೆದುಕೊಳ್ಳಬಹುದು.

ಹರಾಜು ಮಾರಾಟವು ಇ–ಹರಾಜು ಫ್ಲ್ಯಾಟ್‌ಫಾರಂ https://ncltauction.auctiontiger.net ಮೂಲಕ ನಡೆಯಲಿದೆ.

ಕಾರ್ಪೊರೇಟ್ ಸಾಲಗಾರ	ಮಾರಾಟದ ಸ್ವರೂಪ	ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ (ಐಎನ್‌ಆರ್)	ಇಎಂಡಿ ಮೊತ್ತ ಮತ್ತು ಸಲ್ಲಿಕೆಗೆ ಕೊನೆ ದಿನಾಂಕ
ಸದರ್ನ್ ಬ್ಯಾಟರೀಸ್ ಪ್ರೈವೇಟ್ ಲಿಮಿಟೆಡ್ (ಲಿಕ್ವಿಡೇಶನ್‌ನಲ್ಲಿ) ಬೆಂಗಳೂರು	ಕಂಪನಿಯ ಸಂಪೂರ್ಣ ಮಾರಾಟ (ಹೋಗುವ ಕಾಳಜಿಯ ಆಧಾರದ ಮೇಲೆ)	22/05/2023ರಂದು ಮಧ್ಯಾಹ್ನ 12.00 ರಿಂದ 22/05/2023ರಂದು ಸಂಜೆ 6.00 ರವರೆಗೆ	ಐಎನ್‌ಆರ್ 115ಕೋಟಿ (ಜಿಎಸ್‌ಟಿ ಮತ್ತು ಇತರೆ ಅನ್ವಯವಾಗುವ ತೆರಿಗೆ ಮತ್ತು ಡ್ಯೂಟಿಗಳ ಹೊರತುಪಡಿಸಿ)	ಐಎನ್‌ಆರ್ 5 ಕೋಟಿ 08/05/2023 ರಂದು ಅಥವಾ ಅದಕ್ಕೂ ಮೊದಲು

ಯಾವುದೇ ಸಮಯದಲ್ಲಾದರೂ ಯಾವುದಾದದರೂ ಸ್ಪಷ್ಟೀಕರಣಗಳ ಅಗತ್ಯವಿದ್ದಲ್ಲಿ, ಶ್ರೀ ಕಣೇಕಲ್ ಚಂದ್ರಶೇಖರ್ ರವರನ್ನು sbpl.liquidator@gmail.com ನಲ್ಲಿ ಸಂಪರ್ಕಿಸಬಹುದು.

ಸಹಿ/–
ಕಣೇಕಲ್ ಚಂದ್ರಶೇಖರ್, (ಲಿಕ್ವಿಡೇಟರ್)
ಸದರ್ನ್ ಬ್ಯಾಟರೀಸ್ ಪ್ರೈವೇಟ್ ಲಿಮಿಟೆಡ್‌ಗಾಗಿ (ಲಿಕ್ವಿಡೇಶನ್‌ನಲ್ಲಿ)
Regd No: IBBI/IPA-002/IP-N00642/2018-19/11964

ದಿನಾಂಕ: 24ನೇ ಏಪ್ರಿಲ್ 2023
ಸ್ಥಳ: ಬೆಂಗಳೂರು

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹271-508

ದ್ವಿತಳಿ (ಬಿ.ವಿ)
₹299-651

'ಬಂಡವಾಳ ಮಾರುಕಟ್ಟೆ' ಅಂಕಣ ಇಂದು ಪ್ರಕಟವಾಗುತ್ತಿಲ್ಲ.
- ಸಂ.

ದ್ವಿತೀಯ ವರ್ಷದ ಚಿರಸ್ಮರಣೆ

ಎಸ್. ದೇವರಾಜ್
ಸಂಸ್ಥಾಪಕರು, ಮೆ॥ ತಿಲಕ್ ಇಂಡಸ್ಟ್ರೀಸ್
ನಿಧನ: 24-4-2021
ನೀವಿರುವಿರಿ ಎಂದೆಂದಿಗೂ ನಮ್ಮ ಮನಗಳಲ್ಲಿ...
ಸದಾ ನಿಮ್ಮ ನೆನಪಿನಲ್ಲಿರುವ: ಪತ್ನಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಮತ್ತು ಸ್ನೇಹಿತರು

2ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಂ. ಜಯಮ್ಮನವರು
ಲೇಟ್ ಎಂ. ಪುಟ್ಟಪ್ಪನವರ ಧರ್ಮಪತ್ನಿ, ತಾತಗುಣಿ
ಜನನ : 12-01-1949 – ಮರಣ : 24-04-2021

ರಿಟೇಲ್ ವಹಿವಾಟಿಗೆ ಪ್ರತ್ಯೇಕ ನೀತಿ ಸಾಧ್ಯತೆ

ನವದೆಹಲಿ (ಪಿಟಿಐ): ಜಿಎಸ್‌ಟಿ ನೋಂದಾಯಿತ ದೇಶಿ ವರ್ತಕರಿಗೆ ನೆರವಾಗುವ ಉದ್ದೇಶದಿಂದ ಕೇಂದ್ರ ಸರ್ಕಾರವು ರಾಷ್ಟ್ರೀಯ ರಿಟೇಲ್ ವ್ಯಾಪಾರ ನೀತಿ ಹಾಗೂ ಅಪಘಾತ ವಿಮಾ ಯೋಜನೆಯನ್ನು ಶೀಘ್ರದಲ್ಲಿಯೇ ಘೋಷಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಪ್ರಸ್ತಾವಿತ ಹೊಸ ನೀತಿಯು, ವರ್ತಕರಿಗೆ ಹೆಚ್ಚು ಉತ್ತಮವಾದ ಮೂಲಸೌಕರ್ಯ ಒದಗಿಸಲು ಹಾಗೂ ಹೆಚ್ಚು ಸಾಲವನ್ನು ಒದಗಿಸಲು ಸಹಾಯ ಮಾಡಲಿದೆ ಎಂದು ಮೂಲಗಳು ವಿವರಿಸಿವೆ.

ಸಾಲವು ಕಡಿಮೆ ಬಡ್ಡಿ ದರದಲ್ಲಿ ತಕ್ಷಣಕ್ಕೆ ಸಿಗುವಂತಾಗಲು, ರಿಟೇಲ್ ವಹಿವಾಟುಗಳ ಆಧುನೀಕರಣಕ್ಕೆ, ಪೂರೈಕೆ ವ್ಯವಸ್ಥೆಗೆ ಆಧುನಿಕ ಮೂಲಸೌಕರ್ಯ ಒದಗಿಸಲು, ಕೌಶಲ ಅಭಿವೃದ್ಧಿಗೆ, ಕಾರ್ಮಿಕರ ಉತ್ಪಾದಕತೆಯನ್ನು ಹೆಚ್ಚು ಮಾಡಲು ಅಗತ್ಯವಿರುವ ಅಂಶಗಳನ್ನು ಹೊಸ ನೀತಿಯು ಒಳಗೊಳ್ಳುವ ಸಾಧ್ಯತೆ ಇದೆ. ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿರುವ ಎಲ್ಲ ವರ್ತಕರಿಗೆ ವಿಮಾ ಯೋಜನೆಯೊಂದನ್ನು ರೂಪಿಸುವ ನಿಟ್ಟಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಹಣಕಾಸು ಸೇವೆಗಳ ಇಲಾಖೆಯ ಜೊತೆಗೂಡಿ ಕೆಲಸ ಮಾಡುತ್ತಿದೆ.

ಹೊಸ ನೀತಿಯು ರಿಟೇಲ್ ವರ್ತಕರ ವಲಯಕ್ಕೆ ಖಂಡಿತ ನೆರವಾಗಲಿದೆ ಎಂದು ಅಖಿಲ ಭಾರತ ವರ್ತಕರ ಒಕ್ಕೂಟ (ಸಿಎಐಟಿ) ಹೇಳಿದೆ.

ಮಾರಾಟ ಮಾಡಿದ ಕೊಬ್ಬರಿಯನ್ನು ರೈತರೇ ಕಾಯುವ ಅನಿವಾರ್ಯ!

ಗೋದಾಮು ಕೊರತೆ: ಬೆಳೆಗಾರರಿಗೆ ಬರೆ

• ಚಿದಂಬರಪ್ರಸಾದ

ಹಾಸನ: 'ಕೊಬ್ಬರಿ ಮಾರಾಟ ಮಾಡಲು ವಾರದಿಂದ ಕಾಯುತ್ತಿದ್ದೇವೆ. ಇನ್ನೂ ಖರೀದಿಸಿಲ್ಲ. ಮಾರಿದರೂ ಅದನ್ನು ಲಾರಿಗೆ ಲೋಡ್ ಮಾಡುವವರೆಗೆ ಬೆಳೆಗಾರರೇ ಕಾಯಬೇಕು. ಅಲ್ಲಿಯವರೆಗೆ ಇಲ್ಲಿ ಉಳಿದುಕೊಳ್ಳಲು ಯಾವುದೇ ವ್ಯವಸ್ಥೆ ಇಲ್ಲ..'

ಜಿಲ್ಲೆಯ ಚನ್ನರಾಯಪಟ್ಟಣದ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ (ನಾಫೆಡ್) ಖರೀದಿ ಕೇಂದ್ರದಲ್ಲಿರುವ ರೈತರ ಅಳಲಿದು.

ಸರ್ಕಾರ ಬೆಳೆಗಾರರಿಂದ ಬೆಂಬಲ ಬೆಲೆಯಲ್ಲಿ ಕೊಬ್ಬರಿ ಖರೀದಿಸಲು ಖರೀದಿ ಕೇಂದ್ರ ಆರಂಭಿಸಿದೆ. ತಿಪಟೂರು, ಅರಸೀಕೆರೆಯಲ್ಲಿ ಇರುವ ಖಾಸಗಿ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗುತ್ತಿಲ್ಲ. ಖರೀದಿ ಕೇಂದ್ರದಲ್ಲಿ ಕ್ವಿಂಟಲ್‌ಗೆ ₹ 11,750 ದರ ನಿಗದಿಪಡಿಸಿದ್ದು, ಹೆಚ್ಚಿನ ರೈತರು ಈ ಖರೀದಿ ಕೇಂದ್ರಕ್ಕೆ ಉಂಡೆ ಕೊಬ್ಬರಿ ತರುತ್ತಿದ್ದಾರೆ. ಆದರೆ, ಖರೀದಿಸಿದ ಕೊಬ್ಬರಿಯನ್ನು ದಾಸ್ತಾನು ಮಾಡಲು ಗೋದಾಮು ಇಲ್ಲದೇ ರೈತರು ಸಂಕಷ್ಟ ಎದುರಿಸುವಂತಾಗಿದೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡಿರುವ ಕೊಬ್ಬರಿ ಕಾಯುತ್ತಿರುವ ಬೆಳೆಗಾರರು

ರಾಜ್ಯದ ಇತರ ಖರೀದಿ ಕೇಂದ್ರಗಳಲ್ಲಿ, ತೂಕ ಮಾಡಿದ ನಂತರ ರೈತರಿಗೆ ರಸೀದಿ ಕೊಡುತ್ತಾರೆ. ಆದರೆ, ಚನ್ನರಾಯಪಟ್ಟಣ ಕೇಂದ್ರದಲ್ಲಿ ಮಾರಾಟ ಮಾಡಿದ ಕೊಬ್ಬರಿಯನ್ನು, ಖರೀದಿ ಕೇಂದ್ರದ ದರಗಳಿಗೆ ಲೋಡ್ ಮಾಡಿದ ನಂತರವೇ ಬೆಳೆಗಾರರಿಗೆ ರಸೀದಿ ನೀಡಲಾಗುತ್ತದೆ. ಹಾಗಾಗಿ ಕೊಬ್ಬರಿ ಮಾರಾಟ ಮಾಡಿದರೂ, ಲಾರಿ ಬರುವವರೆಗೆ ಅಲ್ಲಿಯೇ ಕಾಯುವ ಪರಿಸ್ಥಿತಿ ಬೆಳೆಗಾರರದ್ದಾಗಿದೆ.

'ನಿತ್ಯ 3 ಸಾವಿರ ಚೀಲಗಳಷ್ಟು (ಒಂದು ಚೀಲದಲ್ಲಿ 45 ಕೆ.ಜಿ. ಯಂತೆ) ಕೊಬ್ಬರಿ ಖರೀದಿಸಲಾಗುತ್ತಿದೆ. ಇಷ್ಟೊಂದು ಪ್ರಮಾಣದ ಕೊಬ್ಬರಿಯನ್ನು ದಾಸ್ತಾನು ಮಾಡಲು ಗೋದಾಮುಗಳು ಸಿಗುತ್ತಿಲ್ಲ. ಆಲೂರಿನಲ್ಲಿರುವ ಗೋದಾಮಿನಲ್ಲಿ ಬೇರೆ ಭಾಗಗಳ ಕೊಬ್ಬರಿಯೂ ಬರುತ್ತಿದೆ. ಹೀಗಾಗಿ ಲಾರಿಗಳು ಅನ್‌ಲೋಡ್ ಆಗುವುದು ವಿಳಂಬವಾಗುತ್ತಿದೆ. ಕೇಂದ್ರದಲ್ಲಿನ ದಾಸ್ತಾನು ಕಡಿಮೆಯಾದಂತೆ ಬೆಳೆಗಾರರಿಂದ ಕೊಬ್ಬರಿ ಖರೀದಿ ಮಾಡಲಾಗುತ್ತಿದೆ' ಎಂದು ಚನ್ನರಾಯಪಟ್ಟಣ ಖರೀದಿ ಕೇಂದ್ರದ ವ್ಯವಸ್ಥಾಪಕ ಚೇತನ್ ತಿಳಿಸಿದರು.

ಮೂಲಸೌಕರ್ಯಗಳೂ ಇಲ್ಲ: ಕೊಬ್ಬರಿ ಚೀಲಗಳನ್ನು ಟ್ರ್ಯಾಕ್ಟರ್‌ಗಳಲ್ಲಿ ತುಂಬಿಕೊಂಡು ಬಂದಿರುವ ಬೆಳೆಗಾರರು, ಕೊಬ್ಬರಿ ಮಾರಾಟ ಆಗುವವರೆಗೆ ಅಲ್ಲಿಯೇ ಕಾಯುವುದು ಅನಿವಾರ್ಯವಾಗಿದೆ. ಅಲ್ಲಿಯವರೆಗೆ ಉಳಿಯಲು ಖರೀದಿ ಕೇಂದ್ರದ ಆವರಣದಲ್ಲಿ ಯಾವುದೇ ಸೌಕರ್ಯಗಳಿಲ್ಲ.

'ನಾಲ್ಕು ದಿನಗಳಿಂದ ಕಾಯುತ್ತಿದ್ದೇವೆ. ಕೊಬ್ಬರಿ ಖರೀದಿಸುತ್ತಿಲ್ಲ. ಇಲ್ಲಿ ಉಳಿದುಕೊಳ್ಳಬೇಕು ಎಂದರೆ ಶೌಚಾಲಯ, ಕುಡಿಯುವ ನೀರು, ಮಲಗಲು ವ್ಯವಸ್ಥೆಯೂ ಇಲ್ಲ. ಹೀಗಾಗಿ ನಮ್ಮ ಗೋಳು ಯಾರಿಗೆ ಹೇಳೋಣ' ಎಂದು ಚನ್ನರಾಯಪಟ್ಟಣ ತಾಲ್ಲೂಕಿನ ಉಂಗುರಗೆರೆ ಬೆಳೆಗಾರ ಎಸ್. ನಾರಾಯಣ ಕೇಳಿದರು.

ಮುಖ್ಯಾಂಶಗಳು

- ಖಾಸಗಿ ಮಾರುಕಟ್ಟೆಯಲ್ಲಿ ₹8,600 ರಿಂದ ₹8,700 ಬೆಲೆ
- ನಾಫೆಡ್ ಖರೀದಿ ಕೇಂದ್ರದಲ್ಲಿ ₹11,750 ಬೆಲೆ ನಿಗದಿ
- ಹೆಚ್ಚಿನ ಸಂಖ್ಯೆಯಲ್ಲಿ ರೈತರಿಂದ ನೋಂದಣಿ

ಹೊಳೆನರಸೀಪುರದಲ್ಲಿ ಒಂದು ಗೋದಾಮು ಕೊಡುವಂತೆ ಮನವಿ ಮಾಡಲಾಗಿದೆ. ಸೋಮವಾರ ಗೋದಾಮು ಸಿಕ್ಕರೆ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ
ಚೇತನ್, ಚನ್ನರಾಯಪಟ್ಟಣ ಖರೀದಿ ಕೇಂದ್ರದ ವ್ಯವಸ್ಥಾಪಕ

ಚನ್ನರಾಯಪಟ್ಟಣದ ಖರೀದಿ ಕೇಂದ್ರದಲ್ಲಿ ಕೊಬ್ಬರಿ ಕಳುವಾದರೆ ಬೆಳೆಗಾರರನ್ನೇ ಹೊಣೆ ಮಾಡಲಾಗುತ್ತಿದೆ. ಲಾರಿಗಳು ಬರುವುದನ್ನು ಕಾಯಬೇಕಾಗಿದೆ
ಎಚ್.ಬಿ. ಶಿವಕುಮಾರ್, ತೆಂಗು ಬೆಳೆಗಾರ, ಹಿರೀಸಾವೆ

ಜರ್ಮನಿ: ಕಾರಿಗೆ ರೈಲು ಡಿಕ್ಕಿ– ಮೂವರ ಸಾವು

ಬರ್ಲಿನ್ (ಎಪಿ): 'ಉತ್ತರ ಜರ್ಮನಿಯ ಹ್ಯಾನೋವರ್ ನಗರದ ಹೊರಭಾಗದ ಲೆವೆಲ್ ಕ್ರಾಸಿಂಗ್ ಒಂದರಲ್ಲಿ ಭಾನುವಾರ ಬೆಳಿಗ್ಗೆ ಪ್ಯಾಸೆಂಜರ್ ರೈಲೊಂದು ಕಾರಿಗೆ ಡಿಕ್ಕಿ ಹೊಡೆದುದರಿಂದ ಕಾರಿನಲ್ಲಿದ್ದ ಎಲ್ಲಾ ಮೂವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕಾರಿನಲ್ಲಿ 22 ವರ್ಷದ ಚಾಲಕ ಮತ್ತು ಇತರ ಇಬ್ಬರು ಮಹಿಳೆಯರು ಇದ್ದರು. ಲೆವೆಲ್ ಕ್ರಾಸಿಂಗ್‌ನಲ್ಲಿ ಗೇಟ್ ಹಾಕಲಾಗಿತ್ತು. ಆದರೆ ಅದು ರಸ್ತೆಯನ್ನು ಪೂರ್ತಿ ಮುಚ್ಚುವಂತೆ ಇರಲಿಲ್ಲ. ಈ ಸ್ಥಳದಲ್ಲೇ ಕಾರು ಮುನ್ನುಗ್ಗಿ ರೈಲು ಹಳಿಯನ್ನು ದಾಟುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿತು ಎಂದು ಪೊಲೀಸರು ತಿಳಿಸಿದರು.

ಜಿಎಸ್‌ಟಿ ವಂಚನೆ: ದತ್ತಾಂಶ ವಿಶ್ಲೇಷಣೆಯ ಮೊರೆಹೋದ ಅಧಿಕಾರಿಗಳು

ನವದೆಹಲಿ (ಪಿಟಿಐ): ನಿರ್ದಿಷ್ಟ ವಲಯದ ಪೂರೈಕೆ ವ್ಯವಸ್ಥೆಯ ಎಲ್ಲ ಹಂತಗಳಲ್ಲಿಯೂ ಜಿಎಸ್‌ಟಿ ಪಾವತಿ ಆಗುತ್ತಿದೆಯೇ ಎಂಬುದನ್ನು ಪರಿಶೀಲಿಸಲು ಜಿಎಸ್‌ಟಿ ಅಧಿಕಾರಿಗಳು ದತ್ತಾಂಶ ವಿಶ್ಲೇಷಣೆಯ ನೆರವು ಪಡೆಯುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ₹ 1 ಲಕ್ಷ ಕೋಟಿಗಿಂತ ಹೆಚ್ಚಿನ ಮೌಲ್ಯದ ಜಿಎಸ್‌ಟಿ ವಂಚನೆ ಪತ್ತೆಯಾಗಿದೆ. ಹೀಗಾಗಿ, ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ), ಜಿಎಸ್‌ಟಿ ವಂಚನೆಯ ಪ್ರಕರಣಗಳನ್ನು ಮೂಲದಲ್ಲಿಯೇ ಪತ್ತೆ ಮಾಡಲು ಪ್ರಯತ್ನ ಹೆಚ್ಚುಮಾಡಿದೆ.

ನಿರ್ದಿಷ್ಟ ವಲಯವೊಂದು ಪಾವತಿ ಮಾಡುತ್ತಿರುವ ತೆರಿಗೆಯ ಮೊತ್ತವನ್ನು, ಹಿಂದಿನ ತೆರಿಗೆ ವ್ಯವಸ್ಥೆಯಲ್ಲಿ ಆ ವಲಯದಿಂದ ಆಗುತ್ತಿದ್ದ ತೆರಿಗೆ ಪಾವತಿ ಮೊತ್ತಕ್ಕೆ ಹೋಲಿಸಿ ನೋಡುವುದು ಕೂಡ ದತ್ತಾಂಶ ವಿಶ್ಲೇಷಣೆಯ ಭಾಗವಾಗಿದೆ. 'ಈಗ ಜಿಎಸ್‌ಟಿ ವ್ಯವಸ್ಥೆಯಲ್ಲಿ ಸ್ಥಿರತೆ ಇದೆ. ಈಗ ವ್ಯವಸ್ಥೆಯನ್ನು ಇನ್ನಷ್ಟು ಸುಗಮಗೊಳಿಸುವ ಪ್ರಯತ್ನ ನಡೆದಿದೆ. ಜಿಎಸ್‌ಟಿ ವ್ಯವಸ್ಥೆಯ ಭಾಗವಾಗಿರುವ ಎಲ್ಲ ವಲಯಗಳು ತಮ್ಮ ಪಾಲಿನ ತೆರಿಗೆಯನ್ನು ಸರಿಯಾಗಿ ಪಾವತಿ ಮಾಡುತ್ತಿವೆಯೇ ಎಂಬುದನ್ನು ಪರಿಶೀಲಿಸಲು ಮುಂದಾಗಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯಾವುದೇ ವಲಯದ ನಿರ್ದಿಷ್ಟ ಹಂತದಲ್ಲಿ ತೆರಿಗೆ ಪಾವತಿ ಆಗುತ್ತಿಲ್ಲ ಎಂದಾದರೆ, ಅಂತಹ ಪ್ರಕರಣಗಳಲ್ಲಿ ಕ್ರಮ ಜರುಗಿಸಲಾಗುತ್ತದೆ ಎಂದು ಗೊತ್ತಾಗಿದೆ. 'ದತ್ತಾಂಶ ವಿಶ್ಲೇಷಣೆಯು ತ್ವರಿತವಾಗಿ ಮುಗಿಯುವ ಕೆಲಸವಲ್ಲ. ಆದರೆ, ತಯಾರಿಕಾ ಹಂತದಲ್ಲಿಯೇ ಜಿಎಸ್‌ಟಿ ತೆರಿಗೆ ವಂಚನೆಯನ್ನು ತಡೆಯಬೇಕು ಎಂದಾದರೆ ದತ್ತಾಂಶ ವಿಶ್ಲೇಷಣೆಯ ಅಗತ್ಯ ಇದೆ' ಎಂದು ಅಧಿಕಾರಿ ವಿವರಿಸಿದ್ದಾರೆ.

ಕಳೆದ ತಿಂಗಳು ಲೋಕಸಭೆಯಲ್ಲಿ ಮಂಡಿಸಿದ್ದ ಉತ್ತರದಲ್ಲಿ ಹಣಕಾಸು ಸಚಿವಾಲಯವು, 2017ರ ಜುಲೈನಿಂದ 2023ರ ಫೆಬ್ರುವರಿ ನಡುವಿನ ಅವಧಿಯಲ್ಲಿ ಪತ್ತೆಯಾಗಿರುವ ಜಿಎಸ್‌ಟಿ ವಂಚನೆ ಮೊತ್ತ ₹ 3.08 ಲಕ್ಷ ಕೋಟಿ ಎಂದು ತಿಳಿಸಿದೆ. ಈ ಪೈಕಿ ₹ 1.03 ಲಕ್ಷ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ನಂತರದಲ್ಲಿ ವಸೂಲು ಮಾಡಲಾಗಿದೆ. ಈ ವರ್ಷದ ಫೆಬ್ರುವರಿವರೆಗೆ ಜಿಎಸ್‌ಟಿ ವಂಚನೆಯ ಆರೋಪದ ಅಡಿ ಅಧಿಕಾರಿಗಳು 1,402 ಮಂದಿಯನ್ನು ಬಂಧಿಸಿದ್ದಾರೆ.

ಏಪ್ರಿಲ್‌ನಲ್ಲಿ ₹ 8,643 ಕೋಟಿ ತೊಡಗಿಸಿದ ಎಫ್‌ಪಿಐ

ನವದೆಹಲಿ (ಪಿಟಿಐ): ಭಾರತದ ಷೇರುಪೇಟೆಗಳಲ್ಲಿ ವಹಿವಾಟು ನಡೆಸುತ್ತಿರುವ ಷೇರುಗಳು ಈಗ ದುಬಾರಿಯಲ್ಲದ ಮಟ್ಟದಲ್ಲಿ ಇರುವ ಕಾರಣ, ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಈ ತಿಂಗಳಲ್ಲಿ ಇದುವರೆಗೆ ₹ 8,643 ಕೋಟಿ ಹೂಡಿಕೆ ಮಾಡಿದ್ದಾರೆ. ವಿದೇಶಿ ಹೂಡಿಕೆದಾರರು ಈಕ್ವಿಟಿಗಳಲ್ಲಿ ಒಟ್ಟು ₹ 7,936 ಕೋಟಿ ತೊಡಗಿಸಿದ್ದಾರೆ.

ನಿಫ್ಟಿ–50 ಸೂಚ್ಯಂಕವು ಕಳೆದ ಒಂದೂವರೆ ವರ್ಷದಿಂದ ಅಲ್ಪವೂ ಲಾಭ ತಂದುಕೊಟ್ಟಿಲ್ಲ. ಹೀಗಾಗಿ, ಈಗ ದೇಶದ ಷೇರುಪೇಟೆಗಳ ಮೌಲ್ಯವು ಹೆಚ್ಚು ಸ್ವೀಕಾರಾರ್ಹ ಆಗಿದೆ ಎಂದು ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಏಪ್ರಿಲ್ 15ಕ್ಕೆ ಕೊನೆಗೊಂಡ ಪಾಕ್ಷಿಕದಲ್ಲಿ ಹಣಕಾಸು ವಲಯದ ಷೇರುಗಳಲ್ಲಿ ಎಫ್‌ಪಿಐ ಹೂಡಿಕೆ ಹೆಚ್ಚಾಗಿದೆ (₹ 4,410 ಕೋಟಿ). ಇದಲ್ಲದೆ, ಆಟೊಮೊಬೈಲ್, ಬಂಡವಾಳ ಸರಕುಗಳ ಷೇರುಗಳಲ್ಲಿಯೂ ಹೂಡಿಕೆ ಮಾಡಿದ್ದಾರೆ. ಐ.ಟಿ. ವಲಯದ ಷೇರುಗಳಲ್ಲಿ ಕೂಡ ಅವರು ತುಸು ಹೂಡಿಕೆ ಮಾಡಿದ್ದಾರೆ.

'ಐಟಿಸಿ ಕಂಪನಿಯ ಷೇರುಗಳಲ್ಲಿ ಎಫ್‌ಪಿಐ ಹೂಡಿಕೆ ಜಾಸ್ತಿಯಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ. ಎಫ್‌ಪಿಐ ಪಾಲು ಹೆಚ್ಚಾಗುತ್ತಿರುವ ಷೇರುಗಳ ಮೌಲ್ಯವು ಮಾರುಕಟ್ಟೆ ಅಸ್ಥಿರತೆಯ ಹೊತ್ತಿನಲ್ಲಿಯೂ ಸ್ಥಿರ ಏರಿಕೆ ಕಾಣುತ್ತಿದೆ.

'ಮುಂದಿನ ದಿನಗಳಲ್ಲಿಯೂ ಎಫ್‌ಪಿಐ ಹೂಡಿಕೆಯು ಸ್ಥಿರವಾಗಿರುವ ನಿರೀಕ್ಷೆ ಇದೆ. ಮಾರ್ಚ್ ತ್ರೈಮಾಸಿಕದ ಆರಂಭಿಕ ಹಂತದಲ್ಲಿ ಹಣಕಾಸು ವಲಯದ ಫಲಿತಾಂಶವು ಚೆನ್ನಾಗಿರುವ ಕಾರಣ ಈ ವಲಯವು ಹೆಚ್ಚಿನ ಹೂಡಿಕೆಯನ್ನು ಮುಂದಿನ ದಿನಗಳಲ್ಲಿಯೂ ಆಕರ್ಷಿಸಲಿದೆ' ಎಂದು ವಿಜಯಕುಮಾರ್ ಹೇಳಿದ್ದಾರೆ.

ಚಿನ್ನ ಮಾರಾಟ: ಮಿಶ್ರ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಷಯ ತೃತೀಯ ಸಂದರ್ಭದಲ್ಲಿ ಚಿನ್ನಾಭರಣ ಮಾರಾಟವು ಈ ಬಾರಿ ಕಳೆದ ವರ್ಷಕ್ಕೆ ಹೋಲಿಸಿದರೆ ತುಸು ಕಡಿಮೆ ಆಗಿದೆ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘ ಹೇಳಿದೆ. ಆದರೆ, ಬೆಲೆ ಹೆಚ್ಚಿದ್ದರೂ ಚಿನ್ನ ಖರೀದಿ ಉತ್ಸಾಹಕ್ಕೆ ಪೆಟ್ಟು ಬಿದ್ದಿಲ್ಲ ಎಂದು ಸಣ್ಣ ವರ್ತಕರು ಹೇಳಿದ್ದಾರೆ.

'ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷದ ಅಕ್ಷಯ ತೃತೀಯ ಸಂದರ್ಭದಲ್ಲಿ ಚಿನ್ನದ ಬೆಲೆಯ ದುಬಾರಿ ಆಗಿದೆ. ಹೀಗಾಗಿ, ಕಳೆದ ವರ್ಷದ ಅಕ್ಷಯ ತೃತೀಯ ಸಂದರ್ಭದ ಮಾರಾಟ ಪ್ರಮಾಣಕ್ಕೆ ಹೋಲಿಸಿದರೆ ಈ ಬಾರಿ ಮಾರಾಟ ಕಡಿಮೆ ಇದೆ' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಉಪಾಧ್ಯಕ್ಷ ಚೇತನ್ ಕುಮಾರ್ ಮೆಹ್ತಾ 'ಪ್ರಜಾವಾಣಿ'ಗೆ ತಿಳಿಸಿದರು.

2022ರ ಅಕ್ಷಯ ತೃತೀಯ ದಿನ ಬೆಂಗಳೂರಿನಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 52,750 ಆಗಿತ್ತು. ಈ ವರ್ಷ, ಅಕ್ಷಯ ತೃತೀಯದ ಹಿಂದಿನ ದಿನವಾರ ಶನಿವಾರ ಬೆಂಗಳೂರಿನಲ್ಲಿ ಚಿನ್ನದ ಬೆಲೆಯು ₹ 61,950ಕ್ಕೆ ತಲುಪಿದೆ.

'ವಿಧಾನಸಭಾ ಚುನಾವಣೆ ಕಾರಣಕ್ಕಾಗಿ ಜಾರಿಯಲ್ಲಿ ಇರುವ ಬಿಗಿ ನಿಯಮಗಳಿಂದಾಗಿ ಜನರಿಗೆ ನಗದನ್ನು ಒಯ್ಯಲು ಕಷ್ಟವಾಗುತ್ತಿದೆ. ಇದು ಕೂಡ ಚಿನ್ನ ಹಾಗೂ ಚಿನ್ನಾಭರಣ ಮಾರಾಟ ಕಡಿಮೆ ಆಗುವುದಕ್ಕೆ ಒಂದು ಕಾರಣ ಆಗಿರಬಹುದು' ಎಂದು ವರ್ತಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

'ಮಾರಾಟ ಕಡಿಮೆ ಇದ್ದರೂ, ಜನರು ಮಳಿಗೆಗಳ ಕಡೆ ಬರುತ್ತಿರುವುದು ನಮ್ಮ ನಿರೀಕ್ಷೆಯನ್ನು ಮೀರಿದೆ' ಎಂದು ಮೆಹ್ತಾ ಹೇಳಿದರು. ಆದರೆ, 'ಮಾರಾಟದ ಪ್ರಮಾಣದಲ್ಲಿ ಕಡಿಮೆ ಆಗಿಲ್ಲ. ಬೆಲೆ ಹೆಚ್ಚಾಗಿದ್ದರೂ, ಜನ ಚಿನ್ನ ಖರೀದಿ ಮಾಡುವುದನ್ನು ಕಡಿಮೆ ಮಾಡಿಲ್ಲ. ಚಿನ್ನದ ಬೆಲೆಯು ಮುಂದೆ ಇನ್ನಷ್ಟು ಹೆಚ್ಚಬಹುದು ಎಂಬ ನಿರೀಕ್ಷೆಯಲ್ಲಿ ಅವರು ಖರೀದಿ ಮಾಡುತ್ತಿದ್ದಾರೆ' ಎಂದು ವರ್ತಕರೊಬ್ಬರು ಹೇಳಿದರು.

ಮುಂಬೈ ವರದಿ (ಪಿಟಿಐ): ಮಳಿಗೆಗಳಿಗೆ ಭೇಟಿ ನೀಡುವ ಜನರ ಸಂಖ್ಯೆ ಹೆಚ್ಚಿದ್ದರೂ, ಅಕ್ಷಯ ತೃತೀಯ ದಿನ ಚಿನ್ನದ ಮಾರಾಟವು ಹೆಚ್ಚು ಇರಲಿಲ್ಲ ಎಂದು ವರ್ತಕರು ತಿಳಿಸಿದ್ದಾರೆ. ದೇಶದ ಕೆಲವು ಭಾಗಗಳಲ್ಲಿ ಶನಿವಾರ ಅಕ್ಷಯ ತೃತೀಯ ಆಚರಿಸಲಾಗಿದೆ. ದಕ್ಷಿಣ ಭಾರತದಲ್ಲಿ ವಹಿವಾಟು ಚೆನ್ನಾಗಿದೆ ಎಂದು ಕೆಲವು ವರ್ತಕರು ಹೇಳಿದ್ದಾರೆ.

ಭಾರತೀಯರ ರಕ್ಷಣೆಗೆ ಜೆದ್ದಾ ತಲುಪಿದ ಎರಡು ಮಿಲಿಟರಿ ವಿಮಾನಗಳು

ನವದೆಹಲಿ (ಪಿಟಿಐ): ಸುಡಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ರಕ್ಷಿಸಲು ಭಾರತವು ಎರಡು ಸಿ–130ಜೆ ಮಿಲಿಟರಿ ವಿಮಾನಗಳನ್ನು ಜೆದ್ದಾದಲ್ಲಿ ಸಿದ್ಧವಾಗಿಟ್ಟುಕೊಂಡಿದೆ, ಜತೆಗೆ ಐಎನ್‌ಎಸ್ 'ಸಂವೇಧಾ' ನೌಕೆ ಸುಡಾನ್‌ನ ಬಂದರನ್ನು ತಲುಪಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ತಿಳಿಸಿದೆ.

ಸುಡಾನ್‌ನ ಮೇಲೆ ತೀವ್ರ ನಿಗಾ ಇರಿಸಲಾಗಿದ್ದು, ಕ್ಷಣ ಕ್ಷಣದ ಮಾಹಿತಿ ಕಲೆ ಹಾಕಲಾಗುತ್ತಿದೆ. ಎಲ್ಲಾ ವಿದೇಶಿ ವಿಮಾನಗಳಿಗೆ ಸುಡಾನ್ ವಾಯು ಪ್ರದೇಶದಲ್ಲಿ ಪ್ರಸ್ತುತ ಅವಕಾಶ ನೀಡಲಾಗುತ್ತಿಲ್ಲ. ಭೂಪ್ರದೇಶದ ಚಲನೆಯು ಅಪಾಯಕಾರಿಯಾಗಿದೆ. ಸುಡಾನ್ ಅಧಿಕಾರಿಗಳ ಹೊರತಾಗಿ ಅಮೆರಿಕ, ಸೌದಿ ಅರೇಬಿಯಾ, ಯುಎಇ, ಈಜಿಪ್ಟ್‌ನೊಂದಿಗೆ ಎಂಇಎ ಮತ್ತು ಭಾರತ ರಾಯಭಾರಿ ಕಚೇರಿ ನಿರಂತರವಾಗಿ ಸಂಪರ್ಕದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಮೈಸೂರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಉದ್ಯೋಗಗಳು. PUC ಆಗಿರಬೇಕು. 30 ವರ್ಷ ಮೇಲ್ಪಟ್ಟು, ಆಕರ್ಷಕ ವೇತನ ಹಾಗೂ ಕಮಿಷನ್. Ph: 9632447416/ 6364563490

150YEARS OLD biggest industrial / Financial Sector Co. in India Urgently required for therir office in Mysore. Business Managers LifePlanners, Dev. Officers, Retired & Housemakers also apply. SSLC+ 30years above. PH: 6364563490 / 9632447416

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ. 18ವರ್ಷ ಮೇಲ್ಪಟ್ಟವರಿಗೆ ಉಚಿತ ಊಟ, ವಸತಿಯೊಂದಿಗೆ 13000ರಿಂದ 16000ವರೆಗೆ ಸಂಬಳ. ಫೋ: 8139962883

ತನ್ಮಯಿ ಆಯಿಲ್ ಕಂಪನಿಯಲ್ಲಿ ಯುವಕರು ಯುವತಿಯರು ಹೆಲ್ಪರ್ ಕೆಲಸಕ್ಕಾಗಿ ಬೇಕಾಗಿದ್ದಾರೆ ಆಕರ್ಷಕ ಸಂಬಳ. ಬೆಂಗಳೂರು - 9019626612

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.13,000 - 17,000. ph: 8951315839, 9880120052

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600- 65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Teachers/ Professors

NOBLE HIGH School kottigepalya Magadi Main road B'lore- 91 Wanted NTT SOCIAL ENGLISH COMPUTER SCIENCE PE TEACHER WALK IN INTERVIEW 10 am- 3 pm contact 08023285900/ 9449152947 noblehighschoolblr@gmail.com

ಪ್ರವಾಸ

Travel

20/05/2023 ಮತ್ತು 29/5/2023ರಿಂದ 13ದಿನಗಳ ಹರಿದ್ವಾರ,ಚಾರುಧಾಮ್ ಮಸ್ಸೂರಿ,ನೈಮಿಷಾರಣ್ಯ, ಕಾಶಿ,ಆಗ್ರಾ ಹಾಗೂ 30/6/2023ರಿಂದ 12ದಿನಗಳ ಅಮೃತಸರ್,ಅಮರನಾಥ್ ಕಾಶ್ಮೀರ,ವೈಷ್ಣೋದೇವಿ ಇತ್ಯಾದಿ ಏಷ್ಯನ್ ಟ್ರಾವೆಲ್ ಲೈನ್ಸ್. 8105657052/ 9480182865 (ಷಣ್ಮುಗಾನಂದ).

★ರಿಯಾಯಿತಿ ದರದಲ್ಲಿ★ ರೈಲು,ವಿಮಾನ, AC ಬಸ್ಸಿನಲ್ಲಿ 5.7.2023, 11.7.2023 11ದಿನಗಳು ಕಾಶಿ,ಗಯ,ಪ್ರಯಾಗ ದೆಹಲಿ,ಆಗ್ರಾ,ಮಥುರ,ಅಯೋಧ್ಯ ರೂ.29500 ಒಬ್ಬರಿಗೆ., ಆರ್.ಗಾಂಧಿ ಟೂರ್ಸ್. 9902433500, 9945445809, 08026760367. www.rgandhitours.com

ADMISSION CORNER

ST. BENEDICT'S ACADEMY RESIDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2023 - 24
Fee, Food, Hostel facilities for One (1) Year- One Lakh only in Installments
Free Academy for NCC, Karate, Kung Fu-Wu, Counseling, Yoga.
St. Benedict's Group of Institutions, Anchpalaya, Kengeri, Mysore Road, Bangalore.
Contact: 9886812398
Mail: jeromeosb@gmail.com / www.sbab.in

ಕಾಶಿ ಪ್ರಗಯಾ ಗಯಾ,ನೈಮಿಶಾರಣ್ಯ ಅಯೋಧ್ಯ,ಪುರಿ,ಭುವನೇಶ್ವರ್ 12.05.2023 ರಿಂದ 7/9 ದಿನಗಳು. ನೇಪಾಳ ಮುಕ್ತಿನಾಥ್,ಕಾಶಿ 05.06.2023 ರಿಂದ 10 ದಿನಗಳು. ವರ್ಣರಂಜಿತ ಕಾಶ್ಮೀರ್ ಗುಲ್‌ಮಾರ್ಗ್ ಪೆಹಲ್‌ಗಾಂವ್ ವೈಷ್ಣೋದೇವಿ, 24.05.2023 31.05.2023 ರಿಂದ 9 ದಿನಗಳು. ಸ್ವಯಂಭೂ ಅಮರನಾಥ ಕಾಶ್ಮೀರ್,ವೈಷ್ಣೋದೇವಿ 05.07.2023ರಿಂದ 9 ದಿನಗಳು ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಸರ್ವೋದಯ ಟ್ರಾವೆಲ್ಸ್ ಕಲಾಸಿಪಾಳ್ಯಂ ನಮ್ಮ ಸ್ವಂತ ಬಸ್ಸಿನಲ್ಲಿ ಪ್ರತಿ ಶುಕ್ರವಾರ 5ದಿನಗಳ ಪಂಡರಾಪುರ ಶನಿಸಿಂಗನಾಪುರ,ಶಿರಡಿ,ಪಂಚವಟಿ ತ್ರಯಂಬಕೇಶ್ವರ್,ಕೊಲ್ಲಾಪುರ್ ಇತ್ಯಾದಿ ಊಟ ವಸತಿಯೊಂದಿಗೆ ಸೀಟ್‌ಯೊಂದಕ್ಕೆ 5,500 ಅಮರನಾಥ್,ಚಾರ್‌ಧಾಮ್ ಕಾಶಿಯಾತ್ರೆ ಪ್ರವಾಸ ಏರ್ಪಡಿಸಲಾಗುವುದು ಸಂಪರ್ಕಿಸಿ: 9886941955 8277755695

''05.07.2023 ರಿಂದ 13ದಿನಗಳು ಅಮರನಾಥ, VAISHNODEVI, ಶ್ರೀನಗರ, ಅಮೃತಸರ, ಸಂಪರ್ಕಿಸಿ: ಶ್ರೀ ಗಂಗಾ ಟೂರಿಸ್ಟ್. ಬೆಂಗಳೂರು. 9480253807/ 8105522123'

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@803/-* Per Sqcm Single Column
@825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸುಡಾನ್: ಅಮೆರಿಕದ ರಾಜತಾಂತ್ರಿಕ ಸಿಬ್ಬಂದಿ ರಕ್ಷಣೆ

ಇಂಟರ್ನೆಟ್ ಸ್ಥಗಿತ • ಇತರ ರಾಷ್ಟ್ರಗಳಿಂದಲೂ ನಾಗರಿಕ ತೆರವು ಪ್ರಯತ್ನ

ಖಾರ್ಟೂಮ್ (ಸುಡಾನ್) (ಎಪಿ): ಸುಡಾನ್ ಸಂಘರ್ಷದಲ್ಲಿ ಸಿಲುಕಿರುವ ತನ್ನ ರಾಯಭಾರ ಕಚೇರಿಯ ಸುಮಾರು 100 ಅಧಿಕಾರಿಗಳನ್ನು ಅಮೆರಿಕ ಸೇನೆ ಭಾನುವಾರ ಏರ್‌ಲಿಫ್ಟ್ ಮಾಡಿದೆ.

ಈ ಕುರಿತು ಅಮೆರಿಕ ಅಧ್ಯಕ್ಷ ಜೊ ಬೈಡನ್ ಭಾನುವಾರ ಮಾಹಿತಿ ನೀಡಿದ್ದು, 100 ಜನರ ವಿಶೇಷ ಕಾರ್ಯಾಚರಣೆ ಪಡೆಯ ತಂಡ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದು, ಮೂರು ಎಂಎಚ್–47 ಚಿನೂಕ್ ಹೆಲಿಕಾಪ್ಟರ್ ಅನ್ನು ಬಳಸಲಾಗಿದೆ, ಖಾರ್ಟೂಮ್‌ನಲ್ಲಿ ಒಂದು ಗಂಟೆಗಿಂತ ಕಡಿಮೆ ಅವಧಿಯಲ್ಲಿ ಕಾರ್ಯಾಚರಣೆ ಮುಗಿಸಿದೆ' ಎಂದಿದ್ದಾರೆ.

'ಖಾರ್ಟೂಮ್‌ನಿಂದ ಇಥಿಯೋಪಿಯಾದ ಅಜ್ಞಾತ ಸ್ಥಳಕ್ಕೆ ಭಾನುವಾರ ಮುಂಜಾನೆ ಸಿಬ್ಬಂದಿಯನ್ನು ಸ್ಥಳಾಂತರ ಮಾಡಲಾಗಿದೆ. ಸರ್ಕಾರಿ–ಸಂಯೋಜಿತ ಸಾಮೂಹಿಕ ಸ್ಥಳಾಂತರ ಕೈಗೊಳ್ಳುವುದು ಇನ್ನೂ ಅಪಾಯಕಾರಿಯಾಗಿದೆ' ಎಂದು ಅಮೆರಿಕ ಅಧಿಕಾರಿಗಳು ತಿಳಿಸಿದ್ದಾರೆ.

'ನಾವು ಸುಡಾನ್‌ಗೆ ಹೋಗುವಾಗ ಯಾವುದೇ ಆಯುಧಗಳನ್ನು ತೆಗೆದುಕೊಂಡು ಹೋಗಲಿಲ್ಲ. ಅಲ್ಲಿ ಕೂಡ ನಮಗೆ ಯಾವುದೇ ಸಮಸ್ಯೆ ಎದುರಾಗಿಲ್ಲ' ಎಂದು ಮಿಲಿಟರಿಯ

ಖಾರ್ಟೂಮ್‌ನ ದಕ್ಷಿಣ ಭಾಗದಲ್ಲಿ ಹಾನಿಗೊಂಡ ಕಟ್ಟಡ – ಎಎಫ್‌ಪಿ ಚಿತ್ರ

ಜಂಟಿ ಕಾರ್ಯಾಚರಣೆ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ಡೌಗ್ಲಾಸ್ ಸಿಮ್ಸ್ ಹೇಳಿದ್ದಾರೆ.

ಸೇನಾಪಡೆಗಳ ನಡುವೆ ನಡೆಯುತ್ತಿರುವ ಯುದ್ಧದಲ್ಲಿ ಈವರೆಗೆ 400 ಜನ ಮೃತಪಟ್ಟಿದ್ದು, 1000 ಜನ ಗಾಯಗೊಂಡಿದ್ದಾರೆ ಎನ್ನಲಾಗಿದೆ. ಖಾರ್ಟೂಮ್ ಹಾಗೂ ನೆರೆ ರಾಜ್ಯಗಳ ಆಸ್ಪತ್ರೆಗಳ ಮೇಲೆ ದಾಳಿ ನಡೆದಿದ್ದು, ಇನ್ನು ಕೆಲ ಆಸ್ಪತ್ರೆಗಳನ್ನು ಲೂಟಿ ಮಾಡಲಾಗಿದೆ. ಮೂರನೇ ಎರಡರಷ್ಟು ಆಸ್ಪತ್ರೆಗಳು ಸೇವೆಯಲ್ಲಿಲ್ಲ ಎಂದು ವೈದ್ಯರ ಒಕ್ಕೂಟ ಹೇಳಿದೆ.

ಅಲ್ಲಿನ ನಿವಾಸಿಗಳು ನೀರು, ಆಹಾರ, ವಿದ್ಯುತ್ ಹಾಗೂ ಅಗತ್ಯ ಸೌಲಭ್ಯಗಳು ದೊರೆಯದ ಕಾರಣ ಆತಂಕಕ್ಕೆ ಒಳಗಾಗಿದ್ದಾರೆ.

ವಿವಿಧ ದೇಶಗಳ ದೌಡು: ಇತರ ದೇಶಗಳು ತಮ್ಮ ನಾಗರಿಕರು ಮತ್ತು ರಾಜತಾಂತ್ರಿಕರನ್ನು ಸ್ಥಳಾಂತರಿಸಲು ಹರಸಾಹಸಪಟ್ಟವು. ಮಿತ್ರರಾಷ್ಟ್ರಗಳ ಕೆಲವು ನಾಗರಿಕರೊಂದಿಗೆ ರಾಯಭಾರ ಕಚೇರಿ ಸಿಬ್ಬಂದಿ ಮತ್ತು ಪ್ರಜೆಗಳ ಸ್ಥಳಾಂತರವನ್ನು ಆಯೋಜಿಸುತ್ತಿದ್ದೇವೆ ಎಂದು ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ಭಾನುವಾರ ತಿಳಿಸಿವೆ. ನೆದರ್ಲೆಂಡ್ ವಾಯುಪಡೆಯ ಎರಡು ಹರ್ಕ್ಯುಲಸ್ ಸಿ–130 ವಿಮಾನ ಮತ್ತು ಒಂದು ಏರ್‌ಬಸ್ ಎ330 ವಿಮಾನವನ್ನು ಜೋರ್ಡಾನ್‌ಗೆ ಕಳುಹಿಸಿದೆ.

91 ಸೌದಿ ನಾಗರಿಕರ ಜೊತೆ ಇತರ ದೇಶದ ನಾಗರಿಕರೂ ಸೇರಿದಂತೆ 157 ಜನರ ರಕ್ಷಣೆಯನ್ನು ಯಶಸ್ವಿಯಾಗಿ ಮಾಡಲಾಗಿದೆ ಎಂದು ಸೌದಿ ಅರೇಬಿಯಾ ಶನಿವಾರ ತಿಳಿಸಿದೆ.

ಇಂಟರ್ನೆಟ್ ಸಂಪರ್ಕ ಸಂಪೂರ್ಣ ಕಡಿತ: ಸುಡಾನ್‌ನಲ್ಲಿ ಇಂಟರ್ನೆಟ್ ಸಂಪರ್ಕ ಸಂಪೂರ್ಣ ಕಡಿತಗೊಂಡಿದೆ ಎಂದು ವಿಶ್ವದಾದ್ಯಂತ ಇಂಟರ್ನೆಟ್ ಸಂಪರ್ಕದ ಮೇಲ್ವಿಚಾರಣೆ ನಡೆಸುವ ಲಂಡನ್ ಮೂಲದ ನೆಟ್ ಬ್ಲಾಕ್ಸ್ ಸಂಸ್ಥೆ ಭಾನುವಾರ ಟ್ವೀಟ್ ಮಾಡಿದೆ.

ಆಹಾರವಿಲ್ಲದೆ ಬಳಲುತ್ತಿರುವ ಸಿಂಹಗಳು

ಖಾರ್ಟೂಮ್ (ಎಎಫ್‌ಪಿ): ಸುಡಾನ್ ವನ್ಯಜೀವಿ ಮೀಸಲು ಪ್ರದೇಶದಲ್ಲಿ 25 ಸಿಂಹಗಳು ಮತ್ತು ಇತರ ಪ್ರಾಣಿಗಳು ಆಹಾರದ ಕೊರತೆಯನ್ನು ಎದುರಿಸುತ್ತಿದ್ದು, ಅವುಗಳ ಭವಿಷ್ಯದ ಬಗ್ಗೆ ಭಯ ಉಂಟಾಗಿದೆ.

ಮೀಸಲು ಪ್ರದೇಶದ ಸುತ್ತಲಿನ ಸುರಕ್ಷತಾ ಬೇಲಿಗಳಿಗೆ ವಿದ್ಯುತ್ ಇಲ್ಲವಾಗಿದೆ, ಸಿಂಹಗಳಿಗೆ ಪ್ರತಿಯೊಂದಕ್ಕೂ ದಿನಕ್ಕೆ 5 ರಿಂದ 10 ಕೆ.ಜಿ.ಯಷ್ಟು ಮಾಂಸದ ಅಗತ್ಯವಿದೆ ಎಂದು ಅಲ್ಲಿನ ಸಿಬ್ಬಂದಿ ತಿಳಿಸಿದ್ದಾರೆ.

ಮಾತುಕತೆಗೆ ಪೋಪ್ ಕರೆ

ವ್ಯಾಟಿಕನ್ ನಗರ (ಎಎಫ್‌ಪಿ): ಸುಡಾನ್‌ನಲ್ಲಿ ಸೇನಾ ಪಡೆಗಳ ನಡುವೆ ನಡೆಯುತ್ತಿರುವ ಆಂತರಿಕ ಯುದ್ಧ ಎರಡನೇ ವಾರಕ್ಕೆ ಕಾಲಿಟ್ಟಿದ್ದು, ದೇಶ ರಕ್ತಸಿಕ್ತವಾಗಿದೆ. ಆದಷ್ಟು ಬೇಗ ಈ ಯುದ್ಧವನ್ನು ಕೊನೆಗಾಣಿಸುವ ಕುರಿತು ಮಾತುಕತೆ ನಡೆಸಬೇಕು ಎಂದು ಪೋಪ್ ಫ್ರಾನ್ಸಿಸ್ ಕರೆ ನೀಡಿದ್ದಾರೆ.

ಸುಡಾನ್: ಯಾವುದೇ ಕ್ಷಣದಲ್ಲಿ ಹೊರಡಲು ಸಜ್ಜಾಗಿರಲು ಸೂಚನೆ

ಸುರಕ್ಷಿತ ಸ್ಥಳಗಳಿಗೆ ಭಾರತೀಯರ ಸ್ಥಳಾಂತರಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕನ್ನಡಿಗರೂ ಸೇರಿದಂತೆ ಸಂಘರ್ಷಪೀಡಿತ ಸುಡಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾದ ಅಕ್ಕಪಕ್ಕದ ದೇಶಗಳಿಗೆ ಸ್ಥಳಾಂತರಿಸಿ, ಬಳಿಕ ಸ್ವದೇಶಕ್ಕೆ ಕರೆತರಲು ಭಾರತೀಯ ರಾಜತಾಂತ್ರಿಕ ಕಚೇರಿ ಸಿಬ್ಬಂದಿ ಸಿದ್ಧತೆ ನಡೆಸಿದ್ದಾರೆ.

ಸಂಘರ್ಷ ಆರಂಭವಾದ ಬಳಿಕ ಈಗಾಗಲೇ ನಡೆದ ಮೊದಲ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾರತೀಯರು ಸೇರಿದಂತೆ ವಿವಿಧ ದೇಶಗಳ ಕೆಲವರನ್ನು ಸೌದಿ ಅರೇಬಿಯಾದ ಜಿಡ್ಡಾಗೆ ಕಳುಹಿಸಿಕೊಡಲಾಗಿದೆ. ಇನ್ನು ಕೆಲವರನ್ನು ರಸ್ತೆ ಮಾರ್ಗ ಮತ್ತು ವಿಮಾನಗಳ ಮೂಲಕ ಸ್ಥಳಾಂತರಿಸಲು ಸಿದ್ಧತೆ ನಡೆದಿದೆ.

'ಸ್ವದೇಶಕ್ಕೆ ಕರೆದೊಯ್ಯಲಾಗುತ್ತದೆ. ನೀವು ಸಿದ್ಧರಾಗಿರಿ' ಎಂದು ರಾಜತಾಂತ್ರಿಕ ಸಿಬ್ಬಂದಿ ನಮ್ಮವರಿಗೆ ಸೂಚಿಸಿದ್ದಾರೆ. ಅಲ್ಲಿ ಸಿಲುಕಿರುವ ದಾವಣಗೆರೆ ಜಿಲ್ಲೆಯ ಜನ ಈ ಕುರಿತು ಮಾಹಿತಿ ನೀಡಿದ್ದಾರೆ ಎಂದು ಹಕ್ಕಿಪಿಕ್ಕಿ ಬುಡಕಟ್ಟು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಪುನೀತ್‌ಕುಮಾರ್ ಆರ್. 'ಪ್ರಜಾವಾಣಿ'ಗೆ ಭಾನುವಾರ ತಿಳಿಸಿದ್ದಾರೆ.

'ಭಾರತೀಯರನ್ನು ಅಕ್ಕಪಕ್ಕದ ದೇಶಗಳಿಗೆ ಕರೆದೊಯ್ಯಲು 10 ರಿಂದ 12 ಬಸ್‌ಗಳು ಸಿದ್ಧವಾಗಿವೆ. ಸುರಕ್ಷಿತ ದೇಶಗಳಿಗೆ ಕರೆತಂದು ಬಳಿಕ ಭಾರತಕ್ಕೆ ಕಳುಹಿಸಿಕೊಡುವ ಭರವಸೆ ದೊರೆತಿದೆ.

ದಾವಣಗೆರೆ ಜಿಲ್ಲೆಯ 43 ಜನ ಸಂತ್ರಸ್ತರು ಒಂದೆಡೆ ಸೇರಿದ್ದಾರೆ. ಭಾನುವಾರ ರಾತ್ರಿ ಇಲ್ಲವೇ ಸೋಮವಾರ ಅವರನ್ನು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯುವ ವಿಶ್ವಾಸ ಇದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ಈಗಾಗಲೇ ಸೌದಿ ಅರೇಬಿಯಾ ತಲುಪಿದ ಕೆಲವರು
- ರಸ್ತೆ/ ವಿಮಾನದ ಮೂಲಕ ಸ್ಥಳಾಂತರಕ್ಕೆ ಸಿದ್ಧತೆ

ಜಪಾನ್: ಎಲ್‌ಜಿಬಿಟಿಕ್ಯೂ 'ಹೆಮ್ಮೆಯ ಪರೇಡ್'

ಸಲಿಂಗ ವಿವಾಹ: ಹೆಚ್ಚಿದ ಒತ್ತಡ

ಟೋಕಿಯೊ: ಜಪಾನ್‌ನಲ್ಲಿ ಎಲ್‌ಜಿಬಿಟಿಕ್ಯೂ ಸಮುದಾಯದವರು (ಸಲಿಂಗಿಗಳು, ದ್ವಿಲಿಂಗಿಗಳು, ಲಿಂಗ ಪರಿವರ್ತಿತರು) ತಮ್ಮ ಹಕ್ಕುಗಳಲ್ಲಿ ಮುನ್ನಡೆ ಸಾಧಿಸಿರುವುದಕ್ಕೆ ಇಲ್ಲಿ ಭಾನುವಾರ 'ಹೆಮ್ಮೆಯ ಪರೇಡ್' ನಡೆಸಿದ್ದಾರೆ.

ಸಲಿಂಗ ವಿವಾಹವನ್ನು ಕಾನೂನು ಬದ್ಧಗೊಳಿಸಿರುವ ಇತರ ಮುಂದುವರಿದ ರಾಷ್ಟ್ರಗಳ ಸಾಲಿಗೆ ಜಪಾನ್ ಕೂಡ ಸೇರಬೇಕು ಎಂದೂ ಈ ಸಮುದಾಯದವರು ಆಗ್ರಹಿಸಿದ್ದಾರೆ.

ಪರೇಡ್‌ನಲ್ಲಿ 10 ಸಾವಿರ ಮಂದಿ ಪಾಲ್ಗೊಂಡಿದ್ದರು. ಜಪಾನ್‌ನಲ್ಲಿ ಮುಂದಿನ ತಿಂಗಳು ಜಿ7 ಶೃಂಗಸಭೆ ನಡೆಯಲಿದ್ದು, ಸಲಿಂಗ ವಿವಾಹವನ್ನು ಅಂಗೀಕರಿಸದ ಏಕೈಕ ಸದಸ್ಯ ರಾಷ್ಟ್ರ ಇದಾಗಿದೆ.

ದೇಶದ ಪ್ರಮುಖ ಉದ್ಯಮಿಗಳು ಹಾಗೂ ಕಂಪನಿಗಳು ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಬೇಕು ಎಂದು ಫ್ಯೂಮಿಯೊ ಕಿಷಿದಾ ಅವರ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಲ್‌ಜಿಬಿಟಿಕ್ಯೂ ಸಮುದಾಯದವರು ಟೋಕಿಯೊದಲ್ಲಿ ಭಾನುವಾರ 'ಹೆಮ್ಮೆಯ ಪರೇಡ್' ನಡೆಸಿದರು —ಎಎಫ್‌ಪಿ ಚಿತ್ರ

'ಸಲಿಂಗ ವಿವಾಹ ವಿಚಾರದಲ್ಲಿ ನಮ್ಮ ದೇಶವು ಇತರ ಜಿ7 ದೇಶಗಳಿಂದ ಹಿಂದುಳಿದಿದೆ ಎಂಬುದನ್ನು ನಾವು ಮನಗಂಡಿದ್ದೇವೆ. ಆದರೆ ಮುಂದೆ ಬದಲಾವಣೆಯ ಭರವಸೆಯನ್ನು ಹೊಂದಿದ್ದೇವೆ' ಎಂದು ಪರೇಡ್‌ನಲ್ಲಿ ಪಾಲ್ಗೊಂಡವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಭಾರತೀಯ ವಿದ್ಯಾರ್ಥಿಗಳ ಮೃತದೇಹ ಪತ್ತೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಇಂಡಿಯಾನಾ ರಾಜ್ಯದಲ್ಲಿನ ಸರೋವರವೊಂದರಲ್ಲಿ ಮುಳುಗಿದ್ದ ಇಬ್ಬರು ಭಾರತೀಯ ವಿದ್ಯಾರ್ಥಿಗಳ ಮೃತದೇಹಗಳು ಪತ್ತೆಯಾಗಿವೆ ಎಂದು 'ಯುಎಸ್‌ಎ ಟುಡೆ' ಪತ್ರಿಕೆ ವರದಿ ಮಾಡಿದೆ.

'ಇದೇ 15ರಂದು ಸಿದ್ಧಾರ್ಥ್‌ಶಾ (19) ಮತ್ತು ಆರ್ಯನ್ ವೈದ್ಯ (20) ತಮ್ಮ ಸ್ನೇಹಿತರ ಗುಂಪಿನೊಡನೆ ಇಂಡಿಯಾನಾ ಪೊಲೀಸ್ ಬಳಿಯ ಮನ್ರೊ ಸರೋವರದಲ್ಲಿ ಈಜಲು ಹೋಗಿದ್ದಾಗ ಮುಳುಗಿದ್ದರು' ಎಂದು ವರದಿ ಹೇಳಿದೆ.

'ಸತತ ಮೂರು ದಿನಗಳ ಶೋಧದ ಬಳಿಕ ಇದೇ 18ರಂದು ಮೃತದೇಹಗಳನ್ನು ಪತ್ತೆಹಚ್ಚಲಾಗಿದೆ. ಇಬ್ಬರೂ ವಿದ್ಯಾರ್ಥಿಗಳು ಇಂಡಿಯಾನಾ ವಿಶ್ವವಿದ್ಯಾಲಯದ ಕೆಲ್ಲಿ ಸ್ಕೂಲ್ ಆಫ್ ಬ್ಯುಸಿನೆಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು' ಎಂದು ಅಧಿಕಾರಿಗಳು ಹೇಳಿದ್ದಾರೆ.

ಪೂಂಛ್ ದಾಳಿ: ಉಕ್ಕಿನ ಮದ್ದುಗುಂಡು ಬಳಸಿದ್ದ ಉಗ್ರರು

ಪೂಂಛ್/ಜಮ್ಮು: ಪೂಂಛ್‌ನಲ್ಲಿ ಯೋಧರ ಮೇಲೆ ದಾಳಿ ನಡೆಸಲು ಭಯೋತ್ಪಾದಕರು ಉಕ್ಕಿನ ಮದ್ದುಗುಂಡುಗಳನ್ನು ಬಳಸಿದ್ದು, ಈ ಮದ್ದುಗುಂಡುಗಳು ಲೋಹದ ಕವಚಗಳನ್ನೂ ಭೇದಿಸುವ ಸಾಮರ್ಥ್ಯವನ್ನು ಹೊಂದಿವೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ದಾಳಿ ನಡೆಸಿದ ಬಳಿಕ ಉಗ್ರರು ಯೋಧರ ಶಸ್ತ್ರಾಸ್ತ್ರಗಳನ್ನು ಹಾಗೂ ಮದ್ದುಗುಂಡುಗಳನ್ನು ಕಸಿದು ಪರಾರಿಯಾಗಿದ್ದಾರೆ. ಅವರ ಪತ್ತೆಗಾಗಿ ಶೋಧ ಕಾರ್ಯಾಚರಣೆಯನ್ನು ಮುಂದುವರಿಸಲಾಗಿದೆ ಎಂದಿದ್ದಾರೆ.

ಯೋಧರು ಸಂಚರಿಸುತ್ತಿದ್ದ ಸೇನಾ ವಾಹನದ ಮುಂಭಾಗಕ್ಕೆ ಮೊದಲು ಸ್ನೈಫರ್ ರೈಫಲ್‌ನಿಂದ ಗುಂಡು ಹಾರಿಸಿ, ಬಳಿಕ ಇತರೆಡೆಗಳಿಂದಲೂ ಗುಂಡಿನ ದಾಳಿ ಹಾಗೂ ಗ್ರೆನೇಡ್ ದಾಳಿ ನಡೆಸಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಶೋಧ ಕಾರ್ಯಾಚರಣೆಗಾಗಿ ರಾಷ್ಟ್ರೀಯ ರೈಫಲ್ಸ್‌ನ ಯೋಧರನ್ನು ನಿಯೋಜಿಸಲಾಗಿದ್ದು, ರಾಷ್ಟ್ರೀಯ ಭದ್ರತಾ ಸಿಬ್ಬಂದಿ, ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ದಾಳಿ ನಡೆದ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ ಎಂದೂ ಹೇಳಿದ್ದಾರೆ.

ದಾಳಿಯಲ್ಲಿ ದೇಶದ ಹೊರಗಿನ ಭಯೋತ್ಪಾದಕರು ಸೇರಿದಂತೆ ಐವರು ಭಾಗಿಯಾಗಿರುವ ಸಾಧ್ಯತೆ ಇದೆ. ಸ್ಟಿಕಿ ಬಾಂಬ್‌ಗಳನ್ನೂ ಬಳಸಿರುವ ಕಾರಣ ವಾಹನವು ಹೊತ್ತಿ ಉರಿದಿದೆ ಎಂದೂ ಅವರು ತಿಳಿಸಿದ್ದಾರೆ.

ರಜೌರಿ ವಲಯದ ಬಿಂಬೇರ್ ಗಾಲಿ-ಪೂಂಛ್ ಮಾರ್ಗದಲ್ಲಿ ಗುರುವಾರ ಭಯೋತ್ಪಾದಕರು ಹೊಂಚು ಹಾಕಿ ನಡೆಸಿದ ದಾಳಿಯಲ್ಲಿ ಸೇನಾ ವಾಹನಕ್ಕೆ ಬೆಂಕಿ ಹೊತ್ತಿಕೊಂಡಿದ್ದರಿಂದ ಐವರು ಸೈನಿಕರು ಹುತಾತ್ಮರಾಗಿ ಒಬ್ಬರು ಗಾಯಗೊಂಡಿದ್ದರು.

ಮ್ಯಾನ್ಮಾರ್: ಗೆರಿಲ್ಲಾಗಳಿಂದ ಚುನಾವಣಾ ಅಧಿಕಾರಿ ಹತ್ಯೆ

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನ ಚುನಾವಣಾ ಅಧಿಕಾರಿಯೊಬ್ಬರನ್ನು ಗೆರಿಲ್ಲಾ ಗುಂಪೊಂದು ಶನಿವಾರ ಯಾಂಗನ್‌ನಲ್ಲಿ ಗುಂಡಿಟ್ಟು ಕೊಂದಿದೆ.

ಸೇನಾಡಳಿತ ನೇಮಕ ಮಾಡಿದ ಚುನಾವಣಾ ಆಯೋಗದ ಉಪನಿರ್ದೇಶಕ ಸಾಯ್ ಕ್ಯಾವ್ ಥೂ ಅವರು ಕಾರಿನಲ್ಲಿದ್ದಾಗ ಹಲವು ಬಾರಿ ಗುಂಡು ಹಾರಿಸಿ ಅವರನ್ನು ಕೊಲ್ಲಲಾಯಿತು ಎಂದು ಮಾಧ್ಯಮಗಳು ವರದಿ ಮಾಡಿವೆ.

ಆಂಗ್ ಸನ್ ಸೂ ಕಿ ನೇತೃತ್ವದ ಚುನಾಯಿತ ಸರ್ಕಾರವನ್ನು 2021ರ ಫೆಬ್ರುವರಿ 1ರಂದು ಬುಡಮೇಲುಗೊಳಿಸಿದ ಸೇನೆ ಆಡಳಿತವನ್ನು ತನ್ನ ವಶಕ್ಕೆ ಪಡೆದ ಬಳಿಕ ದೇಶದ ಹಿರಿಯ ಅಧಿಕಾರಿಯೊಬ್ಬರನ್ನು ಹತ್ಯೆ ಮಾಡಿದ ಪ್ರಥಮ ಪ್ರಕರಣ ಇದಾಗಿದೆ.

ದೇಶದಲ್ಲಿ ಚುನಾವಣೆ ನಡೆಸುವ ಸನ್ನಿವೇಶ ಇಲ್ಲ ಎಂದು ಹೇಳಿದ್ದ ಸೇನಾಡಳಿತ, ಕಳೆದ ಫೆಬ್ರುವರಿಯಲ್ಲಿ ತುರ್ತು ಪರಿಸ್ಥಿತಿಯನ್ನು ವಿಸ್ತರಿಸಿತ್ತು.

ವಿಚ್ಛೇದನ ಬಯಸಿದ ದಂಪತಿಗೆ 'ಸುಪ್ರೀಂಕೋರ್ಟ್' ಕಿವಿಮಾತು

ನವದೆಹಲಿ (ಪಿಟಿಐ): ಮತ್ತೆ ಒಂದಾಗಲು ಇನ್ನೊಂದು ಅವಕಾಶ ಏಕೆ ಪಡೆಯಬಾರದು ಎಂದು ವಿಚ್ಛೇದನ ಬಯಸಿದ ಸಾಫ್ಟ್‌ವೇರ್ ಎಂಜಿನಿಯರ್ ದಂಪತಿಗೆ ಸುಪ್ರೀಂ ಕೋರ್ಟ್ ಕಿವಿಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠವು, 'ಇಬ್ಬರೂ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ಸಾಫ್ಟ್‌ವೇರ್ ಎಂಜಿಯರ್‌ಗಳು. ಒಬ್ಬರು ಹಗಲು ಕೆಲಸಕ್ಕೆ ತೆರಳಿದರೆ, ಇನ್ನೊಬ್ಬರು ರಾತ್ರಿ ಕೆಲಸಕ್ಕೆ ಹೋಗುತ್ತಿದ್ದೀರಿ. ಇಲ್ಲಿ ಸಂಸಾರ ನಡೆಸಲು ಸಮಯ ಎಲ್ಲಿದೆ? ವಿಚ್ಛೇದನದ ಬಗ್ಗೆ ಇಬ್ಬರಿಗೂ ವಿಷಾದ ಇಲ್ಲ, ಆದರೆ ಮದುವೆಯ ಬಗ್ಗೆ ವಿಷಾದ ಇದೆ. ಮತ್ತೆ ಒಂದಾಗಲು ಇನ್ನೊಂದು ಅವಕಾಶ ಏಕೆ ಪಡೆಯಬಾರದು' ಎಂದು ಹೇಳಿತು.

'ಬೆಂಗಳೂರಿನಲ್ಲಿ ಹೆಚ್ಚೇನೂ ವಿಚ್ಛೇದನಗಳು ನಡೆಯುವುದಿಲ್ಲ. ದಂಪತಿಗಳು ಮತ್ತೊಂದು ಅವಕಾಶ ಕೊಟ್ಟುಕೊಳ್ಳಬಹುದು' ಎಂದು ನ್ಯಾ. ನಾಗರತ್ನ ಹೇಳಿದರು.

ಆದರೆ ದಂಪತಿ ಪರಸ್ಪರ ಒಪ್ಪಿಗೆಯ ಮೇರೆಗೆ ವೈವಾಹಿಕ ಸಂಬಂಧವನ್ನು ಕಡಿದುಕೊಳ್ಳಲು ನಿರ್ಧರಿಸಿದ್ದಾರೆ ಎಂದು ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

ಸೇನಾ ಸಂಘರ್ಷ: ಭಾರತ–ಚೀನಾ 18ನೇ ಸುತ್ತಿನ ಮಿಲಿಟರಿ ಮಾತುಕತೆ

ನವದೆಹಲಿ (ಪಿಟಿಐ): 'ಅರುಣಾಚಲ ಪ್ರದೇಶದ ಪ್ಯಾಂಗಾಂಗ್ ಸರೋವರದ ಬಳಿ ನಡೆದಿದ್ದ ಸೇನಾ ಸಂಘರ್ಷವು ನಾಲ್ಕನೇ ವರ್ಷಕ್ಕೆ ಕಾಲಿಟ್ಟಿರುವ ಹಿನ್ನೆಲೆಯಲ್ಲಿ ಪೂರ್ವ ಲಡಾಖ್‌ನಲ್ಲಿ ಶಾಂತಿ ಮರುಸ್ಥಾಪಿಸುವ ಸಂಬಂಧ ಭಾರತ ಮತ್ತು ಚೀನಾ ನಡುವೆ ಭಾನುವಾರ 18ನೇ ಸುತ್ತಿನ ಉನ್ನತ ಮಟ್ಟದ ಮಿಲಿಟರಿ ಮಾತುಕತೆ ನಡೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಸೇನಾ ಸಂಘರ್ಷಕ್ಕೆ ನಾಲ್ಕನೇ ವರ್ಷ
- ಶಾಂತಿ ಮರುಸ್ಥಾಪನೆಗೆ ಮಾತುಕತೆ
- ಭಾರತ ಲೆಫ್ಟಿನೆಂಟ್ ಜನರಲ್ ರಶೀಂ ಬಾಲಿ ನೇತೃತ್ವದಲ್ಲಿ ಸಭೆ

ಚೀನಾದ ರಕ್ಷಣಾ ಸಚಿವ ಲೀ ಶಾಂಗ್‌ಫು ಅವರು ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಮಹತ್ವದ ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಮುಂದಿನ ವಾರ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ಹೀಗಾಗಿ ಉಭಯ ದೇಶಗಳ ಸೇನೆಯ ಉನ್ನತ ಅಧಿಕಾರಿಗಳ ಹಂತದಲ್ಲಿ ನಾಲ್ಕು ತಿಂಗಳ ಬಳಿಕ ಮಾತುಕತೆ ನಡೆಸಲಾಗಿದೆ.

ಚೀನಾದ ಚುಶುಲ್-ಮೊಲ್ಡೊ ಗಡಿ ಪ್ರದೇಶದಲ್ಲಿ ನಿಗದಿಯಾಗಿದ್ದ ಸಭೆಯಲ್ಲಿ ಲೇಹ್‌ನ 14–ಕಾರ್ಪ್ಸ್‌ನ ಕಮಾಂಡರ್ ಆಗಿರುವ ಲೆಫ್ಟಿನೆಂಟ್ ಜನರಲ್ ರಶೀಂ ಬಾಲಿ ನೇತೃತ್ವದ ಭಾರತದ ನಿಯೋಗವು ಭಾಗವಹಿಸಿತ್ತು.

'ಪೂರ್ವ ಲಡಾಖ್‌ನ ಡೆಮ್‌ಚೊಕ್ ಮತ್ತು ಡೆಪ್ಸಾಂಗ್‌ನ ಘರ್ಷಣಾ ಬಿಂದುಗಳಲ್ಲಿನ ಸಮಸ್ಯೆಯನ್ನು ಆದಷ್ಟು ಬೇಗನೇ ಬಗೆಹರಿಸಬೇಕು ಎಂದು ಭಾರತವು ಸಭೆಯಲ್ಲಿ ಒತ್ತಾಯಿಸಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

ಹೊಸದಾಗಿ 10,112 ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): 'ದೇಶದಲ್ಲಿ ಹೊಸದಾಗಿ 10,112 ಕೋವಿಡ್ ಪ್ರಕರಣ ದೃಢಪಟ್ಟಿದ್ದು, ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 67,806ಕ್ಕೆ ಏರಿಕೆಯಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಭಾನುವಾರ ತಿಳಿಸಿದೆ.

'ದೇಶದಲ್ಲಿ ಈವರೆಗಿನ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 4,48,91,989ಕ್ಕೆ ಏರಿಕೆಯಾಗಿದೆ. ಸೋಂಕಿನಿಂದ ಹೊಸದಾಗಿ 29 ಮಂದಿ ಮೃತಪಟ್ಟಿದ್ದಾರೆ. ಈ ಮೂಲಕ ಈವರೆಗೆ ಒಟ್ಟು 5,31,329 ಮಂದಿ ಸಾವಿಗೀಡಾಗಿದ್ದಾರೆ' ಎಂದು ಹೇಳಿದೆ.

'ದೈನಂದಿನ ಕೋವಿಡ್ ದೃಢ ಪ್ರಮಾಣ ಶೇ 7.03ರಷ್ಟಿದೆ, ವಾರಕ್ಕೆ ಶೇ 5.43ರಷ್ಟಿದೆ' ಎಂದೂ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ಮತ್ತೆ ಪ್ರತಿಭಟನೆಗಿಳಿದ ಕುಸ್ತಿಪಟುಗಳು

ಬ್ರಿಜ್‌ಭೂಷಣ್ ವಿರುದ್ಧದ ಆರೋಪ: ವರದಿ ಬಹಿರಂಗಪಡಿಸಲು ಆಗ್ರಹ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಗಳ ಕುರಿತ ತನಿಖೆಯ ವರದಿಯನ್ನು ಬಹಿರಂಗಪಡಿಸಬೇಕೆಂದು ಒತ್ತಾಯಿಸಿ ಬಜರಂಗ್ ಪೂನಿಯಾ, ವಿನೇಶಾ ಫೋಗಟ್ ಸೇರಿದಂತೆ ದೇಶದ ಪ್ರಮುಖ ಕುಸ್ತಿಪಟುಗಳು ಭಾನುವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು.

ಬಿಗಿ ಪೊಲೀಸ್ ಬಂದೋಬಸ್ತ್ ಮಧ್ಯೆ ಕುಸ್ತಿಪಟುಗಳು, ಬಿಜೆಪಿ ಸಂಸದರೂ ಆಗಿರುವ ಬ್ರಿಜ್‌ಭೂಷಣ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಒತ್ತಾಯಿಸಿದರು.

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಬ್ರಿಜ್‌ಭೂಷಣ್ ವಿರುದ್ಧ ಈ ವರ್ಷ ಜನವರಿಯಲ್ಲಿ ಕುಸ್ತಿಪಟುಗಳು ಧರಣಿ ನಡೆಸಿದ್ದರು. ಫೆಡರೇಷನ್‌ಅನ್ನು ವಿಸರ್ಜಿಸಬೇಕೆಂದು ಒತ್ತಾಯಿಸಿದ್ದರು. ಆದರೆ ತಮ್ಮ ಮೇಲಿನ ಎಲ್ಲ ಆರೋಪಗಳನ್ನು ಬ್ರಿಜ್‌ಭೂಷಣ್ ಅಲ್ಲಗಳೆದಿದ್ದರು. ಈ ಕುರಿತು ತನಿಖೆಗಾಗಿ ಬಾಕ್ಸರ್ ಮೇರಿ ಕೋಮ್ ನೇತೃತ್ವದಲ್ಲಿ ಮೇಲುಸ್ತುವಾರಿ ಸಮಿತಿ ರಚಿಸಲಾಗಿತ್ತು.

ಪ್ರತಿಭಟನಾನಿರತ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಟ್, ಸಾಕ್ಷಿ ಮಲಿಕ್ ಮತ್ತಿತರರು ಮಾಧ್ಯಮಗಳೊಂದಿಗೆ ಮಾತನಾಡಿದರು— ಪಿಟಿಐ ಚಿತ್ರ

ಏಪ್ರಿಲ್ ಮೊದಲ ವಾರದಲ್ಲಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಆದರೆ ಸರ್ಕಾರ ಅದನ್ನು ಇನ್ನೂ ಬಹಿರಂಗಗೊಳಿಸಿಲ್ಲ. 'ಸರ್ಕಾರ ಈ ವರದಿಯನ್ನು ಬಹಿರಂಗಗೊಳಿಸುವದು ಯಾವಾಗ? ಈಗಾಗಲೇ ಮೂರು ತಿಂಗಳಾಯಿತು. ದೂರು ಕೊಟ್ಟಿರುವ ಮಹಿಳಾ ಕುಸ್ತಿಪಟುಗಳು ಸತ್ತ ಮೇಲೆ ವರದಿ ಬಿಡುಗಡೆ ಆಗಲಿದೆಯೇ' ಎಂದು ವಿನೇಶಾ ಫೋಗಟ್ ಖಾರವಾಗಿ ಪ್ರಶ್ನಿಸಿದ್ದಾರೆ.

'ಡಬ್ಲ್ಯುಎಫ್‌ಐ ಚುನಾವಣಾ ಪ್ರಕ್ರಿಯೆಯಿಂದ ನಮಗೇನೂ ಆಗಬೇಕಿಲ್ಲ. ನಮ್ಮ ವೃತ್ತಿಜೀವನದ ಕುರಿತು ಚಿಂತೆಯಾಗಿದೆ. ಮುಂದಿನ ವರ್ಷ ಪ್ಯಾರಿಸ್ ಒಲಿಂಪಿಕ್ಸ್ ಇದ್ದು, ಆದಷ್ಟು ಶೀಘ್ರ ಸಿದ್ಧತೆಗೆ ಮರಳಬೇಕು' ಎಂದು ವಿನೇಶಾ ಹೇಳಿದ್ದಾರೆ.

ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಬ್ರಿಜ್‌ಭೂಷಣ್ 12 ವರ್ಷ ಕಾರ್ಯನಿರ್ವಹಿಸಿದ್ದಾರೆ. ಮೇ 7ರಂದು ನಡೆಯುವ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಈಗಾಗಲೇ ಹೇಳಿದ್ದಾರೆ. ಆದಾಗ್ಯೂ ಅವರು ಫೆಡರೇಷನ್‌ನೊಳಗೆ ಸ್ಥಾನ ಪಡೆಯುವ ಸೂಚನೆ ಕಂಡುಬಂದಿದೆ.

'ಗಂಭೀರ ಆರೋಪಗಳಿದ್ದರೂ ಫೆಡರೇಷನ್‌ಅನ್ನು ಯಾರು ಮುನ್ನಡೆಸುತ್ತಿದ್ದಾರೆ ಎಂದು ಜನ ಗಮನಿಸುತ್ತಿದ್ದಾರೆ. ಸತ್ಯವೇ ನಮ್ಮ ಶಕ್ತಿ. ಆದರೆ ಅವರನ್ನು ಎದುರಿಸಲು ಅಷ್ಟು ಸಾಕಾಗುತ್ತಿಲ್ಲ. ಲೈಂಗಿಕ ದೌರ್ಜನ್ಯದ ಆರೋಪಗಳ ವಿರುದ್ಧವಾದರೂ ಸರ್ಕಾರ ಕ್ರಮ ಕೈಗೊಳ್ಳಬೇಕು. ನಾವು ನ್ಯಾಯ ಕೇಳುತ್ತಿದ್ದೇವೆ. ಪ್ರತಿಭಟನೆ ಮುಂದುವರಿಸುತ್ತೇವೆ' ಎಂದು ವಿನೇಶಾ ಹೇಳಿದ್ದಾರೆ.

ತನಿಖೆ ನಡೆಯುತ್ತಿದೆ;ಪೊಲೀಸ್: ಪ್ರತಿಭಟನೆ ನಡಸುತ್ತಿರುವವರಿಂದ ಏಳು ದೂರುಗಳು ದಾಖಲಾಗಿದ್ದು, ತನಿಖೆ ನಡೆಸುತ್ತಿದ್ದೇವೆ ಎಂದು ದೆಹಲಿ ಪೊಲೀಸರು ಭಾನುವಾರ ಹೇಳಿದ್ದಾರೆ.

ಆರೋಪಿಯ ಮೇಲೆ ಎಫ್‌ಐಆರ್ ದಾಖಲಿಸದಿದ್ದುದ್ದಕ್ಕಾಗಿ ದೆಹಲಿ ಮಹಿಳಾ ಆಯೋಗವು ಪೊಲೀಸರಿಗೆ ನೋಟಿಸ್ ನೀಡಿತ್ತು.

ಎನ್‌ಸಿಪಿ ಬೆಂಬಲ: ಪ್ರತಿಭಟನಕಾರರಿಗೆ ಬೆಂಬಲ ವ್ಯಕ್ತಪಡಿಸಿರುವ ಶರದ್ ಪವಾರ್ ಅವರ ಎನ್‌ಸಿಪಿ 'ಕುಸ್ತಿಪಟುಗಳ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ಕ್ರಿಡಾ ಸಚಿವ ಅನುರಾಗ್ ಠಾಕೂರ್ ಅವರನ್ನು ಒತ್ತಾಯಿಸಿದೆ.

ಕ್ರಿಕೆಟ್: ಆರ್‌ವಿಸಿಇ ಗೆಲುವಿನಲ್ಲಿ ಮಿಂಚಿದ ನೀರಜ್

ಬೆಂಗಳೂರು: ನೀರಜ್ (10ಕ್ಕೆ5) ಮತ್ತು ಅಭಿರಾಮ್ (23ಕ್ಕೆ4) ಅವರು ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಆರ್‌ವಿಸಿಇ ತಂಡ, ಭಾನುವಾರ ನಡೆದ ಅಂತರ ಎಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಂಡವನ್ನು 58 ರನ್‌ಗಳಿಂದ ಸುಲಭವಾಗಿ ಸೋಲಿಸಿತು.

ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ತಂಡ ಇನ್ನೊಂದು ಪಂದ್ಯದಲ್ಲಿ 59 ರನ್‌ಗಳಿಂದ ಎಸ್‌ಜೆಸಿಐಟಿ ತಂಡವನ್ನು ಮಣಿಸಿತು. ರಾಮಯ್ಯ ತಾಂತ್ರಿಯ ಸಂಸ್ಥೆಯ (ಆರ್‌ಐಟಿ) ವಜ್ರಮಹೋತ್ಸವ ಹಾಗೂ ಡಾ.ಎಂ.ಎಸ್. ರಾಮಯ್ಯ ಅವರ ಜನ್ಮಶತಮಾನೋತ್ಸವ ಅಂಗವಾಗಿ ಈ ಟೂರ್ನಿ ನಡೆಯುತ್ತಿದೆ.

ಸ್ಕೋರುಗಳು: ಆರ್‌ವಿಸಿಎ: 30 ಓವರುಗಳಲ್ಲಿ 7 ವಿಕೆಟ್‌ಗೆ 177 (ಲೋಚನ್ ಅಪ್ಪಣ್ಣ 68, ಆದರ್ಶ್ 35; ದರ್ಶನ್ 28ಕ್ಕೆ3); ಆಚಾರ್ಯ ಐ.ಟಿ: 23.5 ಓವರುಗಳಲ್ಲಿ 120 (ರೋನಿತ್ 37, ಅಶಾನ್ 29, ವಿಘ್ನೇಶ್ 27, ನೀರಜ್ 10ಕ್ಕೆ5ಮ ಅಭಿರಾಮ್ 23ಕ್ಕೆ4).

ಬಿಎಂಎಸ್‌ಸಿಇ: 30 ಓವರುಗಲ್ಲಿ 7 ವಿಕೆಟ್‌ಗೆ 230 (ತೇಜಸ್ 52, ಹಿಮಾಂಶು 39, ದೈವಿಕ್ 26; ಜನಾರ್ದನ್ 32ಕ್ಕೆ4); ಎಸ್‌ಜೆಸಿಐಟಿ: 28.5 ಓವರುಗಳಲ್ಲಿ 171 (ಭರತ್ 49; ಅರುಷ್ 12ಕ್ಕೆ4, ಪಾರ್ಥ 48ಕ್ಕೆ3).

ಆರ್ಚರಿ ಸ್ಟೇಜ್ 1 ವಿಶ್ವಕಪ್ ಟೂರ್ನಿ: ಧೀರಜ್‌ಗೆ ಕಂಚು

ಭಾರತ ಪುರುಷರ ರಿಕರ್ವ್ ತಂಡಕ್ಕೆ ಬೆಳ್ಳಿ

ಅಂತಲ್ಯಾ, ಟರ್ಕಿ (ಪಿಟಿಐ): ಕೂದಲೆಳೆ ಅಂತರದಿಂದ ಸೋತ ಭಾರತ ಪುರುಷರ ರಿಕರ್ವ್ ತಂಡವು ಆರ್ಚರಿ ವಿಶ್ವಕಪ್ ಸ್ಟೇಜ್ 1 ಟೂರ್ನಿಯಲ್ಲಿ ಬೆಳ್ಳಿ ಪದಕ ಗಳಿಸಿತು.

ಭಾನುವಾರ ಇಲ್ಲಿ ನಡೆದ ಟೂರ್ನಿಯ ಫೈನಲ್ ಸ್ಪರ್ಧೆಯಲ್ಲಿ ತರುಣದೀಪ್ ರಾಯ್, ಅತನು ದಾಸ್ ಮತ್ತು ಧೀರಜ್ ಬೊಮ್ಮದೇವರ ಅವರನ್ನೊಳಗೊಂಡ ಭಾರತ ತಂಡವು 4-5 (54-55, 50-56, 59-58, 56-55, 28-28*)ಪಾಯಿಂಟ್ಸ್‌ನಿಂದ ಚೀನಾದ ಲಿ ಜೊಂಗುಯನ್, ಕಿ ಷಿಯಾಂಗ್‌ಶು ಮತ್ತು ವೇ ಶಹೊಕ್ಷು ಎದುರು ಮಣಿಯಿತು. ಆರಂಭಿಕ ಹಿನ್ನಡೆಯಿಂದ ಪುಟಿದೆದ್ದಿದ್ದ ಭಾರತ ತಂಡವು ಸ್ಪರ್ಧೆಯನ್ನು ಶೂಟ್‌ಆಫ್‌ಗೆ ಕೊಂಡೊಯ್ದಿತ್ತು. ಆದರೆ ಶೂಟ್‌ಆಫ್‌ನಲ್ಲಿ ಚೀನಾ ಸ್ಪರ್ಧಿಗಳಿಗೆ ಗೆಲುವು ಒಲಿಯಿತು. ಈ ವಿಭಾಗದ ಕಂಚಿನ ಪದಕವು ಸ್ಲೊವೇನಿಯಾ ತಂಡದವರ ಪಾಲಾಯಿತು.

ಕಂಚು ಗೆದ್ದ ಧೀರಜ್: ರಿಕರ್ವ್ ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲಿ ಧೀರಜ್ ಕಂಚಿನ ಪದಕ ತಮ್ಮದಾಗಿಸಿಕೊಂಡರು. ತಮ್ಮ ಚೊಚ್ಚಲ ವಿಶ್ವಕಪ್ ಟೂರ್ನಿಯಲ್ಲೇ ಎರಡು ಪದಕ ಗೆದ್ದು ಸ್ಮರಣೀಯವಾಗಿರಿಸಿಕೊಂಡರು.

ಭಾನುವಾರ ಕಂಚಿನ ಪದಕದ ಸುತ್ತಿನಲ್ಲಿ ಧೀರಜ್ 7-3ರಿಂದ ಕಜಕಸ್ತಾನದ ಇಲ್ಫಾತ್ ಅಬ್ದುಲ್ಲಿನ್ ಅವರನ್ನು ಮಣಿಸಿದರು.

ಇದರೊಂದಿಗೆ ಭಾರತ ತಂಡವು ಈ ಟೂರ್ನಿಯಲ್ಲಿ ಎರಡು ಚಿನ್ನ, ತಲಾ ಒಂದು ಬೆಳ್ಳಿ ಮತ್ತು ಕಂಚಿನ ಪದಕದೊಂದಿಗೆ ಅಭಿಯಾನ ಕೊನೆಗೊಳಿಸಿತು.

ಧೀರಜ್ ಬೊಮ್ಮದೇವರ, ಅತನು ದಾಸ್ ಮತ್ತು ತರುಣದೀಪ್— ಎಸ್‌ಎಐ ಮೀಡಿಯಾ ಟ್ವಿಟರ್ ಚಿತ್ರ

ಫಫ್ ಡುಪ್ಲೆಸಿ ಐದನೇ ಅರ್ಧಶತಕದ ರಂಗು; ಹರ್ಷಲ್ ಪಟೇಲ್ ಮಿಂಚು

ಗ್ಲೆನ್ ಅಬ್ಬರ; ಆರ್‌ಸಿಬಿಗೆ ಜಯದ ಹಾರ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ಬಿರುಬಿಸಿಲನ್ನೂ ಲೆಕ್ಕಿಸದೇ ಸೇರಿದ್ದ ಅಭಿಮಾನಿಗಳಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು ರೋಚಕ ಜಯದ ರಸದೌತಣ ನೀಡಿದರು.

ಮತ್ತೊಮ್ಮೆ ಅಬ್ಬರಿಸಿದ ಗ್ಲೆನ್ ಮ್ಯಾಕ್ಸ್‌ವೆಲ್ (77; 44ಎ, 4X6, 6X4) ಮತ್ತು ಫಫ್ ಡುಪ್ಲೆಸಿ (62; 39ಎ, 4X8, 6X2) ಅವರ 127 ರನ್‌ಗಳ ಜೊತೆಯಾಟವು ವ್ಯರ್ಥವಾಗದಂತೆ ಮಧ್ಯಮವೇಗಿ ಹರ್ಷಲ್ ಪಟೇಲ್ ಹೊಣೆ ನಿಭಾಯಿಸಿದರು. ಇದರಿಂದಾಗಿ ಕೊನೆಯ ಓವರ್‌ನವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಬೆಂಗಳೂರು ಬಳಗವು 7 ರನ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ರಾಜಸ್ಥಾನ ತಂಡದ ನಾಯಕ ಸಂಜು ಸ್ಯಾಮ್ಸನ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆರ್‌ಸಿಬಿ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 189 ರನ್ ಗಳಿಸಿತು. ಅದಕ್ಕುತ್ತರವಾಗಿ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 182 ರನ್ ಗಳಿಸಲಷ್ಟೇ ಶಕ್ತವಾಯಿತು.

ಈ ಪಂದ್ಯದಲ್ಲಿ ಮೊದಲ ಎಸೆತದಿಂದ ಕೊನೆಯವರೆಗೂ ಹಲವು ನಾಟಕೀಯ ತಿರುವುಗಳಿದ್ದವು. ಪ್ರವಾಸಿ ಬಳಗದ ವೇಗಿ ಟ್ರೆಂಟ್ ಬೌಲ್ಟ್ ಹಾಕಿದ ಮೊದಲ ಎಸೆತದಲ್ಲಿಯೇ ವಿರಾಟ್ ಕೊಹ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಈ ಪಂದ್ಯದಲ್ಲಿ ನಾಯಕತ್ವ ವಹಿಸಿದ್ದ ವಿರಾಟ್ 'ಶೂನ್ಯ'ದೊಂದಿಗೆ ಡಗ್‌ಔಟ್‌ಗೆ ಮರಳಿದರು. ಇಡೀ ಕ್ರೀಡಾಂಗಣವೇ ಸ್ತಬ್ಧವಾಯಿತು.

ಕ್ರೀಸ್‌ಗೆ ಬಂದ ಶಾಬಾಜ್ ಅಹಮದ್ ಸಿಕ್ಕ ಅವಕಾಶ ಬಳಸಿಕೊಳ್ಳಲಿಲ್ಲ. ಅವರೂ ಟ್ರೆಂಟ್‌ಬೌಲ್ಟ್‌ಗೆ ಶರಣಾದರು. ಇನ್ನೊಂದು ಬದಿಯಲ್ಲಿ ಫಫ್ ಡುಪ್ಲೆಸಿ ಮಾತ್ರ ಸಮಚಿತ್ತದೊಂದಿಗೆ ಇದ್ದರು. ಅವರನ್ನು ಸೇರಿಕೊಂಡ ಆಸ್ಟ್ರೇಲಿಯಾದ ಮ್ಯಾಕ್ಸ್‌ವೆಲ್ 35 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರ ಬಾಡಿಹೋಗಿದ್ದ ಮುಖಗಳಲ್ಲಿ ಮಂದಹಾಸ ಮೂಡಿಸಿದರು. ಗ್ಯಾಲರಿಗಳಲ್ಲಿ ಸಂತಸದ 'ಹೊನಲು' ಹರಿಯುವಂತೆ ಮಾಡಿದರು.

ಮ್ಯಾಕ್ಸ್‌ವೆಲ್ ಪ್ರಯೋಗಿಸಿದ ರಿವರ್ಸ್ ಸ್ವೀಪ್‌ಗಳು, ಡ್ರೈವ್ ಮತ್ತು ನೇರ ಹೊಡೆಗಳಿಗೆ ಬೌಲರ್‌ಗಳು ಬಸವಳಿದರು. ಫಫ್ ತಮ್ಮ ಆಟಕ್ಕೆ ಕೊಂಚ ಕಡಿವಾಣ ಹಾಕಿ ಮ್ಯಾಕ್ಸ್‌ವೆಲ್‌ಗೇ ಹೆಚ್ಚು ಅವಕಾಶ ಬಿಟ್ಟುಕೊಟ್ಟರು. 27 ಎಸೆತಗಳಲ್ಲಿ ಅರ್ಧಶತಕ ಹೊಡೆದ ಮ್ಯಾಕ್ಸ್‌ವೆಲ್ ಅಬ್ಬರ ಮುಂದುವರಿಯಿತು. ತಂಡವು ಕೇವಲ ಹತ್ತು ಓವರ್‌ಗಳಲ್ಲಿಯೇ ಶತಕದ ಗಡಿ ಮುಟ್ಟಿತು. ಡುಪ್ಲೆಸಿ ಈ ಟೂರ್ನಿಯಲ್ಲಿ ತಮ್ಮ ಐದನೇ ಅರ್ಧಶತಕವನ್ನು ಪೂರೈಸಿದರು.

14ನೇ ಓವರ್‌ನಲ್ಲಿ ಫೀಲ್ಡರ್ ಯಶಸ್ವಿ ಜೈಸ್ವಾಲ್ ಚುರುಕಾದ ಫೀಲ್ಡಿಂಗ್ ಮತ್ತು ಥ್ರೋ ಮಾಡುವ ಮೂಲಕ ಡುಪ್ಲೆಸಿ ರನ್‌ಔಟ್ ಆಗಲು ಕಾರಣರಾದರು. ನಂತರದ ಓವರ್‌ನಲ್ಲಿ ಅಶ್ವಿನ್ ಎಸೆತದಲ್ಲಿ ರಿವರ್ಸ್ ಸ್ವೀಪ್ ಪ್ರಯೋಗಿಸಿದ ಮ್ಯಾಕ್ಸ್‌ವೆಲ್ ಅವರು ಜೇಸನ್ ಹೋಲ್ಡರ್‌ಗೆ ಸುಲಭದ ಕ್ಯಾಚ್ ಆದರು. ಇದರೊಂದಿಗೆ ಆರ್‌ಸಿಬಿಯ ಇನ್ನೂರಕ್ಕಿಂತ ಹೆಚ್ಚು ರನ್‌ಗಳ ಮೊತ್ತ ಗಳಿಸುವ ಅವಕಾಶ ಕೈತಪ್ಪಿತು.

ಹೋದ ಟೂರ್ನಿಯಲ್ಲಿ ಮಿಂಚಿದ್ದ ದಿನೇಶ್ ಕಾರ್ತಿಕ್ ಸಹಿತ ಐವರು ಬ್ಯಾಟರ್‌ಗಳು ಕೇವಲ 28 ರನ್‌ಗಳ ಅಂತರದಲ್ಲಿ ನಿರ್ಗಮಿಸಿದರು. ಆದರೂ ತಂಡವು ಹೋರಾಟದ ಮೊತ್ತ ಗಳಿಸಿತು.

ಹರ್ಷಲ್ ಮಿಂಚು: ಫಫ್ ಬದಲಿಗೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದ ಹರ್ಷಲ್ ಪಟೇಲ್ ಅವರು ಮೂರು ವಿಕೆಟ್ ಗಳಿಸಿದರು. ತಂಡದ ಇನಿಂಗ್ಸ್‌ಗೆ ಆಸರೆಯಾಗುವ ಭರವಸೆ ಮೂಡಿಸಿದ್ದ ಸಂಜು ಸ್ಯಾಮ್ಸನ್ ಅವರ ವಿಕೆಟ್ ಕಬಳಿಸಿದರು.

ಕೊನೆಯ ಓವರ್‌ನಲ್ಲಿ ರಾಜಸ್ಥಾನ ಜಯಕ್ಕೆ 21 ರನ್‌ಗಳ ಅಗತ್ಯವಿತ್ತು. ಇದರಲ್ಲಿ ಕೇವಲ 12 ರನ್‌ಗಳನ್ನು ಬಿಟ್ಟುಕೊಟ್ಟ ಪಟೇಲ್ ಅವರು ಅಶ್ವಿನ್ ವಿಕೆಟ್ ಕೂಡ ಗಳಿಸಿ ಆರ್‌ಸಿಬಿಯ ಹರ್ಷಕ್ಕೆ ಕಾರಣರಾದರು. ರಾಜಸ್ಥಾನದ ಧ್ರುವ ಜುರೇಲ್ ಆಟಕ್ಕೆ (ಔಟಾಗದೆ 34) ಜಯ ಒಲಿಯಲಿಲ್ಲ.



ಬೆಂಗಳೂರು ತಂಡದ ಫಫ್ ಡುಪ್ಲೆಸಿ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಜೊತೆಯಾಟ
—ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 9ಕ್ಕೆ 189 (20 ಓವರ್‌ಗಳಲ್ಲಿ)

ವಿರಾಟ್ ಎಲ್‌ಬಿಡಬ್ಲ್ಯು ಬಿ ಬೌಲ್ಟ್ 0 (1ಎ)
ಡುಪ್ಲೆಸಿ ರನ್‌ಔಟ್/ಯಶಸ್ವಿ 62 (39ಎ, 4X8, 6X2)
ಶಾಬಾಜ್ ಸಿ ಯಶಸ್ವಿ ಬಿ ಬೌಲ್ಟ್ 2 (4ಎ)
ಮ್ಯಾಕ್ಸ್‌ವೆಲ್ ಸಿ ಹೋಲ್ಡರ್ ಬಿ ಅಶ್ವಿನ್ 77 (44ಎ, 4X6, 6X4)
ಮಹಿಪಾಲ್ ಸಿ ಪಡಿಕ್ಕಲ್ ಬಿ ಚಾಹಲ್ 8 (6ಎ, 4X1)
ದಿನೇಶ್ ಸಿ ಬಟ್ಲರ್ ಬಿ ಸಂದೀಪ್ 16 (13ಎ, 4X2)
ಪ್ರಭುದೇಸಾಯಿ ರನ್‌ಔಟ್/ಯಶಸ್ವಿ-ಸಂಜು 0 (2ಎ)
ಹಸರಂಗಾ ರನ್‌ಔಟ್ /ಸಂಜು-ಸಂದೀಪ್ 6 (7ಎ)
ಡೇವಿಡ್ ಔಟಾಗದೆ 4 (2ಎ, 4X1)
ವೈಶಾಖ ಸಿ ಹೆಟ್ಮೆಯರ್ ಬಿ ಸಂದೀಪ್ 0 (1ಎ)
ಸಿರಾಜ್ ಔಟಾಗದೆ 1(1ಎ)
ಇತರೆ: 13 (ಲೆಗ್‌ಬೈ 3, ವೈಡ್ 10)
ವಿಕೆಟ್ ಪತನ: 1-0 (ವಿರಾಟ್ ಕೊಹ್ಲಿ;0.1), 2-12 (ಶಾಬಾಜ್ ಅಹಮದ್;2.1), 3-139 (ಫಫ್ ಡುಪ್ಲೆಸಿ; 13.2), 4-156 (ಗ್ಲೆನ್ ಮ್ಯಾಕ್ಸ್‌ವೆಲ್;14.6), 5-163 (ಮಹಿಪಾಲ್ ಲೊಮ್ರೊರ್;16.3), 6-163 (ಸುಯಶ್ ಪ್ರಭುದೇಸಾಯಿ; 16.5), 7-180 (ವಣಿಂದು ಹಸರಂಗಾ; 18.6), 8-184 (ದಿನೇಶ್ ಕಾರ್ತಿಕ್; 19.2), 9-184 (ವೈಶಾಖ ವಿಜಯಕುಮಾರ್; 19.3)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-41-2, ಸಂದೀಪ್ ಶರ್ಮಾ 4-0-49-2, ಆರ್. ಅಶ್ವಿನ್ 4-0-36-1, ಯುಜುವೇಂದ್ರ ಚಾಹಲ್ 4-0-28-1, ಜೇಸನ್ ಹೋಲ್ಡರ್ 4-0-32-0

ರಾಜಸ್ಥಾನ ರಾಯಲ್ಸ್ 6ಕ್ಕೆ 182 (20 ಓವರ್‌ಗಳಲ್ಲಿ)

ಯಶಸ್ವಿ ಸಿ ಕೊಹ್ಲಿ ಬಿ ಹರ್ಷಲ್ 47 (37ಎ, 4X5, 6X2)
ಬಟ್ಲರ್ ಬಿ ಸಿರಾಜ್ 0 (2ಎ)
ದೇವದತ್ತ ಸಿ ಕೊಹ್ಲಿ ಬಿ ಡೇವಿಡ್ 52 (34ಎ, 4X7, 6X1)
ಸಂಜು ಸಿ ಶಾಬಾಜ್ ಬಿ ಹರ್ಷಲ್ 22 (15ಎ, 4X2, 6X1)
ಹೆಟ್ಮೆಯರ್ ರನ್‌ಔಟ್/ಪ್ರಭುದೇಸಾಯಿ 3(9ಎ)
ಧ್ರುವ್ ಔಟಾಗದೆ 34 (16ಎ, 4X2, 6X2), ಅಶ್ವಿನ್ ಸಿ ಪ್ರಭುದೇಸಾಯಿ ಬಿ ಹರ್ಷಲ್ 12 (6ಎ, 4X2)
ಅಬ್ದುಲ್ ಔಟಾಗದೆ ಔಟಾಗದೆ 1 (1ಎ)
ಇತರೆ: 11 (ಬೈ 1, ಲೆಗ್‌ಬೈ 3, ವೈಡ್ 7)
ವಿಕೆಟ್ ಪತನ: 1-1 (ಜೋಸ್ ಬಟ್ಲರ್; 0.4), 2-99 (ದೇವದತ್ತ ಪಡಿಕ್ಕಲ್; 11.4), 3-108 (ಯಶಸ್ವಿ ಜೈಸ್ವಾಲ್;13.4), 4-125 (ಸಂಜು ಸ್ಯಾಮ್ಸನ್; 15.2), 5-155 (ಶಿಮ್ರೊನ್ ಹೆಟ್ಮೆಯರ್; 17.5)6-180 (ಆರ್. ಅಶ್ವಿನ್, 19.4)
ಬೌಲಿಂಗ್ ವಿವರ: ಮೊಹಮ್ಮದ್ ಸಿರಾಜ್ 4-0-39-1, ಡೇವಿಡ್ ವಿಲಿ 4-0-26-1, ವೈಶಾಖ ವಿಜಯಕುಮಾರ್ 2-0-24-0, ಗ್ಲೆನ್ ಮ್ಯಾಕ್ಸ್‌ವೆಲ್ 2-0-25-0, ಹರ್ಷಲ್ ಪಟೇಲ್ 4-0-32-3, ವಣಿಂದು ಹಸರಂಗಾ 4-0-32-0

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 7 ರನ್‌ಗಳ ಜಯ

ತವರಿನಲ್ಲಿ ದೇವದತ್ತ ಅರ್ಧಶತಕ

ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡುತ್ತಿರುವ ಕರ್ನಾಟಕದ ದೇವದತ್ತ ಪಡಿಕ್ಕಲ್ (52; 34ಎ) ತಮ್ಮ ತವರಿನಂಗಳದಲ್ಲಿ ಅರ್ಧಶತಕ ಗಳಿಸಿದರು.

ರಾಯಲ್ಸ್ ತಂಡದ 'ರನ್ ಯಂತ್ರ' ಜೋಸ್ ಬಟ್ಲರ್ ಮೊದಲ ಓವರ್‌ನಲ್ಲಿಯೇ ತಮ್ಮ ಖಾತೆ ತೆರೆಯುವ ಮುನ್ನ ಸಿರಾಜ್ ಎಸೆತಕ್ಕೆ ಕ್ಲೀನ್ ಬೌಲ್ಡ್ ಆದರು. ಆಗ ಕ್ರೀಸ್‌ಗೆ ಬಂದ ದೇವದತ್ತ ಅವರು ಯಶಸ್ವಿ ಜೈಸ್ವಾಲ್ (47 ರನ್) ಜೊತೆಗೆ ಇನಿಂಗ್ಸ್‌ಗೆ ಬಲ ತುಂಬಿದರು. ಜೈಸ್ವಾಲ್‌ಗಿಂತಲೂ ವೇಗವಾಗಿ ರನ್ ಗಳಿಸಿದರು. 30 ಎಸೆತಗಳಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ಅದರಲ್ಲಿ ಒಂದು ಸಿಕ್ಸರ್, ಏಳು ಬೌಂಡರಿಗಳಿದ್ದವು. ಇಬ್ಬರೂ ಎಡಗೈ ಬ್ಯಾಟರ್‌ಗಳು ಎರಡನೇ ವಿಕೆಟ್ ಜೊತೆಯಾಟದಲ್ಲಿ 98 ರನ್ ಸೇರಿಸಿದರು.

ಪ್ರಮುಖ ಅಂಶಗಳು

- ವಿರಾಟ್ ಕೊಹ್ಲಿ ಹೋದ ವರ್ಷದ ಟೂರ್ನಿಯಲ್ಲಿ ಹಸಿರು ಪೋಷಾಕಿನಲ್ಲಿ ಆಡಿದ್ದ ಪಂದ್ಯದಲ್ಲಿಯೂ ಸೊನ್ನೆ ಸುತ್ತಿದ್ದರು.
- ಟ್ರೆಂಟ್ ಬೌಲ್ಟ್ ಐಪಿಎಲ್‌ನಲ್ಲಿ ನೂರು ವಿಕೆಟ್ ಗಳಿಸಿದ ಸಾಧನೆ ಮಾಡಿದರು.
- ವಿರಾಟ್ ಕೊಹ್ಲಿ ಅವರು ದೇವದತ್ತ ಪಡಿಕ್ಕಲ್ ಹಾಗೂ ಯಶಸ್ವಿ ಜೈಸ್ವಾಲ್ ಕ್ಯಾಚ್‌ಗಳನ್ನು ಪಡೆದರು. ಆ ಮೂಲಕ ಅವರು ಇದುವರೆಗೆ ಐಪಿಎಲ್‌ನಲ್ಲಿ ಮಾಡಿದ ಕ್ಯಾಚ್‌ಗಳ ಸಂಖ್ಯೆ 102ಕ್ಕೇರಿತು.
- ಹಸಿರು ಪೋಷಾಕು ಧರಿಸಿದ ಆಡಿದ ಆರ್‌ಸಿಬಿ ಆಟಗಾರರು

ಬ್ಯಾಟಿಂಗ್ ಸುಧಾರಣೆಯತ್ತ ಚಿತ್ತ

ಡೆಲ್ಲಿ ಕ್ಯಾಪಿಟಲ್ಸ್‌ಗೆ ಇಂದು ಹೈದರಾಬಾದ್ ಸವಾಲು

ಹೈದರಾಬಾದ್ (ಪಿಟಿಐ): ಸತತ ಐದು ಸೋಲುಗಳ ಬಳಿಕ ಮೊದಲ ಜಯ ಕಂಡಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು, ಐಪಿಎಲ್ ಟೂರ್ನಿಯಲ್ಲಿ ಸೋಮವಾರ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಮುಖಾಮುಖಿಯಾಗಲಿದೆ.

ಡೇವಿಡ್ ವಾರ್ನರ್ ನಾಯಕತ್ವದ ಡೆಲ್ಲಿ ತಂಡವು ಗುರುವಾರ ನಡೆದ ಹಣಾಹಣಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಸೋಲುಣಿಸಿತ್ತು.

ಈ ಪಂದ್ಯದಲ್ಲಿ ಅಮೋಘ ಸಾಮರ್ಥ್ಯ ತೋರಿದ್ದ ಬೌಲರ್‌ಗಳು ಕೋಲ್ಕತ್ತವನ್ನು 127 ರನ್‌ಗಳಿಗೆ ನಿಯಂತ್ರಿಸಿದ್ದರು. ಆದರೆ ಸಾಧಾರಣ ಗುರಿ ತಲುಪಲು ಡೆಲ್ಲಿ ಬ್ಯಾಟರ್‌ಗಳು ಪರದಾಡಿದ್ದರು. ವಾರ್ನರ್ ಹಾಗೂ ಅಕ್ಷರ್ ಪಟೇಲ್ ಹೊರತುಪಡಿಸಿ ಉಳಿದವರಿಗೆ ನಿರೀಕ್ಷಿತ ಆಟವಾಡಲು ಆಗಿರಲಿಲ್ಲ.

ಡೆಲ್ಲಿ ತಂಡವು ಬ್ಯಾಟರ್‌ಗಳಿಂದ ಉತ್ತಮ ಸಾಮರ್ಥ್ಯ ನಿರೀಕ್ಷಿಸುತ್ತಿದೆ. ಆರಂಭಿಕ ಬ್ಯಾಟರ್ ಪೃಥ್ವಿ ಶಾ, ಆಲ್‌ರೌಂಡರ್ ಮಿಚೆಲ್ ಮಾರ್ಷ್ ವೈಫಲ್ಯ ತಂಡವನ್ನು ಕಾಡುತ್ತಿದೆ.

ಈ ಪಂದ್ಯದಲ್ಲಿ ಮಾರ್ಷ್ ಅವರನ್ನು ಆಡಿಸಲಾಗುತ್ತದೆಯೋ ಅಥವಾ ರೊವಮನ್ ಪೊವೆಲ್ ಮತ್ತು ರಿಲಿ ರೊಸೊ ಅವರಿಗೆ ಮತ್ತೊಂದು ಅವಕಾಶ ನೀಡಲಾಗುತ್ತದೆಯೋ ನೋಡಬೇಕು. ಮಧ್ಯಮ ಕ್ರಮಾಂಕದಲ್ಲಿ ಮನೀಷ್ ಪಾಂಡೆ ಜವಾಬ್ದಾರಿಯಿಂದ ಬ್ಯಾಟ್ ಬೀಸಬೇಕಿದೆ.

ಕೋಲ್ಕತ್ತ ವಿರುದ್ಧದ ಪಂದ್ಯದ ಮೂಲಕ ಈ ಋತುವಿನಲ್ಲಿ ಮೊದಲ ಪಂದ್ಯವಾಡಿದ್ದ ಅನುಭವಿ ವೇಗಿ ಇಶಾಂತ್ ಶರ್ಮಾ ಪರಿಣಾಮಕಾರಿ ಎನಿಸಿದ್ದರು. ಅವರು ಅದೇ ಲಯ ಮುಂದುವರಿಸಿದರೆ ತಂಡಕ್ಕೆ ಲಾಭವಾಗಬಹುದು. ಉಳಿದವರಿಂದ ಅವರಿಗೆ 'ಸಾಥ್' ಬೇಕಿದೆ

ಗೆಲುವಿನ ಹಳಿಗೆ ಮರಳಲು ಹೈದರಾಬಾದ್ ಹಂಬಲ: ಸತತ ಎರಡು ಪಂದ್ಯಗಳಲ್ಲಿ ನಿರಾಸೆ ಅನುಭವಿಸಿರುವ ಹೈದರಾಬಾದ್ ಜಯದ ಹಾದಿಗೆ ಮರಳುವ ಯತ್ನದಲ್ಲಿದೆ. ಏಡನ್ ಮರ್ಕರಂ ನಾಯಕತ್ವದ ತಂಡವು ಸದ್ಯ ಆರು ಪಂದ್ಯಗಳಿಂದ ಎರಡು ಗೆಲುವು ದಾಖಲಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ.

ತನ್ನ ಬ್ಯಾಟರ್‌ಗಳಿಂದ ಶ್ರೇಷ್ಠ ಪ್ರದರ್ಶನ ನಿರೀಕ್ಷೆ ಹೈದರಾಬಾದ್ ತಂಡದ್ದು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್.

ಡೇವಿಡ್ ವಾರ್ನರ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಚೆನ್ನೈ	7	5	2	0	10	0.662
ರಾಜಸ್ಥಾನ	7	4	3	0	8	0.844
ಲಖನೌ	7	4	3	0	8	0.547
ಗುಜರಾತ್	6	4	2	0	8	0.212
ಬೆಂಗಳೂರು	7	4	3	0	8	-0.008
ಪಂಜಾಬ್	7	4	3	0	8	-0.162
ಮುಂಬೈ	6	3	3	0	6	-0.254
ಕೋಲ್ಕತ್ತ	7	2	5	0	4	-0.186
ಹೈದರಾಬಾದ್	6	2	4	0	4	-0.794
ಡೆಲ್ಲಿ	6	1	5	0	2	-1.183

* ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	405

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಸಿರಾಜ್	ಆರ್‌ಸಿಬಿ	13

ರಹಾನೆ, ದುಬೆ ಆಟಕ್ಕೆ ಒಲಿದ ಜಯ

ಕೋಲ್ಕತ್ತ (ಪಿಟಿಐ): ಅಜಿಂಕ್ಯ ರಹಾನೆ ಹಾಗೂ ಶಿವಂ ದುಬೆ ಅವರ ಅಬ್ಬರದ ಬ್ಯಾಟಿಂಗ್‌ನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಎದುರು 49 ರನ್‌ಗಳಿಂದ ಜಯಿಸಿತು.

ಭಾನುವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕೋಲ್ಕತ್ತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಡೇವೊನ್ (56; 40ಎ) ಹಾಗೂ ಋತುರಾಜ್ ಗಾಯಕವಾಡ (35; 20ಎ) ಅವರಿಬ್ಬರೂ ಮೊದಲ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸಿದರು.

ಈ ಅಡಿಪಾಯದ ಮೇಲೆ ರಹಾನೆ (29 ಎಸೆತಗಳಲ್ಲಿ 71) ಹಾಗೂ ಶಿವಂ ದುಬೆ ಬೃಹತ್ ಸೌಧ ಕಟ್ಟಿದರು. ಚೆನ್ನೈ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 235 ರನ್ ಗಳಿಸಿತು. ಅದಕ್ಕುತ್ತರವಾಗಿ ದಿಟ್ಟ ಹೋರಾಟ ಮಾಡಿದ ಕೋಲ್ಕತ್ತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 186 ರನ್ ಗಳಿಸಿತು. ಜೇಸನ್ ರಾಯ್ (61; 26ಎ, 4X5, 6X4) ಹಾಗೂ ರಿಂಕು ಸಿಂಗ್ (ಔಟಾಗದೆ 53; 33ಎ, 4X3, 6X4) ಹೋರಾಟ ವ್ಯರ್ಥವಾಯಿತು.

ಏಳು ಪಂದ್ಯಗಳನ್ನಾಡಿರುವ ಚೆನ್ನೈ ಐದನೇ ಜಯ ದಾಖಲಿಸಿತು. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಅಜಿಂಕ್ಯ ಮತ್ತು ಶಿವಂ ತಲಾ ಐದು ಸಿಕ್ಸರ್ ಸಿಡಿಸಿದರು. ಅಜಿಂಕ್ಯ 244.83 ಮತ್ತು ದುಬೆ 238.10ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಇಬ್ಬರೂ ಮುಂಬೈಕರ್‌ಗಳು ಕ್ರೀಸ್‌ನಲ್ಲಿ ಇದ್ದಷ್ಟು ಹೊತ್ತು ಕೋಲ್ಕತ್ತ ಬೌಲರ್‌ಗಳಿಗೆ ದುಃಸ್ವಪ್ನವಾದರು. ಅಜಿಂಕ್ಯ ಹಾಗೂ ಶಿವಂ ಮೂರನೇ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು. ಕೋಲ್ಕತ್ತ ತಂಡದ ಏಳು ಬೌಲರ್‌ಗಳೂ ಇವರ ಆಟದ ಮುಂದೆ ಸುಸ್ತಾದರು.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಅಜಿಂಕ್ಯ ರಹಾನೆ ಹಾಗೂ ಶಿವಂ ದುಬೆ —ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 235 (ಋತುರಾಜ್ ಗಾಯಕವಾಡ 35, ಡೇವೊನ್ ಕಾನ್ವೆ 56, ಅಜಿಂಕ್ಯ ರಹಾನೆ ಔಟಾಗದೆ 71, ಶಿವಂ ದುಬೆ 50, ಕುಲವಂತ್ ಖೆಜ್ರೊಲಿಯಾ 44ಕ್ಕೆ2). ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 186 (ವೆಂಕಟೇಶ್ ಅಯ್ಯರ್ 20, ನಿತೀಶ್ ರಾಣಾ 27, ಜೇಸನ್ ರಾಯ್ 61, ರಿಂಕು ಸಿಂಗ್ 53, ತುಷಾರ್ ದೇಶಪಾಂಡೆ 43ಕ್ಕೆ2, ಮಹೀಷ ತೀಕ್ಷಣ 32ಕ್ಕೆ2) ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ 49 ರನ್‌ಗಳ ಜಯ.

'ಶತಕಗಳ ಶತಕ' ಸರದಾರನಿಗೆ ಅರ್ಧಶತಕ

50 ವಸಂತ ಪೂರೈಸಿದ ದಿಗ್ಗಜ ಕ್ರಿಕೆಟ್ ಆಟಗಾರ ಸಚಿನ್ ತೆಂಡೂಲ್ಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುನೀಲ್ ಗಾವಸ್ಕರ್ ಮತ್ತು ಕಪಿಲ್ ದೇವ್ ಅವರ ನಂತರ ಭಾರತ ಕ್ರಿಕೆಟ್ ತಂಡದ ತಾರೆಯಾಗುವ ಆಟಗಾರ ಯಾರು ಎಂಬ ಪ್ರಶ್ನೆ ಮೂಡಿದ್ದ ಹೊತ್ತಿನಲ್ಲಿ ಉದಯಿಸಿದವರು ಸಚಿನ್ ತೆಂಡೂಲ್ಕರ್.

16ನೇ ವಯಸ್ಸಿನಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ ಸಚಿನ್ ಕ್ರಿಕೆಟ್ ಲೋಕದ ಚಾಂಪಿಯನ್ ಬ್ಯಾಟರ್ ಆಗಿಯಷ್ಟೇ ಬೆಳೆಯಲಿಲ್ಲ. ಕೋಟಿ ಕೋಟಿ ಅಭಿಮಾನಿಗಳ ಹೃದಯ ಬಡಿತದಲ್ಲಿ ಇದ್ದಾರೆ. ಕ್ರಿಕೆಟ್‌ಪ್ರಿಯರಿಂದ 'ದೇವರ' ಪಟ್ಟವೂ ಲಭಿಸಿತು. 24 ವರ್ಷ ಆಡಿದ ಸಚಿನ್ ಒಂದು ಯುಗವನ್ನೇ ಸೃಷ್ಟಿಸಿದರು. ಸೋಮವಾರ 50ನೇ ಜನ್ಮದಿನ ಆಚರಿಸಿಕೊಳ್ಳುತ್ತಿದ್ದಾರೆ.

1983ರಲ್ಲಿ ಕಪಿಲ್ ದೇವ್ ಬಳಗವು ವಿಶ್ವಕಪ್ ಜಯಿಸಿ ಭಾರತದ ಕ್ರಿಕೆಟ್‌ಗೆ ಹೊಸ ಆಯಾಮ ನೀಡಿತು. ಸಚಿನ್ ತಮ್ಮ ಆಟ ಹಾಗೂ ವ್ಯಕ್ತಿತ್ವದ ಮೂಲಕ ಭಾರತದ ಕ್ರಿಕೆಟ್ ಕ್ಷೇತ್ರವನ್ನು ಮತ್ತಷ್ಟು ಔನತ್ಯಕ್ಕೆ ಕೊಂಡೊಯ್ದರು. ಅವರು ಆಡಿದ ಕಾಲಘಟ್ಟದಲ್ಲಿ ಅಪಾರ ಪೈಪೋಟಿಯನ್ನೂ ಎದುರಿಸಿದರು. ಆ ಒತ್ತಡವನ್ನು ಗೆದ್ದು ದಂತಕಥೆಯಾದರು. ಆರು ಏಕದಿನ ವಿಶ್ವಕಪ್‌ಗಳಲ್ಲಿ ಆಡಿದರು. 2011ರಲ್ಲಿ ವಿಶ್ವಕಪ್ ಜಯಿಸಿದ ಮಹೇಂದ್ರಸಿಂಗ್ ಧೋನಿ ಪಡೆಯು ಸಚಿನ್‌ಗೆ ಸಮರ್ಪಿಸಿತು.

ಸಚಿನ್ ವೃತ್ತಿಜೀವನದಲ್ಲಿ ಒಂದು ವೈಶಿಷ್ಟ್ಯವಿದೆ. ಅದೇನೆಂದರೆ ಅವರು ತಮ್ಮ ಆಟವನ್ನು ನೋಡುತ್ತ ಬೆಳೆದ ಹುಡುಗರೊಂದಿಗೆ ಡ್ರೆಸ್ಸಿಂಗ್ ರೂಮ್ ಹಂಚಿಕೊಂಡವರು. ಅಷ್ಟೇ ಅಲ್ಲ. ರಾಂಚಿಯ ತಮ್ಮ ಮನೆಯ ಕೋಣೆಯಲ್ಲಿ ಸಚಿನ್ ಚಿತ್ರ ಅಂಟಿಸಿ ಕೊಂಡು ಅಭಿಮಾನಿಯಾಗಿದ್ದ ಮಹೇಂದ್ರಸಿಂಗ್ ಧೋನಿಯ ನಾಯಕತ್ವದಲ್ಲಿಯೂ ಸಚಿನ್ ಆಡಿದರು. ತಮ್ಮ ಅನುಭವವನ್ನು ಯುವ ಅಟಗಾರರಿಗೆ ಧಾರೆಯೆರೆದರು. ಅವರನ್ನೇ ಅನುಸರಿಸಿದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಈಗಲೂ ಭಾರತ ತಂಡದ ಪ್ರಮುಖ ಶಕ್ತಿಯಾಗಿದ್ದಾರೆ.

ಒಂದು ಕಾಲದಲ್ಲಿ ಅಸಾಧ್ಯವೇ ಎನಿಸಿದ್ದ ದಾಖಲೆಗಳ ರಾಶಿಯನ್ನೇ ಪೇರಿಸಿದರು. ಟೆಸ್ಟ್ ಹಾಗೂ ಏಕದಿನ ಕ್ರಿಕೆಟ್ ಮಾದರಿಗಳಲ್ಲಿ ಅವರ ಶತಕಗಳ ಶತಕದ ದಾಖಲೆಯನ್ನು ಮೀರಿ ನಿಲ್ಲುವವರು ಸಾಗಿಸಬೇಕಾದ ದಾರಿ ಇನ್ನೂ ದೂರವಿದೆ. ಏಕದಿನ ಕ್ರಿಕೆಟ್‌ನಲ್ಲಿ ಮೊಟ್ಟಮೊದಲ ದ್ವಿಶತಕದ ದಾಖಲೆ ಮಾಡಿದವರೂ ಸಚಿನ್ ಅವರೇ. 2010ರಲ್ಲಿ ಅವರು ಗ್ವಾಲಿಯರ್‌ನಲ್ಲಿ ಈ ಸಾಧನೆ ಮಾಡಿದರು.

'ಸಚಿನ್ ಮೇಲೆ ಆಗ ಇದ್ದ ಒತ್ತಡ ಅಪಾರವಾದದ್ದು. ಅವರ ಬ್ಯಾಟಿಂಗ್ ನೋಡಲೆಂದೇ ಕ್ರೀಡಾಂಗಣಕ್ಕೆ ಜನರು ಬರುತ್ತಿದ್ದರು. ಜನರ ನಿರೀಕ್ಷೆಗಳನ್ನು ಹುಸಿಗೊಳಿಸದಿರಲು ಸಚಿನ್ ಬಹಳ ಶ್ರಮಪಡುತ್ತಿದ್ದರು. ಆದರೂ ಅವರು ಕೂಡ ಮನುಷ್ಯರೇ ಅಲ್ಲವೇ? ಕೆಲವೊಮ್ಮೆ ವಿಫಲರಾಗುತ್ತಿದ್ದರು. ಮತ್ತೆ ಶ್ರಮಪಟ್ಟು ಪುಟಿದೇಳುತ್ತಿದ್ದರು. ಅದಕ್ಕಾಗಿಯೇ ಅವರು ನಂಬರ್ ಒನ್' ಎಂದು ಸಚಿನ್ ಜೊತೆ ಆಡಿದ ಮಾಜಿ ಆಟಗಾರ ಜಾವಗಲ್ ಶ್ರೀನಾಥ್ ಹೇಳುತ್ತಾರೆ.

ಮುಂಬೈನ ಶಿವಾಜಿ ಪಾರ್ಕ್ ಜಿಮ್‌ಖಾನಾದಲ್ಲಿ ರಮಾಕಾಂತ್ ಅಚ್ರೇಕರ್ ಅವರ ಮಾರ್ಗದರ್ಶನದಲ್ಲಿ ಬೆಳೆದ ಸಚಿನ್ ಕ್ರಿಕೆಟ್ ಲೋಕವನ್ನು ಅಕ್ಷರಶಃ ಆಳಿದರು. 2013-14ರಲ್ಲಿ ಕ್ರಿಕೆಟ್‌ನಿಂದ ನಿವೃತ್ತಿ ಪಡೆದ ನಂತರವೂ ಅವರ ಜನಪ್ರಿಯತೆ ಕುಂದಿಲ್ಲ. ಅವರು ಇವತ್ತಿಗೂ ಅಭಿಮಾನಿಗಳ ಕಣ್ಮಣಿಯಾಗಿಯೇ ಇದ್ದಾರೆ.

ಸಚಿನ್ ತೆಂಡೂಲ್ಕರ್ ಸಾಧನೆಗಳ ಸಾಲು

ಸಚಿನ್ ಸಾಧನೆ

15,921
ಟೆಸ್ಟ್‌ನಲ್ಲಿ ಅತಿ ಹೆಚ್ಚು ರನ್

18,426
ಏಕದಿನ ಕ್ರಿಕೆಟ್ ರನ್‌ಗಳು

ಶತಕಗಳ ಶತಕ	
ಟೆಸ್ಟ್	51
ಏಕದಿನ	39

ಏಕದಿನ ಕ್ರಿಕೆಟ್‌ನಲ್ಲಿ ಮೊಟ್ಟಮೊದಲ ದ್ವಿಶತಕ 200*

ಬೆಂಗಾಲಿಗಳ ಸೀಗಡಿ ಪಲ್ಯ ಸಚಿನ್‌ಗೆ ಇಷ್ಟ!

ಕೋಲ್ಕತ್ತ (ಪಿಟಿಐ): ಕ್ರಿಕೆಟ್ ಕಣ್ಮಣಿ ಸಚಿನ್ ತೆಂಡೂಲ್ಕರ್ ಅವರಿಗೆ ಬೇರೆ ಬೇರೆ ಶೈಲಿಯ ಅಡುಗೆ ತಯಾರಿ ಇಷ್ಟ ಎಂಬುದು ಅವರನ್ನು ಬಲ್ಲವರಿಗೆ ಹೊಸವಿಷಯವೇನಲ್ಲ. ಆದರೆ ಅವರು ಬಹುವಾಗಿ ಇಷ್ಟಪಡುತ್ತಿದ್ದ ಅಡುಗೆ ಎಂದರೆ, ಅದು ಬೆಂಗಾಲಿಗಳಿಗೆ ಬಾಯಿಯಲ್ಲಿ ನೀರೂರಿಸುವ 'ಗೋಲ್ಡಾ ಚಿನ್‌ಗ್ರಿರ್ ಮಲ್ಲೈಕರಿ'.

ತೆಂಗಿನಹಾಲು ಬಳಸಿ ತಯಾರಿಸುವ ಈ ಸೀಗಡಿ ಪಲ್ಯ ಹದವಾಗಿ ಸಿಹಿ-ಹುಳಿ ರುಚಿ ಹೊಂದಿರುತ್ತದೆ. ಈಡನ್‌ಗಾರ್ಡನ್‌ಗೆ ಆಡಲು ಬರುವಾಗಲೆಲ್ಲಾ ಸಚಿನ್ ಅವರು ಬಂಗಾಳ ಕ್ರಿಕೆಟ್ ಸಂಸ್ಥೆಯ ಜಂಟಿ ಕಾರ್ಯದರ್ಶಿ ಸಮರ್ ಪಾಲ್ ಅವರ ಶ್ಯಾಮಬಜಾರ್‌ನ ಮನೆಯ ವಿಳಾಸ ಮರೆಯುತ್ತಿರಲಿಲ್ಲ. ಭಾರತ ತಂಡಕ್ಕೆ ಆಡುವ ಮೊದಲೇ ಅವರು ಈ ಸೀಗಡಿ ಖಾದ್ಯ ಸವಿಯಲು ಬರುತ್ತಿದ್ದರು.

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕುಸ್ತಿ, ಆರ್ಚರಿ, ಕಬಡ್ಡಿ ಸೇರಿಸಲು ಐಒಎ ಯತ್ನ

ಬ್ರಿಸ್ಬೇನ್ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್‌ನ ಕ್ರೀಡೆಗಳ ಪಟ್ಟಿಯಲ್ಲಿ ಆರ್ಚರಿ, ಕಬಡ್ಡಿ ಮತ್ತು ಕುಸ್ತಿಯ ಸ್ಥಾನ ಗಟ್ಟಿಗೊಳಿಸುವ ವಿಷಯವನ್ನು ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್‌ನ ಏಷ್ಯಾ ಒಷಾನಿಯಾ ವಲಯ ಸಭೆಯಲ್ಲಿ ಬಲವಾಗಿ ಪ್ರತಿಪಾದಿಸಿದೆ.

ಈ ಕುರಿತು ಐಒಎ ಅಧ್ಯಕ್ಷೆ ಪಿ.ಟಿ. ಉಷಾ, ಹಂಗಾಮಿ ಕಾರ್ಯನಿರ್ವಹಣಾಧಿಕಾರಿ ಕಲ್ಯಾಣ್ ಚೌಬೆ, ಕಾರ್ಯಕಾರಿ ಸಮಿತಿ ಸದಸ್ಯ ಹರಪಾಲ್ ಸಿಂಗ್ ಅವರು ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ (ಸಿಜಿಎಫ್) ಅಧ್ಯಕ್ಷೆ ಡೇಮ್ ಲೂಯಿಸ್ ಮಾರ್ಟಿನ್ ಮತ್ತು ಅವರ ತಂಡದೊಂದಿಗೆ ಚರ್ಚೆ ನಡೆಸಿದ್ದಾರೆ.

ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಕಬಡ್ಡಿಗೆ ಎಂದೂ ಸ್ಥಾನ ಸಿಕ್ಕಿಲ್ಲ.

ಪಿ.ಟಿ. ಉಷಾ

2022ರ ಬರ್ಮಿಂಗ್‌ಹ್ಯಾಮ್ ಕೂಟದಿಂದ ಶೂಟಿಂಗ್ ಹಾಗೂ ಆರ್ಚರಿಯನ್ನು ಕೈಬಿಡಲಾಗಿತ್ತು. ಅದಕ್ಕೂ ಮೊದಲು ನಡೆದ ಆವೃತ್ತಿಗಳಲ್ಲಿ ಭಾರತದ ಅಥ್ಲೀಟ್‌ಗಳು ಈ ಕ್ರೀಡೆಗಳಲ್ಲಿ ಶ್ರೇಷ್ಠ ಸಾಮರ್ಥ್ಯ ತೋರಿದ್ದರು.

'2026ರ ವಿಕ್ಟೋರಿಯಾ ಕೂಟದಲ್ಲಿ ಶೂಟಿಂಗ್ ಸೇರ್ಪಡೆಗೆ ನಡೆಯುತ್ತಿರುವ ಪ್ರಯತ್ನವನ್ನು ನಾನು ಸ್ವಾಗತಿಸುತ್ತೇನೆ. ಭವಿಷದಲ್ಲಿ ಆರ್ಚರಿ, ಕುಸ್ತಿ ಮತ್ತು ಕಬಡ್ಡಿಯನ್ನು ಸೇರಿಸಲು ಸಿಜಿಎಫ್ ನಾಯಕತ್ವ ಮಧ್ಯಸ್ಥಿಕೆ ವಹಿಸಬೇಕೆಂದು ಇದೇ ವೇಳೆ ಕೋರಿದ್ದೇವೆ' ಎಂದು ಉಷಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಚೆಸ್: 10ನೇ ಆಟ ನೀರಸ ಡ್ರಾ

ಅಸ್ತನಾ, ಕಜಕಸ್ತಾನ: ಮೊದಲ 9 ಸುತ್ತುಗಳಲ್ಲಿ ಏರಿಳಿತಗಳನ್ನು ಕಂಡಿದ್ದ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ, ಹತ್ತನೇ ಸುತ್ತಿನಲ್ಲಿ ಇಬ್ಬರೂ ಆಟಗಾರರು- ಗ್ರ್ಯಾಂಡ್‌ಮಾಸ್ಟರ್ ಗಳಾದ ಡಿಂಗ್ ಲಿರೆನ್ ಮತ್ತು ಇಯಾನ್ ನಿಪೊಮ್‌ನಿಷಿ ಯಾವೊಂದು 'ಸಾಹಸ'ಕ್ಕೆ ಕೈಹಾಕಲಿಲ್ಲ.

ಭಾನುವಾರ ನಡೆದ ಈ ಪಂದ್ಯ 45 ನಡೆಗಳ ನಂತರ 'ಡ್ರಾ' ಆಯಿತು. ಉಭಯ ಕಡೆಯ ಕಿಂಗ್ (ರಾಜರನ್ನು) ಬಿಟ್ಟರೆ ಉಳಿದಂತೆ ಬೋರ್ಡ್ ಖಾಲಿಯಾಗಿತ್ತು. ಚೀನಾದ ಡಿಂಗ್ ಈ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ್ದು 'ಸಿ'4 ನಡೆಯೊಡನೆ ಪಂದ್ಯ ಆರಂಭಿಸಿದರು. ಆದರೆ ಉಭಯ ಆಟಗಾರರಿಗೆ ಹೇಳಿಕೊಳ್ಳುವ ಅನುಕೂಲ ಸಿಗಲಿಲ್ಲ.

ಫಿಡೆ ಧ್ವಜದಡಿ ಆಡುತ್ತಿರುವ ನಿಪೊಮ್‌ನಿಷಿ ಸದ್ಯ 5.5-4.5ರಲ್ಲಿ ಒಂದು ಪಾಯಿಂಟ್ ಅಂತರದಿಂದ ಚಾಲೆಂಜರ್ ಲಿರೆನ್ ವಿರುದ್ಧ ಮುಂದಿದ್ದಾರೆ. 'ನಿಪೊಮ್‌ನಿಷಿ ರಕ್ಷಣಾ ಆಟವನ್ನು ಚೆನ್ನಾಗಿ ಆಡಿದರು' ಎಂದು ಲಿರೆನ್ ಪಂದ್ಯದ ನಂತರ ಹೇಳಿದರು.

ಸೋಮವಾರ 11ನೇ ಪಂದ್ಯ (ಒಟ್ಟು 14ರಲ್ಲಿ) ನಡೆಯಲಿದೆ. ಮೊದಲು 7.5 ಪಾಯಿಂಟ್ಸ್ ಗಳಿಸುವ ಆಟಗಾರ ವಿಶ್ವ ಚಾಂಪಿಯನ್ ಆಗುತ್ತಾರೆ.

ಲೈಂಗಿಕ ಸಮಸ್ಯೆಗೆ ಪ್ರಭಾವಶಾಲಿ ಪರಿಹಾರ

18 ರಿಂದ 75 ವಯಸ್ಸಿನವರಿಗೆ
ಸ್ಟೈಯಂ ಟ್ಯಾಬ್ಲೆಟ್ ಹಾಗೂ ಎಕ್ಸ್‌ಟೆಂಜರ್ ಆಯಿಲ್ ತಯಾರಿಸಿದೆ ಹಾಗೂ ಶೀಘ್ರಸ್ಖಲನಾ ಸ್ವಪ್ನ ದೋಷ ಇಂದ್ರೀಯ ದೋಷಗಳಿಗೆ ಸ್ಪೆಷಲ್ ಪರಿಹಾರವಾಗಿದೆ ಇಂದ್ರೀಯ ಗಾತ್ರ, ಹೆಚ್ಚಿಸಿಕೊಳ್ಳಲು ವಿಶೇಷ ಆಯುರ್ವೇದದ ಪ್ರತೀಕವಾಗಿದೆ ಮನೆಯಲ್ಲಿ ನೆಲೆಸಿ ತೆಗೆದುಕೊಳ್ಳಿ ಈಗ ಕರ್ನಾಟಕದಲ್ಲಿ ಲಭ್ಯವಿದೆ
74115 06650

Godrej Selfie ಶಾಂಪೂ ಹೇರ್ ಕಲರ್
*5ml+5ml